ಶನಿವಾರ, ನವೆಂಬರ್ 12, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 312 | ಪುಟ 20

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಜಾವಾಣಿ ಚರ್ಚೆ: ಹಿಂದೂ ಎಂಬುದು ಭಾರತ ಮೂಲದ ಪದ ಅಲ್ಲವೇ?

ಬಾಕ್ಸರ್‌ಗಳಿಂದ 'ಚಿನ್ನದ ಮಳೆ' 12

ಹಿಮಾಚಲ ಪ್ರದೇಶ: ಮತದಾನ ಇಂದು 10

ಇಂದು ಭೂಮಿಕಾ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,795 ▲	18,349 ▲	₹53,700 (ಬೆಂಗಳೂರು) ▲	₹63,300 (ಬೆಂಗಳೂರು) ▲	80.78 ▲

ಕೆಂಪೇಗೌಡರ ಪ್ರತಿಮೆ ಅನಾವರಣ: ವಾಲ್ಮೀಕಿ, ಕನಕದಾಸರು, ಒನಕೆ ಓಬವ್ವಗೆ ನಮನ

ಪ್ರತಿಮಾ 'ಮತ': ಮೋದಿ ರಥ

● ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಆರು ತಿಂಗಳ ಮೊದಲೇ ರಾಜ್ಯಕ್ಕೆ ನಿಯಮಿತವಾಗಿ ಭೇಟಿ ನೀಡಿ ವಿಧಾನಸಭಾ ಚುನಾವಣೆಗೆ ಬಿಜೆಪಿ ಪರ ಒಲವು ಹೆಚ್ಚಿಸಲು ಯತ್ನಿಸುತ್ತಿರುವ ಪ್ರಧಾನಿ ನರೇಂದ್ರ ಮೋದಿ, 'ಪ್ರತಿಮಾ ಪಥ'ದಲ್ಲಿ ಸಾಗುವ ಮೂಲಕ ಮತ್ತೊಂದು ಸುತ್ತಿನ ಮತಾಕರ್ಷಣೆಯತ್ತ ಇನ್ನೊಂದು ಹೆಜ್ಜೆ ಮುಂದಿಟ್ಟರು. ಮಹನೀಯರ ಪ್ರಭಾವಳಿಯ ನೆರಳಿನಲ್ಲಿ ಒಂದೇ ಭೇಟಿಯಲ್ಲಿ ಹಲವು ಸಮುದಾಯಗಳನ್ನು ಬಿಜೆಪಿಯತ್ತ ಸೆಳೆಯುವ ಕಸರತ್ತನ್ನು ಶುಕ್ರವಾರ ನಡೆಸಿದರು.

ಅರ್ಧ ದಿನದ ಭೇಟಿಯಲ್ಲೇ ಕೆಂಪೇಗೌಡರ 108 ಅಡಿ ಎತ್ತರದ ಕಂಚಿನ ಪ್ರತಿಮೆ ಅನಾವರಣ, ಭಕ್ತ ಕನಕದಾಸರು ಮತ್ತು ಮಹರ್ಷಿ ವಾಲ್ಮೀಕಿಯವರ ಪ್ರತಿಮೆಗಳಿಗೆ ಮಾಲಾರ್ಪಣೆ, ವೀರವನಿತೆ ಒನಕೆ ಓಬವ್ವ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಎಲ್ಲ ಸಮುದಾಯಗಳನ್ನೂ ತಲುಪುವ ಪ್ರಯತ್ನವನ್ನು ಪ್ರಧಾನಿ ಮಾಡಿದರು. ಮಾತಿನುದ್ದಕ್ಕೂ ಮಹನೀಯರನ್ನು ಸ್ಮರಿಸುತ್ತಾ, ಚುನಾವಣಾ ಅಖಾಡವನ್ನು ಹಸನುಗೊಳಿಸುವ ಪ್ರಯತ್ನಕ್ಕೆ ಮುನ್ನುಡಿ ಬರೆದರು.

ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪದ ಭುವನಹಳ್ಳಿಯಲ್ಲಿ ಶುಕ್ರವಾರ ನಡೆದ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕೆಂಪೇಗೌಡರ ಮಾದರಿಯ ವಿಶೇಷ ಪೇಟ ತೊಡಿಸಿ ಗೌರವಿಸಿದ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಬಳಿಕ ಚರ್ಚೆಯಲ್ಲಿ ನಿರತರಾಗಿರುವುದು — ಪ್ರಜಾವಾಣಿ ಚಿತ್ರ/ ಕೃಷ್ಣಕುಮಾರ್ ಪಿ.ಎಸ್.

ವಿಶೇಷ ವಿಮಾನದ ಮೂಲಕ ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಬಂದಿಳಿದ ಪ್ರಧಾನಿ, ನೇರವಾಗಿ ಶಾಸಕರ ಭವನದ ಆವರಣಕ್ಕೆ ಬಂದರು. ಕನಕದಾಸರು ಮತ್ತು ವಾಲ್ಮೀಕಿ ಪ್ರತಿಮೆಗಳಿಗೆ ಪುಷ್ಪನಮನ ಸಲ್ಲಿಸಿದರು. ಕನಕದಾಸರ ಜನ್ಮದಿನವಾದ ಪ್ರಯುಕ್ತ ಅವರ ಪ್ರತಿಮೆಗೆ ಗೌರವ ಸಲ್ಲಿಸುವುದರ ಜತೆಯಲ್ಲೇ ವಾಲ್ಮೀಕಿ ಪ್ರತಿಮೆಗೂ ಪುಷ್ಪನಮನ ಸಲ್ಲಿಸುವ ಮೂಲಕ ಒಂದೇ ಬಾರಿ ಕುರುಬರು ಹಾಗೂ ವಾಲ್ಮೀಕಿ ನಾಯಕ ಸಮುದಾಯವರ ಮನಗೆಲ್ಲಲು ಯತ್ನಿಸಿದರು. ಒನಕೆ ಓಬವ್ವ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮುಖೇನ, ಛಲವಾದಿ ಸಮುದಾಯದವರ ಲಕ್ಷ್ಯ ಸೆಳೆಯುವ ಕೆಲಸವನ್ನೂ ಮಾಡಿದರು.

ಸುದ್ದಿ ವಿಶ್ಲೇಷಣೆ

> **ಭಾರತದ ಪಾಲಿಗೆ ಮೋದಿ ವಿಕಾಸ ಪುರುಷ. ಜಗತ್ತು ಕೋವಿಡ್‌ನಿಂದ ಆರ್ಥಿಕವಾಗಿ ಮುಗ್ಗರಿಸಿತು. ಆದರೆ, ದೇಶವು ಆರ್ಥಿಕವಾಗಿ ಕುಸಿಯದಿರಲು ಅವರ ದೂರದೃಷ್ಟಿಯೇ ಕಾರಣ**
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

ಕನಕದಾಸರ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮುನ್ನ ಕುರುಬ ಸಮಾಜದವರು ನೀಡಿದ ಕಂಬಳಿಯನ್ನು ಹೆಗಲ ಮೇಲೆ ಹಾಕಿಕೊಂಡು ಸಾಗಿದರು. ಕಾಗಿನೆಲೆ ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ ಹಾಗೂ ಕುರುಬ ಸಮಾಜದ ಚುನಾಯಿತ ಪ್ರತಿನಿಧಿಗಳ ಜತೆಗೂಡಿ ಕನಕದಾಸರ ಪ್ರತಿಮೆಗೆ ಗೌರವ ಸಲ್ಲಿಸಿದರು. ನಂತರ ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ, ಸಚಿವ ಬಿ. ಶ್ರೀರಾಮುಲು ಮತ್ತು ಇತರ ನಾಯಕರ ಜತೆಗೂಡಿ ವಾಲ್ಮೀಕಿ ಪ್ರತಿಮೆಗೆ ಗೌರವ ಅರ್ಪಿಸಿದರು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ ವಂದೇ ಭಾರತ್ ಹಾಗೂ ಭಾರತ ಗೌರವ ಕಾಶಿ ದರ್ಶನ ರೈಲುಗಳ ಸಂಚಾರಕ್ಕೆ ಚಾಲನೆ ನೀಡಿದ ಮೋದಿ, ಅಲ್ಲಿಂದ ನೇರವಾಗಿ ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದರು. ಅಲ್ಲಿ ಹೊಸದಾಗಿ ನಿರ್ಮಿಸಿರುವ ಟರ್ಮಿನಲ್–2 ಉದ್ಘಾಟಿಸಿದರು.

ಬಳಿಕ ವಿಮಾನ ನಿಲ್ದಾಣದ ಬಳಿ ನಿರ್ಮಿಸಿರುವ 108 ಅಡಿ ಎತ್ತರದ ಕೆಂಪೇಗೌಡರ ಕಂಚಿನ ಪ್ರತಿಮೆಯನ್ನು ಅನಾವರಣಗೊಳಿಸಿದರು.

6ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 6

ರಾಜೀವ್ ಹಂತಕರ ಅವಧಿಪೂರ್ವ ಬಿಡುಗಡೆಗೆ 'ಸುಪ್ರೀಂ' ಆದೇಶ

ನವದೆಹಲಿ (ಪಿಟಿಐ): ಮಾಜಿ ಪ್ರಧಾನಿ ರಾಜೀವ್ ಗಾಂಧಿ ಹಂತಕರಾದ ನಳಿನಿ ಶ್ರೀಹರನ್ ಮತ್ತು ಇತರ ಐವರ ಅವಧಿಪೂರ್ವ ಬಿಡುಗಡೆಗೆ ಸುಪ್ರೀಂ ಕೋರ್ಟ್ ಶುಕ್ರವಾರ ಆದೇಶಿಸಿದೆ. ಸಂವಿಧಾನದ 142ನೇ ವಿಧಿಯು ಕೊಡಮಾಡುವ ವಿಶೇಷ ಅಧಿಕಾರವನ್ನು ಬಳಸಿ ಸುಪ್ರೀಂ ಕೋರ್ಟ್ ಈ ನಿರ್ಧಾರ ತೆಗೆದುಕೊಂಡಿದೆ. ನಳಿನಿ ಸೇರಿ, ಜೀವಾವಧಿ ಶಿಕ್ಷೆಯಲ್ಲಿದ್ದ ರವಿಚಂದ್ರನ್, ಶಾಂತನ್, ಮುರುಗನ್, ರಾಬರ್ಟ್ ಪಯಾಸ್ ಮತ್ತು ಜಯಕುಮಾರ್ ಅವರಿಗೆ ಬಿಡುಗಡೆಯ ಅವಕಾಶ ದೊರೆತಿದೆ.

ರಾಜೀವ್ ಗಾಂಧಿ ಹಂತಕರಾದ ಮುರುಗನ್ (ಎಡದಿಂದ), ನಳಿನಿ ಮತ್ತು ಶಾಂತನ್ (ಸಂಗ್ರಹ ಚಿತ್ರ)

ಸುಪ್ರೀಂ ಕೋರ್ಟ್‌ನ ಈ ಆದೇಶದ ವಿರುದ್ಧ ಕಾಂಗ್ರೆಸ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. ಹಂತಕರನ್ನು ಅವಧಿಪೂರ್ವವಾಗಿ ಬಿಡುಗಡೆ ಮಾಡುವುದರ ಪರವಾಗಿದ್ದ ರಾಜೀವ್ ಗಾಂಧಿ ಪತ್ನಿ ಮತ್ತು ಕಾಂಗ್ರೆಸ್‌ನ ಮಾಜಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರ ನಿಲುವಿನಿಂದ ಕಾಂಗ್ರೆಸ್ ಅಂತರ ಕಾಯ್ದುಕೊಂಡಿದೆ.

ರಾಜೀವ್ ಹಂತಕರನ್ನು ಅವಧಿಪೂರ್ವವಾಗಿ ಬಿಡುಗಡೆ ಮಾಡಬೇಕು ಎಂದು 2018ರಲ್ಲಿ ತಮಿಳುನಾಡು ಸರ್ಕಾರವು ಶಿಫಾರಸು ಮಾಡಿತ್ತು. ಆದರೆ, ಶಿಫಾರಸನ್ನು ರಾಜ್ಯಪಾಲರು ಕೇಂದ್ರ ಸರ್ಕಾರದ ಪರಾಮರ್ಶೆಗೆ ಕಳುಹಿಸಿದ್ದರು. ಹಂತಕರನ್ನು ಅವಧಿಪೂರ್ವವಾಗಿ ಬಿಡುಗಡೆ ಮಾಡಬಾರದು ಎಂದು ಕೇಂದ್ರ ಸರ್ಕಾರವು ಹೇಳಿತ್ತು. ರಾಜೀವ್ ಹತ್ಯೆಯ ಸಂಚುಕೋರರಲ್ಲಿ ಒಬ್ಬರಾದ ಎ.ಜಿ.ಪೇರರಿವಾಳನ್ ಇದರ ವಿರುದ್ಧ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

ಪೇರರಿವಾಳನ್ ಅವರನ್ನು ಅವಧಿಪೂರ್ವವಾಗಿ ಬಿಡುಗಡೆ ಮಾಡುವಂತೆ ಸುಪ್ರೀಂ ಕೋರ್ಟ್ ಇದೇ ಮೇನಲ್ಲಿ ಆದೇಶಿಸಿತ್ತು. ಅನಂತರ ತಮ್ಮನ್ನೂ ಅವಧಿಪೂರ್ವವಾಗಿ ಬಿಡುಗಡೆ ಮಾಡಬೇಕು ಎಂದು ಉಳಿದವರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು.

ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, 'ಭಾರತೀಯ ದಂಡ ಸಂಹಿತೆ 302ನೇ ಸೆಕ್ಷನ್ ಅಡಿಯಲ್ಲಿ ಶಿಕ್ಷೆಗೆ ಗುರಿಯಾದವರ ಕ್ಷಮಾಪಣೆಗೆ ಸಂಬಂಧಿಸಿ ರಾಜ್ಯ ಸಚಿವ ಸಂಪುಟದ ಶಿಫಾರಸಿಗೆ ರಾಜ್ಯಪಾಲರು ಬದ್ಧರಾಗಿರಬೇಕು' ಎಂದು ಹೇಳಿದೆ.

ಇನ್ನೊಂದು ಸುದ್ದಿ 4B

ಸಾಮಾಜಿಕ ಸೌಕರ್ಯಕ್ಕೆ ಬಲ: ಮೋದಿ

ದೇಶದಲ್ಲಿ ಭೌತಿಕ ಮೂಲಸೌಕರ್ಯ ಅಭಿವೃದ್ಧಿಯ ಜತೆಯಲ್ಲೇ ಸಾಮಾಜಿಕ ಸೌಕರ್ಯವನ್ನೂ ಬಲಪಡಿಸುವ ಕೆಲಸವನ್ನು 'ಡಬ್ಬಲ್ ಎಂಜಿನ್' ಸರ್ಕಾರ ಮಾಡುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಭುವನಹಳ್ಳಿಯಲ್ಲಿ ಶುಕ್ರವಾರ ನಡೆದ ಸಾರ್ವಜನಿಕ ಸಮಾರಂಭದಲ್ಲಿ ಮಾತನಾಡಿದ ಅವರು, 'ಹಿಂದಿನ ಸರ್ಕಾರಗಳಿಗೆ ಹೊಸ ಆಲೋಚನೆಗಳೇ ಹೊಳೆಯುತ್ತಿರಲಿಲ್ಲ. ಸದಾ ಹಳೆಯ ಯೋಚನೆ ಮತ್ತು ಹಳೆಯ ಯೋಜನೆಗಳಲ್ಲೇ ಇರುತ್ತಿದ್ದವು. ಹಿಂದಿನ ಸರ್ಕಾರಗಳು ವೇಗವನ್ನು ಐಷಾರಾಮಿ ಎಂದು, ಮಾನದಂಡವನ್ನು ಸವಾಲು ಎಂದು ಭಾವಿಸಿದ್ದವು. ವೇಗವನ್ನು ನಿರೀಕ್ಷೆ ಮತ್ತು ಮಾನದಂಡವನ್ನು ಭಾರತದ ಶಕ್ತಿಯನ್ನಾಗಿ ನಾವು ಪರಿವರ್ತಿಸಿದ್ದೇವೆ' ಎಂದರು.

ಎಂಟು ವರ್ಷಗಳ ಅವಧಿಯಲ್ಲಿ ದೇಶದಲ್ಲಿ 3.5 ಕೋಟಿ ಪಕ್ಕಾ ಮನೆಗಳನ್ನು ನಿರ್ಮಿಸಿದ್ದು, ಕರ್ನಾಟಕದಲ್ಲಿ 8 ಲಕ್ಷ ಮನೆಗಳ ನಿರ್ಮಾಣವಾಗಿದೆ. 7 ಕೋಟಿ ಮನೆಗಳಿಗೆ ನಲ್ಲಿ ನೀರಿನ ಸಂಪರ್ಕ ಕಲ್ಪಿಸಿದ್ದು, ಕರ್ನಾಟಕದಲ್ಲಿ 30 ಲಕ್ಷ ಮನೆಗಳಿಗೆ ಈ ಪ್ರಯೋಜನ ದೊರಕಿದೆ. ಆಯುಷ್ಮಾನ್ ಭಾರತ್ ಯೋಜನೆಯಡಿ ನಾಲ್ಕು ಕೋಟಿ ಜನರು ಉಚಿತ ಚಿಕಿತ್ಸೆ ಪಡೆದಿದ್ದಾರೆ. ಅವರಲ್ಲಿ 30 ಲಕ್ಷ ಜನರು ಕರ್ನಾಟಕದವರು ಎಂದು ಅಂಕಿಅಂಶ ನೀಡಿದರು.

ಪ್ರಧಾನಮಂತ್ರಿ ಕೃಷಿ ಸಮ್ಮಾನ್ ಯೋಜನೆಯಲ್ಲಿ 2.7 ಕೋಟಿ ರೈತರ ಖಾತೆಗಳಿಗೆ ಸಹಾಯಧನ ವರ್ಗಾಯಿಸಲಾಗಿದೆ. ಕರ್ನಾಟಕದ 55 ಲಕ್ಷ ರೈತರಿಗೆ ₹ 11,000 ಕೋಟಿ ನೆರವು ಒದಗಿಸಲಾಗಿದೆ ಎಂದರು.

6ನೇ ಪುಟ ನೋಡಿ

ದೇವೇಗೌಡರ ಕಡೆಗಣನೆ: ಜೆಡಿಎಸ್ ಸಿಟ್ಟು

ಕೆಂಪೇಗೌಡರ ಪ್ರತಿಮೆ ಅನಾವರಣ ಸಮಾರಂಭಕ್ಕೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರನ್ನು ಆಹ್ವಾನಿಸದೇ ಇರುವ ರಾಜ್ಯ ಸರ್ಕಾರದ ನಡೆಗೆ ಜೆಡಿಎಸ್ ಆಕ್ರೋಶ ವ್ಯಕ್ತಪಡಿಸಿದೆ.

ಈ ಕುರಿತು ಸರಣಿ ಟ್ವೀಟ್ ಮಾಡಿರುವ ಜೆಡಿಎಸ್, ಕೆಂಪೇಗೌಡರನ್ನು ಸ್ವತಃ ನರೇಂದ್ರ ಮೋದಿ ಅವರೇ ರಾಜಕೀಯಕ್ಕೆ ಎಳೆದು ತಂದಿದ್ದಾರೆ ಎಂದು ಪ್ರಧಾನಿ, ರಾಜ್ಯ ಸರ್ಕಾರ ಹಾಗೂ ಬಿಜೆಪಿ ನಾಯಕರ ವಿರುದ್ಧ ಕಿಡಿಕಾರಿದೆ.

ಕೆಂಪೇಗೌಡರು ಬೆಂಗಳೂರು ಸ್ಥಾಪಿಸಿದರೆ, ನಗರದ ಅಭಿವೃದ್ಧಿಗೆ ಮಹತ್ತರ ಕೊಡುಗೆ ನೀಡಿದ, ಪ್ರಧಾನಿ ಹುದ್ದೆಗೇರಿದ್ದ ಏಕೈಕ ಕನ್ನಡಿಗ ದೇವೇಗೌಡ ಅವರಿಗೆ ಆಹ್ವಾನ ನೀಡದೆ ಇರುವುದು ಸಮಸ್ತ ಕನ್ನಡಿಗರಿಗೆ ಮಾಡಿದ ಅಪಮಾನ ಎಂದೂ ಪ್ರತಿಪಾದಿಸಿದೆ. ಪ್ರತಿಮೆ ಅಡಿಗಲ್ಲು ಕಾರ್ಯಕ್ರಮಕ್ಕೆ ಮಾಜಿ ಪ್ರಧಾನಿಯನ್ನು ಆಹ್ವಾನಿಸಿದ್ದ ಬಿಜೆಪಿ ಸರ್ಕಾರ, ಅನಾವರಣ ಸಮಾರಂಭಕ್ಕೆ ಅವರನ್ನು ಏಕೆ ಆಹ್ವಾನಿಸಿಲ್ಲ? ಪ್ರಧಾನಿ ಭಾಗವಹಿಸಿದ ಕಾರ್ಯಕ್ರಮಕ್ಕೆ ಮಾಜಿ ಪ್ರಧಾನಿಯನ್ನು ಅಧಿಕೃತವಾಗಿ ಕರೆಯಲೇಬೇಕಿತ್ತು ಎಂದು ಬೇಸರ ವ್ಯಕ್ತಪಡಿಸಿದೆ.

6ನೇ ಪುಟ ನೋಡಿ

ಜ್ಞಾನವಾಪಿ: 'ಶಿವಲಿಂಗ' ಪತ್ತೆಯಾದ ಪ್ರದೇಶ ಸಂರಕ್ಷಣೆ ಆದೇಶ ವಿಸ್ತರಿಸಿದ 'ಸುಪ್ರೀಂ'

ನವದೆಹಲಿ (ಪಿಟಿಐ): ವಾರಾಣಸಿಯ ಜ್ಞಾನವಾಪಿ–ಶೃಂಗಾರ ಗೌರಿ ಸಂಕೀರ್ಣದ ಆವರಣದಲ್ಲಿ ಪತ್ತೆಯಾಗಿದೆ ಎನ್ನಲಾದ 'ಶಿವಲಿಂಗ' ಇರುವ ಪ್ರದೇಶವನ್ನು ಮುಂದಿನ ಆದೇಶದ ವರೆಗೆ ಸಂರಕ್ಷಣೆ ಮಾಡುವಂತೆ ಸುಪ್ರೀಂಕೋರ್ಟ್ ಶುಕ್ರವಾರ ಸೂಚಿಸಿದೆ.

ಅಲ್ಲದೇ, ಜ್ಞಾನವಾಪಿ ಮಸೀದಿ ವಿವಾದಕ್ಕೆ ಸಂಬಂಧಿಸಿದ ಎಲ್ಲ ಅರ್ಜಿಗಳನ್ನು ಕ್ರೋಡಿಕರಿಸಿ ವಾರಾಣಸಿ ಜಿಲ್ಲಾ ನ್ಯಾಯಾಲಯಕ್ಕೆ ಸಲ್ಲಿಸಲು ಹಿಂದೂ ಕಕ್ಷಿದಾರರಿಗೆ ಅನುಮತಿ ನೀಡಿದೆ.

ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಹಾಗೂ ಪಿ.ಎಸ್.ನರಸಿಂಹ ಅವರಿದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು.

ಸರ್ವೆ ಆಯುಕ್ತರ ನೇಮಕ ಮಾಡಿ ಅಲಹಾಬಾದ್ ಹೈಕೋರ್ಟ್ ನೀಡಿರುವ ಆದೇಶವನ್ನು ಪ್ರಶ್ನಿಸಿ ಅಂಜುಮನ್ ಇಂತೆಜಾಮಿಯಾ ಮಸೀದಿಯ ವ್ಯವಸ್ಥಾಪನಾ ಮಂಡಳಿ ಸಲ್ಲಿಸಿರುವ ಮೇಲ್ಮನವಿಗೆ ಸಂಬಂಧಿಸಿ ಮೂರು ವಾರಗಳ ಒಳಗಾಗಿ ಪ್ರತಿಕ್ರಿಯೆ ಸಲ್ಲಿಸುವಂತೆಯೂ ಹಿಂದೂ ಕಕ್ಷಿದಾರರಿಗೆ ನ್ಯಾಯಪೀಠ ನಿರ್ದೇಶನ ನೀಡಿತು.

ಶಿವಲಿಂಗ ಇರುವ ಪ್ರದೇಶದ ಸಂರಕ್ಷಣೆಗೆ ಸಂಬಂಧಿಸಿ ವಾರಾಣಸಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರಿಗೆ ಸೂಚನೆ ನೀಡಿ ಸುಪ್ರೀಂಕೋರ್ಟ್ ಮೇ 17ರಂದು ಮಧ್ಯಂತರ ಆದೇಶ ನೀಡಿತ್ತು.

ಇನ್ನೊಂದು ಸುದ್ದಿ 10

1,500 ಪಿಡಿಒ ಹುದ್ದೆಗಳು ಮೇಲ್ದರ್ಜೆಗೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಗ್ರಾಮೀಣಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಆದೇಶ
- ಅಭಿವೃದ್ಧಿ ಕಾಮಗಾರಿಗಳ ನಿರ್ವಹಣೆಗೆ ಅನುಕೂಲ
- ಹಿರಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳೆಂದು ಪುನರ್ ನಾಮಕರಣ

ಬೆಂಗಳೂರು: ರಾಜ್ಯದ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ (ಪಿಡಿಒ) 1,500 ಹುದ್ದೆಗಳನ್ನು 'ಗ್ರೂಪ್ ಸಿ'ನಿಂದ 'ಗ್ರೂಪ್ ಬಿ'ಗೆ ಮೇಲ್ದರ್ಜೆಗೇರಿಸಿ ಸರ್ಕಾರ ಆದೇಶ ಹೊರಡಿಸಿದೆ.

ಇದುವರೆಗೂ 'ಗ್ರೂಪ್–ಸಿ' ನಲ್ಲಿದ್ದ ₹37,900– ₹ 70,850 ವೇತನ ಶ್ರೇಣಿ ಹೊಂದಿದ್ದ 1,500 ಪಿಡಿಒ ಹುದ್ದೆಗಳನ್ನು ವೇತನ ಶ್ರೇಣಿ ₹ 40,900– ₹ 78,200 ವೇತನ ಶ್ರೇಣಿಯ 'ಗ್ರೂಪ್–ಬಿ ಕಿರಿಯ ವೃಂದ'ಕ್ಕೆ ಉನ್ನತೀಕರಿಸಲಾಗಿದೆ. ಇನ್ನು ಮುಂದೆ ಅವರು ಹಿರಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಎಂದು ಪದನಾಮ ಹೊಂದಲಿದ್ದಾರೆ.

6,021 ಹುದ್ದೆಗಳಲ್ಲಿ 4,521 ಹುದ್ದೆಗಳನ್ನು ₹ 37,900– ₹ 70,850 ವೇತನ ಶ್ರೇಣಿಯಲ್ಲಿ (ಗ್ರೂಪ್ 'ಸಿ') ಮುಂದುವರಿಸಲಾಗಿದೆ. ಹಿರಿಯ ಪಿಡಿಒ ಹಾಗೂ ಪಿಡಿಒ ವೃಂದಗಳಿಗೆ ಪ್ರತ್ಯೇಕ ನೇಮಕಾತಿ ಕಾರ್ಯವಿಧಾನವನ್ನು ರೂಪಿಸಲಾಗುತ್ತಿದೆ.

ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿ ತಾಲ್ಲೂಕು ಮಟ್ಟದಲ್ಲಿ ಸೃಷ್ಟಿಸಿರುವ 176 ಹೆಚ್ಚುವರಿ ಕಾರ್ಯಕ್ರಮ ಅಧಿಕಾರಿ ಹುದ್ದೆಗಳನ್ನು ಗ್ರಾಮೀಣ ಉದ್ಯೋಗ ವಿಭಾಗದ ಸಹಾಯಕ ನಿರ್ದೇಶಕರ ಹುದ್ದೆಗಳೆಂದು ಪುನರ್ ನಾಮಕರಣಗೊಳಿಸಲಾಗಿದೆ. ಅಲ್ಲದೇ ತಾಲ್ಲೂಕು ಪಂಚಾಯಿತಿಯ ಪಂಚಾಯತ್ ರಾಜ್ ವಿಭಾಗಕ್ಕೆ 226 ಸಹಾಯಕ ನಿರ್ದೇಶಕರ ಹುದ್ದೆ ಮಂಜೂರು ಮಾಡಲಾಗಿದೆ. ಹಾಗಾಗಿ, ಅಭಿವೃದ್ಧಿ ಕಾಮಗಾರಿಗಳ ಮೇಲುಸ್ತುವಾರಿ, ಸಮನ್ವಯದ ಹೊಣೆಗಾರಿಕೆಯನ್ನು ಪಂಚಾಯಿತಿಗಳು ಸಮರ್ಪಕವಾಗಿ ನಿರ್ವಹಿಸುವಂತೆ ಮಾಡಲು, ಮುಂಬಡ್ತಿಗಳಿಗೆ ಅನುಕೂಲ ಕಲ್ಪಿಸಲು ಪಿಡಿಒ ಹುದ್ದೆಗಳನ್ನು ಉನ್ನತೀಕರಿಸಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್ ಆದೇಶದಲ್ಲಿ ವಿವರಿಸಿದ್ದಾರೆ.

2010ರಲ್ಲಿ ನೇಮಕವಾಗಿದ್ದ 2,500 ಪಿಡಿಒಗಳಲ್ಲಿ 613 ಮಂದಿಗೆ ಇದುವರೆಗೂ ಸಹಾಯಕ ನಿರ್ದೇಶಕರ ಹುದ್ದೆಗೆ ಬಡ್ತಿ ನೀಡಲಾಗಿತ್ತು. ಉಳಿದವರಿಗೆ ಬಡ್ತಿ ನೀಡಲು ಸಾಧ್ಯವಾಗದೆ ಸರ್ಕಾರ ಹುದ್ದೆಗಳನ್ನೇ ಮೇಲ್ದರ್ಜೆಗೆ ಏರಿಸಲು ಕಳೆದ ತಿಂಗಳು ನಡಾವಳಿ ರೂಪಿಸಿತ್ತು.

ಗರಿಷ್ಠ ಮಟ್ಟದಲ್ಲಿ ವಹಿವಾಟು ಕೊನೆಗೊಳಿಸಿದ ಸೆನ್ಸೆಕ್ಸ್

ಮುಂಬೈ (ಪಿಟಿಐ): ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಶುಕ್ರವಾರದ ವಹಿವಾಟಿನಲ್ಲಿ 1,181 ಅಂಶ ಜಿಗಿತ ಕಂಡು ಸಾರ್ವಕಾಲಿಕ ಗರಿಷ್ಠ ಮಟ್ಟದಲ್ಲಿ ವಹಿವಾಟು ಅಂತ್ಯಗೊಳಿಸಿತು. 11

ಒಳ ಪುಟಗಳು

'ಉತ್ತಮ ಚಾರಿತ್ರ್ಯದ ಮಠಾಧೀಶರು ಬರಲಿ' 4A

ಚಿನಕುರಳಿ

ಪ್ರಕಾಶ್ ಶೆಟ್ಟಿ



ಹೊಸ ಕಟ್ಟಡ, ಮೂಲ ಸೌಕರ್ಯಗಳಿಗೂ ಇಲ್ಲ ಅನುಮತಿ

ಪ್ರತ್ಯೇಕ ಕ್ಯಾಂಪಸ್ ಇಲ್ಲದ 8 ವಿ.ವಿ!

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಹಾಸನ, ಬೀದರ್, ಕೊಡಗು, ಹಾವೇರಿ ಸೇರಿ 7 ಜಿಲ್ಲೆಗಳಲ್ಲಿ ಹೊಸ ವಿ.ವಿ ಸ್ಥಾಪನೆ
- ಹೊಸದಾಗಿ ಜಮೀನು ಖರೀದಿಸುವಂತಿಲ್ಲ, ಹೊಸ ಹುದ್ದೆ ಸೃಷ್ಟಿಸುವಂತಿಲ್ಲ
- ಈಗಿರುವ ಸ್ನಾತಕೋತ್ತರ ಕೇಂದ್ರಗಳಲ್ಲೇ ಕಾರ್ಯ ನಿರ್ವಹಿಸಬೇಕು

ಬೆಂಗಳೂರು: ಹೊಸದಾಗಿ ಅಸ್ತಿತ್ವಕ್ಕೆ ಬಂದ 8 ವಿಶ್ವವಿದ್ಯಾಲಯಗಳಿಗೆ ಪ್ರತ್ಯೇಕ ಕ್ಯಾಂಪಸ್, ಹೆಚ್ಚುವರಿ ಸಿಬ್ಬಂದಿ, ಮೂಲಸೌಕರ್ಯ ಒದಗಿಸಲು ಸಾಧ್ಯವಿಲ್ಲ. ಇರುವ ಸಂಪನ್ಮೂಲಗಳನ್ನೇ ಬಳಸಿಕೊಂಡು ಕಾರ್ಯನಿರ್ವಹಿಸಬೇಕು ಎಂದು ಸರ್ಕಾರ ಸೂಚಿಸಿದೆ.

ವಿಶ್ವವಿದ್ಯಾಲಯಗಳ ರಚನೆ ಸಂಬಂಧ ಹೊರಡಿಸಲಾಗಿರುವ ಆದೇಶದಲ್ಲಿ ಈ ಬಗ್ಗೆ ನಿರ್ದೇಶನ ನೀಡಲಾಗಿದೆ.

ಸರ್ಕಾರ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮಕ್ಕೆ ತಿದ್ದುಪಡಿ ತಂದು ಇದೇ ವರ್ಷದ ಅ.10ರಂದು ಚಾಮರಾಜನಗರ, ಹಾಸನ, ಬೀದರ್, ಕೊಡಗು, ಕೊಪ್ಪಳ, ಬಾಗಲಕೋಟೆ, ಹಾವೇರಿ ಜಿಲ್ಲೆಗಳಲ್ಲಿ ಏಳು ಹೊಸ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲು ಹಾಗೂ ಏಕಾತ್ಮಕ ಸ್ವರೂಪದ ಮಂಡ್ಯ ವಿಶ್ವವಿದ್ಯಾಲಯಕ್ಕೆ ಸಂಯೋಜಿತ ಸ್ಥಾನ ನೀಡಲು ಘೋಷಣೆ ಹೊರಡಿಸಿತ್ತು. ಈಗ ಆರ್ಥಿಕ, ಭೌತಿಕ ಹಾಗೂ ಮಾನವ ಸಂಪನ್ಮೂಲಗಳ ಕುರಿತಂತೆ ಹಲವು ಷರತ್ತುಗಳನ್ನು ವಿಧಿಸಿ, ಆದೇಶ ಹೊರಡಿಸಲಾಗಿದೆ.

ನೂತನ ವಿಶ್ವವಿದ್ಯಾಲಯಗಳ ಸ್ಥಾಪನೆಗಾಗಿ ಹೊಸದಾಗಿ ಜಮೀನು ಖರೀದಿಸುವಂತಿಲ್ಲ. ಹೊಸ ಕಟ್ಟಡಗಳನ್ನು ನಿರ್ಮಿಸುವಂತಿಲ್ಲ. ಈಗಿರುವ ಸ್ನಾತಕೋತ್ತರ ಕೇಂದ್ರಗಳಲ್ಲೇ ಕಾರ್ಯ ನಿರ್ವಹಿಸಬೇಕು. ಮೂಲ ವಿಶ್ವವಿದ್ಯಾಲಯಗಳಲ್ಲಿ ಪ್ರಸ್ತುತ ಇರುವ ಮಂಜುರಾದ ಹುದ್ದೆಗಳಲ್ಲಿ ಅಗತ್ಯವಿರುವಷ್ಟು ಪಡೆಯಬೇಕು. ಯಾವುದೇ ಹೊಸ ಹುದ್ದೆಗಳನ್ನು ಸೃಜಿಸಬಾರದು. ಹುದ್ದೆಗಳನ್ನು ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನೂ ಸಲ್ಲಿಸಬಾರದು. ನೂತನ ವಿಶ್ವವಿದ್ಯಾಲಯಗಳ ಕೇಂದ್ರ ಸ್ಥಾನವಾಗಿ ಪರಿವರ್ತಿತವಾದ ಸ್ನಾತಕೋತ್ತರ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ, ಬೋಧಕೇತರ ಸಿಬ್ಬಂದಿ ಹೊಸ ವಿಶ್ವವಿದ್ಯಾಲಯಗಳಲ್ಲೇ ಕಾರ್ಯನಿರ್ವಹಿಸಬೇಕು ಎಂದು ಸೂಚಿಸಲಾಗಿದೆ.

ಈ ಶೈಕ್ಷಣಿಕ ವರ್ಷ ಪೂರ್ಣಗೊಳ್ಳುವವರೆಗೆ ಶೈಕ್ಷಣಿಕ ಚಟುವಟಿಕೆಗಳನ್ನು ಸಮಕ್ಷಮ ಪ್ರಾಧಿಕಾರದ ಅನುಮತಿ ಪಡೆದು ಮೂಲ ವಿಶ್ವವಿದ್ಯಾಲಯಗಳಲ್ಲೇ ಪೂರ್ಣಗೊಳಿಸಬೇಕು. ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಜಾಗ್ರತೆ ವಹಿಸಬೇಕು. 2023–24ನೇ ಸಾಲಿನಿಂದ ಸಂಗ್ರಹಿಸುವ ಶುಲ್ಕಗಳನ್ನು ಹೊಸ ವಿಶ್ವವಿದ್ಯಾಲಯಗಳು ಬಳಸಿಕೊಳ್ಳಬಹುದು. ಬಜೆಟ್‌ನಲ್ಲಿ ಘೋಷಿಸಿದ ₹ 2 ಕೋಟಿ ಅನುದಾನವನ್ನು ಸಿಬ್ಬಂದಿ ವಿಲೀನಾತಿ ಆದೇಶದ ನಂತರ ಬಿಡುಗಡೆ ಮಾಡಲಾಗುವುದು. ಪ್ರಸ್ತುತ ಇರುವ ಸ್ಥಳ, ಕಟ್ಟಡ, ಸಿಬ್ಬಂದಿ ಹಾಗೂ ನೀಡುವ ಸೀಮಿತ ಅನುದಾನವನ್ನು ಬಳಸಿಕೊಂಡು ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳಿಗಿಂತ ಭಿನ್ನವಾಗಿ ಹೆಚ್ಚು ಮಾನವ ಸಂಪನ್ಮೂಲ ಬಳಸದೇ, ಗರಿಷ್ಠ ತಂತ್ರಾಂಶ ಬಳಕೆ ಮಾಡಿಕೊಂಡು ಕಾರ್ಯನಿರ್ವಹಿಸುವಂತೆ ಷರತ್ತುಗಳನ್ನು ವಿಧಿಸಲಾಗಿದೆ.

ಮೂಲ ವಿವಿ	ಹೊಸ ವಿವಿ
ಮೈಸೂರು	ಚಾಮರಾಜನಗರ
ಮೈಸೂರು	ಹಾಸನ
ಮೈಸೂರು	ಮಂಡ್ಯ
ಗುಲ್ಬರ್ಗಾ	ಬೀದರ್
ಮಂಗಳೂರು	ಕೊಡಗು
ಶ್ರೀಕೃಷ್ಣದೇವರಾಯ	ಕೊಪ್ಪಳ
ರಾಣಿ ಚೆನ್ನಮ್ಮ	ಬಾಗಲಕೋಟೆ
ಕರ್ನಾಟಕ ವಿವಿ	ಹಾವೇರಿ

ಚಿತ್ರಾವಳಿ

ಬಿಎಂಎಸ್ ಕಾನೂನು ಕಾಲೇಜು ಆಯೋಜಿಸಿದ್ದ ನ್ಯಾಯದೀಕ್ಷೆ ಕಾರ್ಯಕ್ರಮದಲ್ಲಿ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಮತ್ತು ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸ್ವಾಗತ ಕಾರ್ಯಕ್ರಮ ನಡೆಯಿತು. ಹೈಕೋರ್ಟ್ ನ್ಯಾಯಮೂರ್ತಿ ಎಂ.ನಾಗಪ್ರಸನ್ನ, ವಕೀಲರಾದ ಬಿ.ವಿ. ಆಚಾರ್ಯ, ಸಂಸ್ಥೆಯ ಅಧ್ಯಕ್ಷ ಅವಿರಾಮ್ ಶರ್ಮ, ಟ್ರಸ್ಟಿ ಪಿ. ದಯಾನಂದ ಪೈ ಇದ್ದರು

ಬನ್ನೇರುಘಟ್ಟದ ನಿರ್ಮಾಣ್ ಶೆಲ್ಟರ್ಸ್ ಮತ್ತು ವಿಎಲ್‌ಎನ್ ನಿರ್ಮಾಣ್ ಪುರಂದರ್ ಪ್ರತಿಷ್ಠಾನದ ವತಿಯಿಂದ ನಿಸರ್ಗ ಬಡಾವಣೆಯಲ್ಲಿ ಶುಕ್ರವಾರ ಕನಕದಾಸ ಜಯಂತಿಯನ್ನು ಆಚರಣೆ ಮಾಡಲಾಯಿತು. ಸಂಸ್ಥೆಯ ಸಂಸ್ಥಾಪಕರಾದ ವಿ. ಲಕ್ಷ್ಮೀನಾರಾಯಣ್ ಇದ್ದರು. ಆರ್‌.ಕೆ. ಪದ್ಮನಾಭ ಮತ್ತು ತಂಡದಿಂದ ದಾಸವಾಣಿ ಗಾನಲಹರಿ ಸಂಗೀತ ಕಾರ್ಯಕ್ರಮ ನಡೆಯಿತು

ರಾಜಧಾನಿಯಲ್ಲಿ ಥಂಡಿ ವಾತಾವರಣ

ಬೆಂಗಳೂರು: ರಾಜಧಾನಿ ಬೆಂಗಳೂರಿನಲ್ಲಿ ಶುಕ್ರವಾರದ ವಾತಾವರಣವು ಥಂಡಿಯಿಂದ ಕೂಡಿತ್ತು. ವಿವಿಧ ಬಡಾವಣೆಗಳಲ್ಲಿ ತುಂತುರು ಮಳೆ ಸುರಿಯಿತು. ಜೊತೆಗೆ ಜೋರಾದ ಗಾಳಿಯೂ ಬೀಸುತ್ತಿತ್ತು.

ಬೆಂಗಳೂರಿನಲ್ಲಿ ಶನಿವಾರವೂ ಮೋಡ ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ಹಗುರದಿಂದ ಸಾಧಾರಣ ಮಳೆ ಬೀಳುವ ಸಾಧ್ಯತೆ ಇದೆ. ಕೆಲವು ಭಾಗದಲ್ಲಿ ಬೆಳಗಿನ ಜಾವ ಮಂಜು ಮುಸುಕಿದ ವಾತಾವರಣ ಇರಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಶುಕ್ರವಾರ ಉಷ್ಣಾಂಶ ಗರಿಷ್ಠ 22 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ 19 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು. ಶನಿವಾರ ಗರಿಷ್ಠ 25 ಹಾಗೂ ಕನಿಷ್ಠ 19 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಇರಲಿದೆ ಎಂದು ಇಲಾಖೆ ತಿಳಿಸಿದೆ.

ನಗರದಲ್ಲಿ ಇಂದು

ಗಿನ್ನಿಸ್ ದಾಖಲೆಗಾಗಿ ಸ್ಯಾಕ್ಸೋಫೋನ್ ಸಂಗೀತ ಕಾರ್ಯಕ್ರಮ: ಪ್ರಸ್ತುತಿ: ಎಂ.ಎಸ್.ಸುಬ್ಬಲಕ್ಷ್ಮಿ, ಸ್ಥಳ: ಜಾನಪದರು ರಂಗಮಂದಿರ, ನಿಂಬೇಕಾಯಿಪುರ, ಬೆಳಿಗ್ಗೆ 8

6ನೇ ರಾಜ್ಯಮಟ್ಟದ ಮಾನವ ಸಂಪನ್ಮೂಲ ವೃತ್ತಿನಿರತರ ಕನ್ನಡ ಸಮ್ಮೇಳನ–2022: ಸಮ್ಮೇಳನದ ವಿಷಯ: ಉದ್ಯೋಗಿಗಳನ್ನು ಉಳಿಸಿಕೊಳ್ಳುವಿಕೆ ಮತ್ತು ಅಭಿವೃದ್ಧಿ–ತಂತ್ರಗಳು ಮತ್ತು ಸವಾಲುಗಳು, ಆಯೋಜನೆ: ನಿರಾತಂಕ, ಸ್ಥಳ: ದಿ ಚಾನ್ಸರಿ ಪೆವಿಲಿಯನ್, ಬೆಳಿಗ್ಗೆ 9.30

ಪೀಣ್ಯ ಉದ್ಯೋಗ ಮೇಳ: ಉದ್ಘಾಟನೆ: ಮಂಜುನಾಥ ಆರ್., ಅತಿಥಿಗಳು: ಮಂಜುನಾಥ ಜಿ., ಅಶ್ವಿನಿ ಜಿ.ಗೌಡ, ಎ.ಎಚ್.ಉಮೇಶ, ಅಧ್ಯಕ್ಷತೆ: ಮಂಜುನಾಥ ಎಚ್., ಜಯಶಂಕರ್ ಪಿ., ಆಯೋಜನೆ: ಪೀಣ್ಯ ಇಂಡಸ್ಟ್ರೀಸ್ ಅಸೋಸಿಯೇಷನ್, ಸ್ಥಳ: ಪಿಐಎ ಭವನ, ಪೀಣ್ಯ ಕೈಗಾರಿಕಾ ಪ್ರದೇಶ, ಬೆಳಿಗ್ಗೆ 9.30

ಕಮಲಾ ಹಂಪನಾ ಹೆಸರಿನ ದತ್ತಿ ಉಪನ್ಯಾಸ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ಬೈರಮಂಗಲ ರಾಮೇಗೌಡ, ಉಪನ್ಯಾಸ: ಬಿ.ಯು. ಸುಮಾ, ಪ್ರಶಸ್ತಿ ಪುರಸ್ಕೃತರು: ಎಸ್. ಪಿ. ಪದ್ಮಪ್ರಸಾದ್, ಹುಮಾಕ್ಷಿ ಗೋಗಿ, ಉಪಸ್ಥಿತಿ: ಕಮಲಾ ಹಂಪನಾ, ಅಧ್ಯಕ್ಷತೆ: ಎಚ್.ಎಲ್.ಪುಷ್ಪ, ಆಯೋಜನೆ: ಕರ್ನಾಟಕ ಲೇಖಕಿಯರ ಸಂಘ ಮತ್ತು ಕಮಲಾ ಹಂಪನಾ ಸಾಹಿತ್ಯ ವೇದಿಕೆ, ಸ್ಥಳ: ಬಿಎಂಶ್ರೀ ಪ್ರತಿಷ್ಠಾನ, ಎಂ.ವಿ.ಸೀ ಸಭಾಂಗಣ, ನರಸಿಂಹರಾಜ ಕಾಲೊನಿ, ಬೆಳಿಗ್ಗೆ 10.30

ಕಮಲಾ ಹಂಪನಾ

ರಾಷ್ಟ್ರೋತ್ಥಾನ ಕನ್ನಡ ಪುಸ್ತಕ ಹಬ್ಬದಲ್ಲಿ ಉಪನ್ಯಾಸ: ವಿಷಯ: ‘ಮೋಪ್ಲಾ’ ನೂರು; ಸಮಸ್ಯೆಗಳು ಸಾವಿರ, ಉಪನ್ಯಾಸಕರು: ಸಂದೀಪ್ ಬಾಲಕೃಷ್ಣ, ಆಯೋಜನೆ: ರಾಷ್ಟ್ರೋತ್ಥಾನ, ಸ್ಥಳ: ಕೇಶವಶಿಲ್ಪ ಸಭಾಂಗಣ, ಕೆಂಪೇಗೌಡನಗರ, ಬೆಳಿಗ್ಗೆ 11

ಚಾಣಕ್ಯ ವಿಶ್ವವಿದ್ಯಾಲಯದ ಲೋಗೊ ಅನಾವರಣ: ಅತಿಥಿಗಳು: ಮೇಕಿನ್ ಮಹೇಶ್ವರಿ, ಉಪಸ್ಥಿತಿ: ಯಶವಂತ ಡೋಂಗ್ರೆ, ಎಂ.ಪಿ. ಕುಮಾರ್, ಸ್ಥಳ: ಯುವಪಥ, 4ನೇ ಬ್ಲಾಕ್ ಜಯನಗರ, ಬೆಳಿಗ್ಗೆ 11

ಸಾಂಸ್ಕೃತಿಕ ಸಮ್ಮಿಲನ–2022, ಅಸಾಧಾರಣ ಸೇವೆ ಸಲ್ಲಿಸಿದ ಪೊಲೀಸ್ ಸಿಬ್ಬಂದಿಗೆ ಪುರಸ್ಕಾರ, ಸಂಘದ ಸದಸ್ಯರ ಸಂಪರ್ಕ ಕಿರುಹೊತ್ತಿಗೆ ಬಿಡುಗಡೆ ಹಾಗೂ ಗಾಯನ ಧಾರೆ: ಉದ್ಘಾಟನೆ: ಪ್ರವೀಣ್ ಸೂದ್, ಕಿರುಹೊತ್ತಿಗೆ ಬಿಡುಗಡೆ: ಸಿ.ಎಚ್. ಪ್ರತಾಪ್ ರೆಡ್ಡಿ, ಅತಿಥಿಗಳು: ಡಿ.ಎನ್. ಮುನಿಕೃಷ್ಣಪ್ಪ, ಅಧ್ಯಕ್ಷತೆ: ಬಿ.ಕೆ. ಶಿವರಾಮ್, ಉಪಸ್ಥಿತಿ: ವೇಮಗಲ್ ನಾರಾಯಣಸ್ವಾಮಿ, ಕುಮಾರ ಎಸ್. ಕರನಿಂಗ, ಆಯೋಜನೆ: ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 4

ಇವಿ ಕಲಾಕೃತಿಗಳ ಅನಾವರಣಕ್ಕೆ ಚಾಲನೆ: ವಿ. ಮಂಜುಳಾ, ಸ್ಥಳ: ಮೆಟ್ರೊ ನಿಲ್ದಾಣ ಪ್ರವೇಶ, ಚರ್ಚ್ ಸ್ಟ್ರೀಟ್, ಸಂಜೆ 4.30

ವೈಟ್‌ಫೀಲ್ಡ್ ಜಾನಪದ ಉತ್ಸವ

ವೈಟ್‌ಫೀಲ್ಡ್ ಜಾನಪದ ಉತ್ಸವ: ಪ್ರಸ್ತುತಿ: ತಮಿಳುನಾಡು, ಮಣಿಪುರಿ, ಬಿಹು, ಹೊರಿ, ಗಿಡ್ಡಾ ವಿವಿಧ ನೃತ್ಯ ಪ್ರಕಾರಗಳು, ಯಕ್ಷಗಾನ, ಜನಪದ ಗೊಂಬೆಗಳು, ಕಂಪಳ, ತಮಟೆ, ಹುಲಿವೇಷ, ಡೊಳ್ಳು ಕುಣಿತದ ನೃತ್ಯ ಪ್ರಕಾರಗಳು, ಆಯೋಜನೆ ಮತ್ತು ಸ್ಥಳ: ನೆಕ್ಸಸ್ ವೈಟ್‌ಫೀಲ್ಡ್ ಮಾಲ್. ಬೆಳಿಗ್ಗೆ 10.

ದ್ವಾರನಕುಂಟೆ ಪಾತಣ್ಣ ಅವರ ‘ಕತ್ತಲ ದಾರಿ ದೂರ’ ಕಾದಂಬರಿ ಬಿಡುಗಡೆ: ಎಸ್. ಜಿ. ಸಿದ್ಧರಾಮಯ್ಯ, ಅಧ್ಯಕ್ಷತೆ: ವಿಜಯಾ, ಅತಿಥಿಗಳು: ಬಂಜಗೆರೆ ಜಯಪ್ರಕಾಶ, ಎಂ.ತಿಮ್ಮಯ್ಯ, ಕೃತಿ ಕುರಿತು: ಪಾರ್ವತೀಶ ಬಿಳಿದಾಳೆ, ಉಪಸ್ಥಿತಿ: ದ್ವಾರನಕುಂಟೆ ಪಾತಣ್ಣ, ಆಶಯ ನುಡಿ: ವ.ಚ. ಚನ್ನೇಗೌಡ, ಆಯೋಜನೆ: ಕರ್ನಾಟಕ ವಿಕಾಸ ರಂಗ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5.30

ಎಸ್‌.ಜಿ. ಸಿದ್ಧರಾಮಯ್ಯ

ಕಾಂಚನೋತ್ಸವ–2022: ಕರ್ನಾಟಕ ಶಾಸ್ತ್ರೀಯ ಸಂಗೀತ: ಗಾಯನ: ಕಲಾವತಿ ಅವಧೂತ, ಪಿಟೀಲು: ಚಾರುಲತಾ ರಾಮಾನುಜಂ, ಮೃದಂಗ: ನಂಜಿಲ್ ಅರುಳ್, ಖಂಜೀರಾ: ಭಾರ್ಗವ ಹಾಲಂಬಿ, ಆಯೋಜನೆ: ಕಾಂಚನಾ ಶ್ರೀಲಕ್ಷ್ಮಿನಾರಾಯಣ ಮ್ಯೂಸಿಕ್ ಅಕಾಡೆಮಿ ಟ್ರಸ್ಟ್, ಸ್ಥಳ: ಅಕ್ಷರಂ, ಗಿರಿನಗರ, ಸಂಜೆ 6

52ನೇ ಬಹುಭಾಷಾ ನಾಟಕ ಸ್ಪರ್ಧೆಯ ಬಹುಮಾನ ವಿತರಣೆ ಹಾಗೂ ಸಮಾರೋಪ ಸಮಾರಂಭ: ಬಹುಮಾನ ವಿತರಣೆ: ಆರ್.ಪಿ. ಮೋಹನ್, ಅತಿಥಿಗಳು: ಮಂಗಳ ಎನ್., ಅಧ್ಯಕ್ಷತೆ: ನರಸಿಂಹ ನಾಯ್ಕ, ಆಯೋಜನೆ: ಭಾರತ್ ಎಲೆಕ್ಟ್ರಾನಿಕ್ಸ್ ಲಲಿತಕಲಾ ಸಂಘ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ, ಸಂಜೆ 6

ಕಾರ್ತಿಕ ಸಂಗೀತ ಸಂಭ್ರಮ, ಕನಕದಾಸರ ಜಯಂತಿ, ಕನ್ನಡ ರಾಜ್ಯೋತ್ಸವ ಹಾಗೂ ಹರಿದಾಸ ಸಂಭ್ರಮ–2022: ಹಾರ್ಮೋನಿಯಂ ವಾದನ: ಸಾಯಿತೇಜಸ್ ಚಂದ್ರಶೇಖರ್, ಪಿಟೀಲು: ಪ್ರಿಶಿತಾ ಕೇದಗೆ, ಮೃದಂಗ: ಕೆ.ಕೆ. ಹರಿನಾರಾಯಣ್, ಘಟ್ಟ: ಶ್ರೀನಿಧಿ ಆರ್. ಕೌಂಡಿನ್ಯ, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಸಂಜೆ 6

39 ರಸ್ತೆಗಳಿಗೆ ಕಾಂಕ್ರೀಟ್: ಬಿಬಿಎಂಪಿಯಿಂದ ಹೊಸ ಪ್ರಸ್ತಾವ

ಮೂರನೇ ಹಂತದ ವೈಟ್ ಟಾಪಿಂಗ್‌ಗೆ ₹1,449 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ 39 ರಸ್ತೆಗಳಲ್ಲಿ ₹1,449 ಕೋಟಿ ವೆಚ್ಚದಲ್ಲಿ ವೈಟ್ ಟಾಪಿಂಗ್ ಮಾಡುವ ಮೂರನೇ ಹಂತದ ಯೋಜನೆಗೆ ಹಣ ನೀಡಬೇಕೆಂಬ ಹೊಸ ಪ್ರಸ್ತಾವವನ್ನು ಬಿಬಿಎಂಪಿ ಸರ್ಕಾರದ ಮುಂದಿರಿಸಿದೆ.

ವೈಟ್ ಟಾಪಿಂಗ್ ರಸ್ತೆ ನಿರ್ಮಾಣದ ಎರಡು ಹಂತ ಮುಗಿಯುವ ಹಂತದಲ್ಲಿರುವಾಗ ಹೊಸ ಯೋಜನೆ ತಯಾರಿಸಲಾಗಿದೆ. ಕೇಂದ್ರ ರೇಷ್ಮೆ ಮಂಡಳಿ ಮತ್ತು ಲೋವ್ರಿ ಜಂಕ್ಷನ್ ನಡುವಿನ 19 ಕಿ.ಮೀ. ಹೊರ ವರ್ತುಲ ರಸ್ತೆ ಹೊಸ ಯೋಜನೆಯಲ್ಲಿದೆ. 39 ರಸ್ತೆಗಳಲ್ಲಿ 114.46 ಕಿ.ಮೀ ರಸ್ತೆ ವೈಟ್ ಟಾಪಿಂಗ್ ಆಗಲಿದೆ.

ಮುಖ್ಯಾಂಶಗಳು

- ಕೇಂದ್ರ ರೇಷ್ಮೆ ಮಂಡಳಿ–ಲೋವ್ರಿ ಜಂಕ್ಷನ್ ನಡುವಿನ ರಸ್ತೆ ಹೊಸ ಯೋಜನೆಯಲ್ಲಿ
- ವೈಟ್ ಟಾಪಿಂಗ್ ಆಗಲಿದೆ 114.46 ಕಿ.ಮೀ ರಸ್ತೆ
- ಈವರೆಗೆ ಪ್ರಥಮ ಹಂತಕ್ಕೆ ₹ 972 ಕೋಟಿ, ಎರಡನೇ ಹಂತಕ್ಕೆ ₹ 704 ಕೋಟಿ ವೆಚ್ಚ

ಈವರೆಗೆ ಬಿಬಿಎಂಪಿ 125 ಕಿ.ಮೀ ರಸ್ತೆಯನ್ನು ವೈಟ್ ಟಾಪಿಂಗ್ ಮಾಡಿದೆ. ಪ್ರಥಮ ಹಂತದಲ್ಲಿ ₹972 ಕೋಟಿ ಹಾಗೂ ಎರಡನೇ ಹಂತದಲ್ಲಿ ₹704 ಕೋಟಿ ವೆಚ್ಚ ಮಾಡಿದೆ.

ಬಿಬಿಎಂಪಿಯ ಹೊಸ ವಿನ್ಯಾಸದ ಪ್ರಕಾರ, ಸುರಂಗದ ಎರಡು ಡಕ್ಟ್‌ಗಳು ಹಿಂದಿಗಿಂತ ಅಧಿಕ ಗಾತ್ರದಲ್ಲಿರಲಿವೆ. ಪಾದಚಾರಿ ಮಾರ್ಗದ ಕೆಳಗೆ ಕೇಬಲ್, ವಿದ್ಯುತ್ ಮಾರ್ಗಗಳಿರಲಿವೆ. ರಸ್ತೆ ನಾಲ್ಕು ಪಥವಾಗಿದ್ದರೆ, ಎರಡು ಬದಿಯ ಎರಡು ಪಥ ಮಾತ್ರ ವೈಟ್ ಟಾಪಿಂಗ್ ಮಾಡಲಾಗುತ್ತದೆ. ಉಳಿದದ್ದಕ್ಕೆ ಡಾಂಬರು ಅಥವಾ ಕಾಬೂಲ್ ಸ್ಟೋನ್ ಹಾಕಲಾಗುತ್ತದೆ. ನಾಲ್ಕು ಪಥದ ರಸ್ತೆಯಾದರೆ, ಒಂದೂವರೆ ಪಥ ಮಾತ್ರ ವೈಟ್ ಟಾಪಿಂಗ್ ಮಾಡಲಾಗುತ್ತದೆ.

ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ‘ಯೋಜನೆ ಶೀಘ್ರವಾಗಿ ಪೂರ್ಣಗೊಳಿಸುವಂತೆ ವಿನ್ಯಾಸ ರೂಪಿಸಲಾಗಿದೆ. ಈ ಮಾದರಿಯಲ್ಲಿ ಆರು ಪಥದ ಒಂದು ಕಿ.ಮೀಗೆ ₹15.5 ಕೋಟಿ ಹಾಗೂ ನಾಲ್ಕು ಪಥದ ಒಂದು ಕಿ.ಮೀಗೆ ₹14.5 ಕೋಟಿ ವೆಚ್ಚವಾಗಲಿದೆ’ ಎಂದರು.

ಸೊರೇನ್ ವಿರುದ್ಧ ಪ್ರಕರಣ ರದ್ದು

ರಾಂಚಿ (ಪಿಟಿಐ): 2019ರ ವಿಧಾನಸಭಾ ಚುನಾವಣೆಯಲ್ಲಿ ಮಾದರಿ ನೀತಿ ಸಂಹಿತೆ ಉಲ್ಲಂಘನೆ ಆರೋಪ ದಡಿ ಮುಖ್ಯಮಂತ್ರಿ ಹೇಮಂತ್ ಸೊರೇನ್ ವಿರುದ್ಧ ದಾಖಲಾಗಿದ್ದ ಪ್ರಕರಣದ ವಿಚಾರಣೆಯನ್ನು ‘ತಾಂತ್ರಿಕ ಲೋಪ’ ಕಾರಣ ನೀಡಿ ಜಾರ್ಖಂಡ್ ಹೈಕೋರ್ಟ್ ರದ್ದುಪಡಿಸಿದೆ.

ಮೂರು ವರ್ಷದ ಹಿಂದೆ ಪ್ರಕರಣ ದಾಖಲಾಗಿತ್ತು. ಸೊರೇನ್ ಇದನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು.

ವಿಚಾರಣೆ ವೇಳೆ ಆರೋಪಿ ಸಾವು

ಬೆಳಗಾವಿ: ಗಾಂಜಾ ಪ್ರಕರಣಕ್ಕೆ ಸಂಬಂಧಿಸಿ ವಿಚಾರಣೆಗೆ ಕರೆತರಲಾಗಿದ್ದ ಆರೋಪಿಯೊಬ್ಬರು ಪೊಲೀಸರ ವಶದಲ್ಲಿದ್ದಾಗಲೇ ಮೃತಪಟ್ಟ ಘಟನೆ ಶುಕ್ರವಾರ ರಾತ್ರಿ ನಡೆದಿದೆ. ಅನಾರೋಗ್ಯದಿಂದ ಆತ ಮೃತಪಟ್ಟಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಹುಕ್ಕೇರಿ ತಾಲ್ಲೂಕಿನ ಬೆಲ್ಲದ ಬಾಗೇವಾಡಿ ಗ್ರಾಮದ ಬಸನಗೌಡ ಈರನಗೌಡ ಪಾಟೀಲ(45) ಮೃತರು. 'ಪತ್ನಿ ನೀಡಿದ ದೂರು ಆಧರಿಸಿ, ಈ ಪ್ರಕರಣದ ತನಿಖೆಯನ್ನು ಸಿಐಡಿಗೆ ಒಪ್ಪಿಸಲಾಗುವುದು' ಎಂದು ಡಿಸಿಪಿ (ಕಾನೂನು ಮತ್ತು ಸುವ್ಯವಸ್ಥೆ) ರವೀಂದ್ರ ಗದಾಡಿ ತಿಳಿಸಿದ್ದಾರೆ.

‘ಗಾಂಜಾ ಪ್ರಕರಣದ ಸಂಬಂಧ ವಿಚಾರಣೆಗೆ ಬೆಳಗಾವಿಗೆ ಕರೆತರುವಾಗ ಆರೋಗ್ಯ ಸಮಸ್ಯೆ ಕಾಣಿಸಿಕೊಂಡಿತ್ತು. ಅಗತ್ಯ ವೈದ್ಯಕೀಯ ಚಿಕಿತ್ಸೆ ಕೊಡಿಸಿದ್ದೆವು. ಚೇತರಿಕೆ ನಂತರ, ಬೆಳಗಾವಿ ಗ್ರಾಮೀಣ ಠಾಣೆಗೆ ಕರೆತಂದು ವಿಚಾರಣೆಗೆ ಒಳಪಡಿಸಿದ್ದೆವು’ ಎಂದು ಪೊಲೀಸರು ತಿಳಿಸಿದ್ದಾರೆ.

ತುಪ್ಪದ ಹಬ್ಬ ಜಾಗೃತಿ ಅಭಿಯಾನ ಇಂದು

ಬೆಂಗಳೂರು: ಬ್ರೂಕ್‌ಫೀಲ್ಡ್‌ನ ದಿ ರಾಮೇಶ್ವರಂ ಕೆಫೆಯಲ್ಲಿ ನ.12ರಂದು (ಶನಿವಾರ) ಬೆಳಿಗ್ಗೆ 10ಕ್ಕೆ ತುಪ್ಪದ ಆರೋಗ್ಯದಾಯಕ ಲಾಭಗಳ ಬಗ್ಗೆ ಜನಜಾಗೃತಿ ಅಭಿಯಾನ ಹಮ್ಮಿಕೊಳ್ಳಲಾಗಿದೆ. 'ತುಪ್ಪವು ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಮಲಬದ್ಧತೆ ತೊಂದರೆಗಳಿಗೆ ರಾಮಬಾಣ ಎಂದು ಆಹಾರ ತಜ್ಞರಾದ ದಿವ್ಯ ರಾಘವೇಂದ್ರ ರಾವ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

IN THE COURT OF THE II ADDL. DISTRICT AND SESSIONS JUDGE AT TUMKUR. R.A. No.40/2021

Appellant: Chandrashekar
V/s Respondents: Sharadamma and others

NOTICE TO RESPONDENT No.5 Under Order 5 Rule 20 of CPC

Rangaraju (Respondent No.5)
S/o Late Krishnappa, aged about 53 years, R/at Door No.65, Vrushabhavathi Nagara, Kamakshipalya, Bangalore-560079.

DRAFT PAPER PUBLICATION

The above named appellant has filed the above appeal against the respondents, against the order passed in O.S. No. 922/2010, dated. 05-01-2019 before the Hon'ble V Addl. Civil Judge at Tumkur. Against that order, the Appellant has filed R.A. No.40/ 2021. The aforesaid case is posted for appearance of Respondent No.5. The Respondents No. 5 is hereby directed to appear before this Hon'ble Court on 14/12/22 in person or through his counsel or through an authorized agent, failing which the above case will be decided exparte and determined as per law.

Given under my hand and the seal of the court on this 10 day of 11/2022 at Tumkur.

By order of the court

Advocate for appellant
G. Manjunath B.A., LLB, Advocate,
C/o H.N. Associates, SRS Building, Civil Bus Stand, Tumkur, Mob: 9448661101

ತೇಜಸ್ವಿ ಸೂರ್ಯ ವಿರುದ್ಧ ಮೋಹನ್ ದಾಸ್ ಪೈ ಕಿಡಿ

ಬೆಂಗಳೂರು: ಬೆಂಗಳೂರಿನ ರಸ್ತೆಗಳ ಪರಿಸ್ಥಿತಿ ಉಲ್ಲೇಖಿಸಿ ಸಂಸದ ತೇಜಸ್ವಿ ಸೂರ್ಯ ವಿರುದ್ಧ ಉದ್ಯಮಿ ಟಿ.ವಿ. ಮೋಹನ್‌ದಾಸ್ ಪೈ ಕಿಡಿಕಾರಿದ್ದಾರೆ.

ಸಾಬರಮತಿ ನದಿಗೆ ನಿರ್ಮಿಸಲಾದ ಸೇತುವೆಗೆ ಭೇಟಿ ನೀಡಿದ್ದನ್ನು ತೇಜಸ್ವಿ ಸೂರ್ಯ ಅವರು ಚಿತ್ರದೊಂದಿಗೆ ಟ್ವೀಟ್ ಮಾಡಿದ್ದರು. ಬಿಜೆಪಿ ಸರ್ಕಾರಗಳ ಡಬಲ್ ಎಂಜಿನ್‌ನಿಂದಾಗಿ ಗುಜರಾತ್ ಜಾಗತಿಕ ಪ್ರವಾಸೋದ್ಯಮ ಕೇಂದ್ರವಾಗುತ್ತಿದೆ ಎಂದು ಟ್ವೀಟ್‌ನಲ್ಲಿ ಅವರು ಉಲ್ಲೇಖಿಸಿದ್ದರು.



ಮೋಹನ್ ದಾಸ್ ಪೈ

ಇದಕ್ಕೆ ಪ್ರತಿಕ್ರಿಯಿಸಿ ಟ್ವೀಟ್ ಮಾಡಿರುವ ಮೋಹನ್ ದಾಸ್ ಪೈ, 'ದಯವಿಟ್ಟು ಬೆಂಗಳೂರಿನಲ್ಲಿ ಹೆಚ್ಚು ಸಮಯ ಕಳೆಯಿರಿ. ನಮಗೆ ಉತ್ತಮ, ಗುಂಡಿ ಮುಕ್ತವಾದ ರಸ್ತೆಗಳು ಸಿಗಲಿ. ಉತ್ತಮ ಸಂಚಾರ ವ್ಯವಸ್ಥೆ, ಕಸ ಇಲ್ಲದ ಸ್ವಚ್ಛ ರಸ್ತೆಗಳು ಸಿಗಲಿ. ನೀವು ನಮ್ಮ ಸಂಸದರು. ನಿಮ್ಮ ಅಗತ್ಯ ನಮಗೆ ಇಲ್ಲಿ ಬಹಳ ಇದೆ. ಇಲ್ಲಿಯೂ ಅದೇ ಡಬಲ್ ಎಂಜಿನ್ ಇದೆ. ಆದರೆ, ಅದು ಕಾರ್ಯನಿರ್ವಹಿಸುತ್ತಿಲ್ಲ' ಎಂದು ಮೋಹನ್‌ದಾಸ್ ಪೈ ಅವರು ಟೀಕಿಸಿದ್ದಾರೆ.

ಸುಧಾ, ಮಯೂರ ಓದಿರಿ

ಬಿಡಿಎ: ಕಟ್ಟಡಗಳಿರುವ ಪ್ರದೇಶ ಭೂಸ್ವಾಧೀನಕ್ಕೆ ಅಧಿಸೂಚನೆ

ಅಧಿಕಾರಿಗಳ ಅಮಾನತಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಆಗಸ್ಟ್‌ನಲ್ಲಿ ಹೊರಡಿಸಿದ್ದ ಭೂಸ್ವಾಧೀನ ಅಧಿಸೂಚನೆ
- ಕರಡು ಪ್ರತಿಯಲ್ಲಿ 52 ಎಕರೆ ಕೈಬಿಟ್ಟಿದ್ದ ಅಧಿಕಾರಿಗಳು

ಬೆಂಗಳೂರು: ಡಾ. ಶಿವರಾಮ ಕಾರಂತ ಬಡಾವಣೆಗಾಗಿ ಕಟ್ಟಡಗಳು ಇರುವ ಪ್ರದೇಶವನ್ನೂ ಭೂಸ್ವಾಧೀನ ಪಡಿಸಿಕೊಳ್ಳಲೆಂದು ಪ್ರಾಥಮಿಕ ಅಧಿಸೂಚನೆ ಹೊರಡಿಸಲು ಕಾರಣರಾಗಿದ್ದ ಬಿಡಿಎ ಅಧಿಕಾರಿಗಳನ್ನು ಅಮಾನತುಪಡಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚಿಸಿದ್ದಾರೆ.

ಶಿವರಾಮ ಕಾರಂತ ಬಡಾವಣೆ ಪ್ರಕರಣವನ್ನು ಆಲಿಸುತ್ತಿರುವ ಸುಪ್ರೀಂ ಕೋರ್ಟ್, 245 ಎಕರೆಯನ್ನು ಕೈಬಿಟ್ಟ ಬಗ್ಗೆ ಪರಿಶೀಲಿಸಿತು. ಬಿಡಿಎ ಬಿಟ್ಟಿರುವ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕು ಎಂದು ಆದೇಶಿಸಿತು. 'ಇದರಂತೆ ಬಡಾವಣೆ ನಿರ್ಮಿಸಲು ಹೆಚ್ಚುವರಿಯಾಗಿ 245 ಎಕರೆ ಪ್ರದೇಶ ಭೂ ಸ್ವಾಧೀನಪಡಿಸಿಕೊಳ್ಳಲು ಆಗಸ್ಟ್‌ನಲ್ಲಿ ಅಧಿಸೂಚನೆ ಹೊರಡಿಸಲಾಗಿತ್ತು.

ಎರಡು ತಿಂಗಳ ನಂತರ ಅಂತಿಮ ಅಧಿಸೂಚನೆ ಹೊರಡಿಸಲು ಸಿದ್ಧಪಡಿಸಲಾಗಿದ್ದ ಕರಡಿನಲ್ಲಿ 52 ಎಕರೆಯನ್ನು ಕೈಬಿಡಲಾಗಿತ್ತು. ಮುಖ್ಯಮಂತ್ರಿಯವರ ಸಹಿಗೆ ಈ ಕರಡು ಪ್ರತಿ ತಲುಪಿದ್ದಾಗ ಅಧಿಕಾರಿಗಳ ಲೋಪ ಕಂಡುಬಂದಿದೆ.

ಬೆಂಗಳೂರು ಉತ್ತರದ ಯಶವಂತಪುರ, ಹೆಸರಘಟ್ಟ ಮತ್ತು ಯಲಹಂಕ ಹೋಬಳಿಯ 52 ಎಕರೆ ಡಿನೋಟಿಫಿಕೇಷನ್‌ಗೆ ಕರಡು ಸಿದ್ಧವಾಗಿತ್ತು. 193 ಎಕರೆ ಪ್ರದೇಶದ ಸ್ವಾಧೀನಕ್ಕೆ ನಿರ್ಧರಿಸಲಾಗಿತ್ತು. 'ಪ್ರಾಥಮಿಕ ಅಧಿಸೂಚನೆ ಮಾಡುವಾಗ ಈ ಕಟ್ಟಡಗಳ ಗಮನಕ್ಕೆ ಬಂದಿರಲಿಲ್ಲವೆ' ಎಂದು ಪ್ರಶ್ನಿಸಿರುವ ಮುಖ್ಯಮಂತ್ರಿ ಅವರು, 'ಎಲ್ಲ 245 ಎಕರೆ ಪ್ರದೇಶ ಅಂತಿಮ ಅಧಿಸೂಚನೆಯಲ್ಲಿರಲಿ' ಎಂದು ಸೂಚಿಸಿದ್ದಾರೆ.

ಅ.27ರಂದು ಬಿಡಿಎಗೆ ಪತ್ರ ಬರೆದಿರುವ ಮುಖ್ಯಮಂತ್ರಿಯವರು, ಕಟ್ಟಡ ಇದ್ದರೂ ಭೂಸ್ವಾಧೀನಕ್ಕೆ ಅಧಿಸೂಚಿಸಿರುವುದು ಅಧಿಕಾರಿಗಳ ಬೇಜವಾಬ್ದಾರಿ. ಪ್ರಾಥಮಿಕ ಅಧಿಸೂಚನೆಯಲ್ಲಿ ಭೂಸ್ವಾಧೀನಕ್ಕಾಗಿ ಸ್ಥಳ ಗುರುತಿಸಿರುವ ಅಧಿಕಾರಿಗಳನ್ನು ಅಮಾನತು ಮಾಡಬೇಕು' ಎಂದು ಸೂಚಿಸಿದ್ದಾರೆ.

ಬಿಡಿಎ ಈ ಬಗ್ಗೆ ಈವರೆಗೆ ಯಾರ ಮೇಲೂ ಕ್ರಮ ಕೈಗೊಂಡಿಲ್ಲ. ಬದಲಿಗೆ, ಪ್ರಾಥಮಿಕ ಅಧಿಸೂಚನೆಯಲ್ಲಿರುವ 245 ಎಕರೆ ಪ್ರದೇಶದಲ್ಲಿರುವ ಕಟ್ಟಡಗಳನ್ನು ಕ್ರಮಬದ್ಧಗೊಳಿಸಲು ಕ್ರಮ ಕೈಗೊಂಡಿದೆ.

ಬಿಡಿಎ ಭೂಸ್ವಾಧೀನ ವಿಭಾಗದ ಉಪ ಆಯುಕ್ತ ಡಾ.ಸೌಜನ್ಯಾ ಅವರನ್ನು ಸಂಪರ್ಕಿಸಿದಾಗ, 'ಇದು ಆಂತರಿಕ ವಿಷಯ' ಎಂದು ಅವರು ಪ್ರತಿಕ್ರಿಯಿಸಿದರು.

ತೀವ್ರ ಹಲ್ಲೆ: ಬಂಧನ

ಬೆಂಗಳೂರು: ಬ್ಯಾಟರಾಯನಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಯುವಕನ ಮೇಲೆ ಲಾಂಗ್‌ನಿಂದ ತೀವ್ರ ಹಲ್ಲೆ ನಡೆಸಿದ್ದ ಆರೋಪದಡಿ ಏಸುದಾಸ್, ಮನೋಜ್ ಸೇರಿ ಮೂವರನ್ನು ಪೊಲೀಸರು ಬಂಧಿಸಿದ್ದಾರೆ.

'ಎಸ್‌ಎಲ್‌ವಿ ಪಾರ್ಟಿ ಹಾಲ್ ಬಳಿ ಸ್ನೇಹಿತರ ಜೊತೆ ನಿಂತಿದ್ದ ಸಂದೀಪ್ ಮೇಲೆ ಬೈಕ್‌ನಲ್ಲಿ ಬಂದಿದ್ದ ಆರೋಪಿಗಳು ಹಲ್ಲೆ ನಡೆಸಿದ್ದರು. ಸಂದೀಪ್‌ಗೆ ಗಾಯವಾಗಿತ್ತು. ಸ್ನೇಹಿತರೇ ಆಟೊದಲ್ಲಿ ಕರೆದೊಯ್ದು ಆಸ್ಪತ್ರೆಗೆ ದಾಖಲಿಸಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

ಅಪಘಾತ ನೆಪ: ಹಣ ಸುಲಿಗೆ

ಸಿದ್ದಾಪುರ ಠಾಣೆ ಪೊಲೀಸರಿಂದ ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂಟಿಯಾಗಿ ಕಾರಿನಲ್ಲಿ ತೆರಳುತ್ತಿದ್ದ ಚಾಲಕರನ್ನು ಅಡ್ಡಗಟ್ಟಿ ಅಪಘಾತದ ನೆಪವೊಡ್ಡಿ ಹಣ ಸುಲಿಗೆ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಸಿದ್ದಾಪುರ ಠಾಣಾ ಪೊಲೀಸರು ಬಂಧಿಸಿದ್ದಾರೆ.

'ಮೈಸೂರಿನ ರಾಜೇಂದ್ರ ನಗರದ 9ನೇ ಕ್ರಾಸ್‌ನ ನಿವಾಸಿ ಜಮೀಲ್ ಖಾನ್ (30) ಹಾಗೂ ಬಿಹಾರದ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬಂಧಿತರಿಂದ ₹ 15 ಸಾವಿರ ನಗದು, ಕೃತ್ಯ ಎಸಗಲು ಬಳಸಿದ್ದ ಬೈಕ್ ಅನ್ನು ಜಪ್ತಿ ಮಾಡಲಾಗಿದೆ.

'ಲಾಲ್‌ಬಾಗ್ ರಸ್ತೆ ಹಾಗೂ ಹೊಸೂರು ಮುಖ್ಯರಸ್ತೆಗಳಲ್ಲಿ ಒಂಟಿಯಾಗಿ ಕಾರು ಚಲಾಯಿಸುತ್ತಿದ್ದವರನ್ನೇ ಇಬ್ಬರು ಆರೋಪಿಗಳು ಗುರಿಯಾಗಿಸಿ ಹಣ ಸುಲಿಗೆ ಮಾಡುತ್ತಿದ್ದರು. ಹಿಂದಿನಿಂದ ಬೈಕ್‌ನಲ್ಲಿ ಬರುತ್ತಿದ್ದ ಆರೋಪಿಗಳು, ತಾವೇ ಮೊದಲು ಕಾರಿಗೆ ಡಿಕ್ಕಿ ಹೊಡೆಸುತ್ತಿದ್ದರು. ಬಳಿಕ, ಕಾರು ಬೈಕ್‌ಗೆ ಡಿಕ್ಕಿ ಹೊಡೆದಿದೆ ಎಂದು ಸುಳ್ಳು ಹೇಳಿ ಬೆದರಿಕೆ ಹಾಕುತ್ತಿದ್ದರು. ಹಣ ನೀಡದಿದ್ದರೆ ಪೊಲೀಸರಿಗೆ ದೂರು ನೀಡುವ ನಾಟಕವಾಡುತ್ತಿದ್ದರು. ಇದರಿಂದ ಕಾರು ಚಾಲಕರು ಹೆದರಿ ಕೇಳಿದಷ್ಟು ಹಣ ನೀಡುತ್ತಿದ್ದರು' ಎಂದು ಮೂಲಗಳು ಹೇಳಿವೆ.

ಪಿಸ್ತೂಲ್ ಸಾಗಣೆ: ಆರೋಪಿ ಬಂಧನ

ಬೆಂಗಳೂರು: ಪಿಸ್ತೂಲ್ ಹಾಗೂ ಎರಡು ಗುಂಡು ಸಾಗಣೆ ಮಾಡುತ್ತಿದ್ದ ಆರೋಪಿಯನ್ನು ಈಶಾನ್ಯ ವಿಭಾಗದ ಪೊಲೀಸರು ಬಂಧಿಸಿ ದ್ದಾರೆ. ಗೋವಿಂದಪುರದ ನಿವಾಸಿ ಸೈಯದ್ ಜಬೀವುಲ್ಲಾ (37) ಬಂಧಿತ ಆರೋಪಿ.

'ಶ್ಯಾಂಪುರ ಮುಖ್ಯರಸ್ತೆಯ ಡಾ.ಬಿ.ಆರ್.ಅಂಬೇಡ್ಕರ್ ವೈದ್ಯಕೀಯ ಕಾಲೇಜಿನ ಬಳಿ ಆರೋಪಿ ಬಂಧಿಸಲಾಗಿದೆ. ಜಬೀವುಲ್ಲಾ ಬಳಿ ಶಸ್ತ್ರಾಸ್ತ್ರ ಪರವಾನಗಿ ಇರಲಿಲ್ಲ. ನುಸ್ರತ್ ಎಂಬಾತನ ಕೊಲೆ ಆರೋಪದಡಿ ಈತ ಜೈಲಿಗೆ ಹೋಗಿದ್ದ. 2018ರಲ್ಲಿ ಬಿಡುಗಡೆಯಾಗಿದ್ದ' ಎಂದು ಹೇಳಿವೆ.

'ನಸ್ರುತ್‌ನ ಬೆಂಬಲಿಗರಿಂದ ಬೆದರಿಕೆಯಿದ್ದು, ಆತ್ಮರಕ್ಷಣೆಗಾಗಿ ಮುಂಬೈನ ವ್ಯಕ್ತಿಯಿಂದ ₹ 20 ಸಾವಿರಕ್ಕೆ ಪಿಸ್ತೂಲ್ ಖರೀದಿಸಿರುವುದಾಗಿ ಆರೋಪಿ ವಿಚಾರಣೆಯಲ್ಲಿ ತಿಳಿಸಿದ್ದಾನೆ. ಪಿಸ್ತೂಲ್ ಮಾರಿದ್ದ ವ್ಯಕ್ತಿಯನ್ನು ಪತ್ತೆ ಹಚ್ಚಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಶನಿವಾರ ಆರಂಭವಾಗಲಿರುವ ಪರಿಷೆಗಾಗಿ ವ್ಯಾಪಾರಿಯೊಬ್ಬರು ಕಡಲೆಕಾಯಿ ರಾಶಿ ಹಾಕಿರುವ ದೃಶ್ಯ ಶುಕ್ರವಾರ ಕಂಡು ಬಂತು

—ಪ್ರಜಾವಾಣಿ ಚಿತ್ರ/ರಂಜು.ಪಿ

ಮಲ್ಲೇಶ್ವರ: ಇಂದಿನಿಂದ ಕಡಲೆಕಾಯಿ ಪರಿಷೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಕಾಡು ಮಲ್ಲೇಶ್ವರ ಬಳಗದಿಂದ ಆಯೋಜನೆ
- ನ.12 ರಿಂದ 14ರವರೆಗೆ ನಡೆಯುವ ಪರಿಷೆ
- 400 ಮಳಿಗೆಗಳು, ದೇಶಿ ತಳಿ ಗೂಳಿಗಳ ಆಕರ್ಷಣೆ

ಬೆಂಗಳೂರು: ಕಾಡು ಮಲ್ಲೇಶ್ವರ ಬಳಗದಿಂದ ನ.12ರಿಂದ 14ರವರೆಗೆ ಮೂರು ದಿನ ಮಲ್ಲೇಶ್ವರದ ಕಾಡು ಮಲ್ಲಿಕಾರ್ಜುನ ದೇವಸ್ಥಾನದ ಆವರಣದಲ್ಲಿ 6ನೇ ವರ್ಷದ ಕಡಲೆಕಾಯಿ ಪರಿಷೆ ನಡೆಯಲಿದೆ.

'ಆಧುನಿಕ ಬದುಕಿನಲ್ಲಿ ಜಾತ್ರೆ, ಸಂತೆ ಕಣ್ಮರೆಯಾಗುತ್ತಿವೆ. ನಗರದ ಜನರಿಗೆ ಗ್ರಾಮೀಣ ಸಂಸ್ಕೃತಿ, ಜೀವನ ಪದ್ಧತಿಯನ್ನು ಪರಿಚಯಿಸಲು ಕಾರ್ತಿಕ ಮಾಸದಲ್ಲಿ ಮೂರು ದಿನ ಈ ಪರಿಷೆ ನಡೆಯಲಿದೆ' ಎಂದು ಕಾಡು ಮಲ್ಲೇಶ್ವರ ಗೆಳೆಯರ ಬಳಗದ ಅಧ್ಯಕ್ಷ ಬಿ.ಕೆ. ಶಿವರಾಂ ತಿಳಿಸಿದರು.

'ಇದರಿಂದ ಕೃಷಿಕರು ಬೆಳೆದ ವಸ್ತುಗಳ ಮಾರಾಟ ಕಡಿಮೆಯಾಗಿದೆ. ಈ ಬಾರಿ ಪರಿಷೆಯಿಂದ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ರೈತರಿಗೆ ಹೆಚ್ಚಿನ ರೀತಿಯಲ್ಲಿ ಅನುಕೂಲವಾಗಲಿದೆ. ಇದಕ್ಕಾಗಿ 400 ಮಳಿಗೆಗಳಿಗೆ ಅವಕಾಶ ಕಲ್ಪಿಸಲಾಗಿದೆ' ಎಂದರು.

'ಮಲ್ಲೇಶ್ವರ 8ನೇ ಕ್ರಾಸ್‌ನಿಂದ 16ನೇ ಕ್ರಾಸ್‌ವರೆಗೂ ರೈತರು ತಾವು ಬೆಳೆದ ಕಡಲೆಕಾಯಿ, ಅವರೆಕಾಯಿ ಮಾರಲು, ಮಂಡ್ಯ ಜಿಲ್ಲೆಯ ರೈತರಿಗೆ ಬೆಲ್ಲದ ಅಂಗಡಿ ತೆರೆಯಲು, ಎಲ್ಲ ಕೃಷಿ ಉತ್ಪನಗಳು ಸೇರಿ ವಿವಿಧ ಉತ್ಪನ್ನಗಳ ಮಾರಾಟಕ್ಕೆ ಅವಕಾಶವಿದೆ. ಕಾಡು ಮಲ್ಲೇಶ್ವರದ ದೇಗುಲದಲ್ಲಿ ಕಡಲೆಕಾಯಿಯಿಂದ ಅಲಂಕರಿಸಲಾಗುತ್ತದೆ. ಈ ಬಾರಿ ಪರಿಷೆಯಲ್ಲಿ ದೇಶೀಯ ಗೂಳಿಗಳು ಆಕರ್ಷಿಸಲಿವೆ. ಆಂಧ್ರಪ್ರದೇಶದ ಓಂಗೋಲ್‌ನಿಂದ ಎರಡು ದೇಶಿ ಗೂಳಿಗಳನ್ನು ಕರೆತಂದಿದ್ದು, ಇವುಗಳನ್ನು ಕಾಡು ಮಲ್ಲೇಶ್ವರದಲ್ಲಿ ಸಾಕಲು ವ್ಯವಸ್ಥೆ ಮಾಡಲಾಗಿದೆ' ಎಂದರು.

ಸಾಮಾಜಿಕ ಕಾರ್ಯಕರ್ತ ಅನೂಪ ಅಯ್ಯಂಗಾರ್, ಕಾಡು ಮಲ್ಲೇಶ್ವರ ದೇವಸ್ಥಾನ ಬಳಗದ ಕಾರ್ಯಕರ್ತ ಚಂದ್ರಶೇಖರ ನಾಯ್ಡು ಇದ್ದರು.

'ಟಿಪ್ಪು ಪ್ರತಿಮೆ ಸ್ಥಾಪಿಸಿದರೆ ಧ್ವಂಸ'

ಹುಬ್ಬಳ್ಳಿ: 'ಶಾಸಕ ತನ್ವೀರ್ ಸೇಠ್ ಹೇಳಿರುವಂತೆ ಮೈಸೂರಿನಲ್ಲಿ 100 ಅಡಿ ಎತ್ತರದ ಟಿಪ್ಪು ಪ್ರತಿಮೆ ಸ್ಥಾಪಿಸಿದರೆ, ಬಾಬರಿ ಮಸೀದಿಯಂತೆ ಅದನ್ನೂ ಧ್ವಂಸ ಮಾಡಲಾಗುವುದು' ಎಂದು ಶ್ರೀರಾಮ ಸೇನಾ ಮುಖ್ಯಸ್ಥ ಪ್ರಮೋದ ಮುತಾಲಿಕ್ ಎಚ್ಚರಿಕೆ ನೀಡಿದ್ದಾರೆ.

'ಟಿಪ್ಪು ಜಯಂತಿ ಆಚರಿಸಿ ಈದ್ಗಾ ಮೈದಾನವನ್ನು ಅಪವಿತ್ರಗೊಳಿಸಲಾಗಿತ್ತು. ನಾವು ಗೋಮೂತ್ರದಿಂದ ಶುಚಿಗೊಳಿಸಿ ಕನಕ ಜಯಂತಿಯನ್ನು ಆಚರಿಸಿದ್ದೇವೆ' ಎಂದರು.

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್

ಕಾರ್ಪೋರೇಟ್ ಐಡೆಂಟಿಫಿಕೇಶನ್ ನಂಬರ್ (ಸಿಐಎನ್): L18101KA2004PLC033475
ನೋಂದಾಯಿತ ಕಛೇರಿ: ನಂ. 25, 2ನೇ ಅಡ್ಡರಸ್ತೆ, 3ನೇ ಮುಖ್ಯರಸ್ತೆ, ಕೈಗಾರಿಕಾ ಉಪನಗರ, ಯಶವಂತಪುರ, ಬೆಂಗಳೂರು–560022
ದೂ: +91 80 68951000 ಫ್ಯಾಕ್ಸ್: +91 80 68951001 ಇಮೇಲ್: cs@gokaldasexports.com; ವೆಬ್‌ಸೈಟ್: www.gokaldasexports.com

ಅಂಚೆ ಮತಪತ್ರದ ನೋಟೀಸ್

ಈ ಮೂಲಕ ಕಂಪನಿಯ ಸದಸ್ಯರುಗಳಿಗೆ ನೋಟೀಸು ನೀಡುವುದೇನಂದರೆ, ಕಂಪನಿಗಳ ಕಾಯಿದೆ, 2013 ("ಕಾಯ್ದೆ") ಸೆಕ್ಷನ್ 108 ಮತ್ತು ಸೆಕ್ಷನ್ 110ರ ಅನುಗುಣವಾಗಿ ಜೊತೆಗೆ ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014ರ ನಿಯಮ 20 ಮತ್ತು ನಿಯಮ 22, ತಿದ್ದುಪಡಿಗಳನ್ನು (ನಿರ್ವಹಣೆ ಮತ್ತು ಆಡಳಿತ ನಿಯಮಗಳು) ಓದಿಕೊಂಡಂತೆ ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ ("ಎಂಸಿಎ"), ಸೆಬಿ ಯ (ಲಿಸ್ಟಿಂಗ್ ಆಬ್ಲಿಗೇಷನ್ಸ್ ಅಂಡ್ ಡಿಸ್‌ಕ್ಲೋಷರ್ ರಿಕ್ವಾಯರ್‌ಮೆಂಟ್ಸ್) ನಿಯಂತ್ರಣಗಳು, 2015ರ (ಲಿಸ್ಟಿಂಗ್ ರೆಗ್ಯುಲೇಷನ್ಸ್) ನಿಯಂತ್ರಣ 44ರ ಸಾಮಾನ್ಯ ಸುತ್ತೋಲೆ ಸಂಖ್ಯೆ 14/2020 ದಿನಾಂಕ ಏಪ್ರಿಲ್ 8, 2020, ಸುತ್ತೋಲೆ ಸಂಖ್ಯೆ 17/2020 ದಿನಾಂಕ ಏಪ್ರಿಲ್ 13, 2020, ಸುತ್ತೋಲೆ ಸಂಖ್ಯೆ 22/2020 ದಿನಾಂಕ ಜೂನ್ 15, 2020, ಸುತ್ತೋಲೆ ಸಂಖ್ಯೆ 33/2020 ದಿನಾಂಕ ಸೆಪ್ಟೆಂಬರ್ 28, 2020, ಸುತ್ತೋಲೆ ಸಂಖ್ಯೆ 39/2020 ದಿನಾಂಕ ಡಿಸೆಂಬರ್ 31, 2020, ಸುತ್ತೋಲೆ ಸಂಖ್ಯೆ 10/2021 ದಿನಾಂಕ ಜೂನ್ 23, 2021 ಮತ್ತು ಸುತ್ತೋಲೆ ಸಂಖ್ಯೆ 20/2021 ದಿನಾಂಕ ಡಿಸೆಂಬರ್ 08, 2021 ಮತ್ತು ಸಾಮಾನ್ಯ ಸುತ್ತೋಲೆ ಸಂಖ್ಯೆ 02/2022 ದಿನಾಂಕ ಮೇ 5, 2022 ಓದಿಕೊಂಡಂತೆ ಮತ್ತು ಕಾಯ್ದೆಯ ಇತರ ಅನ್ವಯವಾಗುವ ನಿಬಂಧನೆಗಳಡಿಯ ನಿಯಮಗಳು, ಸುತ್ತೋಲೆಗಳು ಮತ್ತು ಅಧಿಸೂಚನೆಗಳಂತೆ (ಯಾವುದೇ ಶಾಸನಬದ್ಧ ಮಾರ್ಪಾಡುಗಳು ಅಥವಾ ಅದರ ಮರುರೂಪಿಸುವಿಕೆ ಸೇರಿದಂತೆ) ಕಾಲಕಾಲಕ್ಕೆ ಕಂಪನಿಯು ವಿದ್ಯುನ್ಮಾನ ಮತದಾನ (ರಿಮೋಟ್ ಇ-ಮತದಾನ)ದ ಮೂಲಕ ಮಾತ್ರ ದಿನಾಂಕ ಅಕ್ಟೋಬರ್ 27, 2022ರ ಅಂಚೆ ಮತಪತ್ರದ ಮೂಲಕ ಈ ಕೆಳಗೆ ಪಟ್ಟಿಮಾಡಲಾದ ಐಟಂಗಳ ಮೇಲೆ ತನ್ನ ಸದಸ್ಯರಿಂದ ಅನುಮೋದನೆ ಅಪೇಕ್ಷಿಸುತ್ತದೆ.

ಐಟಂ ನಂ.	ವಿವರ	ನಿರ್ಣಯದ ಸ್ವರೂಪ
1	ಹೆಚ್ಚುವರಿ ನಿರ್ದೇಶಕರಾದ ಶ್ರೀ ಜಾರ್ಜ್ ವರುಗೀಸ್ ಅವರನ್ನು (ಡಿಐಎನ್: 0009702009) ಕಂಪನಿಯ ನಿರ್ದೇಶಕರಾಗಿ ಕ್ರಮಬದ್ಧಗೊಳಿಸುವುದು.	ಸಾಮಾನ್ಯ
2	ಶ್ರೀ ಜಾರ್ಜ್ ವರುಗೀಸ್ ಅವರನ್ನು (ಡಿಐಎನ್: 0009702009) ಕಂಪನಿಯ ಕಾರ್ಯನಿರ್ವಾಹಕೇತರ ಸ್ವತಂತ್ರ ನಿರ್ದೇಶಕರಾಗಿ ನೇಮಕ ಮಾಡುವುದು.	ವಿಶೇಷ
3	ಹೆಚ್ಚುವರಿ ನಿರ್ದೇಶಕರಾದ ಶ್ರೀ ಶಿವಾನಂದನ್ ಅಶೋಕ್ ದಾಲ್ವಿ ಅವರನ್ನು (ಡಿಐಎನ್: 09151791) ಕಂಪನಿಯ ನಿರ್ದೇಶಕರಾಗಿ ಕ್ರಮಬದ್ಧಗೊಳಿಸುವುದು.	ಸಾಮಾನ್ಯ
4	ಶ್ರೀ ಶಿವಾನಂದನ್ ಅಶೋಕ್ ದಾಲ್ವಿ ಅವರನ್ನು (ಡಿಐಎನ್: 09151791) ಕಂಪನಿಯ ಕಾರ್ಯನಿರ್ವಾಹಕೇತರ ಸ್ವತಂತ್ರ ನಿರ್ದೇಶಕರಾಗಿ ನೇಮಕಮಾಡುವುದು.	ವಿಶೇಷ
5	ಹೆಚ್ಚುವರಿ ನಿರ್ದೇಶಕರಾದ ರಮಾ ಬಿಜಾಪುರಕರ್ ಅವರನ್ನು (ಡಿಐಎನ್: 00001835) ಕಂಪನಿಯ ನಿರ್ದೇಶಕರಾಗಿ ಕ್ರಮಬದ್ಧಗೊಳಿಸುವುದು.	ಸಾಮಾನ್ಯ
6	ರಮಾ ಬಿಜಾಪುರಕರ್ ಅವರನ್ನು (ಡಿಐಎನ್: 00001835) ಕಂಪನಿಯ ಕಾರ್ಯನಿರ್ವಾಹಕೇತರ ಸ್ವತಂತ್ರ ನಿರ್ದೇಶಕರಾಗಿ ನೇಮಕಮಾಡುವುದು.	ವಿಶೇಷ
7	ಹೆಚ್ಚುವರಿ ನಿರ್ದೇಶಕರಾದ ಶ್ರೀ ಸುಂದರರಾಜನ್ ಪೂರಣ ಸೀನಿವಾಸನ್ ಅವರನ್ನು (ಡಿಐಎನ್: 07302844) ಕಂಪನಿಯ ನಿರ್ದೇಶಕರಾಗಿ ಕ್ರಮಬದ್ಧಗೊಳಿಸುವುದು.	ಸಾಮಾನ್ಯ
8	ಶ್ರೀ ಸುಂದರರಾಜನ್ ಪೂರಣ ಸೀನಿವಾಸನ್ ಅವರನ್ನು (ಡಿಐಎನ್: 07302844) ಕಂಪನಿಯ ಕಾರ್ಯನಿರ್ವಾಹಕ ನಿರ್ದೇಶಕರಾಗಿ ನೇಮಕಮಾಡುವುದು.	ವಿಶೇಷ
9	ಶ್ರೀ ಶಿವರಾಮಕೃಷ್ಣನ್ ಗಣಪತಿ (ಡಿಐಎನ್: 07954560) ಅವರ ಹುದ್ದೆಯ ಪದನಾಮವನ್ನು ವ್ಯವಸ್ಥಾಪಕ ನಿರ್ದೇಶಕರಿಂದ ಉಪಾಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರಾಗಿ ಬದಲಾವಣೆ ಮಾಡುವುದು.	ಸಾಮಾನ್ಯ

ಎಂಸಿಎ ಸುತ್ತೋಲೆಗಳ ಅನುಸಾರವಾಗಿ, ನವೆಂಬರ್ 4, 2022ರಂತೆ (ಕಟ್–ಆಫ್ ದಿನಾಂಕ) ಷೇರುಗಳನ್ನು ಹೊಂದಿರುವ ಸದಸ್ಯರು ತಮ್ಮ ಇ-ಮೇಲ್ ವಿಳಾಸಗಳನ್ನು ಡಿಪಾಸಿಟರೀಸ್ / ಡಿಪಾಸಿಟರಿ ಪಾರ್ಟಿಸಿಪೆಂಟ್(ಗಳು)ರವರೊಂದಿಗೆ ಮತ್ತು ಕಂಪನಿಯ ಷೇರು ವರ್ಗಾವಣೆ ಏಜೆಂಟ್, ಅಂದರೆ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ (KFin ಟೆಕ್) ನೊಂದಿಗೆ ನೋಂದಾಯಿಸಿಕೊಂಡಿರುವವರಿಗೆ ಕಂಪನಿಯು ಅಂತಹ ಸದಸ್ಯರಿಗೆ ವಿದ್ಯುನ್ಮಾನ ವಿಧಾನದ ಮೂಲಕ ಮಾತ್ರ ಪೋಸ್ಟಲ್ ಬ್ಯಾಲೆಟ್ ನೋಟೀಸ್ ರವಾನೆಯನ್ನು ಶುಕ್ರವಾರ, ನವೆಂಬರ್ 11, 2022ರಂದು ಕಂಪನಿಯು ಪೂರ್ಣಗೊಳಿಸಿದೆ. ಕಟ್–ಆಫ್ ದಿನಾಂಕದಂದು ಸದಸ್ಯರು / ಫಲಾನುಭವಿ ಮಾಲೀಕರ ಹೆಸರಿನಲ್ಲಿ ನೋಂದಾಯಿಸಲಾದ ಈಕ್ವಿಟಿ ಷೇರುಗಳ ಪಾವತಿಸಿದ ಮೌಲ್ಯದ ಮೇಲೆ ಮತದಾನದ ಹಕ್ಕುಗಳನ್ನು ಪರಿಗಣಿಸಲಾಗುತ್ತದೆ. ಕಟ್–ಆಫ್ ದಿನಾಂಕದಂದು ಸದಸ್ಯರಲ್ಲದ ವ್ಯಕ್ತಿಯು ಈ ನೋಟೀಸನ್ನು ಮಾಹಿತಿ ಉದ್ದೇಶಕ್ಕಾಗಿ ಮಾತ್ರ ಎಂದು ಪರಿಗಣಿಸತಕ್ಕದ್ದು.

ಮೇಲ್ಕಂಡ ಸುತ್ತೋಲೆಗಳ ಅನುಸಾರವಾಗಿ, ಅಂಚೆ ಮತಪತ್ರದ ನೋಟೀಸಿನ ಹಾರ್ಡ್ ಪ್ರತಿಯನ್ನು ನಮೂನೆಗಳು ಮತ್ತು ಪೂರ್ವ–ಪಾವತಿಸಿದ ವ್ಯವಹಾರದ ಉತ್ತರ ಲಕೋಟೆಯನ್ನು ಸದಸ್ಯರಿಗೆ ಕಳುಹಿಸಲಾಗುವುದಿಲ್ಲ. ಸದಸ್ಯರ ಸಮ್ಮತಿ ಅಥವಾ ಅಸಮ್ಮತಿ ಅಭಿಪ್ರಾಯದ ಸಂವಹನವು ರಿಮೋಟ್ ಇ–ವೋಟಿಂಗ್ ವ್ಯವಸ್ಥೆಗಳ ಮೂಲಕ ಮಾತ್ರ ನಡೆಯುತ್ತದೆ.

ರಿಮೋಟ್ ಇ–ವೋಟಿಂಗ್ ಕಾರ್ಯವಿಧಾನದ ಮೂಲಕ ನಡೆಯುವ ಪೋಸ್ಟಲ್ ಬ್ಯಾಲೆಟ್ ಪ್ರಕ್ರಿಯೆಯು ನ್ಯಾಯಯುತ ಮತ್ತು ಪಾರದರ್ಶಕ ರೀತಿಯಲ್ಲಿ ನಡೆಸಲು ಕಂಪನಿಯ ನಿರ್ದೇಶಕರ ಮಂಡಳಿಯು, ಕಂಪನಿಯ ಕಾರ್ಯದರ್ಶಿ ಅಭ್ಯಸಿಸುತ್ತಿರುವ (ಸದಸ್ಯತ್ವ ಸಂಖ್ಯೆ ಎಫ್‌ಸಿಎಸ್ 5553) ಶ್ರೀ ನಾಗೇಂದ್ರ ಡಿ ರಾವ್ ಅವರನ್ನು ಪರಿವೀಕ್ಷಕರನ್ನಾಗಿ ನೇಮಿಸಿದೆ.

ಕಂಪನಿಯು ತನ್ನ ಎಲ್ಲಾ ಸದಸ್ಯರಿಗೆ ಇ–ಮತದಾನದ ಸೌಲಭ್ಯವನ್ನು ಒದಗಿಸುವ ಉದ್ದೇಶಕ್ಕಾಗಿ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್‌ನ ಸೇವೆಗಳನ್ನು ಬಳಸಿಕೊಂಡಿದೆ. ಅಂಚೆ ಮತಪತ್ರದ ನೋಟೀಸನ್ನು ಕಂಪನಿಯ ವೆಬ್‌ಸೈಟ್ www.gokaldasexports.com ನಿಂದ ಅಥವಾ KFin Tech ವೆಬ್‌ಸೈಟ್‌ನಿಂದ https://evoting.kfintech.com/ ಡೌನ್‌ಲೋಡ್ ಮಾಡಬಹುದು. ನೋಟೀಸನ್ನು ಕಂಪನಿಯ ಷೇರುಗಳನ್ನು ಪಟ್ಟಿ ಮಾಡಲಾಗಿರುವಲ್ಲಿ ನ್ಯಾಷನಲ್ ಸ್ಟಾಕ್ ಎಕ್ಸ್ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ (www.nseindia.com) ಮತ್ತು ಬಿಎಸ್‌ಇ ಲಿಮಿಟೆಡ್ (www.bseindia.com)ನ ವೆಬ್‌ಸೈಟ್‌ನಲ್ಲಿ ಸಹ ಪ್ರಕಟಿಸಲಾಗಿರುತ್ತದೆ.

ತಮ್ಮ ಇಮೇಲ್ ವಿಳಾಸಗಳು ಮತ್ತು ಮೊಬೈಲ್ ಸಂಖ್ಯೆಗಳನ್ನು ನೋಂದಾಯಿಸದ ಸದಸ್ಯರು, ಕೆಫಿನ್ ಟೆಕ್‌ನೊಂದಿಗೆ ಅದರ ವೆಬ್‌ಸೈಟ್ https://ris.kfintech.com/clientservices/postalballot/registration.aspx ನಲ್ಲಿ ತಾತ್ಕಾಲಿಕವಾಗಿ ನೋಂದಾಯಿಸಲು/ನವೀಕರಿಸಲು ವಿನಂತಿಸಲಾಗಿದೆ.

ಇ–ಮೇಲ್ ವಿಳಾಸದ ಶಾಶ್ವತ ನೋಂದಣಿಗಾಗಿ, ಸದಸ್ಯರು ತಮ್ಮ ಸಂಬಂಧಪಟ್ಟ ಡಿಪಾಸಿಟರಿ ಪಾರ್ಟಿಸಿಪೆಂಟ್‌ರವರೊಂದಿಗೆ ಹೊಂದಿರುವ ಎಲೆಕ್ಟ್ರಾನಿಕ್ ಹೋಲ್ಡಿಂಗ್‌ಗಳು ಮತ್ತು ಕೆಫಿನ್ ಟೆಕ್‌ನೊಂದಿಗೆ ಹೊಂದಿರುವ ಭೌತಿಕ ಹೋಲ್ಡಿಂಗ್‌ಗಳಿಗೆ ಅನುಗುಣವಾಗಿ ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸಲು ವಿನಂತಿಸಲಾಗಿದೆ ಎಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ.

ತಮ್ಮ ಇ–ಮೇಲ್ ವಿಳಾಸವನ್ನು ನೋಂದಾಯಿಸಿರುವ ಯಾವುದೇ ಸದಸ್ಯರು, ಅಂಚೆ ಮತಪತ್ರದ ನೋಟೀಸ್, ರಿಮೋಟ್ ಇ–ಮತದಾನಕ್ಕಾಗಿ ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಸ್ವೀಕರಿಸದಿದ್ದರೆ, ಅಂತಹ ಸದಸ್ಯರು ಅದನ್ನು ಸ್ವೀಕರಿಸಲು ತಮ್ಮ ನೋಂದಾಯಿತ ಇಮೇಲ್ ವಿಳಾಸದಿಂದ einward.ris@kfintech.com ಗೆ ಬರೆಯುವುದರ ಮೂಲಕ ಪಡೆಯಬಹುದು.

ಅಂಚೆ ಮತಪತ್ರ/ ಇ–ಮತದಾನಕ್ಕೆ ಸಂಬಂಧಿಸಿದ ವಿವರಗಳು:

ವಿಷಯ		ವಿವರಗಳು
1. ನೋಟೀಸ್ ರವಾನೆಯನ್ನು ಪೂರ್ಣಗೊಳಿಸಿದ ದಿನಾಂಕ	:	ನವೆಂಬರ್ 11, 2022
2. ಇ–ಮತದಾನದ ಅರ್ಹತೆಗೆ ಕಟ್–ಆಫ್ ದಿನಾಂಕ	:	ನವೆಂಬರ್ 4, 2022
3. ಇ–ಮತದಾನದ ಅವಧಿ	:	ಶನಿವಾರ, ನವೆಂಬರ್ 12, 2022ರಂದು ಬೆಳಿಗ್ಗೆ 9.00 ಗಂಟೆ ಐಎಸ್‌ಟಿಗೆ ಪ್ರಾರಂಭವಾಗುತ್ತದೆ ಮತ್ತು ಭಾನುವಾರ, ಡಿಸೆಂಬರ್ 11, 2022ರ ಸಂಜೆ 5.00 ಗಂಟೆ ಐಎಸ್‌ಟಿಗೆ ಮುಕ್ತಾಯಗೊಳ್ಳುತ್ತದೆ.
4. ಇಮೇಲ್ ಐಡಿಗಳ ತಾತ್ಕಾಲಿಕ ನೋಂದಣಿಗಾಗಿ ಸದಸ್ಯರಿಗೆ ಲಿಂಕ್	:	https://ris.kfintech.com/clientservices/postalballot/registration.aspx
5. ಇ–ಮತದಾನದ ಫಲಿತಾಂಶಗಳ ಘೋಷಣೆ	:	ಅಂಚೆ ಮತದಾನ ಮೂಲಕ ಇ–ಮತದಾನದ ಫಲಿತಾಂಶಗಳನ್ನು ಮಂಗಳವಾರ, ಡಿಸೆಂಬರ್ 13, 2022ರಂದು ಅಥವಾ ಮೊದಲು ಪ್ರಕಟಿಸಲಾಗುವುದು ಮತ್ತು ಕಂಪನಿಯ ವೆಬ್‌ಸೈಟ್ www.gokaldasexports.com ಮತ್ತು KFin ನ ವೆಬ್‌ಸೈಟ್ https://evoting.kfintech.com/ನಲ್ಲಿ ಪ್ರಕಟಣೆ ಮಾಡಲಾಗುವುದು ಜೊತೆಗೆ ಕಂಪನಿಯ ಷೇರುಗಳನ್ನು ಪಟ್ಟಿ ಮಾಡಲಾದ ಸ್ಟಾಕ್ ಎಕ್ಸ್‌ಚೇಂಜ್‌ಗಳೊಂದಿಗೆ ಸಂವಹನ ಮಾಡಲಾಗುತ್ತದೆ. ನಿರ್ಣಯಗಳು ಭಾನುವಾರ, ಡಿಸೆಂಬರ್ 11, 2022ರಂದು ಅಂಗೀಕರಿಸಲ್ಪಟ್ಟರೆ, ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರಿಸ್ ಆಫ್ ಇಂಡಿಯಾರವರು ಹೊರಡಿಸಿದ ಸಾಮಾನ್ಯ ಸಭೆಗಳ ಮೇಲೆ ಸೆಕ್ರೆಟರಿ ಸ್ಟ್ಯಾಂಡರ್ಡ್ಸ್ (SS–2) ನ ನಿಯಮಗಳಿಗೆ ಅನುಗುಣವಾಗಿ ಪರಿಗಣಿಸಲಾಗುತ್ತದೆ.

ಇ–ಮತದಾನಕ್ಕೆ ಸಂಬಂಧಿಸಿದಂತೆ ಸದಸ್ಯರು ಯಾವುದೇ ಪ್ರಶ್ನೆಗಳು/ ಕುಂದುಕೊರತೆಗಳಿಗಾಗಿ https://evoting.kfintech.com (KFintech ವೆಬ್‌ಸೈಟ್) ನ ಡೌನ್‌ಲೋಡ್ ವಿಭಾಗದಲ್ಲಿ ಲಭ್ಯವಿರುವ ಸಹಾಯ ಮತ್ತು ಪದೇ ಪದೇ ಕೇಳಲಾಗುವ ಪ್ರಶ್ನೆಗಳು (FAQ ಗಳು) ಮತ್ತು ಇ–ಮತದಾನ ಬಳಕೆದಾರರ ಕೈಪಿಡಿಯನ್ನು ವೀಕ್ಷಿಸಬಹುದು ಅಥವಾ ಶ್ರೀ ಶಿವಕುಮಾರ್ ರವರನ್ನು evoting@kfintech.com ನಲ್ಲಿ ಅಥವಾ KFintech ನ ಟೋಲ್ ಫ್ರೀ ಸಂಖ್ಯೆ 1–800–309–4001 ಗೆ ಕರೆ ಮಾಡಿ ಸಂಪರ್ಕಿಸಬಹುದು ಅಥವಾ ಕಂಪನಿಯ ಮುಖ್ಯ ಹಣಕಾಸು ಅಧಿಕಾರಿ ಶ್ರೀ ಎ. ಸತ್ಯಮೂರ್ತಿ ರವರನ್ನು cs@gokaldasexports.comನ ಮೂಲಕ ಸಂಪರ್ಕಿಸಬಹುದು.

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್ ಪರವಾಗಿ
ಸಹಿ/–
ಪ್ರಭಾತ್ ಕುಮಾರ್ ಸಿಂಗ್
ಪೂರ್ಣಾವಧಿ ನಿರ್ದೇಶಕರು

ಸ್ಥಳ : ಬೆಂಗಳೂರು
ದಿನಾಂಕ : ನವೆಂಬರ್ 11, 2022

AstraZeneca

ಆಸ್ಟ್ರಜೆನೆಕ ಫಾರ್ಮ ಇಂಡಿಯಾ ಲಿಮಿಟೆಡ್
CIN: L24231KA1979PLC003563
ರಿಜಿಸ್ಟರ್ಡ್ ಆಫೀಸ್: ಬ್ಲಾಕ್ ಎನ್1, 12ನೇ ಮಹಡಿ, ಮಾನ್ಯತಾ ಎಂಬೆಸಿ ಬಿಸಿನೆಸ್ ಪಾರ್ಕ್, ರಾಚೇನಹಳ್ಳಿ, ಔಟರ್ ರಿಂಗ್ ರೋಡ್, ಬೆಂಗಳೂರು – 560045
ದೂ.: +91 80 6774 8000. ವೆಬ್: www.astrazeneca.com/india

30ನೇ ಸೆಪ್ಟೆಂಬರ್, 2022ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ಆರು ತಿಂಗಳಿಗೆ ಅಪರಿಶೋಧಿತ ಆರ್ಥಿಕ ಫಲಿತಾಂಶಗಳ ಹೇಳಿಕೆ

ರೂ. ಲಕ್ಷಗಳಲ್ಲಿ (ಪ್ರತಿ ಷೇರಿನ ಗಳಿಕೆಯ ಡೇಟಾ ಹೊರತುಪಡಿಸಿ)

ಕ್ರ. ಸಂ.	ವಿವರಗಳು	30/09/2022ಕ್ಕೆ ಕೊನೆಗೊಂಡ 3 ತಿಂಗಳಿಗೆ	30/09/2022ಕ್ಕೆ ಕೊನೆಗೊಂಡ ಪ್ರಸಕ್ತ ಅವಧಿಯ ವರ್ಷದಲ್ಲಿನ ಅಂಕಿಅಂಶಗಳು	30/09/2021ಕ್ಕೆ ಕೊನೆಗೊಂಡ 3 ತಿಂಗಳಿಗೆ ಹಿಂದಿನ ಅವಧಿಯಂತೆ
		ಅಪರಿಶೋಧಿತ	ಅಪರಿಶೋಧಿತ	ಅಪರಿಶೋಧಿತ
1	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	24,292.11	47,936.73	20,055.09
2	ತೆರಿಗೆಗೆ ಮುನ್ನ ಸದರಿ ಅವಧಿಗೆ ಸಾಮಾನ್ಯ ವ್ಯವಹಾರಗಳಿಂದ ನಿವ್ವಳ ಲಾಭ / (ನಷ್ಟ)	4,406.94	7,136.84	1,623.71
3	ತೆರಿಗೆ ಕಳೆದು, ಸದರಿ ಅವಧಿಗೆ ಸಾಮಾನ್ಯ ವ್ಯವಹಾರಗಳಿಂದ ನಿವ್ವಳ ಲಾಭ / (ನಷ್ಟ)	3,256.43	5,271.69	1,194.70
4	ತೆರಿಗೆ ಕಳೆದು, ಅವಧಿಗೆ ಸಮಗ್ರ ಆದಾಯ	3,237.83	5,246.02	1,160.05
5	ಈಕ್ವಿಟಿ ಷೇರು ಬಂಡವಾಳ	500.00	500.00	500.00
6	ಮೀಸಲುಗಳು (ಬ್ಯಾಲೆನ್ಸ್ ಷೀಟ್‌ನಲ್ಲಿ ತೋರಿಸಿರುವ ಮರುಮೌಲ್ಯಮಾಪನ ಮೀಸಲುಗಳನ್ನು ಬಿಟ್ಟು)	–	–	–
7	ಪ್ರತಿ ಷೇರಿಗೆ ಮೂಲ ಮತ್ತು ಡೈಲ್ಯೂಟೆಡ್ ಗಳಿಕೆ (ತಲಾ 2 ರೂ.ನಂತೆ)	13.03	21.09	4.78

ಟಿಪ್ಪಣಿ:
1. ಇಲ್ಲಿ ಮೇಲೆ ನೀಡಿರುವುದು ಸೆಬಿ (ಲಿಸ್ಟಿಂಗ್ ಆಬ್ಲಿಗೇಶನ್ಸ್ ಆ್ಯಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ನಿಬಂಧನೆಗಳು, 2015 ನಿಬಂಧನೆ 33ರ ಅನ್ವಯ ಸ್ಟಾಕ್ ಎಕ್ಸ್‌ಚೇಂಜಿನಲ್ಲಿ ದಾಖಲಿಸಿರುವ ತ್ರೈಮಾಸಿಕದ ಆರ್ಥಿಕ ಫಲಿತಾಂಶಗಳ ಸವಿವರವಾದ ವರದಿಯ ಉದ್ಧೃತ ಭಾಗ. ತ್ರೈಮಾಸಿಕದ ಆರ್ಥಿಕ ಫಲಿತಾಂಶಗಳ ಪೂರ್ಣ ವರದಿ ಸ್ಟಾಕ್ ಎಕ್ಸ್‌ಚೇಂಜ್ ವೆಬ್‌ಸೈಟುಗಳಲ್ಲಿ (www.nseindia.com, www.bseindia.com) ಮತ್ತು ಕಂಪನಿಯ ವೆಬ್‌ಸೈಟಿನಲ್ಲಿ (www.astrazeneca.com/india) ಲಭ್ಯವಿದೆ.
2. ಈ ಹೇಳಿಕೆಯನ್ನು ಕಂಪನಿಗಳ ಅಧಿನಿಯಮ, 2013ರ ಸೆಕ್ಷನ್ 133ರಲ್ಲಿ ಹೇಳಲಾಗಿರುವ ಕಂಪನಿಗಳ (ಭಾರತೀಯ ಅಕೌಂಟಿಂಗ್ ಮಾನಗಳು) ನಿಯಮಗಳು, 2015 (Ind AS) ಹಾಗೂ ಅನ್ವಯಿಸುವ ಮಟ್ಟಿಗೆ ಇತರ ಮಾನ್ಯತೆ ಪಡೆದ ಅಕೌಂಟಿಂಗ್ ಅಭ್ಯಾಸಗಳು ಮತ್ತು ಪಾಲಿಸಿಗಳ ಅನುಸಾರ ಸಿದ್ಧಪಡಿಸಲಾಗಿದೆ.

ನಿರ್ದೇಶಕರ ಮಂಡಳಿಯ ಆದೇಶದಂತೆ,
ಆಸ್ಟ್ರಜೆನೆಕ ಫಾರ್ಮ ಇಂಡಿಯಾ ಲಿಮಿಟೆಡ್‌ಗಾಗಿ
ಗಗನ್‌ದೀಪ್ ಸಿಂಗ್ ಬೇಡಿ
ಮ್ಯಾನೇಜಿಂಗ್ ಡೈರೆಕ್ಟರ್
DIN: 07844333

ಸ್ಥಳ: ಬೆಂಗಳೂರು
ದಿನಾಂಕ: 11 ನವೆಂಬರ್, 2022

COFFEE DAY ENTERPRISES LTD.

Coffee Day — Brewing new possibilities.

Registered and Corporate Office: 23/2, Coffee Day Square, Vittal Mallya Road, Bengaluru - 560 001, Karnataka, India
Tel: + 91 80 4001 2345; **Fax:** + 91 80 4001 2650;
Website: www.coffeeday.com
Corporate Identification Number: L55101KA2008PLC046866

Financial Results for the Quarter and Half-year ended 30th September, 2022

(₹ in Crores except per share data)

Particulars	Quarter ended 30th September, 2022 (Unaudited)	Half year ended 30th September, 2022 (Unaudited)	Quarter ended 30th September, 2021 (Unaudited)
Total income from operations (net)	249.98	463.32	154.45
Net Profit from ordinary activities after tax	4.35	(13.65)	(90.90)
Net Profit for the period after tax (after Extraordinary items)	4.35	(13.65)	(90.90)
Equity Share Capital	211.25	211.25	211.25
Reserves (excluding Revaluation Reserve as shown in the Balance Sheet of previous year)			
Earnings Per Share (before extraordinary items) (of ₹ 10/- each)			
Basic :	0.27	(0.52)	(4.02)
Diluted :	0.27	(0.52)	(4.02)
Earnings Per Share (after extraordinary items) (of ₹ 10/- each)			
Basic :	0.27	(0.52)	(4.02)
Diluted :	0.27	(0.52)	(4.02)

Notes:
1. The above is an extract of the detailed format of Financial Results filed with the Stock Exchanges under Regulation 33 of the SEBI (Listing and other Disclosure Requirements) Regulations, 2015. The full format of the Financial Results are available on the website of BSE (www.bseindia.com) and NSE (www.nseindia.com) and on the Company's website www.coffeeday.com
2. The above results were reviewed by the Audit Committee and thereafter approved by the Board of Directors in their meeting held on 10th November, 2022 and have been subjected to Limited review by the Statutory Auditors of the Company.
3. **Un-audited financial results of Coffee Day Enterprises Limited (Standalone Information)**

(₹ in Crores)

Particulars	Quarter ended 30th September, 2022 (Unaudited)	Half year ended 30th September, 2022 (Unaudited)	Quarter ended 30th September, 2021 (Unaudited)
Total income from operations (net)	4.13	9.12	3.99
Loss before tax and exceptional items	(0.29)	(2.54)	(18.66)
Loss profit after tax and exceptional items	(0.29)	(2.54)	(18.66)

For and Behalf of Board of Directors
S.V Ranganath
Interim Chairman and Independent Director

Place : Bengaluru
Date : 10.11.2022

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: B/TRD. 2022-23/07
ದಿನಾಂಕ: 04.11.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಟಿಆರ್‌ಡಿ ನಿರ್ವಹಣಾ ಕಾರ್ಯ ಹಾಗೂ ಬ್ರೇಕ್‌ಡೌನ್ ಚಟುವಟಿಕೆಗಳ ಹೊರಗುತ್ತಿಗೆ 2 ವರ್ಷಗಳ ಅವಧಿಗೆ. ವಿಭಾಗಗಳು: ಹೊಸೂರು (ಹೊರತುಪಡಿಸಿ) –ಓಮಲೂರು (ಹೊರತು ಒಳಪಡಿಸಿ). ಯಲಹಂಕ (ಹೊರತು ಪಡಿಸಿ) – ಬಂಗಾರಪೇಟೆ (ಹೊರತುಪಡಿಸಿ). ಚಿಕ್ಕಬಾಣವಾರ (ಒಳಪಡಿಸಿ) – ಸಂಪಿಗೆ ರಸ್ತೆ (ಒಳಪಡಿಸಿ). ಕೆಎಸ್‌ಆರ್ ಬೆಂಗಳೂರು (ಒಳಪಡಿಸಿ) – ಜೋಲಾರ್‌ಪೇಟೆ (ಹೊರತುಪಡಿಸಿ). ಬೈಯಪ್ಪನಹಳ್ಳಿ (ಒಳಪಡಿಸಿ) – ಹೊಸೂರು (ಒಳಪಡಿಸಿ).	ರೂ. 12,11,97,894.08

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: ದಿನಾಂಕ 28.11.2022, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್, ಟ್ರ್ಯಾಕ್ಷನ್ ವಿತರಣೆ, ಬೆಂಗಳೂರು
PUB/478/AAD/PRB/SWR/2022-23
S.W.Railways SWRRLY SWRRLY

JAWAHAR NAVODAYA VIDYALAYA
(Ministry of Education, Govt. of India)
Shivanahalli, Kanakapura Taluk, Ramanagara District,
Ph.: 080-2990 1133, E-mail : jnvramanagara2017@gmail.com

File No. : 8-5/JNVR/2022-23 Date : 10-11-2022

BRIEF TENDER NOTIFICATION

JNV Ramanagara District invites sealed Tender in Two Bid System for the following items from the reputed supplier for the year 2022-23.

Sl. No.	Particulars	EMD Amount	Tender Application Fee
01	Vegetable & Fruits	Rs. 5,000/-	Rs. 100/-
02	Non-Veg Items	Rs. 3,000/-	Rs. 100/-
03	BOLERO - Hiring	Rs. 2,000/-	Rs. 100/-

Tender Documents can be obtained form the Office during Office hours on Payment of Rs. 100/- for each item. Tender Documents can be download by paying tender application fee online form the Vidyalaya Website at the following link.
https://www.navodaya.gov.in/nvs/nvs-school/RAMANAGARA.

Bank details for online Payment of Tender Application Fee : Bank A/c No.: 89380100001885, Bank of Baroda, Kanakapura Branch, IFSC : BARB0VJKNPU (Fifth character is ZERO).

EMD Amount should be submitted in the form of Demand Draft drawn in favour of The Principal, Jawahar Navodaya Vidyalaya Payable at Kanakapura.

1) The Last Date Collecting Tender Documents : 24-11-2022 at 4.00 p.m.
2) The Last Date for Submission off Sealed Tenders : 25-11-2022 at 4.00 p.m.
3) Date of Tender Opening and Finalisation by the PASC : 26-11-2022 at 11.00 a.m.

Further details can be obtained form the Office or from Vidyalaya website.

DIPR/Ramanagar/328/Manipal/2022-23 Sd/- Principal

PUBLIC NOTICE

This is to inform the general public that our client intends to purchase the property morefully set out in the schedule given below and hereinafter referred to as the "Schedule Property", from its owner, **Mrs. Sowbhagya Krishna Prasad,** wife of late Mr. H. D. Krishna Prasad**, residing at No.2 /3A, 13th Cross Road, Malleswaram, Bangaluru-560 003**. Any person/s whomsoever having any right, title, interest or claim in the Schedule Property or any part thereof, in any manner or objecting to such sale in favour of our client should write to the undersigned within **Fifteen (15) days** of issuance of this public notice with all documentary proof on which they are basing their rights with regard to the Schedule Property. If no claims or objections are received within the stipulated time, it shall be deemed that the Schedule Property is free from all acts of encumbrances or claims whatsoever of any nature and our client shall proceed to complete the sale transaction.

SCHEDULE PROPERTY

ALL THAT PIECE AND PARCEL of immovable residential property bearing Old Municipal No.2/3, later assigned as New No.15, presently bearing Municipal No.2/3A, having PID No. 7-20-2/3A, measuring East to West 45 ft and North to South 57 ft, totally measuring 2565 square feet and together with building constructed thereon, situated at 13th Cross Road, Malleshwaram and within the revenue and administrative jurisdiction of the Bruhat Bengaluru Mahanagara Palike, Bengaluru and bounded as:
On or towards the **East by:** Approach Road to the properties of N.G. Mukund, N.G. Sarath Kumar and property belonging to N. N. Sarath and N. G. Mukund and N. G. Anantharam
On or towards the **West by** : Property belonging to N. L.R. Iyengar
On or towards the **North by** : 13th Cross Road
On or towards the **South by** : Property belonging to N.L.Narayan

ILP — INDIA LAW PRACTICE, ADVOCATES AND ATTORNEYS

Praveen Prabhakar/ Prashanth Mirle
India Law Practice – ILP
Advocates and Attorneys
4th Floor, JP Square, No.190, Sankey Road, Sadashivanagar, Bangalore 560 080
B: +91 80 2361 2770 / 3770 | F: +91 80 2361 4770
e-mail: contact@ilplaw.co.in
Date : 12.11.2022, Bengaluru.

ಶಿವಮೂರ್ತಿ ಶರಣರ ವಿರುದ್ಧ 2ನೇ ಪೋಕ್ಸೊ ಪ್ರಕರಣ

ಸಂತ್ರಸ್ತೆಯರ ತಾಯಿ ಪೊಲೀಸ್ ವಶಕ್ಕೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಶಿವಮೂರ್ತಿ ಶರಣರ ವಿರುದ್ಧ ಹೇಳಿಕೆ ನೀಡುವಂತೆ ಮಠದ ಹಾಸ್ಟೆಲ್‌ನಲ್ಲಿ ವ್ಯಾಸಂಗ ಮಾಡಿದ್ದ ತನ್ನ ಪುತ್ರಿಯರಿಗೆ ಕುಮ್ಮಕ್ಕು ನೀಡಿದ ಆರೋಪದ ಮೇಲೆ ಅವರ ತಾಯಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಶರಣರ ವಿರುದ್ಧ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಡಿ ಎರಡನೇ ಪೋಕ್ಸೊ ಪ್ರಕರಣ ದಾಖಲಿಸಿದ ಇಬ್ಬರು ಸಂತ್ರಸ್ತ ವಿದ್ಯಾರ್ಥಿನಿಯರ ತಾಯಿ ಇವರು. ಮೈಸೂರಿನಲ್ಲಿದ್ದ ಇವರನ್ನು ಪೊಲೀಸರು ವಿಚಾರಣೆಗಾಗಿ ಶುಕ್ರವಾರ ನಸುಕಿನಲ್ಲಿ ಚಿತ್ರದುರ್ಗಕ್ಕೆ ಕರೆತಂದಿದ್ದಾರೆ. ಮಹಿಳಾ ಪೊಲೀಸರು ಇವರನ್ನು ಇಡೀ ದಿನ ವಿಚಾರಣೆ ನಡೆಸಿದ್ದಾರೆ.

ಮುರುಘಾ ಮಠದ ಉಸ್ತುವಾರಿ ಬಸವಪ್ರಭು ಸ್ವಾಮೀಜಿ ನೀಡಿದ ದೂರು ಆಧರಿಸಿ ಮಠದ ಮಾಜಿ ಆಡಳಿತಾಧಿಕಾರಿ ಎಸ್.ಕೆ. ಬಸವರಾಜನ್ ಹಾಗೂ ಶಿಕ್ಷಕ ಬಸವರಾಜೇಂದ್ರ ಎಂಬುವರನ್ನು ಬಂಧಿಸಿದ್ದ ಪೊಲೀಸರು, ಶುಕ್ರವಾರ ಪ್ರತ್ಯೇಕವಾಗಿ ವಿಚಾರಣೆ ನಡೆಸಿದರು. ಬಸವರಾಜನ್ ಪತ್ನಿ ಸೌಭಾಗ್ಯ ತಲೆಮರೆಸಿಕೊಂಡಿದ್ದು, ಪೊಲೀಸರು ಶೋಧ ನಡೆಸುತ್ತಿದ್ದಾರೆ.

ಸ್ಥಳ ಮಹಜರು: ಶಿವಮೂರ್ತಿ ಶರಣರ ಫೋಟೊಗಳು ಕಳವಾಗಿರುವ ಮಠದ ರಾಜಾಂಗಣದ ಸ್ಥಳ ಮಹಜರು ಶುಕ್ರವಾರ ನಡೆಯಿತು. ಪೊಲೀಸ್ ವಶದಲ್ಲಿರುವ ಆರೋಪಿ ಶ್ರೀನಿವಾಸ್ ಎಂಬುವವರನ್ನು ಮಠಕ್ಕೆ ಕರೆದೊಯ್ದು ತನಿಖಾ ತಂಡ ಸ್ಥಳ ಮಹಜರು ಮಾಡಿತು.

ಜಾಮೀನು ಅರ್ಜಿ ವಜಾ

ಎರಡನೇ ಪ್ರಕರಣದಲ್ಲಿ ಬಂಧನ ಭೀತಿ ಎದುರಿಸುತ್ತಿರುವ ಇಬ್ಬರು ಆರೋಪಿಗಳಾದ ಮಹಾಲಿಂಗ ಮತ್ತು ಕರಿಬಸಪ್ಪ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯನ್ನು 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ವಜಾ ಮಾಡಿದೆ.

ಬೆಳಗಾವಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಠಾಧೀಶರು ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ ಅವರನ್ನು ಸತ್ಕರಿಸಿದರು —ಪ್ರಜಾವಾಣಿ ವಾರ್ತೆ

‘ಉತ್ತಮ ಚಾರಿತ್ರ್ಯದ ಮಠಾಧೀಶರು ಬರಲಿ’

ಕೋರೆ ಅಮೃತ ಮಹೋತ್ಸವ: ನಾಡಿನ ಮಠಾಧೀಶರಿಂದ ಅಭಿನಂದನೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಕೆಲ ಮಠಾಧೀಶರಿಂದ ಮಠಗಳಿಗೂ ಕಳಂಕ ಬರುತ್ತಿದೆ. ಜನರು ಧಾರ್ಮಿಕ ಸ್ಥಳಗಳನ್ನು ನೋಡುವ ದೃಷ್ಟಿಕೋನ ಬದಲಾಗಿದೆ. ಇಂದಿನ ಮಠಗಳಿಗೆ ಉತ್ತಮ ಚಾರಿತ್ರ್ಯ ಹೊಂದಿರುವ ಮಠಾಧೀಶರು ಬೇಕಾಗಿದೆ’ ಎಂದು ಸಾಹಿತಿ ಗೊ.ರು.ಚನ್ನಬಸಪ್ಪ ಅಭಿಪ್ರಾಯಪಟ್ಟರು.

ನಗರದಲ್ಲಿ ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ ಅಮೃತ ಮಹೋತ್ಸವ ಅಂಗವಾಗಿ ಶುಕ್ರವಾರ ಹಮ್ಮಿಕೊಂಡಿದ್ದ ‘ಅಭಿನಂದನಾ ಸಮಾರಂಭ’ ಹಾಗೂ ‘ಮಠಾಧೀಶರ ಚಿಂತನಾ ಸಮಾವೇಶ’ದಲ್ಲಿ ಅವರು ಆಶಯ ನುಡಿಗಳನ್ನಾಡಿದರು.

‘ಪ್ರಭಾಕರ ಕೋರೆ ಈಗ ಬೆಳಗಾವಿಯವರಾಗಿ ಉಳಿದಿಲ್ಲ. ಶಿಕ್ಷಣ, ಆರೋಗ್ಯ ಕ್ಷೇತ್ರದಲ್ಲಿ ಮಹತ್ತರ ಸಾಧನೆ ಮಾಡಿ ವಿದೇಶದಲ್ಲೂ ಖ್ಯಾತಿ ಗಳಿಸಿದ್ದಾರೆ. ಅನೇಕ ಮಠಗಳಿಂದಲೂ ಸಾಧ್ಯವಾಗದ ಕೆಲಸವನ್ನು ಅವರು ಮಾಡಿದ್ದಾರೆ’ ಎಂದು ಪ್ರಶಂಸಿಸಿದರು.

ಮೈಸೂರಿನ ಸುತ್ತೂರು ಕ್ಷೇತ್ರದ ವೀರಸಿಂಹಾಸನ ಮಠದ ಜಗದ್ಗುರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ‘ಕೆಎಲ್‌ಇ ಸಂಸ್ಥೆ ಈ ಭಾಗದ ಜನರ ಆಶಾಕಿರಣವಾಗಿದೆ. ಎರಡಂಕಿಯಷ್ಟಿದ್ದ ಅಂಗಸಂಸ್ಥೆಗಳ ಸಂಖ್ಯೆ ಕೋರೆ ನೇತೃತ್ವದಲ್ಲಿ ಮೂರಂಕಿ ತಲುಪಿದೆ. ಇಲ್ಲಿ ಸುವರ್ಣ ವಿಧಾನಸೌಧ ತಲೆ ಎತ್ತಿದ ಶ್ರೇಯಸ್ಸು ಕೋರೆ ಅವರಿಗೆ ಸಲ್ಲುತ್ತದೆ’ ಎಂದರು.

ಸಿರಿಗೆರೆಯ ತರಳಬಾಳು ಸಂಸ್ಥಾನದ ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ‘ಸಮಾಜ ಸೇವೆಯ ಆಶಯದೊಂದಿಗೆ ಮುನ್ನಡೆಯುತ್ತಿರುವ ಕೋರೆ ಗಂಡೆದೆ ನಾಯಕ’ ಎಂದು ಬಣ್ಣಿಸಿದರು.

ಡಾ.ತೋಂಟದ ಸಿದ್ಧರಾಮ ಸ್ವಾಮೀಜಿ, ಶಿವಮೊಗ್ಗದ ಆನಂದಪುರದ ಬೆಕ್ಕಿನಕಲ್ಮಠದ ಡಾ.ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮೀಜಿ, ಹುಬ್ಬಳ್ಳಿಯ ಮೂರುಸಾವಿರ ಮಠದ ಡಾ.ಗುರುಸಿದ್ಧ ರಾಜಯೋಗೀಂದ್ರ ಸ್ವಾಮೀಜಿ ಮಾತನಾಡಿದರು.

ನಾಡಿನ ವಿವಿಧೆಡೆಯಿಂದ ಬಂದಿದ್ದ 250ಕ್ಕೂ ಅಧಿಕ ಮಠಾಧೀಶರು, ಕೋರೆ ಅವರನ್ನು ಸತ್ಕರಿಸಿ ಗೌರವಿಸಿದರು. ಶಿಕ್ಷಣ ಮತ್ತು ಆರೋಗ್ಯ ರಂಗಕ್ಕೆ ಕೋರೆ ನೀಡಿದ ಕೊಡುಗೆಗಳನ್ನು ಸ್ಮರಿಸಿದರು. ಮಠಗಳು ಮತ್ತು ಶಿಕ್ಷಣ ಸಂಸ್ಥೆಗಳಿಂದ ಮುಂದಿನ ದಿನಗಳಲ್ಲಿ ಆಗಬೇಕಿರುವ ಕೆಲಸಗಳ ಬಗ್ಗೆ ಚರ್ಚಿಸಿದರು.

> **ಲಿಂಗಾಯತ ಸಮುದಾಯ ಈಗ ದಿಕ್ಕು ತಪ್ಪುತ್ತಿದೆ. ಅಲ್ಲಲ್ಲಿ ಧರ್ಮಾಂತರ ಪ್ರಕ್ರಿಯೆ ನಡೆಯುತ್ತಿದೆ. ಮಠಾಧೀಶರು ಶಿಕ್ಷಣ ಪ್ರಸಾರದ ಜೊತೆಗೆ ಸಮಾಜದ ಉಳಿವಿಗಾಗಿಯೂ ಗಂಭೀರವಾಗಿ ಚಿಂತನೆ ನಡೆಸಬೇಕಿದೆ**
>
> **ಪ್ರಭಾಕರ ಕೋರೆ,** ಕಾರ್ಯಾಧ್ಯಕ್ಷ, ಕೆಎಲ್‌ಇ ಸಂಸ್ಥೆ

ವೇದಾಂಗ ವಿದ್ವಾನ್ ಆರ್.ಎಲ್. ಕಶ್ಯಪ್ ಇನ್ನಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪದ್ಮಶ್ರೀ ಪ್ರಶಸ್ತಿ’ ಪುರಸ್ಕೃತ ವೇದಾಂಗ ವಿದ್ವಾನ್ ಆರ್.ಎಲ್. ಕಶ್ಯಪ್ (85) ಅವರು ನಗರದಲ್ಲಿ ಶುಕ್ರವಾರ ನಿಧನರಾದರು.

ಅವಿವಾಹಿತರಾಗಿದ್ದ ಅವರು, ವಯೋಸಹಜ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದರು. ಗುಬ್ಬಲಾಳದಲ್ಲಿರುವ ಸ್ವಗೃಹದಲ್ಲಿ ಬೆಳಿಗ್ಗೆ 10.30ಕ್ಕೆ ಕೊನೆಯುಸಿರೆಳೆದರು. ಜಯನಗರದಲ್ಲಿರುವ ‘ಸಾಕ್ಷಿ’ ಕಚೇರಿಯಲ್ಲಿ ಶನಿವಾರ ಬೆಳಿಗ್ಗೆ 8ರಿಂದ 10 ಗಂಟೆಯವರೆಗೆ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಚಾಮರಾಜಪೇಟೆಯ ಟಿ.ಆರ್. ಮಿಲ್ ರುದ್ರಭೂಮಿಯಲ್ಲಿ 11.30ಕ್ಕೆ ಅಂತ್ಯಸಂಸ್ಕಾರ ನಡೆಯಲಿದೆ.

ವೇದ ಮತ್ತು ವೇದಾಂಗ ಪರಿಣತರಾಗಿದ್ದ ಅವರು, 4 ವೇದಗಳಿಗೆ ಭಾಷ್ಯ ಬರೆದಿದ್ದರು. ವೇದಗಳನ್ನು ಆಂಗ್ಲ ಭಾಷೆಗೆ ಅನುವಾದಿಸಿದ್ದರು. ಮೈಸೂರಿನಲ್ಲಿ ಜನಿಸಿದ ಅವರು, ಅಮೆರಿಕದ ಪರ್ಡ್ಯೂ ವಿ.ವಿಯಲ್ಲಿ 3 ದಶಕಗಳ ಕಾಲ ಎಲೆಕ್ಟ್ರಿಕಲ್ ಹಾಗೂ ಕಂಪ್ಯೂಟರ್ಸ್ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದರು. ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರಗಳಿಗೆ ನೀಡಿದ ಕೊಡುಗೆಗಾಗಿ ಅವರಿಗೆ ಹಲವು ಅಂತರರಾಷ್ಟ್ರೀಯ ಪ್ರಶಸ್ತಿಗಳು ಲಭಿಸಿವೆ. 250ಕ್ಕೂ ಅಧಿಕ ಸಂಶೋಧನ ಪ್ರಬಂಧಗಳನ್ನು ಬರೆದಿದ್ದಾರೆ.

ಕಶ್ಯಪ್ ಅವರ ‘ಋಗ್ವೇದ ವನ್ನು ಏಕೆ ಓದಬೇಕು’ ಕೃತಿಯು ಜನಪ್ರಿಯವಾಗಿದೆ. ಇವರಿಗೆ 2003ರಲ್ಲಿ ಕೇಂದ್ರ ಸರ್ಕಾರವು ‘ವೇದಾಂಗ ವಿದ್ವಾನ್’ ಪ್ರಶಸ್ತಿ, 2012ರಲ್ಲಿ ರಾಜ್ಯ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿ ನೀಡಿ ಸನ್ಮಾನಿಸಿವೆ. 2021ರಲ್ಲಿ ‘ಪದ್ಮಶ್ರೀ ಪ್ರಶಸ್ತಿ’ ನೀಡಲಾಗಿದೆ.

ಪ್ರಜಾವಾಣಿ @75 ಅಮೃತ ಮಹೋತ್ಸವ

ಓದುಗರ ಪ್ರತಿಕ್ರಿಯೆಗಳು

ನಿಮ್ಮ ಅನಿಸಿಕೆಗಳನ್ನು pvat75@prajavani.co.in ಗೆ ಕಳುಹಿಸಿ ಇನ್ನಷ್ಟು ಪ್ರತಿಕ್ರಿಯೆಗಳನ್ನು prajavani.net ನಲ್ಲಿ ಓದಬಹುದು...

ಆತ್ಮಧ್ಯಾನದ ಕಿಟಕಿ

ಅದೊಂದು ಮುಂಜಾನೆ ಅಪ್ಪನನ್ನು ಕರೆತರುವಂತೆ ಅಮ್ಮ ಹೇಳಿದಾಗ ಅಪ್ಪ ಇರಬಹುದಾದ ಹೋಟೇಲಿನ ಅಂದಾಜು ಮಾಡುತ್ತ ಊರಿನ ಬಸ್‌ಸ್ಟ್ಯಾಂಡ್ ಹತ್ತಿರದ ಹೋಟೆಲ್‌ಗೆ ಹೋದಾಗ ಅಪ್ಪನ ಕೈಯಲ್ಲಿ ಪತ್ರಿಕೆಯೊಂದಿತ್ತು. ಆತ ಅದನ್ನು ಶತಮಾನಗಳ ಖಜಾನೆ ಇರುವ ಜಾಗದ ನೀಲನಕ್ಷೆ ಏನೋ ಎನ್ನುವಂತೆ ತದೇಕಚಿತ್ತ ಹಾಗೂ ಕುತೂಹಲದಿಂದ ಓದುತ್ತಿದ್ದ. ನಾನೂ 'ಬಾಬಾ... ಏ ಬಾಬಾ.... ಅಮ್ಮಾ ಕರ್ಯಾಕತ್ತಾಳ' ಅಂತ ಎರಡು ಮೂರು ಸಾರಿ ಕೂಗಿದರೂ ಕೂಡ ತಿರುಗಿ ನೋಡಲಿಲ್ಲ. ನಂತರ ಆತನ ಪಕ್ಕದಲ್ಲಿ ನಾನು ನಿಂತೆ. ಆ ಪತ್ರಿಕೆ ‘ಪ್ರಜಾವಾಣಿ’ ಆಗಿತ್ತು. ಅಪ್ಪನಿಂದ ಪರಂಪರೆಯ ಬಳುವಳಿಯಂತೆ ನನಗೆ ‘ಪ್ರಜಾವಾಣಿ’ ಓದು ದೊರೆಯಿತು. ಅಂದಹಾಗೆ ನನ್ನಪ್ಪ ಕಲಿತದ್ದು ಎರಡನೇ ಕ್ಲಾಸು ಮಾತ್ರ. ಆತ ಒಂದೊಂದೆ ಅಕ್ಷರಗಳನ್ನು ಜೋಡಿಸಿ ಓದುತ್ತಿದ್ದರೆ ಹೋಟೆಲ್‌ನಲ್ಲಿರುವ ಇತರೆ ಗೆಳೆಯರು ಸುದ್ದಿಗಳನ್ನು ಅವರ ಮನೆತನದ ಭವಿಷ್ಯವಾಣಿ ಕೇಳುವಂತೆ ಶ್ರದ್ದೆಯಿಂದ ಕೇಳುತ್ತಿದ್ದರು.

ಹೀಗೆ ನಾನು ಮೂರನೇ ತರಗತಿ ಇದ್ದಾಗಿನಿಂದ ‘ಪ್ರಜಾವಾಣಿ’ ಓದು ನನ್ನೊಳಗೆ ಆತ್ಮಧ್ಯಾನದ ಕಿಟಕಿಯಾಗಿ ರೂಪುಗೊಳ್ಳತೊಡಗಿತು. ಅದನ್ನು ಓದಲೆಂದೇ ಪತ್ರಿಕೆ ತರಿಸುತ್ತಿದ್ದ ಶೆಟ್ಟರ, ಕ್ವಾಮಟಿಗರ, ಬಣಕಾರರ ಅಂಗಡಿಗಳಿಗೆ , ಬಸ್‌ಸ್ಟ್ಯಾಂಡ್, ಬಜಾರುಗಳಲ್ಲಿನ ಹೋಟೇಲುಗಳಿಗೆ ಹೋಗಿ ಅವರ ಸಣ್ಣಪುಟ್ಟ ಕೆಲಸ ಮಾಡಿಕೊಡುತ್ತಿದ್ದೆ. ಪ್ರತಿಯಾಗಿ ಹೃದಯ ಹಾಗೂ ಮೆದುಳಿನ ತುಂಬಾ ‘ಪ್ರಜಾವಾಣಿ’ ಓದುತ್ತಿದ್ದೆ. ನಮ್ಮ ಕಾಂತು ಸರ್ ಟ್ಯೂಷನ್ ರೂಮ್‌ಗೆ ಬರುತ್ತಿದ್ದ ಪಿಯುಸಿ ಪದವಿ ಓದುವ ವಿದ್ಯಾರ್ಥಿಗಳು ತರುತ್ತಿದ್ದ ಪತ್ರಿಕೆಗಾಗಿ ತಿಂಗಳುಗಟ್ಟಲೆ ಹಸಿದವನಂತೆ ಕಾಯುತ್ತಿದ್ದೆ. ‘ಪ್ರಜಾವಾಣಿ’ ಓದು ಎಂಬುದು ನನ್ನನ್ನು ರಚನಾತ್ಮಕವಾಗಿ ರೂಪಿಸಿದೆ.

ನನ್ನ ಜೀವದ ಪತ್ರಿಕೆಗೆ ಶುಭಾಶಯಗಳು.

ಮೆಹಬೂಬ್ ಮಠದ, ಯುವ ಕವಿ, ಕೊಪ್ಪಳ

ಆಪ್ತ ಗೆಳೆಯ

ಪ್ರಜಾವಾಣಿ ನನ್ನ ಆಪ್ತ ಗೆಳೆಯ. 1970 ರ ದಶಕದಲ್ಲಿ ನನ್ನೂರು ದಾವಣಗೆರೆ ತಾಲ್ಲೂಕು ಕಂದಗಲ್ಲಿ ನಲ್ಲಿ ನನ್ನ ತಂದೆಯವರ ಕೈಯಲ್ಲಿ ರುತ್ತಿದ್ದ ಪ್ರಜಾವಾಣಿ ನನಗೆ ಪರಿಚಯವಾಗಿದ್ದು 'ಪ್ರಜಾ ಬಸವಣ್ಣ ವಾಣಿ'ಯಾಗಿ.

ಪ್ರಜಾವಾಣಿ ಸಮಾಜದ ಕಣ್ಣು, ಕಿವಿ, ಹೃದಯ ಕೂಡ. ಅಂದಿಗಿಂತ ಇಂದು ಆಕಾರ, ಬಣ್ಣ, ಮುದ್ರಣದಲ್ಲಿ ಬದಲಾವಣೆ ಆಗಿದ್ದರೂ ಸುದ್ದಿ ಮೌಲ್ಯದ ಶ್ರೇಷ್ಠತೆ ಉಳಿಸಿಕೊಂಡಿರುವ ಅಪರೂಪದ ಪತ್ರಿಕೆ. ಪತ್ರಿಕೋದ್ಯಮದ ಪಾವಿತ್ರ್ಯತೆ ಕಾಪಾಡಿಕೊಂಡು ಬಂದಿರುವ ಪ್ರಜಾವಾಣಿ ಸುದ್ದಿ ಮಾಧ್ಯಮಗಳಲ್ಲೇ ಮಾದರಿ ಪತ್ರಿಕೆ. ನಾನು ಆರಂಭದಲ್ಲಿ ನೋಡಿದ ಸುದ್ದಿ ಗತ್ತನ್ನೆ ಇಂದೂ ಉಳಿಸಿಕೊಂಡಿದೆ.

ನಾನು ಮಾಧ್ಯಮ ಮೇಷ್ಟ್ರಾಗಿ ವಿದ್ಯಾರ್ಥಿಗಳಿಗೆ ಸುದ್ದಿ ಮೌಲ್ಯ ಬೋಧಿಸುವಾಗ ಪ್ರಜಾವಾಣಿಯ ಸುದ್ದಿಗಳೇ ಸಾಕ್ಷಿಯಾಗುತ್ತಿದ್ದವು. ಅನ್ಯ ಪತ್ರಿಕೆಗಳ ಸುದ್ದಿ ಅಂಶಗಳನ್ನು ಹೇಳುವಾಗ ವಿದ್ಯಾರ್ಥಿಗಳಿಂದ ಕೆಲ ಸುದ್ದಿಗಳ ಹಿನ್ನೆಲೆಯೊಂದಿಗೆ ಬರುತ್ತಿದ್ದ ಪ್ರತಿಕ್ರಿಯೆಯೇ ಬೇರೆಯಾಗಿರುತ್ತಿತ್ತು. 'ಪತ್ರಿಕೋದ್ಯಮ ಅಂದರೆ ಪ್ರಜಾವಾಣಿ, ಪ್ರಜಾವಾಣಿ ಅಂದರೆ ಪತ್ರಿಕೋದ್ಯಮ'ದಂತೆ ಹೆಮ್ಮರವಾಗಿ ಬೆಳೆಯಲೆಂದು ಮನಸಾರೆ ಪ್ರೀತಿಯಿಂದ ಹಾರೈಸುವೆ.

ಡಾ.ಹಾಲಸ್ವಾಮಿ ಕೆ.ಜಿ, ಬೆಂಗಳೂರು

ನಾಲ್ಕು ದಶಕಗಳ ನಂಟು

ನಮ್ಮೂರಿಗೆ ಬೆಳಿಗ್ಗೆ 9.30ಕ್ಕೆ ಬರುತ್ತಿದ್ದ ಪತ್ರಿಕೆಯೊಂದಿಗೆ 1985ರಿಂದಲೂ ಕೂಡ ಆತ್ಮೀಯ ಸಂಬಂಧವಿದೆ. ರಾಷ್ಟ್ರೀಯ ರಾಜಕಾರಣ ವಿಮರ್ಶೆ, ಆರ್ಥಿಕ ವ್ಯವಸ್ಥೆ ವಿವರಗಳು, ವಿದೇಶಿ ನೀತಿಯ ವಿಚಾರಗಳು, ವಾಚಕರ ವಾಣಿ, ಛೂ ಬಾಣ, ಭಾನುವಾರದ ‘ಸಾಪ್ತಾಹಿಕ ಪುರವಣಿ’ಯನ್ನು ಓದುತ್ತಾ ಬಂದಿದ್ದೇನೆ. ನಮ್ಮೂರಲ್ಲಿ ನಡೆದ ಕಾರ್ಯಕ್ರಮಗಳ ವರದಿಯನ್ನು ಮಧುಗಿರಿಯ ವರದಿಗಾರರಿಗೆ ನೀಡಿ ಆ ಮೂಲಕ ಪತ್ರಿಕೆಯಲ್ಲಿ ಸುದ್ದಿ ಪ್ರಕಟವಾಗಿ ‘ಪ್ರಜಾವಾಣಿ’ಯಲ್ಲಿ ನನ್ನ ಹೆಸರು ಬಂದಾಗ ಕುಣಿದು ಕುಪ್ಪಳಿಸಿದ ನೆನಪುಗಳನ್ನು ಮರೆಯಲಾರೆ.

ವಾಚಕರ ವಾಣಿಯಲ್ಲಿ ಹತ್ತಾರು ಬರಹಗಳು, ಓದುಗರ ವೇದಿಕೆಯಲ್ಲಿ, ಚರ್ಚೆಗಳು ಸೇರಿ ಪ್ರಕಟವಾದ ಅವುಗಳ ತುಣುಕುಗಳನ್ನು ನನ್ನ ಬಳಿ ಭದ್ರವಾಗಿ ಇಟ್ಟುಕೊಂಡಿದ್ದೇನೆ. ಪ್ರತಿನಿತ್ಯವೂ ‘ಪ್ರಜಾವಾಣಿ’ಯ ಮೇಲೆ ಕಣ್ಣಾಡಿಸಿ ಸಾಗುತ್ತಾ ಬಂದವನು. ನಾನು ಮಧುಗಿರಿ ತಾಲ್ಲೂಕಿನ ನೇರಳೇಕೆರೆಯಿಂದ ರಾಜಧಾನಿ ಬೆಂಗಳೂರಿಗೆ ಬಂದು ಪತ್ರಿಕಾ ಬಳಗದ ಜೊತೆ ಆತ್ಮೀಯ ಒಡನಾಟವನ್ನು ಇಂದು ಸಹ ಮುಂದುವರಿಸಿರುವೆ.‘ಪ್ರಜಾವಾಣಿ’ಯ ಶತಮಾನೋತ್ಸವವನ್ನು ನೋಡುವ ಭಾಗ್ಯ ಸಿಗಲಿ ಎಂಬ ಆಶಯದೊಂದಿಗೆ ಪತ್ರಿಕಾ ಬಳಗಕ್ಕೆ ನನ್ನ ಹೃತ್ಪೂರ್ವಕ ಅಭಿನಂದನೆಗಳು.

ನೇ.ಭ. ರಾಮಲಿಂಗ ಶೆಟ್ಟಿ,
ಗೌರವ ಕಾರ್ಯದರ್ಶಿ, ಕನ್ನಡ ಸಾಹಿತ್ಯ ಪರಿಷತ್ತು

ಆತ್ಮಸಂಗಾತಿ

ನಾನು ಚಿಕ್ಕ ವಯಸ್ಸಿನಿಂದಲೇ ಪ್ರಜಾವಾಣಿಯ ಓದುಗ. ಮಾಧ್ಯಮಿಕ ತರಗತಿಗಳಲ್ಲಿ ಓದುವಾಗ ದಿನವೂ ಪ್ರಾರ್ಥನೆಯ ನಂತರ ಒಂದು ಸುದ್ದಿಯನ್ನು ಮಕ್ಕಳ ಎದುರು ಓದುವ ಪರಿಪಾಠವನ್ನು ನನ್ನ ಗುರುಗಳು ಬೆಳೆಸಿದ್ದರು. ಹಾಗೆ ಓದುವವರಲ್ಲಿ ನಾನು ಒಬ್ಬ. ಆ ಪತ್ರಿಕೆ ಪ್ರಜಾವಾಣಿಯೇ ಆಗಿತ್ತು. 1967–68ರ ನನ್ನ ಮಾಧ್ಯಮಿಕ ಶಾಲಾ ದಿನಗಳಲ್ಲಿ ನಾನು ವಾಸವಿದ್ದ ಹಳ್ಳಿಯಲ್ಲಿ ಪ್ರಜಾವಾಣಿ ಪತ್ರಿಕೆಗಳನ್ನು ಮನೆ ಮನೆಗೆ ತಲುಪಿಸುವ ಕೆಲಸ ಮಾಡುತ್ತಿದ್ದೆ. ಎಲ್ಲ ಚಂದಾದಾರರು ಬೆಳಗ್ಗೆ ಪತ್ರಿಕೆಗಾಗಿಯೇ ಕಾಯುತ್ತಿದ್ದುದು ಒಂದು ಸುಂದರ ನೆನಪು.

ನನ್ನನ್ನು ಬಹಳವಾಗಿ ಓದುವಂತೆ ಮಾಡುತ್ತಿದ್ದದು ಸಿನಿಮಾ ಸುದ್ದಿಗಳು. ಅದರಲ್ಲೂ ಡಾ.ರಾಜ್‌ಕುಮಾರರ ಛಾಯಾಚಿತ್ರವಿರುವ ಸಿನಿಮಾ ಸುದ್ದಿಯೇನಾದರೂ ಪ್ರಕಟಗೊಂಡಿದ್ದರೆ ಅದನ್ನು ಹಿಗ್ಗಿನಿಂದ ಓದಿ ನನ್ನ ಅನಕ್ಷರಸ್ಥ ತಾಯಿಗೆ ಓದಿ ಹೇಳುವುದು ನನ್ನ ಹವ್ಯಾಸ. ಕ್ರಮೇಣ ಛೂಬಾಣದಂತಹ ಅಂಕಣಗಳು ನನ್ನ ಚಿಂತನೆಗಳಗೆ ಪೋಷಕಾಂಶಗಳಾದವು. ಕನ್ನಡ ನಾಡಿನಲ್ಲಿ ಅನೇಕ ಪತ್ರಿಕೆಗಳನ್ನು ಇಂದು ನಾವು ಕಾಣುತ್ತೇವೆ. ಆದರೆ ಸುದ್ದಿಯನ್ನು ಸುದ್ದಿಯಾಗಿಯೇ ಪ್ರಕಟಿಸುವ ಪ್ರಜಾವಾಣಿ, ವಿಚಾರ ಹೇರಿಕೆ ತಂತ್ರಗಳನ್ನು ಎಲ್ಲಿಯೂ ಬಳಸಿದ್ದು ನನಗೆ ನೆನಪಿಲ್ಲ. ‘ಸಂಪಾದಕೀಯ’ ಬರವಣಿಗೆಗಳು ಇಂದಿಗೂ ಮಾದರಿ.

ಬಾಲ್ಯದಿಂದಲೂ ಪ್ರಜಾವಾಣಿ ನನ್ನ ಆತ್ಮಸಂಗಾತಿ. ಕನ್ನಡದ ಹೆಮ್ಮೆಯ ಈ ಪ್ರಜಾವಾಣಿ ಪತ್ರಿಕೆ ತನ್ನ ಯಾನವನ್ನು ಹೀಗೆಯೇ ಮುಂದುವರಿಸಲಿ ಎನ್ನುವುದು ನನ್ನ ಹಾರೈಕೆ.

ಕಾಂತೇಶ ಕದರಮಂಡಲಗಿ, ಶಿವಮೊಗ್ಗ

ಸಾವಯವ ಕೃಷಿಕರ ಸಮ್ಮೇಳನಕ್ಕೆ ಬೀಜ ಸಂರಕ್ಷಕಿ ಪಾಪಮ್ಮ ಚಾಲನೆ

'ಜನರ ಬಾಯಿಗ್ ಸುಣ್ಣ ಹಾಕಬ್ಯಾಡ್ರಿ'

ಪ್ರಜಾವಾಣಿ ವಾರ್ತೆ

ಮೈಸೂರು: ಸಂಜೆ ಐದಾದರೂ ಮಂಜು ಮುಸುಕಿದ ಚಳಿಯ ವಾತಾವರಣ ಹೊರಗಿದ್ದರೆ; ಜಾಗತಿಕ ತಾಪಮಾನ ಏರಿಕೆ, ಸಾವಯವ ಕೃಷಿ ಚರ್ಚೆಯ ಕಾವು ಒಳಗೆ. ಜೊತೆಗೆ ದೇಸಿ ಬೀಜ ಸಂರಕ್ಷಕರ ಜಾತ್ರೆ, ವಿವಿಧ ರಾಜ್ಯಗಳ ವೈವಿಧ್ಯಮಯ ಭೋಜನದ ಸವಿ!

–ನಗರದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ಶುಕ್ರವಾರ ಗರಿಬಿಚ್ಚಿದ 5ನೇ ಆವೃತ್ತಿಯ 'ಕಿಸಾನ್ ಸ್ವರಾಜ್ ಸಮ್ಮೇಳನ'ದಲ್ಲಿ ಕಂಡ ಗ್ರಾಮ್ಯ ಭಾರತದ ವೈವಿಧ್ಯಮಯ ಚಿತ್ರಣವಿದು.

'ಆಶಾ (ಅಲಯನ್ಸ್ ಫಾರ್ ಸಸ್ಟೈನಬಲ್ ಆ್ಯಂಡ್ ಹೋಲಿಸ್ಟಿಕ್ ಅಗ್ರಿಕಲ್ಚರ್) ಕಿಸಾನ್ ಸ್ವರಾಜ್' ಸಂಸ್ಥೆ ಆಯೋಜಿಸಿದ್ದ ಸಮ್ಮೇಳನಕ್ಕೆ ಕೋಲಾರದ ಬೀಜ ಸಂರಕ್ಷಕಿ ಪಾಪಮ್ಮ ಚಾಲನೆ ನೀಡಿದರು. ಕೇರಳದ ಕೃಷಿ ಸಚಿವ ಪಿ.ಪ್ರಸಾದ್, 'ಆಶಾ' ರಾಷ್ಟ್ರೀಯ ಸಂಚಾಲಕ ಕಪಿಲ್ ಶಾ, ಮಾನವಶಾಸ್ತ್ರಜ್ಞೆ ಡಾ.ಎ.ಆರ್.ವಾಸವಿ ಸಾಕ್ಷಿಯಾದರು.

'ಜನರ ಬಾಯಿಗ್ ಸುಣ್ಣ ಹಾಕಬ್ಯಾಡ್ರಿ': ಉತ್ಸವ ಉದ್ಘಾಟಿಸಿ ಮಾತನಾಡಿದ ಪಾಪಮ್ಮ, 'ಭೂಮಿಗೆ ರಾಸಾಯನಿಕ ಗೊಬ್ಬರ ಹಾಕಿ ಜನರ ಬಾಯಿಗ್ ಸುಣ್ಣ ಹಾಕಬ್ಯಾಡ್ರಿ. ಬದುಕ ಬರಡು ಮಾಡಬ್ಯಾಡ್ರಿ' ಎಂದು ಕೈ ಮುಗಿದು ಮನವಿ ಮಾಡಿದರು.

ಮುಖ್ಯಾಂಶಗಳು

- ಕೃಷಿ ಸಾಕ್ಷ್ಯಚಿತ್ರ ಪ್ರದರ್ಶನ
- ಬಾಳೆ ಮೇಳದಲ್ಲಿ 500 ತಳಿ ಪ್ರದರ್ಶನ
- ಬೀಜ ಉತ್ಸವದಲ್ಲಿ ಜನಜಾತ್ರೆ

'35 ವರ್ಷದಿಂದ ಸಾವಯವ ಕೃಷಿ ಮಾಡುತ್ತಿದ್ದೇನೆ. 50 ಜಾತಿಯ ಬೀಜಗಳನ್ನು ಉಳಿಸಿದ್ದೇನೆ. ನೀವೂ ಉಳಿಸಿ. ನಮ್ಮ ಮಕ್ಕಳನ್ನ ಬೆಳೆಸೋದು ಅದೇನೆ' ಎಂದರು.

ಕೇರಳದ ಸಚಿವ ಪ್ರಸಾದ್ ಮಾತನಾಡಿ, 'ಜಾಗತಿಕ ತಾಪಮಾನ ಏರಿಕೆಯಲ್ಲಿ ಕೃಷಿ ವಲಯದ ಕಾಣಿಕೆಯಿದೆ. ಪರಿಸರ ಕೇಂದ್ರಿತ ಕೃಷಿ ಮರೆಯಾಗಿದೆ. ಹೀಗಾಗಿ ನಮ್ಮ ಸರ್ಕಾರವು 'ಸಾವಯವ ಕೃಷಿ ಮಿಷನ್–2022' ಯೋಜನೆ ಜಾರಿಗೊಳಿಸಿದೆ. ಕುಲಾಂತರಿ ಬೀಜಕ್ಕೆ ಬೆಂಬಲವಿಲ್ಲ' ಎಂದರು.

ಮಾನವಶಾಸ್ತ್ರಜ್ಞೆ ಡಾ.ಎ.ಆರ್. ವಾಸವಿ, 'ಎಲ್ಲ ದೇಶಗಳ ಆಹಾರ ಭದ್ರತೆಗೆ ಜಾಗತಿಕ ತಾಪಮಾನ ಏರಿಕೆ ಸವಾಲನ್ನು ಒಡ್ಡಿದೆ. ಕೃಷಿ ವೈವಿಧ್ಯ ಉಳಿಸಿಕೊಳ್ಳುವುದೇ ನಮ್ಮ ಮುಂದಿರುವ ಆಯ್ಕೆ' ಎಂದರು.

ಮೈಸೂರಿನಲ್ಲಿ ಮೂರು ದಿನಗಳ 5ನೇ ಕಿಸಾನ್ ಸ್ವರಾಜ್ ಸಮ್ಮೇಳನಕ್ಕೆ ಶುಕ್ರವಾರ ಬೀಜ ಸಂರಕ್ಷಕಿ ಪಾಪಮ್ಮ ಚಾಲನೆ ನೀಡಿದರು. ಡಾ.ಎ.ಆರ್.ವಾಸವಿ, ಕೃಷ್ಣಪ್ರಸಾದ್, ಕೇರಳ ಕೃಷಿ ಸಚಿವ ಪಿ.ಪ್ರಸಾದ್, ಕಪಿಲ್ ಶಾ, ನಿವೃತ್ತ ಮೇಜರ್ ಜನರಲ್ ಒಂಬತ್ಕೆರೆ, ಖಾದರ್ ಪಾಷಾ, ಯು.ಎನ್.ರವಿಕುಮಾರ್ ಇದ್ದರು

ಆಶಾ ಸಂಸ್ಥೆಯ ರಾಷ್ಟ್ರೀಯ ಸಂಚಾಲಕ ಕಪಿಲ್ ಶಾ ಮಾತನಾಡಿ, '1980ಕ್ಕೂ ಮುಂಚೆಯೇ ಸಾವಯವ ಕೃಷಿ ಪದ್ಧತಿ ಕರ್ನಾಟಕದಲ್ಲಿ ಪ್ರವರ್ಧಮಾನಕ್ಕೆ ಬಂದಿತು. ದೇಶಕ್ಕೆ ಸಾವಯವ ಪಾಠಗಳನ್ನು ಹೇಳಿಕೊಟ್ಟಿದೆ. ಸಾವಯವ ಕೃಷಿನೀತಿಯನ್ನು ಮೊದಲು ಜಾರಿಗೊಳಿಸಿದೆ' ಎಂದರು.

ಪರಿಸರ ತಜ್ಞ ಯು.ಎನ್. ರವಿಕುಮಾರ್, ಕೆಎಸ್‌ಒಯು ಪ್ರಭಾರ ಕುಲಪತಿ ಖಾದರ್ ಪಾಷಾ, ಕೃಷ್ಣಪ್ರಸಾದ್, ನಿವೃತ್ತ ಮೇಜರ್ ಜನರಲ್ ಎಸ್.ಜಿ.ಒಂಬತ್ಕೆರೆ, ನಚಿಕೇತ್ ಉಡುಪ ಇದ್ದರು.

23 ರಾಜ್ಯಗಳಿಂದ 2,200ಕ್ಕೂ ಹೆಚ್ಚು ಸಾವಯವ ಕೃಷಿಕರು ಭಾಗವಹಿಸಿರುವ ಸಮ್ಮೇಳನದಲ್ಲಿ ಬೀಜ ಉತ್ಸವ, ಸಾಕ್ಷ್ಯಚಿತ್ರ ಪ್ರದರ್ಶನ, ಕೃಷಿಗೋಷ್ಠಿ, 500ಕ್ಕೂ ಹೆಚ್ಚು ತಳಿಯ ಬಾಳೆ ಮೇಳ, ಗೆಡ್ಡೆಗೆಣಸು ಮೇಳ ಇವೆ.

ಎಸ್‌.ವಿ.ಹಲಸೆ ಕೆಎಸ್‌ಒಯು ಕುಲಪತಿ

ಬೆಂಗಳೂರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ನೂತನ ಕುಲಪತಿಯಾಗಿ ಪ್ರೊ. ಶರಣಪ್ಪ ವೈಜಿನಾಥ್ ಹಲಸೆ ಅವರು ನೇಮಕಗೊಂಡಿದ್ದಾರೆ.

ಪ್ರಸ್ತುತ ಅವರು ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಎಲೆಕ್ಟ್ರಾನಿಕ್ಸ್ ವಿಭಾಗದ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಹಿಂದೆ ದಾವಣಗೆರೆ ವಿಶ್ವವಿದ್ಯಾಲಯದ ಕುಲಪತಿಯಾಗಿ ಕಾರ್ಯನಿರ್ವಹಿಸಿದ್ದರು.

ಕೆಎಸ್‌ಒಯು ಕುಲಪತಿ ಆಗಿದ್ದ ಡಾ.ಎಸ್.ವಿದ್ಯಾಶಂಕರ ಅವರನ್ನು ಸರ್ಕಾರ ಈಚೆಗೆ ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿಯಾಗಿ ನೇಮಿಸಿತ್ತು. ತೆರವಾದ ಸ್ಥಾನಕ್ಕೆ ಹಲಸೆ ಅವರನ್ನು ಮೂರು ವರ್ಷಗಳ ಅವಧಿಗೆ ನೇಮಕ ಮಾಡಿ ರಾಜ್ಯಪಾಲರು ಆದೇಶ ಹೊರಡಿಸಿದ್ದಾರೆ.

ಪ್ರಿಯಾಂಕ್ ಖರ್ಗೆ ವಿರುದ್ಧ ಮಣಿಕಂಠ ರಾಠೋಡ ವಾಗ್ದಾಳಿ

'ಸಾಯಲು, ಶೂಟ್ ಮಾಡಲು ಸಿದ್ಧ'

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಚಿತ್ತಾಪುರ ಕ್ಷೇತ್ರದ ನಾನು ಬಡವರ ಪರ ಕೆಲಸ ಮಾಡುತ್ತಿದ್ದೇನೆ. ನೀವು ಎಕೆ–47ನಿಂದ ಶೂಟ್ ಮಾಡಿದರೂ ನಾನು ಸಾಯಲು ಸಿದ್ಧ. ತಮಗೂ ಶೂಟ್ ಮಾಡಲು ಸಿದ್ಧ' ಎಂದು ಬಿಜೆಪಿ ಮುಖಂಡ ಮಣಿಕಂಠ ರಾಠೋಡ ಅವರು ಶಾಸಕ ಪ್ರಿಯಾಂಕ್ ಖರ್ಗೆ ಅವರಿಗೆ ಎಚ್ಚರಿಕೆ ನೀಡಿದರು.

'ಪ್ರಿಯಾಂಕ್ ಖರ್ಗೆ ಅವರು ಕಾಂಗ್ರೆಸ್‌ನವರು ಮನಸ್ಸು ಮಾಡಿದರೇ ಬಿಜೆಪಿಯವರು ಜಿಲ್ಲೆಯಲ್ಲಿ ಓಡಾಡದಂತೆ ಮಾಡುವುದಾಗಿ ಹೇಳಿದ್ದಾರೆ. ಚಿತ್ತಾಪುರದಲ್ಲಿ ಬಹಿರಂಗವಾಗಿ ಓಡಾಡುತ್ತಿರುವ ನಾನು ಶಾಸಕರ ಎಲ್ಲಾ ಸವಾಲುಗಳನ್ನು ಒಪ್ಪಿ ಮುಖಾಮುಖಿ ಚರ್ಚೆಗೆ ಸಿದ್ಧ' ಎಂದು ಅವರು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ಮಲ್ಲಿಕಾರ್ಜುನ ಖರ್ಗೆ ಅವರು ಎಐಸಿಸಿ ಅಧ್ಯಕ್ಷರಾದ ಬಳಿಕ ಪ್ರಿಯಾಂಕ್ ಖರ್ಗೆ ಅವರು ಆನೆ ಬಲ ಬಂದಂತೆ ಆಡುತ್ತಿದ್ದಾರೆ. 2023ರ ವಿಧಾನಸಭಾ ಚುನಾವಣೆಯಲ್ಲಿ ಅವರನ್ನು ಮನೆಗೆ ಕಳುಹಿಸುತ್ತೇವೆ. ರಾಜಕೀಯ ಒತ್ತಡ ತಂದು, ನನ್ನ ಮೇಲೆ ಸುಳ್ಳು ಪ್ರಕರಣ ದಾಖಲಿಸಿ, ನನ್ನ ವಿರುದ್ಧ ಗಡಿಪಾರು ಆದೇಶ ಹೊರಡುವಂತೆ ಮಾಡಿದರು. ಆದರೆ, ನನಗೆ ಗಡಿಪಾರು ಆದೇಶ ಬಂದಾಗ ನೀವೇ (ಪ್ರಿಯಾಂಕ್ ಖರ್ಗೆ) ಗಡಿಪಾರು ಆಗಿದ್ದೀರಾ' ಎಂದು ವ್ಯಂಗ್ಯವಾಡಿದರು.

ತಡೆಯಾಜ್ಞೆ: ಅಕ್ರಮ ಪಡಿತರ ಸಾಗಣೆ ಮತ್ತು ಪೊಲೀಸ್ ಅಧಿಕಾರಿಗಳ ಕರ್ತವ್ಯಕ್ಕೆ ಅಡ್ಡಿ ಆರೋಪದಡಿ ಯಾದಗಿರಿ ಜಿಲ್ಲೆಯ ಮಣಿಕಂಠ ರಾಠೋಡ ವಿರುದ್ಧ ವಿವಿಧ ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಾಗಿವೆ. ಮಣಿಕಂಠಗೆ ಶಿವಮೊಗ್ಗ ಜಿಲ್ಲೆಯ ಗ್ರಾಮಾಂತರ ಪೊಲೀಸ್ ಠಾಣೆಗೆ 1 ವರ್ಷ ಗಡಿಪಾರು ಆದೇಶ ಹೊರಡಿಸಲಾಗಿತ್ತು. ಆದರೆ ಅವರು ಗಡಿಪಾರು ಆದೇಶದ ವಿರುದ್ಧ ತಡೆಯಾಜ್ಞೆ ತಂದಿದ್ದಾರೆ.

ಮಾತಿಗೂ ಮುನ್ನ ಕಾನೂನು ಅರಿಯಲಿ: ಪ್ರಿಯಾಂಕ್ ಖರ್ಗೆ

ಕಲಬುರಗಿ: 'ಮನ ಬಂದಂತೆ ಮಾತನಾಡುವ ಮುನ್ನ ಮಣಿಕಂಠ ರಾಠೋಡ ಅವರು ಕಾನೂನು ಅರಿಯಬೇಕು. ಕೀಳುಮಟ್ಟದ ರಾಜಕಾರಣಕ್ಕೆ ಆಸ್ಪದ ನೀಡಬಾರದು' ಎಂದು ಶಾಸಕ ಪ್ರಿಯಾಂಕ್ ಖರ್ಗೆ 'ಪ್ರಜಾವಾಣಿ'ಗೆ ತಿಳಿಸಿದರು.

'ಚಿತ್ತಾಪುರದಲ್ಲಿ ಯಾವತ್ತೂ ಕೀಳುಮಟ್ಟದ ರಾಜಕಾರಣ ನಡೆದಿರಲಿಲ್ಲ. ಸುಳ್ಳು ಪ್ರಕರಣ ದಾಖಲಿಸುವ, ಕಾನೂನು ಮತ್ತು ಸುವ್ಯವಸ್ಥೆ ಹದಗೆಡುವಂತಹ ಸ್ಥಿತಿ ಇರಲಿಲ್ಲ. ಆದರೆ, ಬಿಜೆಪಿ ಸರ್ಕಾರದ ಆಡಳಿತದ ಅವಧಿಯಲ್ಲಿ ಇದೆಲ್ಲವೂ ನಡೆಯುತ್ತಿದೆ ಎಂಬರ್ಥದಲ್ಲಿ ಮಾತನಾಡಿದ್ದೆ' ಎಂದು ಅವರು ತಿಳಿಸಿದರು.

'ಗಡಿಪಾರು ಆದೇಶ ಹೊರಡಿಸಿದ್ದು ಅವರದ್ದೇ ಬಿಜೆಪಿ ಸರ್ಕಾರವೇ ಹೊರತು ಕಾಂಗ್ರೆಸ್ ಅಥವಾ ವಿರೋಧಪಕ್ಷದವರಲ್ಲ. ಇದನ್ನು ಅವರು ತಿಳಿದು ಮಾತನಾಡಬೇಕು' ಎಂದರು.

ಪಟಿಯಾಲದ ಪೌಲ್ ಮನೆಯಲ್ಲೂ ಶೋಧ

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದ ಪ್ರಮುಖ ಆರೋಪಿ, ಐಪಿಎಸ್ ಅಧಿಕಾರಿ ಅಮ್ರಿತ್ ಪೌಲ್ ಅವರಿಗೆ ಸೇರಿದ ಪಂಜಾಬ್‌ನ ಪಟಿಯಾಲದ ಮನೆಯಲ್ಲೂ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳ ತಂಡವು ದಾಳಿ ನಡೆಸಿ ಶೋಧಿಸಿದೆ.

ಅಮ್ರಿತ್ ಪೌಲ್, ನೇಮಕಾತಿ ವಿಭಾಗದ ಡಿವೈಎಸ್‌ಪಿಯಾಗಿದ್ದ ಶಾಂತಕುಮಾರ್ ಹಾಗೂ ಬಂಧಿತ ಇತರೆ ಆರೋಪಿಗಳಿಗೆ ಸೇರಿದ 11 ಸ್ಥಳಗಳ ಮೇಲೆ ಗುರುವಾರ ಇ.ಡಿ ಅಧಿಕಾರಿಗಳು ದಾಳಿಸಿದ್ದರು. ಶುಕ್ರವಾರ ಅಧಿಕೃತ ಪ್ರಕಟಣೆ ಹೊರಡಿಸಿರುವ ಇ.ಡಿ ಅಧಿಕಾರಿಗಳು, 'ಡಿಜಿಟಲ್ ಹಾಗೂ ಕಾಗದ ರೂಪದ ದಾಖಲೆ ವಶಕ್ಕೆ ಪಡೆಯಲಾಗಿದೆ' ಎಂದು ತಿಳಿಸಿದ್ದಾರೆ.

ಸಹಕಾರನಗರದ ಪೌಲ್ ಮನೆ ಹಾಗೂ ಆಡುಗೋಡಿ ಪೊಲೀಸ್ ಕ್ವಾರ್ಟರ್ಸ್‌ನಲ್ಲಿರುವ ಶಾಂತಕುಮಾರ್ ಮನೆ ಮೇಲೆ ದಾಳಿ ನಡೆಸಿ ದಾಖಲೆ ವಶಕ್ಕೆ ಪಡೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯ್ತಿ ಚುನಾವಣೆ

ಅರ್ಜಿ ವಜಾಗೊಳಿಸಿದ 'ಸುಪ್ರೀಂ'

ನವದೆಹಲಿ: ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗೆ ಸಂಬಂಧಿಸಿ ಕರ್ನಾಟಕ ಚುನಾವಣಾ ಆಯೋಗ ಸಲ್ಲಿಸಿದ್ದ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ವಜಾಗೊಳಿಸಿದೆ.

ನ್ಯಾಯಮೂರ್ತಿಗಳಾದ ಅನಿರುದ್ಧ ಬೋಸ್ ಹಾಗೂ ವಿಕ್ರಮ್‌ನಾಥ್ ಅವರನ್ನು ಒಳಗೊಂಡ ನ್ಯಾಯಪೀಠವು, 'ಬಿಬಿಎಂಪಿ ಚುನಾವಣೆ ಹಾಗೂ ಸ್ಥಳೀಯ ಆಡಳಿತಗಳ ಚುನಾವಣೆಗೆ ಸಂಬಂಧಿಸಿದ ಪ್ರಕರಣದ ವಿಚಾರಣೆ ಕರ್ನಾಟಕ ಹೈಕೋರ್ಟ್‌ನಲ್ಲಿ ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ಮಧ್ಯಪ್ರವೇಶಿಸುವುದಿಲ್ಲ. ಅರ್ಜಿದಾರರು ಅಗತ್ಯವಿದ್ದರೆ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಬಹುದು' ಎಂದು ಸೂಚಿಸಿತು.

ಕಳೆದ ವರ್ಷ ಏಪ್ರಿಲ್, ಮೇ ಮತ್ತು ಜೂನ್‌ನಲ್ಲಿ ಅವಧಿ ಪೂರ್ಣಗೊಂಡ ಕರ್ನಾಟಕದ ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿಗಳಿಗೆ ಚುನಾವಣೆ ನಡೆಸಲು ಸಿದ್ದತೆ ಆರಂಭಿಸಿದ್ದ ಚುನಾವಣಾ ಆಯೋಗವು ಈ ಸಂಬಂಧ ಕ್ಷೇತ್ರ ಪುನರ್‌ವಿಂಗಡಣೆ ಮಾಡಿ ಮತದಾರರ ಅಂತಿಮ ಪಟ್ಟಿ ಪ್ರಕಟಿಸಿತ್ತು. ಅಂತೆಯೇ ಮೀಸಲಾತಿ ಕರಡನ್ನು ಪ್ರಕಟಿಸಲಾಗಿತ್ತು.

ದಿನಾಂಕ ಘೋಷಣೆ ಮಾಡಬೇಕು ಎನ್ನುವ ಸಂದರ್ಭದಲ್ಲಿ ಕ್ಷೇತ್ರ ಪುನರ್ ವಿಂಗಡಣೆ ಮತ್ತು ಮೀಸಲಾತಿ ಅಧಿಕಾರವನ್ನು ಚುನಾವಣಾ ಆಯೋಗದಿಂದ ಹಿಂಪಡೆದ ಸರ್ಕಾರ ಪ್ರತ್ಯೇಕವಾಗಿ ಸೀಮಾ ನಿರ್ಣಯ ಆಯೋಗ ರಚಿಸಿತ್ತು.

ಇದನ್ನು ಪ್ರಶ್ನಿಸಿ ಆಯೋಗವು ಹೈಕೋರ್ಟ್ ಮೆಟ್ಟಿಲೇರಿತ್ತು.

ಈ ವರ್ಷದ ಮೇ ತಿಂಗಳಲ್ಲಿ ಪ್ರಕರಣದ ವಿಚಾರಣೆ ನಡೆಸಿದ್ದ ಹೈಕೋರ್ಟ್, ಕ್ಷೇತ್ರ ಪುನರ್ವಿಂಗಡಣೆ ಮತ್ತು ಮೀಸಲಾತಿ ನಿಗದಿಗೆ ಹೈಕೋರ್ಟ್ 12 ವಾರಗಳ ಗಡುವು ವಿಧಿಸಿತ್ತು. 12 ವಾರಗಳ ನಂತರ ಒಂದು ವಾರದಲ್ಲಿ ರಾಜ್ಯ ಚುನಾವಣಾ ಆಯೋಗವು ಚುನಾವಣಾ ಪ್ರಕ್ರಿಯೆ ಆರಂಭಿಸಬೇಕು ಎಂದು ಆದೇಶಿಸಿತ್ತು.

ಈ ಪ್ರಕ್ರಿಯೆ ಪೂರ್ಣಗೊಳಿಸಲು ಮತ್ತಷ್ಟು ಕಾಲಾವಕಾಶ ನೀಡಬೇಕು ಎಂದು ಸೀಮಾ ನಿರ್ಣಯ ಆಯೋಗವು ಸರ್ಕಾರಕ್ಕೆ ಸೆಪ್ಟೆಂಬರ್‌ನಲ್ಲಿ ಮನವಿ ಮಾಡಿತ್ತು. ಈ ಸಂಬಂಧ ಹೈಕೋರ್ಟ್‌ಗೆ ಸರ್ಕಾರ ಪ್ರಮಾಣಪತ್ರ ಸಲ್ಲಿಸಿತ್ತು. ಹೈಕೋರ್ಟ್ ಮತ್ತೆ 12 ವಾರಗಳ ಕಾಲಾವಕಾಶ ನೀಡಿತ್ತು.

ಆಯೋಗ ಸಿದ್ಧಪಡಿಸಿರುವ ಕ್ಷೇತ್ರ ಪುನರ್ ವಿಂಗಡಣೆ ಹಾಗೂ ಮೀಸಲಾತಿ ಪ್ರಕಾರವೇ ಚುನಾವಣೆ ನಡೆಸಲು ಅವಕಾಶ ನೀಡಬೇಕು ಎಂದು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಕೆಯಾಗಿತ್ತು.

ಮರಣದಂಡನೆ ಮಾರ್ಪಾಡಾಗಿ ಈಗ ಬಿಡುಗಡೆ

23ರಿಂದ 31 ವರ್ಷ ಸೆರೆಯಲ್ಲಿ ಕಳೆದಿದ್ದ ರಾಜೀವ್ ಗಾಂಧಿ ಹಂತಕರು

ನವದೆಹಲಿ/ಚೆನ್ನೈ (ಪಿಟಿಐ): ರಾಜೀವ್ ಗಾಂಧಿ ಹತ್ಯೆ ಪ್ರಕರಣದಲ್ಲಿ ಹಂತಕರು 23ರಿಂದ 31 ವರ್ಷಗಳಷ್ಟು ಜೈಲುಶಿಕ್ಷೆ ಅನುಭವಿಸಿದ್ದಾರೆ.

ಈ ಪ್ರಕರಣದಲ್ಲಿ ಅವರಿಗೆ ಮೊದಲು ಮರಣದಂಡನೆ ಘೋಷಿಸಲಾಗಿತ್ತು. ಆನಂತರ ಅದನ್ನು ಜೀವಾವಧಿ ಶಿಕ್ಷೆಯಾಗಿ ಮಾರ್ಪಡಿಸಲಾಗಿತ್ತು. ಈಗ ಜೀವಾವಧಿ ಶಿಕ್ಷೆಯಿಂದಲೂ ಅವರನ್ನು ಅವಧಿಪೂರ್ವವಾಗಿ ಬಿಡುಗಡೆ ಮಾಡಲಾಗಿದೆ.

1991ರ ಮೇ 21ರಂದು ತಮಿಳುನಾಡಿನ ಶ್ರೀಪೆರಂಬುದೂರಿನಲ್ಲಿ ರಾಜೀವ್ ಅವರು ಚುನಾವಣಾ ಪ್ರಚಾರ ನಡೆಸುವಾಗ ಆತ್ಮಹತ್ಯಾ ಬಾಂಬ್ ದಾಳಿ ನಡೆದಿತ್ತು.

ಧನು ಎಂಬಾಕೆ ಬಾಂಬ್ ಸ್ಫೋಟಿಸಿಕೊಂಡು, ರಾಜೀವ್ ಅವರ ಹತ್ಯೆ ಮಾಡಿದ್ದಳು. ಈ ಹತ್ಯೆಗೆ ಎ.ಜಿ. ಪೇರರಿವಾಳನ್ ಮತ್ತು ಈ ಆರೂ ಮಂದಿ ಸಂಚು ರೂಪಿಸಿ, ಹತ್ಯೆ ನಡೆಸಲು ನೆರವಾಗಿದ್ದರು. 1998ರಲ್ಲಿ ತಮಿಳುನಾಡಿನ ವಿಚಾರಣಾ ನ್ಯಾಯಾಲಯವು ಎಲ್ಲಾ ಹಂತಕರಿಗೆ ಮರಣದಂಡನೆ ಘೋಷಿಸಿತ್ತು. ಮರಣದಂಡನೆಯನ್ನು ಸುಪ್ರೀಂ ಕೋರ್ಟ್ 1999ರಲ್ಲಿ ಎತ್ತಿಹಿಡಿದಿತ್ತು.

ಮುರುಗನ್, ಶಾಂತನ್ ಮತ್ತು ಎ.ಜಿ. ಪೇರರಿವಾಳನ್ ಅವರು ಕ್ಷಮಾಪಣಾ ಅರ್ಜಿ ಸಲ್ಲಿಸಿದ್ದರು. ಅರ್ಜಿಯು ಇತ್ಯರ್ಥವಾಗದೇ ದೀರ್ಘಾವಧಿ ಕಳೆದಿದೆ ಎಂಬ ಆಧಾರದಲ್ಲಿ 2014ರಲ್ಲಿ ಮರಣದಂಡನೆಯನ್ನು ಜೀವಾವಧಿ ಶಿಕ್ಷೆಯಾಗಿ ಮಾರ್ಪಡಿಸಲಾಗಿತ್ತು. ಆನಂತರ ಎ.ಜಿ.ಪೇರರಿವಾಳನ್ ಅವಧಿಪೂರ್ವ ಬಿಡುಗಡೆ ಕೋರಿ ಅರ್ಜಿ ಸಲ್ಲಿಸಿದ್ದರು.

ಇವರೆಲ್ಲಾ 33 ವರ್ಷ ಜೈಲಿನಲ್ಲಿದ್ದರು. ಈ ಬಿಡುಗಡೆಯನ್ನು ವಿರೋಧಿಸುತ್ತಿರುವವರು ದೇಶದ ಕಾನೂನನ್ನು ಗೌರವಿಸಬೇಕು ಎಂದು ಕೇಳಿಕೊಳ್ಳುತ್ತೇನೆ

ಭಾಗ್ಯನಾಥನ್, ನಳಿನಿ ಶ್ರೀಹರನ್ ಸೋದರ

ಪೇರರಿವಾಳನ್ ಸೇರಿ ಜೀವಾವಧಿ ಶಿಕ್ಷೆಯಲ್ಲಿರುವ ಏಳೂ ಮಂದಿಯನ್ನು ಅವಧಿಪೂರ್ವ ಬಿಡುಗಡೆ ಮಾಡಲು ತಮಿಳುನಾಡು ಸಚಿವ ಸಂಪುಟವು ಅನುಮೋದನೆ ನೀಡಿತ್ತು. ಆದರೆ, ಸಂಪುಟದ ಶಿಫಾರಸನ್ನು ರಾಜ್ಯಪಾಲರು ಕೇಂದ್ರ ಸರ್ಕಾರದ ಪರಾಮರ್ಶೆಗೆ ಕಳುಹಿಸಿದ್ದರು. ಇದರ ವಿರುದ್ಧ ಪೇರರಿವಾಳನ್ ಮತ್ತು ತಮಿಳುನಾಡು ಸರ್ಕಾರವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. 2022ರ ಮೇನಲ್ಲಿ ಈ ಅರ್ಜಿಯನ್ನು ಇತ್ಯರ್ಥಪಡಿಸಿದ್ದ ಸುಪ್ರೀಂ ಕೋರ್ಟ್, ಪೇರರಿವಾಳನ್ ಅವರ ಅವಧಿಪೂರ್ವ ಬಿಡುಗಡೆಗೆ ಆದೇಶಿಸಿತ್ತು. 'ಇಂತಹ ಪ್ರಕರಣಗಳಲ್ಲಿ ರಾಜ್ಯಪಾಲರು ಸಚಿವ ಸಂಪುಟದ ನಿರ್ಧಾರಕ್ಕೆ ಬದ್ಧವಾಗಿರಬೇಕು' ಎಂದು ತೀರ್ಪು ನೀಡಿತ್ತು.

ಉಳಿದವರು ಸಲ್ಲಿಸಿದ್ದ ಅರ್ಜಿಯಲ್ಲೂ ಇದೇ ತೀರ್ಪನ್ನು ಸುಪ್ರೀಂ ಕೋರ್ಟ್ ಪುನರಾವರ್ತಿಸಿದೆ.

ಕುಟುಂಬದ ಜತೆಗೆ ಸ್ವತಂತ್ರವಾಗಿರುವ ಆಸೆ: ನಳಿನಿ ಅವರು ಇನ್ನು ಮುಂದೆ ತಮ್ಮ ಕುಟುಂಬದವರೊಂದಿಗೆ ಸ್ವತಂತ್ರವಾಗಿ ಇರಲಿದ್ದಾರೆ. ಅದೇ ಅವರಿಗೆ ಮುಖ್ಯ ಎಂದು ಅವರ ಸೋದರ ಭಾಗ್ಯನಾಥನ್ ಹೇಳಿದ್ದಾರೆ.

ರಾಜೀವ್ ಹಂತಕರಲ್ಲಿ ಒಬ್ಬರಾದ ಮುರುಗನ್, ನಳಿನಿ ಅವರ ಪತಿ. ಬಂಧನದ ಸಂದರ್ಭದಲ್ಲಿ ನಳಿನಿ ಗರ್ಭಿಣಿಯಾಗಿದ್ದರು. ಜೈಲಿನಲ್ಲೇ ಅವರಿಗೆ ಹೆರಿಗೆಯಾಗಿತ್ತು. ಐದು ವರ್ಷದವರೆಗೆ ಅವರ ಮಗಳನ್ನು ಜೈಲಿನಲ್ಲೇ ಬೆಳೆಸಲಾಗಿತ್ತು. ಆನಂತರ ಕುಟುಂಬದ ಸದಸ್ಯರ ಸುಪರ್ದಿಗೆ ನೀಡಲಾಗಿತ್ತು.

ನಳಿನಿ ಅವರ ಮಗಳು ಈಗ ಬ್ರಿಟನ್‌ನಲ್ಲಿದ್ದು, ವೈದ್ಯಕೀಯ ಪದವಿ ವ್ಯಾಸಂಗ ಮಾಡುತ್ತಿದ್ದಾರೆ.

ಕಾಂಗ್ರೆಸ್ ಅಸಮಾಧಾನ...

'ರಾಜೀವ್ ಹಂತಕರನ್ನು ಬಿಡುಗಡೆ ಮಾಡುವ ನಿರ್ಧಾರವು ತಪ್ಪು ಮತ್ತು ಅದು ಒಪ್ಪತಕ್ಕದ್ದಲ್ಲ. ಇದನ್ನು ಕಾಂಗ್ರೆಸ್ ಖಂಡಿಸುತ್ತದೆ' ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ ಹೇಳಿದ್ದಾರೆ.

'ಈ ಆದೇಶದ ವಿರುದ್ಧ ಎಲ್ಲಾ ಸ್ವರೂಪದ ಕಾನೂನು ಹೋರಾಟದ ಸಾಧ್ಯತೆಗಳನ್ನು ಪರಿಶೀಲಿಸುತ್ತೇವೆ' ಎಂದು ಪಕ್ಷದ ವಕ್ತಾರ ಅಭಿಷೇಕ್ ಮನು ಸಿಂಘ್ವಿ ಹೇಳಿದ್ದಾರೆ.

'ಸೋನಿಯಾ, ರಾಹುಲ್ ಮತ್ತು ಪ್ರಿಯಾಂಕಾ ಗಾಂಧಿ ಹಂತಕರನ್ನು ಕ್ಷಮಿಸಿದ್ದಾರೆ ಎಂದು ಕಾಂಗ್ರೆಸ್‌ನ ಈ ನಿಲುವನ್ನು ಈಗ ಪ್ರಶ್ನಿಸಲಾಗುತ್ತದೆ. ಈ ವಿಚಾರದಲ್ಲಿ ಸೋನಿಯಾ ಅವರ ಕುಟುಂಬದ ನಿಲುವು ಮತ್ತು ಪಕ್ಷದ ನಿಲುವು ಸಂಪೂರ್ಣ ಭಿನ್ನವಾಗಿವೆ. ಅವರ ನಿಲುವನ್ನು ಪಕ್ಷವು ಹಿಂದೆಯೂ ಒಪ್ಪಿರಲಿಲ್ಲ, ಈಗಲೂ ಒಪ್ಪುವುದಿಲ್ಲ' ಎಂದು ಅವರು ಹೇಳಿದ್ದಾರೆ.

'ಇದು ದೇಶದ ಪ್ರಧಾನಿಯ ಹತ್ಯೆಯ ವಿಚಾರ ಆಗಿರುವ ಕಾರಣ, ಇದು ದೇಶದ ಸಾರ್ವಭೌಮತೆ ಮತ್ತು ಏಕತೆಗೆ ಸಂಬಂಧಿಸಿದ ವಿಚಾರವೂ ಆಗಿದೆ. ಈ ಕಾರಣದಿಂದಲೇ ಹಿಂದಿನ ಸರ್ಕಾರಗಳೂ ಹಂತಕರ ಅವಧಿಪೂರ್ವ ಬಿಡುಗಡೆಯನ್ನು ವಿರೋಧಿಸಿದ್ದವು. ಈಗಿನ ಸರ್ಕಾರವೂ ಅದನ್ನೇ ಮಾಡಿದೆ' ಎಂದು ಅವರು ಹೇಳಿದ್ದಾರೆ.

ಸೋನಿಯಾ ಮನವಿ ಮೇರೆಗೆ ಮಾರ್ಪಾಡು

ನಳಿನಿ ಅವರ ಮರಣದಂಡನೆಯನ್ನು ಜೀವಾವಧಿ ಶಿಕ್ಷೆಯಾಗಿ ಮಾರ್ಪಡಿಸಬೇಕು ಎಂದು ಸೋನಿಯಾ ಗಾಂಧಿ ಅವರು ತಮಿಳುನಾಡಿನ ಅಂದಿನ ರಾಜ್ಯಪಾಲರಿಗೆ ಮನವಿ ಮಾಡಿದ್ದರು. ಆ ಮನವಿಯನ್ನು ಪುರಸ್ಕರಿಸಿದ್ದ ರಾಜ್ಯಪಾಲರು, 2001ರಲ್ಲಿ ಮರಣದಂಡನೆಯನ್ನು ಜೀವಾವಧಿ ಶಿಕ್ಷೆಯಾಗಿ ಮಾರ್ಪಡಿಸಿದ್ದರು.

ಸೋನಿಯಾ ಅವರು ನಳಿನಿ ಅವರನ್ನು ಒಮ್ಮೆ ಭೇಟಿಯಾಗಿ ಮಾತನಾಡಿದ್ದರು. ತಮ್ಮ ತಂದೆಯ ಹಂತಕರನ್ನು ಕ್ಷಮಿಸಿದ್ದೇವೆ ಎಂದು ರಾಹುಲ್ ಮತ್ತು ಪ್ರಿಯಾಂಕಾ ಗಾಂಧಿ ಹಲವು ಬಾರಿ ಹೇಳಿದ್ದಾರೆ.

ಪ್ರಧಾನಿ ಮೋದಿ ಅವರ ನಗರ ಭೇಟಿ ವೇಳೆ ಶುಕ್ರವಾರ ಕೆಂಪೇಗೌಡ ರಸ್ತೆಯಲ್ಲಿ ವಾಹನ ದಟ್ಟಣೆ ಕಂಡುಬಂತು (ಎಡಚಿತ್ರ) ಪ್ರಧಾನಿ ಅವರನ್ನು ಸ್ವಾಗತಿಸಲು ಸೇರಿದ್ದ ಬಿಜೆಪಿ ಕಾರ್ಯಕರ್ತರು – ಪ್ರಜಾವಾಣಿ ಚಿತ್ರಗಳು

ಪ್ರಧಾನಿ ನರೇಂದ್ರ ಮೋದಿ ಭೇಟಿ: ಪರ್ಯಾಯ ಮಾರ್ಗಗಳಲ್ಲಿ ವಾಹನ ದಟ್ಟಣೆ

ಸಂಚಾರ ಬಂದ್: ಜನರ ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರ ಭೇಟಿ ಸಂದರ್ಭದಲ್ಲಿ ಶುಕ್ರವಾರ ನಗರದ ಪ್ರಮುಖ ಮಾರ್ಗಗಳನ್ನು ಬಂದ್ ಮಾಡಿದ್ದರ ಪರಿಣಾಮ ಸಾರ್ವಜನಿಕರು ಹಾಗೂ ವಾಹನ ಸವಾರರು ಸಮಸ್ಯೆಗೆ ಸಿಲುಕಿದರು.

ಮೈಸೂರು-ಚೆನ್ನೈ ನಡುವಣ 'ವಂದೇ ಭಾರತ್ ಎಕ್ಸ್‌ಪ್ರೆಸ್' ಹಾಗೂ 'ಕಾಶಿ ದರ್ಶನ' ವಿಶೇಷ ರೈಲಿಗೆ ಚಾಲನೆ, ವಿಧಾನಸೌಧದ ಆವರಣದಲ್ಲಿ ಕನಕದಾಸರ ಪ್ರತಿಮೆಗೆ ಪುಷ್ಪಾರ್ಚನೆ, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ '2ನೇ ಟರ್ಮಿನಲ್' ಉದ್ಘಾಟನೆ, ನಾಡಪ್ರಭು ಕೆಂಪೇಗೌಡ 108 ಅಡಿ ಎತ್ತರದ ಪ್ರಗತಿಯ ಪ್ರತಿಮೆ ಅನಾವರಣ ಕಾರ್ಯಕ್ರಮದಲ್ಲಿ ನರೇಂದ್ರ ಮೋದಿ ಪಾಲ್ಗೊಂಡಿದ್ದರು.

ಪ್ರಧಾನಿ ಅವರು ಸಂಚರಿಸಿದ ಮಾರ್ಗಗಳಲ್ಲಿ ಬೆಳಿಗ್ಗೆ 6 ಗಂಟೆಯಿಂದಲೇ ವಾಹನಗಳ ಓಡಾಟವನ್ನು ನಿರ್ಬಂಧಿಸಿ, ಪರ್ಯಾಯ ಮಾರ್ಗದಲ್ಲಿ ತೆರಳುವಂತೆ ಸೂಚಿಸಲಾಗಿತ್ತು. ಈ ಮಾರ್ಗಗಳಲ್ಲಿ ಸಿಲುಕಿ ಸವಾರರು ಪರದಾಡಿದರು.

ವ್ಯಾಪಾರ, ದೂರದ ಊರು ಹಾಗೂ ಖಾಸಗಿ ಕಚೇರಿಗಳಿಗೆ ನಿಗದಿತ ಸಮಯಕ್ಕೆ ತೆರಳಲು ಜನರಿಗೆ ಸಾಧ್ಯವಾಗಲಿಲ್ಲ. ಮಾಹಿತಿ ತಿಳಿಯದೇ ಮೆಜೆಸ್ಟಿಕ್ ಕಡೆಗೆ ತೆರಳಲು ಬಂದವರು ಮಾರ್ಗ ಮಧ್ಯದಲ್ಲಿಯೇ ಸಿಲುಕಿದರು.

ಹೆಚ್ಚುವರಿ ಪೊಲೀಸ್ ಆಯುಕ್ತ, ಜಂಟಿ ಆಯುಕ್ತ, 8 ಡಿಸಿಪಿಗಳು, 13 ಎಸಿಪಿಗಳು, 50 ಇನ್‌ಸ್ಪೆಕ್ಟರ್‌ಗಳು ಭದ್ರತೆಯ ಹೊಣೆ ಹೊತ್ತಿದ್ದರು. ಟ್ರಾಫಿಕ್ ಪೊಲೀಸ್, ಕೆಎಸ್‌ಆರ್‌ಪಿ, ಸಿಎಆರ್ ಸಿಬ್ಬಂದಿಯನ್ನೂ ಸೂಕ್ಷ್ಮ ಪ್ರದೇಶಗಳಲ್ಲಿ ಹಾಗೂ ಪ್ರಧಾನಿ ಅವರು ಸಂಚರಿಸಿದ ಮಾರ್ಗಗಳಲ್ಲಿ ಭದ್ರತೆಗೆ ನಿಯೋಜಿಸಲಾಗಿತ್ತು. ಇದರಿಂದ ಪರ್ಯಾಯ ಮಾರ್ಗದಲ್ಲಿ ಸಂಚಾರ ದಟ್ಟಣೆ ನಿಯಂತ್ರಿಸಲು ಪೊಲೀಸರ ಕೊರತೆ ಇತ್ತು.

ಮೇಖ್ರಿ ವೃತ್ತ, ಕಾವೇರಿ ಜಂಕ್ಷನ್, ವಿಂಡ್ಸರ್ ಮ್ಯಾನರ್, ರಮಣ ಮಹರ್ಷಿ ರಸ್ತೆ, ಬಸವೇಶ್ವರ ವೃತ್ತ, ಶಾಸಕರ ಭವನ, ಉದ್ಯೋಗ ಸೌಧ (ಕೆಪಿಎಸ್‌ಸಿ ಕಚೇರಿ), ಶೇಷಾದ್ರಿ ರಸ್ತೆ, ಆನಂದರಾವ್ ವೃತ್ತ ಮೇಲ್ಸೇತುವೆ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವೃತ್ತ ಹಾಗೂ ಸುತ್ತಮುತ್ತ ರಸ್ತೆಗಳಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿತ್ತು. ಈ ರಸ್ತೆಗಳಲ್ಲಿ ಮಧ್ಯಾಹ್ನ 3 ಗಂಟೆಯ ತನಕವೂ ಇದೇ ಪರಿಸ್ಥಿತಿ ನಿರ್ಮಾಣವಾಗಿತ್ತು.

ಕೆಂಪೇಗೌಡ ಪ್ರತಿಮೆ ಬಳಿ ನಡೆದ ಸಮಾರಂಭಕ್ಕೆ ಕರೆದೊಯ್ಯಲು ನೂರಾರು ಸಂಖ್ಯೆಯಲ್ಲಿ ಬಿಎಂಟಿಸಿ ಹಾಗೂ ಕೆಎಸ್‌ಆರ್‌ಟಿಸಿ ಬಸ್‌ಗಳನ್ನು ಪಡೆಯಲಾಗಿತ್ತು. ವಿವಿಧ ಕ್ಷೇತ್ರಗಳಿಂದ ಕಾರ್ಯಕರ್ತರನ್ನು ಬಸ್‌ಗಳು ಕರೆದೊಯ್ದವು. ಇದರಿಂದ ನಗರದ ಹಲವು ಕಡೆಗೆ ಬಿಎಂಟಿಸಿ ಬಸ್‌ಗಳ ಸಂಚಾರ ಸೇವೆ ಇರಲಿಲ್ಲ. ಇದರಿಂದಾಗಿಯೂ ಪ್ರಯಾಣಿಕರು ಪರದಾಡಿದರು.

ಬಾಳೇಕುಂದ್ರಿ ಜಂಕ್ಷನ್‌ನಿಂದ ಮೆಜೆಸ್ಟಿಕ್ ಕಡೆಗೆ ಸಂಚರಿಸುವವರು, ಕನ್ನಿಂಗ್ ಹ್ಯಾಂ ರಸ್ತೆ ಮೂಲಕ ತೆರಳುವಂತೆ ಸೂಚಿಸಲಾಗಿತ್ತು. ಅಲ್ಲಿ ಕಿರಿದಾದ ರಸ್ತೆಯಲ್ಲಿ ವಾಹನ ದಟ್ಟಣೆ ಉಂಟಾಗಿತ್ತು. ಮೈಸೂರು ಬ್ಯಾಂಕ್ ವೃತ್ತದಿಂದ ಅರಮನೆ ರಸ್ತೆಗೆ ಹೋಗುವ ವಾಹನಗಳು, ಕೆಂಪೇಗೌಡ ರಸ್ತೆಯ ಮೂಲಕ ತೆರಳಿದವು.

ಬಿಇಎಲ್ ವೃತ್ತದಿಂದ ಮೇಖ್ರಿ ವೃತ್ತದ ಕಡೆಗೆ ಹೋಗುವವರು, ಸದಾಶಿವನಗರ ಪೊಲೀಸ್ ಠಾಣೆ-ಮಾರಮ್ಮ ದೇವಸ್ಥಾನ ವೃತ್ತ-ಮಾರ್ಗೋಸಾ ರಸ್ತೆ ಮೂಲಕ ಸಂಚರಿಸಲು ಅವಕಾಶ ನೀಡಲಾಗಿತ್ತು. ಯಶವಂತಪುರ ಸೇರಿ ಮತ್ತಿತರ ಕಡೆಯಿಂದ ದೊಡ್ಡ ಸಂಖ್ಯೆಯಲ್ಲಿ ವಾಹನಗಳು ಬಂದು ದಟ್ಟಣೆ ಉಂಟಾಗಿತ್ತು.

ಕಾರ್ಯಕರ್ತರ ಹರ್ಷೋದ್ಗಾರ: ಹುರಿದುಂಬಿಸಿದ ಮೋದಿ

ಬೆಂಗಳೂರು: 'ಪ್ರಗತಿ ಪ್ರತಿಮೆ' ಅನಾವರಣ ಸೇರಿ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ನಗರಕ್ಕೆ ಶುಕ್ರವಾರ ಆಗಮಿಸಿದ್ದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಬಿಜೆಪಿ ಕಾರ್ಯಕರ್ತರು ಉತ್ಸಾಹದಿಂದ ಸ್ವಾಗತಿಸಿದರು.

ರಸ್ತೆಯ ಇಕ್ಕೆಲಗಳಲ್ಲಿ ಸೇರಿದ್ದ ಕಾರ್ಯಕರ್ತರು 'ಮೋದಿ ಮೋದಿ' ಎಂದು ಜೈಕಾರ ಹಾಕಿದರು. ಬೆಳಿಗ್ಗೆ 9ಕ್ಕೆ ಭಾರತೀಯ ವಾಯು ಪಡೆಯ ವಿಶೇಷ ವಿಮಾನದ ಮೂಲಕ ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಬಂದಿಳಿದ ಪ್ರಧಾನಿ ಅವರನ್ನು ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಸೇರಿ ಹಲವು ಸಚಿವರು ಸ್ವಾಗತಿಸಿದರು.

ಎಚ್‌ಎಎಲ್ ವಿಮಾನ ನಿಲ್ದಾಣದಿಂದ ಹೊರಟ ಅವರು ಮೊದಲು ಶಾಸಕರ ಭವನದ ಆವರಣದಲ್ಲಿನ ಸಂತ ಕನಕದಾಸ ಮತ್ತು ಮಹರ್ಷಿ ವಾಲ್ಮೀಕಿ ಪ್ರತಿಮೆಗಳಿಗೆ ಪುಷ್ಪಾರ್ಚನೆ ಮಾಡಿದರು. ನಂತರ ವಿಧಾನಸೌಧ ಬಳಿಯ ಕರ್ನಾಟಕ ಉದ್ಯೋಗಸೌಧದ ಬಳಿ ಪ್ರಧಾನಿ ಬಿಜೆಪಿ ಕಾರ್ಯಕರ್ತರು ಮತ್ತು ಬೆಂಬಲಿಗರತ್ತ ಕೈಬೀಸಿದರು. ಅಲ್ಲಿ, ಕಾರ್ಯಕರ್ತರ ಹರ್ಷೋದ್ಗಾರ ಮುಗಿಲುಮುಟ್ಟಿತ್ತು.

ನಂತರ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದಲ್ಲಿ 'ವಂದೇ ಭಾರತ್' ರೈಲು ಉದ್ಘಾಟನೆಗೂ ಮೊದಲು ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿಯೂ ಕಾರಿನಿಂದ ಇಳಿದು ಕಾರ್ಯಕರ್ತರತ್ತ ಕೈಬೀಸಿದರು. ಕಾರ್ಯಕರ್ತರು ಪಕ್ಷದ ಬಾವುಟಗಳನ್ನು ಪ್ರದರ್ಶಿಸಿದರು. 'ಕ್ರಿಯಾಶೀಲ ಬೆಂಗಳೂರಿನ ಭೇಟಿಯನ್ನು ಸ್ಮರಣೀಯವಾಗಿಸಿದ್ದಕ್ಕೆ ಧನ್ಯವಾದಗಳು' ಎಂದು ಮೋದಿ ಟ್ವೀಟ್ ಮಾಡಿದ್ದಾರೆ.

ನಡೆದು ಸಾಗಿದರು...

ಪ್ರಧಾನಿ ಮೋದಿ ಭೇಟಿ ವೇಳೆ ಬಸ್ ಹಾಗೂ ಖಾಸಗಿ ವಾಹನ ನಿರ್ಬಂಧಿಸಿದ್ದರಿಂದ ಪ್ರಯಾಣಿಕರು ನಡೆದು ಸಾಗುತ್ತಿದ್ದ ದೃಶ್ಯ ಕಂಡುಬಂತು. ಮಕ್ಕಳು ಸಹ ರಸ್ತೆ ಬದಿಯಲ್ಲಿ ಕಾಲ್ನಡಿಗೆಯಲ್ಲಿ ಸಾಗಿದರು.

ಆಟೊ ಚಾಲಕರು ಬಾಡಿಗೆ ಸಿಗಲಿಲ್ಲ ಎಂದು ನೋವು ತೋಡಿಕೊಂಡರು. 'ಎಲ್ಲ ಮಾರ್ಗ ಬಂದ್ ಮಾಡಿ ನಮ್ಮ ದುಡಿಮೆ ಕಿತ್ತುಕೊಳ್ಳಲಾಗಿದೆ' ಎಂದು ಕಣ್ಣೀರು ಹಾಕಿದರು. ಈ ಮಾರ್ಗದಲ್ಲಿ ಬೀದಿ ಬದಿ ವ್ಯಾಪಾರಿಗಳನ್ನು ತೆರವುಮಾಡಲಾಗಿತ್ತು.

ನಾಡಪ್ರಭು ಕೆಂಪೇಗೌಡರ ಪ್ರತಿಮೆ ಲೋಕಾರ್ಪಣೆ ಮತ್ತು ವಿಮಾನ ನಿಲ್ದಾಣದಲ್ಲಿನ ಟರ್ಮಿನಲ್–2 ಉದ್ಘಾಟನಾ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸನ್ಮಾನಿಸಿದರು. ಸಚಿವರಾದ ಕೆ.ಸುಧಾಕರ್, ಅಶ್ವತ್ಥನಾರಾಯಣ, ಆರ್.ಅಶೋಕ ಹಾಗೂ ವಿ.ಸೋಮಣ್ಣ ಇದ್ದಾರೆ –ಪ್ರಜಾವಾಣಿ ಚಿತ್ರ

'ಕೆಂಪೇಗೌಡರ ಕನಸಿನಂತೆ ಅಭಿವೃದ್ಧಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾಡಪ್ರಭು ಕೆಂಪೇಗೌಡರ ಚಿಂತನೆ ಮತ್ತು ಆಶಯಗಳಂತೆ ರಾಜ್ಯವನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯುವ ಸಂಕಲ್ಪ ಮಾಡಿದ್ದೇವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಭುವನಹಳ್ಳಿಯಲ್ಲಿ ನಡೆದ ಸಮಾರಂಭದಲ್ಲಿ ಮಾತನಾಡಿದ ಅವರು, 'ಶತಮಾನಗಳ ಹಿಂದೆಯೇ ಬೆಂಗಳೂರಿಗರಿಗೆ ವಿಜಯನಗರ ಸಾಮ್ರಾಜ್ಯದ ಅಭಿವೃದ್ಧಿಯ ಪರಿಕಲ್ಪನೆಯನ್ನು ಅವರು ಪರಿಚಯಿಸಿದ್ದರು. ಸರ್ಕಾರವೂ ಅದೇ ಹಾದಿಯಲ್ಲಿ ಸಾಗುವ ಸಂಕಲ್ಪ ಮಾಡಿದೆ' ಎಂದರು.

ಪ್ರಧಾನಿ ಮೋದಿಯವರೂ ರಾಜ್ಯದ ಅಭಿವೃದ್ಧಿಗೆ ಬೆಂಗಾವಲಾಗಿ ನಿಂತಿದ್ದಾರೆ. ಮಹತ್ವದ ಕೊಡುಗೆ ನೀಡುತ್ತಿದ್ದಾರೆ. ವಂದೇ ಭಾರತ್ ರೈಲು ಮತ್ತು ಎರಡನೆ ಟರ್ಮಿನಲ್ ಈಗ ಅವರು ನೀಡಿರುವ ದೊಡ್ಡ ಕೊಡುಗೆಗಳು ಎಂದು ಹೇಳಿದರು.

ಶಿಷ್ಟಾಚಾರ ಉಲ್ಲಂಘನೆ– ಶಾಸಕ ಟೀಕೆ

ದೇವನಹಳ್ಳಿ: 'ನಾಡಪ್ರಭು ಕೆಂಪೇಗೌಡರ ಪ್ರಗತಿ ಪ್ರತಿಮೆ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನನ್ನಿಂದ ಕಸಿದುಕೊಂಡು ಹಕ್ಕುಚ್ಯುತಿ ಮಾಡಿದ್ದಾರೆ' ಎಂದು ದೇವನಹಳ್ಳಿ ಜೆಡಿಎಸ್ ಶಾಸಕ ನಿಸರ್ಗ ನಾರಾಯಣಸ್ವಾಮಿ ಆರೋಪಿಸಿದ್ದಾರೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಶಾಸಕ ಸ್ಥಾನಕ್ಕೆ ಉಂಟಾಗಿರುವ ಹಕ್ಕುಚ್ಯುತಿಗೆ ಸಂಬಂಧಿಸಿದಂತೆ ಕಾನೂನಾತ್ಮಕವಾಗಿ ಶಾಸಕಾಂಗದಿಂದ ನ್ಯಾಯ ಪಡೆದುಕೊಳ್ಳುತ್ತೇನೆ' ಎಂದರು.

ಕಾರ್ಯಕ್ರಮ ಮುಗಿಯುವ ವೇಳೆಗೆ ಆಹ್ವಾನ ಪತ್ರಿಕೆಯನ್ನು ಗ್ರಾಮ ಪಂಚಾಯಿತಿಯ ಪೌರ ಕಾರ್ಮಿಕರೊಬ್ಬರ ಕೈಯಲ್ಲಿ ಕಳುಹಿಸಲಾಗಿತ್ತು. ಆತ ರಸ್ತೆಯಲ್ಲಿಯೇ ಆಹ್ವಾನ ಪತ್ರಿಕೆ ನೀಡಲು ಮುಂದಾಗಿದ್ದ. ಇಷ್ಟರ ಮಟ್ಟಿಗೆ ಬಿಜೆಪಿ ಸರ್ಕಾರ ಜನಪ್ರತಿನಿಧಿಯನ್ನು ಗೌರವಿಸುತ್ತಿದೆ ಎಂದರು.

ನವೋದ್ಯಮದಿಂದ ದೇಶ ಗೆದ್ದಿದೆ: ಮೋದಿ

ಬೆಂಗಳೂರು: 'ಭಾರತದ ನವೋದ್ಯಮಗಳ ಶಕ್ತಿ ಬೆಂಗಳೂರು ನಗರದಲ್ಲಿದೆ. ಈ ಶಕ್ತಿಯೇ ದೇಶವನ್ನು ಇತರ ರಾಷ್ಟ್ರಗಳ ಎದುರು ಗೆಲ್ಲಿಸಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಹೇಳಿದರು.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪ ಸಮಾರಂಭದಲ್ಲಿ ಮಾತನಾಡಿದ ಅವರು, 'ನವೋದ್ಯಮದಲ್ಲಿ ಹೊಸತನ್ನು ಸೃಷ್ಟಿಸುವ ಅಪರಿಮಿತ ವಿಶ್ವಾಸವಿದೆ. ಬೆಂಗಳೂರಿನ ಯುವಜನರ ಈ ವಿಶ್ವಾಸವೇ ದೇಶಕ್ಕೆ ಹೊಸ ಅವಕಾಶಗಳನ್ನು ತೆರೆದಿದೆ' ಎಂದರು.

ಕೋವಿಡ್ ಕಾಲದಲ್ಲಿ ₹ 4 ಲಕ್ಷ ಕೋಟಿ ಹೂಡಿಕೆ ಕರ್ನಾಟಕಕ್ಕೆ ಹರಿದುಬಂದಿದೆ. ಕಳೆದ ವರ್ಷ ವಿದೇಶ ನೇರ ಬಂಡವಾಳ ಆಕರ್ಷಣೆಯಲ್ಲಿ ರಾಜ್ಯ ಇಡೀ ದೇಶಕ್ಕೆ ಮಾದರಿಯಾಗಿತ್ತು. ಎಲ್ಲ ಕ್ಷೇತ್ರಗಳಲ್ಲೂ ಕರ್ನಾಟಕಕ್ಕೆ ಹೂಡಿಕೆ ಹರಿದುಬರುತ್ತಿದೆ. ರಕ್ಷಣಾ ಇಲಾಖೆಯ ಯುದ್ಧ ವಿಮಾನಗಳು ಮತ್ತು ಹೆಲಿಕಾಪ್ಟರ್‌ಗಳ ಪೈಕಿ ಶೇಕಡ 70ರಷ್ಟು ಇಲ್ಲಿಯೇ ಉತ್ಪಾದನೆಯಾಗುತ್ತಿವೆ ಎಂಬುದು ಹೆಮ್ಮೆಯ ಸಂಗತಿ ಎಂದು ಶ್ಲಾಘಿಸಿದರು. ಭೀಮ್ ಯುಪಿಐ, 5–ಜಿ ತಂತ್ರಜ್ಞಾನ ಸೇರಿ ಹಲವು ಕನಸುಗಳನ್ನು ಬೆಂಗಳೂರು ಸಾಕಾರಗೊಳಿಸಿದೆ. ನಗರ ನಿರ್ಮಾತೃ ಕೆಂಪೇಗೌಡರ ದೂರದೃಷ್ಟಿ ಈಗಲೂ ಫಲ ನೀಡುತ್ತಿದೆ ಎಂದರು.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ, 'ಎ.ಬಿ ವಾಜಪೇಯಿ ಪ್ರಧಾನಿಯಾಗಿದ್ದಾಗ ಮೊದಲ ಟರ್ಮಿನಲ್ ಕೊಡುಗೆ ನೀಡಿದ್ದರು. ಈಗ ಪ್ರಧಾನಿ 2ನೇ ಟರ್ಮಿನಲ್ ನೀಡಿದ್ದಾರೆ' ಎಂದು ಹೇಳಿದರು.

ಚಿತ್ರಗಳಲ್ಲಿ 'ಭಾರತ್ ಜೋಡೊ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದ 'ಭಾರತ್ ಜೋಡೊ ಯಾತ್ರೆ' ಬೆಂಬಲಿಸಿ ನಗರದ ಜನಸ್ಪಂದನ, ಬೀ ಕಲ್ಚರ್ ಸಂಸ್ಥೆಗಳು ಗುರುವಾರ ಹಮ್ಮಿಕೊಂಡಿದ್ದ ಚಿತ್ರಕಲೆಗಳ ಪ್ರದರ್ಶನ 'ದಿ ರಿನೈಸಾನ್ಸ್' ಜನಮನ ಸೆಳೆಯಿತು.

'ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಒಬ್ಬ ನಾಯಕ ಹೇಗಿರಬೇಕು ಎನ್ನುವುದನ್ನು ರಾಹುಲ್ ಗಾಂಧಿ ಅವರು ಪಾದಯಾತ್ರೆ ಮೂಲಕ ತೋರಿಸಿದ್ದಾರೆ. ರಾಹುಲ್ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೂ ನಡೆಯುತ್ತಿದ್ದಾರೆ. ಜಾತಿ, ಧರ್ಮ, ಸಾಮಾಜಿಕ ಅಂತರದ ಭೇದವಿಲ್ಲದೇ ಎಲ್ಲರನ್ನೂ ಅಪ್ಪಿಕೊಳ್ಳುತ್ತಿದ್ದಾರೆ. ಅದನ್ನು ಬೆಂಬಲಿಸಿ ಪ್ರದರ್ಶನ ಆಯೋಜಿಸುತ್ತಿದ್ದೇವೆ' ಎಂದು ಸಂಘಟಕ ದಿಲಾವರ್ ರಾಮದುರ್ಗ ತಿಳಿಸಿದರು.

ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಬದಲಾವಣೆಗಳಿಗೆ ಸಜ್ಜಾಗಬೇಕಿದೆ. ಇದಕ್ಕೆ ಪೂರಕವಾಗಿ ಭಾರತ್ ಜೋಡೊ ಯಾತ್ರೆ ಪುನರುತ್ಥಾನ ಉತ್ತಮ ಆರಂಭ ಒದಗಿಸಿದೆ. ಜೋಡೊ ನಡಿಗೆಯ ಕ್ಷಣಗಳನ್ನೇ ಆಧಾರವಾಗಿ ಇಟ್ಟುಕೊಂಡು ಚಿತ್ರಗಳನ್ನು ರಚಿಸಲಾಗಿದೆ. ಇದರಲ್ಲಿ ರಾಜಕೀಯ ಇಲ್ಲ. ಮನುಷ್ಯತ್ವದ ರಾಜಕಾರಣಕ್ಕೆ ಬೆಂಬಲವಷ್ಟೇ ಎಂದು ವಿವಿಧ ಕಲಾವಿದರು ಚಿತ್ರಕಲೆಗಳ ಕುರಿತು ವಿವರಿಸಿದರು.

23 ಕಲಾವಿದರ ಚಿತ್ರಗಳು ಪ್ರದರ್ಶನದಲ್ಲಿದ್ದವು. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಚಾಲನೆ ನೀಡಿದರು. ಡಾ.ಸಿ.ಎಸ್.ದ್ವಾರಕಾನಾಥ್, ಟುಡಾ ಶಶಿಧರ್, ಸಸಿಕಾಂತ್ ಸೆಂಥಿಲ್, ದೊಡ್ಡಿಪಾಳ್ಯ ನರಸಿಂಹಮೂರ್ತಿ, ಎಸ್. ವಿಷ್ಣುಕುಮಾರ್, ಚಕ್ರವರ್ತಿ ಪ್ರದರ್ಶನ ವೀಕ್ಷಿಸಿದರು.

ಬೆಂಗಳೂರಿನ ಚಿತ್ರಕಲಾ ಪರಿಷತ್‌ನಲ್ಲಿ ಗುರುವಾರ ಜನಸ್ಪಂದನ, ಬೀ ಕಲ್ಚರ್ ಸಂಸ್ಥೆಗಳು 'ಭಾರತ್ ಜೋಡೊ ಯಾತ್ರೆ' ಬೆಂಬಲಿಸಿ ಹಮ್ಮಿಕೊಂಡಿದ್ದ ಚಿತ್ರಕಲೆಗಳ ಪ್ರದರ್ಶನವನ್ನು ಸಾರ್ವಜನಿಕರು ವೀಕ್ಷಿಸಿದರು.

ಕೋಲ್ಕತ್ತ ರೇಸ್

ಫುಲ್ ವಾಲ್ಯೂಮ್ ಗೆಲ್ಲುವ ನಿರೀಕ್ಷೆ

ಆರ್.ಡಬ್ಲ್ಯು.ಐ.ಟಿ.ಸಿ ಕಪ್ ಶನಿವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಫುಲ್ ವಾಲ್ಯೂಮ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಅವರ್ ವಾಯ್ಸ್ 2, ಬ್ಯೂಟಿಫುಲ್ 5, ಲಯನ್ ಕ್ವೀನ್ 6
2ನೇ ರೇಸ್: ಥರ್ಡ್ ಅವೆನ್ಯೂ 3, ಸರ್ಕಲ್ ಆಫ್ ಲವ್ 5, ಗೇಲನ್ 1
3ನೇ ರೇಸ್: ಹಾರ್ವೆಸ್ಟ್ ಟೈಮ್ 3, ಸ್ವಾಮ್‌ವಾಚ್ 6, ಒಡಿನ್ 7
4ನೇ ರೇಸ್: ಕ್ವೀನ್ಸ್ಟನ್ 2, ಅರೇಬಿಯನ್ ಕ್ವೀನ್ 7, ಡಿವೈನ್ ಹಂಟ್ 4
5ನೇ ರೇಸ್: ಫುಲ್ ವಾಲ್ಯೂಮ್ 5, ಅನಸ್ತೇಸಿಯಾ 6, ಮಾನ್‌ಫೋರ್ಟಿನೊ 3
6ನೇ ರೇಸ್: ಐಲ್ಯಾಂಡ್ ಲಾಸ್ 4, ಜಿನ್‌ಸೊಕು 5, ಡ್ರೀಮ್ ಚೇಸರ್ 1

ಉತ್ತಮ ಬೆಟ್: ಐಲ್ಯಾಂಡ್ ಲಾಸ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

'ವಂದೇ ಭಾರತ್, ಭಾರತ್ ಗೌರವ್'ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹತ್ವಾಕಾಂಕ್ಷೆಯ 'ವಂದೇ ಭಾರತ್' ಎಕ್ಸ್‌ಪ್ರೆಸ್ ಮತ್ತು 'ಭಾರತ್ ಗೌರವ್' ಕಾಶಿ ದರ್ಶನ ರೈಲಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಚಾಲನೆ ನೀಡಿದರು.

ಮೈಸೂರು–ಬೆಂಗಳೂರು–ಚೆನ್ನೈ ನಡುವೆ ಬುಧವಾರ ಹೊರತುಪಡಿಸಿ ವಾರದ ಆರು ದಿನ ವಂದೇ ಭಾರತ್ ಎಕ್ಸ್‌ಪ್ರೆಸ್ ಸಂಚರಿಸಲಿದೆ. ಈ ರೈಲು, ಗಂಟೆಗೆ 160 ಕಿ.ಮೀ ವೇಗದಲ್ಲಿ ಸಂಚರಿಸುವ ಸೆಮಿ–ಹೈಸ್ಪೀಡ್ ಎಂಜಿನ್ ಹೊಂದಿದೆ.

ಎಂಟು ದಿನದ ಕಾಶಿ ದರ್ಶನದ ರೈಲು ವಾರಾಣಸಿ, ಪ್ರಯಾಗರಾಜ್, ಅಯೋಧ್ಯೆ ಸೇರಿ ಹಲವು ಕ್ಷೇತ್ರಗಳಿಗೆ ಯಾತ್ರಿಕರ ಒಯ್ಯಲಿದೆ. ಮುಜರಾಯಿ ಇಲಾಖೆ ಸಹಯೋಗದಲ್ಲಿ ಯಾತ್ರೆ ಆಯೋಜಿಸಲಾಗಿದೆ. ಯಾತ್ರೆಗೆ ₹20 ಸಾವಿರ ವೆಚ್ಚವಾಗಲಿದ್ದು, ₹5 ಸಾವಿರ ಸಹಾಯಧನ ಸಿಗಲಿದೆ. ಆಹಾರ, ವಸತಿ ಸೌಕರ್ಯವೂ ಈ ಪ್ಯಾಕೇಜ್‌ನಲ್ಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

14 ಬೋಗಿಗಳ ರೈಲು (06553), ಶುಕ್ರವಾರ ಬೆಳಿಗ್ಗೆ 10.33ಕ್ಕೆ ಹೊರಟಿದ್ದು, ನ.13ರ ಸಂಜೆ 4 ಗಂಟೆಗೆ ಬನಾರಸ್ ತಲುಪಲಿದೆ. ಬೀರೂರು, ದಾವಣಗೆರೆ, ಹುಬ್ಬಳ್ಳಿ, ಪುಣೆ, ಮೀರಜ್ ಮೂಲಕ ತೆರಳಲಿದೆ. ಅಯೋಧ್ಯೆ ಮತ್ತು ಪ್ರಯಾಗರಾಜ್‌ನಲ್ಲೂ ನಿಲುಗಡೆ ಇದೆ.

ನಿಗದಿತ ಬೆಳಿಗ್ಗೆ 10.20ಕ್ಕೆ ಮೊದಲೇ ಕೆಎಸ್‌ಆರ್ ರೈಲು ನಿಲ್ದಾಣಕ್ಕೆ ಆಗಮಿಸಿದ ಪ್ರಧಾನಿ ಮೋದಿ, 10.05ಕ್ಕೆ ಉದ್ಘಾಟಿಸಿದರು. ಅದಕ್ಕೂ ಮುನ್ನ ಪ್ಲಾಟ್‌ಫಾರ್ಮ್ ನಂಬರ್ 7ರಲ್ಲಿ ನಿಲ್ಲಿಸಿದ್ದ ರೈಲಿನ ಒಳಗೆ ಪ್ರವೇಶಿಸಿ ಪರಿಶೀಲಿಸಿದರು. ಲೋಕೊ ಪೈಲಟ್‌ಗಳಿಗೆ ಶುಭ ಕೋರಿದರು.

ವಂದೇ ಭಾರತ್ ರೈಲಿನಂತೆ ದೇಶ ಕೂಡ ವೇಗವಾಗಿ ತಡೆ ರಹಿತವಾಗಿ ಸಾಗಲಿದೆ. ಈ ರೈಲು ದೇಶದ ಅಭಿವೃದ್ಧಿಯ ವೇಗದ ಸಂಕೇತ' ಎಂದು ದೇವನಹಳ್ಳಿ ಬಳಿ ನಡೆದ ಸಾರ್ವಜನಿಕ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ರಕ್ತದಾನದ ಮಹತ್ವ: ಹೆಚ್ಚಿನ ಜಾಗೃತಿ ಅಗತ್ಯ

ಪ್ರಜಾವಾಣಿ ವಾರ್ತೆ

ನೆಲಮಂಗಲ: 'ಕೋವಿಡ್ ಕಾರಣದಿಂದ ರಕ್ತದಾನ ಶಿಬಿರ ಹಮ್ಮಿಕೊಳ್ಳಲು ಆಗಿರಲಿಲ್ಲ. ಇಂದಿನ ಶಿಬಿರದಲ್ಲಿ 113 ಯುನಿಟ್ ರಕ್ತ ಸಂಗ್ರಹವಾಗಿದೆ' ಎಂದು ಸರ್ಟೋರಿಯಸ್ ಕಂಪನಿಯ ಮುಖ್ಯ ಆಡಳಿತಾಧಿಕಾರಿ ಕೆ.ಇ.ನಾಗರಾಜ್ ತಿಳಿಸಿದರು.

ಸರ್ಟೋರಿಯಸ್ ಕಂಪನಿಯು ರೆಡ್‌ಕ್ರಾಸ್ ಸಂಸ್ಥೆ ಸಹಯೋಗದಲ್ಲಿ ನಡೆದ ರಕ್ತದಾನ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಆರೋಗ್ಯ ತುರ್ತನ್ನು ಸಾಧ್ಯವಾದಷ್ಟೂ ಕಡಿಮೆ ಮಾಡುವುದೇ ಶಿಬಿರದ ಉದ್ದೇಶ ಎಂದರು.

ಉತ್ಪಾದನಾಧಿಕಾರಿ ಎನ್.ಅನಿತಾ, 'ರಕ್ತದಾನದಿಂದ ಆರೋಗ್ಯ ವೃದ್ಧಿಸುತ್ತದೆ. ಗಂಡಸರು ಪ್ರತಿ 3 ತಿಂಗಳಿಗೆ, ಹೆಂಗಸರು ಪ್ರತಿ 4 ತಿಂಗಳಿಗೆ ದಾನ ಮಾಡಬಹುದು' ಎಂದರು. ಅಧಿಕಾರಿಗಳಾದ ಶ್ರೀಧರ್, ಆರ್.ಮಂಜುನಾಥ್, ಮಹದೇವ್ ಗುಂಡಪ್ಪ ಇದ್ದರು.

ಅಧಿಕಾರಿಗಳಾದ ಎನ್.ಅನಿತಾ, ಆರ್. ಮಂಜುನಾಥ್ ರಕ್ತದಾನ ಮಾಡಿದರು. ಮುಖ್ಯ ಆಡಳಿತಾಧಿಕಾರಿ ನಾಗರಾಜ್ ಇದ್ದಾರೆ.

'ದಾಸ ಪರಂಪರೆ ಶ್ರೇಷ್ಠಸಂತ ಕನಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಾಸ ಪರಂಪರೆಯಲ್ಲಿ ಕನಕದಾಸರು ಶ್ರೇಷ್ಠರು. ನೋವು, ನಲಿವನ್ನು ಒಂದೇ ರೀತಿ ಸ್ವೀಕರಿಸಿದ್ದರು ಎಂದು ಬಿಜೆಪಿ ರಾಜ್ಯ ಪ್ರಕೋಷ್ಠಗಳ ಸಂಯೋಜಕ ಎಂ.ಬಿ. ಭಾನುಪ್ರಕಾಶ್ ಶುಕ್ರವಾರ ಸ್ಮರಿಸಿದರು.

ಬಿಜೆಪಿ ಕಾರ್ಯಾಲಯದಲ್ಲಿ ನಡೆದ ಕನಕದಾಸರ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. 'ಕನಕದಾಸರು ಶ್ರೇಷ್ಠ ಸಂತರು. ಜೀವನದಲ್ಲಿ ಧ್ಯೇಯ- ಸತ್ಯ ಮಾರ್ಗವನ್ನು ಬಿಡಬಾರದು ಎಂಬ ಸಂದೇಶ ಅವರು ನೀಡಿದ್ದಾರೆ ಎಂದು ಹೇಳಿದರು.

ಬಿಜೆಪಿ ರಾಜ್ಯ ಉಪಾಧ್ಯಕ್ಷ ನಿರ್ಮಲ್ ಕುಮಾರ್ ಸುರಾನ, ರಾಜ್ಯ ಪ್ರಧಾನ ಕಾರ್ಯದರ್ಶಿ ಸಿದ್ದರಾಜು ಲೋಕೇಶ್ ಅಂಬೆಕಲ್ಲು ಇದ್ದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿ ಅಭಿಮತ

'ಸಮಾಜ ಒಗ್ಗೂಡಲು ದಾಸ ಸಾಹಿತ್ಯ ಸಹಕಾರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಾಸ ಸಾಹಿತ್ಯ ಇಡೀ ಸಮಾಜವನ್ನು ಒಗ್ಗೂಡಿಸುವ ಆಶಯ ಹೊಂದಿದೆ. ಜನಸಾಮಾನ್ಯರಲ್ಲಿ ಧರ್ಮದ ವಿಷಯ ಬೇರೂರಲು ದಾಸ ಸಾಹಿತ್ಯದ ಪ್ರಚಾರ ಆಗಬೇಕು' ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿ ಶುಕ್ರವಾರ ತಿಳಿಸಿದರು.

ರಾಷ್ಟ್ರೀಯ ವೇದವಿಜ್ಞಾನ ಸಂಸ್ಥೆ ಟ್ರಸ್ಟ್ ನಗರದಲ್ಲಿ ಹಮ್ಮಿಕೊಂಡಿದ್ದ 5ನೇ ಅಖಿಲ ಭಾರತ ಹರಿದಾಸ ಸಾಹಿತ್ಯ ಸಮ್ಮೇಳನದಲ್ಲಿ ಅವರು ಮಾತನಾಡಿದರು. 'ಉಪನಿಷತ್ತು ತಿಳಿಯಲು ಆಗದವರಿಗೆ ದಾಸ ಸಾಹಿತ್ಯ ಜ್ಞಾನದ ಮಾರ್ಗವಾಗಿದೆ. ಇದು, ಸಮಸ್ತರಿಗೂ ಅರ್ಥ ಆಗುತ್ತದೆ. ಕನ್ನಡ ಭಾಷೆಯ ಎಲ್ಲ ಪ್ರಾಂತ್ಯಗಳನ್ನು ತಲುಪಲು ದೊಡ್ಡ ಆಂದೋಲನ ನಡೆಸಬೇಕು' ಎಂದರು.

ಹೈಕೋರ್ಟ್‌ನ ನಿವೃತ್ತ ನ್ಯಾ. ಆರ್. ಗುರುರಾಜನ್, 'ಹರಿದಾಸ ಸಾಹಿತ್ಯ ಸಮ್ಮೇಳನವು ಬೆಂಗಳೂರಿಗೆ ಸೀಮಿತ ಆಗಬಾರದು. ಹೊರ ಜಿಲ್ಲೆಗಳಲ್ಲಿಯೂ ನಡೆಸಬೇಕು. ದಾಸರು ಎಲ್ಲರಿಗೂ ಬೇಕು. ಶ್ರೀಪಾದರಾಜ ಮಠದ ಸುಜಯನಿಧಿತೀರ್ಥ ಸ್ವಾಮೀಜಿ ನೇತೃತ್ವದಲ್ಲಿ ಭಕ್ತಿ ಚಳವಳಿ ನಡೆಸಬೇಕು' ಎಂದರು.

ತಲೆಗೆ ಆಹಾರ ನೀಡಬೇಕು: ವಿದ್ವಾಂಸ ಮೋಹನ ಆಚಾರ್, 'ಮಠಗಳು ಕೇವಲ ಹೊಟ್ಟೆ ತುಂಬಿಸುವ ಕೆಲಸವನ್ನು ಮಾಡಬಾರದು. ತಲೆಯನ್ನೂ ತುಂಬಿಸಬೇಕು. ವೇದ ವೇದಾಂತದ ಬಗ್ಗೆ ಅಧ್ಯಯನ ನಡೆಸುವ ಪಾಠಶಾಲೆಗಳು ಅಗತ್ಯವಿದೆ' ಎಂದರು.

ರಾಷ್ಟ್ರೀಯ ವೇದ ವಿಜ್ಞಾನ ಸಂಸ್ಥೆಯ ಅಧ್ಯಕ್ಷ ಅರಳುಮಲ್ಲಿಗೆ ಪಾರ್ಥಸಾರಥಿ ಅವರು, 'ಕೀರ್ತನೆಗಳು ವಾಸ್ತವದ ನೆಲೆಗಟ್ಟಿನಲ್ಲಿ ನಿಂತಿದ್ದು, ಅದಕ್ಕೆ ದಾಖಲೆ ಇದೆ. ಹರಿದಾಸರ ಕೀರ್ತನೆಗಳ ಬಗ್ಗೆ ಅಧ್ಯಯನ ನಡೆಸಬೇಕು' ಎಂದರು.

ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ರಂಗವಿಠ್ಠಲಾಚಾರ್, 'ಈ ದೇಶದ ಚರಿತ್ರೆ ವೇದಗಳಿಂದ ಪ್ರಾರಂಭವಾಗಿದೆ. ವೇದಗಳಿಂದ ಮಾನವನಿಗೆ ಜ್ಞಾನ ದೊರೆತಿದೆ' ಎಂದು ಹೇಳಿದರು.

ಹರಿದಾಸ ಸಾಹಿತ್ಯ ಸಮ್ಮೇಳನದ ಪ್ರಬಂಧಗಳ ಸಂಕಲನವನ್ನು ಶ್ರೀಪಾದರಾಜ ಮಠದ ಸುಜಯನಿಧಿತೀರ್ಥ ಸ್ವಾಮೀಜಿ ಬಿಡುಗಡೆ ಮಾಡಿದರು. (ಎಡದಿಂದ) ಸಮ್ಮೇಳನದ ಪ್ರಧಾನ ಸಂಯೋಜಕಿ ಜಯಲಕ್ಷ್ಮೀ ಮಂಗಳಮೂರ್ತಿ, ಅರಳುಮಲ್ಲಿಗೆ ಪಾರ್ಥಸಾರಥಿ, ನ್ಯಾ.ಎಚ್. ರಂಗವಿಠ್ಠಲಾಚಾರ್, ಅಶೋಕ ಹಾರನಹಳ್ಳಿ ಹಾಗೂ ನ್ಯಾ.ಆರ್. ಗುರುರಾಜ್ ಇದ್ದಾರೆ –ಪ್ರಜಾವಾಣಿ ಚಿತ್ರ

ಪ್ರತಿಮೆಗೆ 98 ಟನ್ ಕಂಚು ಮತ್ತು ಪೀಠಕ್ಕೆ 120 ಟನ್ ಉಕ್ಕು ಬಳಕೆ; ₹ 64 ಕೋಟಿ ವೆಚ್ಚ

ಕೆಂಪೇಗೌಡರ 'ಪ್ರಗತಿ ಪ್ರತಿಮೆ' ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಿರ್ಮಾತೃ ನಾಡಪ್ರಭು ಕೆಂಪೇಗೌಡ ಅವರಿಗೆ ಗೌರವ ಸಲ್ಲಿಸುವ ಉದ್ದೇಶದಿಂದ ನಿರ್ಮಿಸಿರುವ 'ಪ್ರಗತಿ ಪ್ರತಿಮೆ'ಯನ್ನು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಅನಾವರಣಗೊಳಿಸಿದರು.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ನಿರ್ಮಿಸಿರುವ 108 ಅಡಿ ಎತ್ತರದ ಕೆಂಪೇಗೌಡರ ಕಂಚಿನ ಪ್ರತಿಮೆಗೆ 'ಪ್ರಗತಿಯ ಪ್ರತಿಮೆ' ಎಂದು ನಾಮಕರಣ ಮಾಡಲಾಗಿದೆ.

2020ರಲ್ಲಿ ಅಂದಿನ ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ ಅವರು ಈ ಪ್ರತಿಮೆ ನಿರ್ಮಾಣಕ್ಕೆ ಶಂಕುಸ್ಥಾಪನೆ ಮಾಡಿದ್ದರು. ₹64 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಈ ಪ್ರತಿಮೆಯು 218 ಟನ್ ತೂಕವಿದೆ. ಪ್ರತಿಮೆಯ ಖಡ್ಗವೇ 4 ಟನ್ ತೂಕವಿದೆ. ರಾಮ್ ವಿ. ಸುತಾರ ಅವರು ಈ ಪ್ರತಿಮೆಯನ್ನು ನಿರ್ಮಿಸಿದ್ದಾರೆ.

90 ಅಡಿ ಎತ್ತರದ ಕಂಚಿನ ಪ್ರತಿಮೆಯನ್ನು 18 ಅಡಿ ಎತ್ತರದ ಕಾಂಕ್ರೀಟ್ ಪೀಠದ ಮೇಲೆ ಸ್ಥಾಪಿಸಲಾಗಿದೆ. ಪ್ರತಿಮೆಗೆ 98 ಟನ್ ಕಂಚು ಮತ್ತು ಪೀಠಕ್ಕೆ 120 ಟನ್ ಉಕ್ಕು ಬಳಸಲಾಗಿದೆ. ಪ್ರತಿಮೆಯ ಸುತ್ತ 23 ಎಕರೆ ಪ್ರದೇಶದಲ್ಲಿ ಥೀಮ್ ಪಾರ್ಕ್ ಅಭಿವೃದ್ಧಿಪಡಿಸಲಾಗುತ್ತಿದ್ದು, ₹20 ಕೋಟಿ ವೆಚ್ಚವಾಗಲಿದೆ.

'ಬೆಂಗಳೂರು ನಿರ್ಮಾಣದಲ್ಲಿ ನಾಡಪ್ರಭು ಕೆಂಪೇಗೌಡರ ಪಾತ್ರ ಅಸಾಧಾರಣವಾದುದು. ಜನರ ಕಲ್ಯಾಣವನ್ನು ಯಾವಾಗಲೂ ಎಲ್ಲಕ್ಕಿಂತ ಮಿಗಿಲಾಗಿ ನೋಡುತ್ತಿದ್ದ ಕ್ರಿಯಾಶೀಲ ದಾರ್ಶನಿಕ ಎಂದು ಅವರನ್ನು ನೆನಪಿಸಿಕೊಳ್ಳಲಾಗುತ್ತದೆ. ಬೆಂಗಳೂರಿನಲ್ಲಿ ಪ್ರಗತಿಯ ಪ್ರತಿಮೆಯನ್ನು ಉದ್ಘಾಟಿಸುವುದು ಗೌರವದ ವಿಷಯವಾಗಿದೆ' ಎಂದು ಪ್ರಧಾನಿ ಟ್ವೀಟ್ ಮಾಡಿದ್ದಾರೆ.

ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ನಿರ್ಮಿಸಿರುವ ನಾಡಪ್ರಭು ಕೆಂಪೇಗೌಡರ 108 ಅಡಿ ಎತ್ತರ ಪ್ರತಿಮೆ

ವೇದಿಕೆಯಲ್ಲಿ 24 ಮಂದಿ

ಪ್ರಧಾನಿ ನರೇಂದ್ರ ಮೋದಿಯವರು ಭಾಗವಹಿಸುವ ಸಾರ್ವಜನಿಕ ಸಮಾರಂಭಗಳಲ್ಲಿ ಪಾಲ್ಗೊಳ್ಳುವ ಅತಿಥಿಗಳ ಸಂಖ್ಯೆಯನ್ನು ಸಾಮಾನ್ಯವಾಗಿ ಒಂದಂಕಿಗೆ ಸೀಮಿತಗೊಳಿಸಲಾಗುತ್ತಿತ್ತು. ಕೆಲವೊಮ್ಮೆ ಐದಕ್ಕಿಂತ ಹೆಚ್ಚು ಇರುತ್ತಿರಲಿಲ್ಲ. ಆದರೆ, ಈ ಬಾರಿ ಪ್ರಧಾನಿ ಸೇರಿದಂತೆ 24 ಮಂದಿಗೆ ವೇದಿಕೆಯಲ್ಲಿ ಅವಕಾಶ ಕಲ್ಪಿಸಲಾಗಿತ್ತು.

ರಾಜ್ಯಪಾಲ ಥಾವರಚಂದ್ ಗೆಹಲೋತ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಪ್ರಲ್ಹಾದ ಜೋಶಿ ಸೇರಿದಂತೆ ಐವರು ಕೇಂದ್ರ ಸಚಿವರು, ನಿರ್ಮಲಾನಂದನಾಥ ಸ್ವಾಮೀಜಿ, ನಂಜಾವಧೂತ ಸ್ವಾಮೀಜಿ, ಆರ್. ಅಶೋಕ, ಡಾ.ಸಿ.ಎನ್. ಅಶ್ವತ್ಥ ನಾರಾಯಣ ಸೇರಿದಂತೆ ರಾಜ್ಯದ 12 ಸಚಿವರು, ಶಾಸಕ ಬಿ.ಎಸ್. ಯಡಿಯೂರಪ್ಪ, ಸಂಸದ ಡಿ.ವಿ. ಸದಾನಂದ ಗೌಡ ವೇದಿಕೆಯಲ್ಲಿದ್ದರು.

ಹರಿದುಬಂದ ಜನಸಾಗರ

ಸಮಾರಂಭಕ್ಕೆ ಸುತ್ತಲಿನ ಹಲವು ಜಿಲ್ಲೆಗಳಿಂದ ಜನಸಾಗರವೇ ಹರಿದುಬಂದಿತ್ತು. ಪ್ರಧಾನ ವೇದಿಕೆಯ ಎದುರು ಹಾಕಿದ್ದ ಮೂರು ಪೆಂಡಾಲ್‌ಗಳು ಭರ್ತಿಯಾಗಿದ್ದು, ಕೊನೆಯವರೆಗೂ ಜನರು ಬರುತ್ತಲೇ ಇದ್ದರು.

ಹೆದ್ದಾರಿಯಿಂದ ಸಮಾರಂಭದ ವೇದಿಕೆ ತಲುಪುವ ರಸ್ತೆ ಕಿರಿದಾಗಿತ್ತು. ಇದರಿಂದಾಗಿ ಬೆಳಿಗ್ಗೆಯೇ ಸಂಚಾರ ದಟ್ಟಣೆ ಹೆಚ್ಚಾಗಿತ್ತು. ಮಧ್ಯಾಹ್ನದ ವೇಳೆಗೆ ಜನರು ದೂರದಲ್ಲೇ ವಾಹನಗಳಿಂದ ಇಳಿದು ನಡೆದು ಬರಬೇಕಾಯಿತು. ಸಮಾರಂಭ ಮುಗಿದ ಬಳಿಕವೂ ಕಿಲೋಮೀಟರ್‌ವರೆಗೂ ವಾಹನಗಳು ಸಾಲುಗಟ್ಟಿ ನಿಂತಿದ್ದವು.

ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ನಡೆದ ಸಾರ್ವಜನಿಕ ಸಮಾರಂಭದಲ್ಲಿ ಸೇರಿದ್ದ ಜನಸ್ತೋಮ

—ಪ್ರಜಾವಾಣಿ ಚಿತ್ರ

ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ 'ವಂದೇ ಭಾರತ್' ಮತ್ತು 'ಭಾರತ ಗೌರವ ಕಾಶಿ ದರ್ಶನ' ರೈಲುಗಳಿಗೆ ರೈಲಿಗೆ ಹಸಿರು ನಿಶಾನೆ ತೋರಿಸಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಇದ್ದಾರೆ

'ಮೋದಿ ಶ್ರೇಷ್ಠ ನಾಯಕ: ಚುಂಚನಗಿರಿ ಶ್ರೀ

'ಸಂಸ್ಕೃತಿ ತಿಳಿದವರು ದೇಶಕ್ಕೆ ಶಕ್ತಿ ನೀಡುತ್ತಾರೆ. ಸಂಸ್ಕೃತಿ ಅರಿಯದೇ ಇರುವವರಿಂದ ಅದು ಸಾಧ್ಯವಿಲ್ಲ. ಪ್ರಧಾನಿ ನರೇಂದ್ರ ಮೋದಿಯವರು ನಾಡಪ್ರಭು ಕೆಂಪೇಗೌಡ ಅವರಂತೆ ಶ್ರೇಷ್ಠ ನಾಯಕ' ಎಂದು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಕೊಂಡಾಡಿದರು.

'ಒಂದು ಕಾಲದಲ್ಲಿ ನಾವು (ಭಾರತೀಯರು) ಬೇರೆಯವರನ್ನು ಕೇಳಿ ಆಡಳಿತ ನಡೆಸಬೇಕಾದ ಸ್ಥಿತಿ ಇತ್ತು. ಆದರೆ, ಈಗ ಬೇರೆ ರಾಷ್ಟ್ರಗಳು ತಮ್ಮ ಸಮಸ್ಯೆ ಪರಿಹಾರಕ್ಕೆ ಭಾರತದ ನೆರವು ಕೇಳುತ್ತಿವೆ. ಪ್ರಧಾನಿಯವರ 'ಕರ್ಮ-ಜ್ಞಾನ'ದ ಶಕ್ತಿಯಿಂದ ಇದು ಸಾಧ್ಯವಾಗಿದೆ. ಮೋದಿ ಈಗ ವಿಶ್ವದ ನಾಯಕ' ಎಂದು ಹೇಳಿದರು.

ಕೆಂಪೇಗೌಡರು ಎಲ್ಲ ಸಮುದಾಯಗಳನ್ನು ಒಗ್ಗೂಡಿಸಿ ಬೆಂಗಳೂರು ಕಟ್ಟಿದ್ದರು. 64 ಸಮುದಾಯಗಳಿಗೂ ಪೇಟೆ ನಿರ್ಮಿಸಿದ್ದರು. ಅವರ ಚಿಂತನೆಗಳು ದೇಶಕ್ಕೆ ಶಕ್ತಿ ತುಂಬಿವೆ ಎಂದರು.

ಪ್ರತಿಮಾ 'ಮತ': ಮೋದಿ ರಥ

ಒಂದನೇ ಪುಟದಿಂದ...

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಪಟ್ಟನಾಯಕನಹಳ್ಳಿಯ ಗುರುಗುಂಡ ಬ್ರಹ್ಮೇಶ್ವರ ಮಠದ ನಂಜಾವಧೂತ ಸ್ವಾಮೀಜಿ, ಒಕ್ಕಲಿಗ ಸಮುದಾಯಕ್ಕೆ ಸೇರಿದ ಸಚಿವರಾದ ಆರ್. ಅಶೋಕ, ಡಾ.ಸಿ.ಎನ್. ಅಶ್ವತ್ಥನಾರಾಯಣ, ಡಾ.ಕೆ. ಸುಧಾಕರ್ ಮತ್ತು ಹಲವು ಶಾಸಕರು ಜತೆಗಿದ್ದರು. ಅನಾವರಣಗೊಂಡ ಪ್ರತಿಮೆಗೆ ಜಲಾಭಿಷೇಕ ಮಾಡುವ ಮೂಲಕ ಒಕ್ಕಲಿಗ ಸಮುದಾಯದ ಜನರನ್ನು ಭಾವನಾತ್ಮಕವಾಗಿ ತಲುಪುವ ಪ್ರಯತ್ನವನ್ನೂ ಪ್ರಧಾನಿ ಮಾಡಿದರು.

ಒಕ್ಕಲಿಗರು ಹೆಚ್ಚಿನ ಸಂಖ್ಯೆಯಲ್ಲಿರುವ ಹಳೆ ಮೈಸೂರು ಭಾಗದಲ್ಲಿ ಜೆಡಿಎಸ್ ಮತ್ತು ಕಾಂಗ್ರೆಸ್ ಪ್ರಾಬಲ್ಯ ಹೊಂದಿವೆ. ಬಿಜೆಪಿ ಶಕ್ತಿ ಇಲ್ಲಿ ಕಡಿಮೆ ಇದೆ. ಹಳೆ ಮೈಸೂರು ಭಾಗದ ಒಕ್ಕಲಿಗರ ಮತಗಳನ್ನು ಬಿಜೆಪಿಯತ್ತ ಸೆಳೆದು, ಜೆಡಿಎಸ್ ಮತ್ತು ಕಾಂಗ್ರೆಸ್ ಪಕ್ಷಗಳ ಬಲ ಕುಗ್ಗಿಸುವ ಪ್ರಯತ್ನವನ್ನೂ ಈ ಸಮಾರಂಭವನ್ನು ಬಳಸಿಕೊಂಡರು.

ಭುವನಹಳ್ಳಿಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲೂ ಮಾತನಾಡಿದ್ದಕ್ಕೂ ಕೆಂಪೇಗೌಡರನ್ನು ಕೊಂಡಾಡಿದ ಪ್ರಧಾನಿ, ಕನಕದಾಸ, ವಾಲ್ಮೀಕಿ, ಒನಕೆ ಓಬವ್ವ ಅವರನ್ನೂ ಸ್ಮರಿಸಿದರು. ಒಕ್ಕಲಿಗರು ಪ್ರಾಬಲ್ಯ ಹೊಂದಿರುವ ಕ್ಷೇತ್ರಗಳಲ್ಲಿ ಬಿಜೆಪಿಯನ್ನು ಬಲಗೊಳಿಸುವ ದೃಷ್ಟಿ ಇಟ್ಟುಕೊಂಡೇ ತಮ್ಮ ವಾಗ್ಝರಿಯನ್ನು ಪ್ರದರ್ಶಿಸಿದರು.

ಸಾಮಾಜಿಕ ಸೌಕರ್ಯಕ್ಕೆ ಬಲ: ಮೋದಿ

ಒಂದನೇ ಪುಟದಿಂದ...

ಪ್ರಧಾನಮಂತ್ರಿ ಸ್ವನಿಧಿ ಯೋಜನೆಯಡಿ ಇಲ್ಲಿನ 2 ಲಕ್ಷ ಬೀದಿಬದಿ ವ್ಯಾಪಾರಿಗಳು ನೆರವು ಪಡೆದಿದ್ದಾರೆ ಎಂದರು.

ವಿಮಾನ ಪ್ರಯಾಣ ಕ್ಷೇತ್ರದಲ್ಲಿ ಭಾರತವು ಅತಿವೇಗದ ಬೆಳವಣಿಗೆ ದರ ಹೊಂದಿರುವ ಮಾರುಕಟ್ಟೆಯಾಗಿದೆ. ಎರಡನೇ ಟರ್ಮಿನಲ್ ಉದ್ಘಾಟನೆಯೊಂದಿಗೆ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು ದೇಶದ ಎರಡನೇ ಅತಿದೊಡ್ಡ ವಿಮಾನ ನಿಲ್ದಾಣವಾಗಿದೆ. ಬೆಂಗಳೂರಿನ ಜನರ ಹಿಂದಿನ ನಿರೀಕ್ಷೆಯನ್ನು ಹೊಸ ಟರ್ಮಿನಲ್ ಸಾಕಾರಗೊಳಿಸಿದೆ ಎಂದು ಹೇಳಿದರು.

ರೈಲ್ವೆ ಕ್ಷೇತ್ರದಲ್ಲೂ ಗಣನೀಯ ಬದಲಾವಣೆ ಆಗಿದೆ. ಕಾಮಗಾರಿಗಳಿಗೆ ವೇಗ ನೀಡಲಾಗಿದೆ. ನಿಲ್ದಾಣಗಳನ್ನು ಅಂತರರಾಷ್ಟ್ರೀಯ ಗುಣಮಟ್ಟಕ್ಕೆ ಸಮನಾಗಿ ಮೇಲ್ದರ್ಜೆಗೇರಿಸಲಾಗಿದೆ. ಇಲ್ಲಿನ ಸರ್.ಎಂ.ವಿಶ್ವೇಶ್ವರಯ್ಯ ರೈಲ್ವೆ ಟರ್ಮಿನಲ್ ಪ್ರವೇಶಿಸಿದರೆ ಹೊರ ಜಗತ್ತಿಗೆ ಹೋದ ಅನುಭವವಾಗುತ್ತದೆ ಎಂದರು.

ಭಾರತ್ ಗೌರವ್ ರೈಲು ಭಾರತದ ನಂಬಿಕೆ ಮತ್ತು ಆಧ್ಯಾತ್ಮಿಕ ಕ್ಷೇತ್ರಗಳನ್ನು ಬೆಸೆಯುತ್ತಿದೆ. ಅಂತಹ ರೈಲು ಸೇವೆಯನ್ನು ಕರ್ನಾಟಕದಲ್ಲೂ ಈಗ ಆರಂಭಿಸಲಾಗಿದೆ ಎಂದು ಹೇಳಿದರು.

ದೇವೇಗೌಡರ ಕಡೆಗಣನೆ: ಜೆಡಿಎಸ್ ಕಿಡಿ

ಒಂದನೇ ಪುಟದಿಂದ...

ರಾಜಕೀಯ ಕಾರಣಕ್ಕಾಗಿ ಗೌಡರನ್ನು ಕಡೆಗಣಿಸಲಾಗಿದೆ. ಸರ್ಕಾರಿ ಕಾರ್ಯಕ್ರಮ ಬಿಜೆಪಿ ಪ್ರಾಯೋಜಿತ ಕಾರ್ಯಕ್ರಮದಂತೆ ಬಿಂಬಿಸಲಾಗಿದೆ. ಸರ್ವ ಜನರನ್ನು ಸಮಾನವಾಗಿ ಕಂಡು ಆದರ್ಶ ಪ್ರಭುವಾಗಿದ್ದ ಕೆಂಪೇಗೌಡರನ್ನು ರಾಜಕೀಯಕ್ಕೆ ಎಳೆಯುವ ಕೆಲಸವನ್ನು ಸ್ವತಃ ಪ್ರಧಾನಿ ನರೇಂದ್ರ ಮೋದಿ ಅವರೇ ಮಾಡಿರುವುದು ಸ್ಪಷ್ಟ ಎಂದು ಟೀಕಿಸಿದೆ.

ರಾಜ್ಯ ಸರ್ಕಾರ ಪ್ರಧಾನಿ ಅವರ ದಾರಿ ತಪ್ಪಿಸಿದೆ. ದೇವೇಗೌಡರ ಬಗ್ಗೆ ಗೌರವ ಇಟ್ಟುಕೊಂಡಿದ್ದ ಪ್ರಧಾನಿಯನ್ನು ಕನ್ನಡಿಗರು ಸಂಶಯದಿಂದ ನೋಡುವಂತೆ ಮಾಡಲಾಗಿದೆ. ಕೆಂಪೇಗೌಡರು ಬಿಜೆಪಿ ಆಸ್ತಿಯಲ್ಲ, ಕೆಲ ಸಚಿವರ ಜಹಗೀರೂ ಅಲ್ಲ, ಅವರು ಸಮಸ್ತ ಕನ್ನಡಿಗರ ಹೆಮ್ಮೆ, ನಮ್ಮ ಆರಾಧ್ಯದೈವ. ಬೆಂಗಳೂರು ನಗರ ನಮ್ಮೆಲ್ಲರದ್ದು ಎಂದು ಬಿಜೆಪಿ ವಿರುದ್ಧ ಹರಿಹಾಯ್ದಿದೆ.

'ಕುಲ ಕುಲವೆಂದು ಏಕೆ ಹೊಡೆದಾಡುವಿರಿ'

ಭಕ್ತ ಕನಕದಾಸರ ಕುರಿತು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ ಪ್ರಧಾನಿ ನರೇಂದ್ರ ಮೋದಿ, 'ಕುಲ ಕುಲ ಕುಲವೆಂದು ಏಕೆ ಹೊಡೆದಾಡುವಿರಿ... ಎಂದು ಪ್ರಶ್ನಿಸಿದ್ದ ಕನಕದಾಸರು ಜಾತಿ ತಾರತಮ್ಯವನ್ನು ಅಂತ್ಯಗೊಳಿಸುವ ಸಂದೇಶ ರವಾನಿಸಿದ್ದರು' ಎಂದರು.

'ಈಗ ಜಗತ್ತು ಕಿರುಧಾನ್ಯಗಳ ಕುರಿತು ಮಾತನಾಡುತ್ತಿದೆ. ಆದರೆ, ಕನಕದಾಸರು ರಾಮಧಾನ್ಯ ಚರಿತ್ರೆ ಕೃತಿಯಲ್ಲಿ ರಾಗಿಯ ಕುರಿತು ಹೇಳಿದ್ದರು' ಎಂದು ಹೇಳಿದರು.

ಪರಸ್ಪರ ಅಂತರ ಕಾಯ್ದುಕೊಳ್ಳಿ

ವಿಮಾನ ನಿಲ್ದಾಣದ ಟರ್ಮಿನಲ್–2 ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸುಸಜ್ಜಿತ ಮತ್ತು ಆಕರ್ಷಕ ಟರ್ಮಿನಲ್-2 ಅನ್ನು ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಉದ್ಘಾಟಿಸಿದರು.

ಟರ್ಮಿನಲ್-2ರ ಆವರಣದಲ್ಲಿ ಸುತ್ತಾಡಿ ವೀಕ್ಷಿಸಿದ ಪ್ರಧಾನಿ, ವಿಮಾನ ನಿಲ್ದಾಣದ ಅಧಿಕಾರಿಗಳೊಂದಿಗೆ ಮಾಹಿತಿ ಪಡೆದರು. ಇಲ್ಲಿನ ಸೌಲಭ್ಯಗಳನ್ನು ವೀಕ್ಷಿಸಿದ ಅವರು, ಟರ್ಮಿನಲ್-2 ಕುರಿತಾದ ಕಿರುಚಿತ್ರ ವೀಕ್ಷಿಸಿದರು.

'ಟರ್ಮಿನಲ್-2ರ ಪ್ರಯಾಣಿಕರಿಗೆ ಮತ್ತಷ್ಟು ಅತ್ಯಾಧುನಿಕ ಸೌಲಭ್ಯಗಳನ್ನು ಕಲ್ಪಿಸಿದೆ. ನಮ್ಮ ನಗರಗಳಲ್ಲಿ ಅತ್ಯುತ್ತಮ ಮೂಲಸೌಕರ್ಯಗಳನ್ನು ಕಲ್ಪಿಸಬೇಕು ಎನ್ನುವ ನಮ್ಮ ಉದ್ದೇಶದ ಭಾಗ ಇದಾಗಿದೆ. ಈ ಟರ್ಮಿನಲ್ ಸುಂದರ ಮತ್ತು ಪ್ರಯಾಣಿಕರ ಸ್ನೇಹಿಯಾಗಿದೆ' ಎಂದು ಪ್ರಧಾನಿ ಟ್ವೀಟ್ ಮಾಡಿದ್ದಾರೆ.

'ಉದ್ಯಾನ ನಗರಿ ಬೆಂಗಳೂರಿನ ಹಿರಿಮೆಯನ್ನು ಈ ಟರ್ಮಿನಲ್ ಹೆಚ್ಚಿಸಿದೆ. ಪ್ರಯಾಣಿಕರಿಗೆ ಉದ್ಯಾನದಲ್ಲಿ ನಡೆದಾಡಿದ ಅನುಭವವಾಗಲಿದೆ. ಪ್ರಯಾಣಿಕರು 10ಸಾವಿರ ಚದರ ಮೀಟರ್ ಹಸಿರು ಗೋಡೆಗಳ ನಡುವೆ ಸಂಚರಿಸಲಿದ್ದಾರೆ. ತೂಗು ಉದ್ಯಾನವು ಗಮನಸೆಳೆಯಲಿದೆ' ಎಂದು ಪ್ರಧಾನಮಂತ್ರಿ ಕಚೇರಿ ಪ್ರಕಟಣೆ ಹೊರಡಿಸಿದೆ.

ಅಮೆರಿಕದ 'ಗ್ರೀನ್ ಬಿಲ್ಡಿಂಗ್ ಕೌನ್ಸಿಲ್'ನಿಂದ (ಜಿಬಿಸಿ) 'ಪ್ಲಾಟಿನಂ ರೇಟಿಂಗ್' ಪಡೆದಿರುವ ವಿಶ್ವದಲ್ಲೇ ಅತ್ಯಂತ ದೊಡ್ಡ ಟರ್ಮಿನಲ್ ಇದಾಗಿದೆ.

ಪರಿಸರ ಸ್ನೇಹಿ ಈ ಟರ್ಮಿನಲ್ ಅನ್ನು ₹5 ಸಾವಿರ ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದ್ದು, ಬಹುತೇಕ ಬಿದಿರು ಬಳಸಲಾಗಿದೆ. 'ಉದ್ಯಾನದಲ್ಲಿ ಟರ್ಮಿನಲ್' ಎನ್ನುವ ಖ್ಯಾತಿಗೆ ಇದು ಪಾತ್ರವಾಗಿದ್ದು, ವಾರ್ಷಿಕ 2.5 ಕೋಟಿ ಪ್ರಯಾಣಿಕರಿಗೆ ಅನುಕೂಲ ಕಲ್ಪಿಸುವ ಸಾಮರ್ಥ್ಯ ಹೊಂದಿದೆ ಎಂದು ಕೆಐಎ ಅಧಿಕಾರಿಗಳು ತಿಳಿಸಿದ್ದಾರೆ.

ಟರ್ಮಿನಲ್- 2 ಅದ್ಭುತ ವಾಸ್ತುಶಿಲ್ಪಕ್ಕೆ ಸಾಕ್ಷಿಯಾಗಿದೆ. ಹಸಿರು ಮಯ ವಾತಾವರಣ ಕಣ್ಮನ ಸೆಳೆಯಲಿದೆ. ಮೊದಲ ಟರ್ಮಿನಲ್‌ಗಿಂತಲೂ 2ನೇ ಟರ್ಮಿನಲ್‌ನಲ್ಲಿ ಅತ್ಯಾಧುನಿಕ ವ್ಯವಸ್ಥೆಗಳಿವೆ. ವಿವಿಧ ರೀತಿಯ ಅಲಂಕಾರದಿಂದ ಪ್ರಯಾಣಿಕರನ್ನು ಸೆಳೆಯುತ್ತಿದೆ.


ಶುಕ್ರವಾರ ಉದ್ಘಾಟನೆಯಾದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್–2 ನೋಟ.

ಸಂಭಾಜಿ ಮಹಾರಾಜರಿಗೆ ಅವಮಾನ: ಫಡಣವೀಸ್ ಟ್ವೀಟ್

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಹಿಂದೂ' ಎಂಬ ಪದಕ್ಕೆ ಪರ್ಷಿಯನ್ ಭಾಷೆಯಲ್ಲಿ ಕೆಟ್ಟ ಅರ್ಥಗಳಿವೆ ಎಂಬ ಹೇಳಿಕೆ ನೀಡಿ ವಿರೋಧದ ಬಳಿಕ ಹಿಂಪಡೆದಿದ್ದ ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಅವರಿಗೆ ಈಗ ಮತ್ತೊಂದು ವಿವಾದ ಸುತ್ತಿಕೊಂಡಿದೆ.

ಧರ್ಮವೀರ ಸಂಭಾಜಿ ಮಹಾರಾಜರ ಕುರಿತು ಅವರು ಮಾಡಿದ ಭಾಷಣವನ್ನು ಖಂಡಿಸಿ, ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಟ್ವೀಟ್ ಮಾಡಿದ್ದಾರೆ. ಜೊತೆಗೆ, ಜಾರಕಿಹೊಳಿ ಭಾಷಣದ ತುಣುಕಿನ ವಿಡಿಯೊ ಕೂಡ ಹಂಚಿಕೊಂಡಿದ್ದಾರೆ.

ನ.6ರಂದು ನಿಪ್ಪಾಣಿಯಲ್ಲಿ ಮಾನವ ಬಂಧುತ್ವ ವೇದಿಕೆ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸತೀಶ ಜಾರಕಿಹೊಳಿ ಮಾಡಿದ ಭಾಷಣದ ಮುಂದುವರಿದ ತುಣುಕುಗಳೇ ಈಗ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.

ಭಾಷಣದಲ್ಲೇನಿದೆ?: 'ಸಂಭಾಜಿ ಮಹಾರಾಜರನ್ನು ಬ್ರಿಟಿಷರು ಹಿಡಿದು ಹತ್ಯೆ ಮಾಡಿದರು. ಏಕೆ ಹತ್ಯೆ ಮಾಡಿದರು? ಶಿವಾಜಿ ಮಹಾರಾಜರ ಊಟದಲ್ಲಿ ವಿಷ ಹಾಕಲಾಗಿತ್ತು. ಈ ಕೋಪದಿಂದ ಅವರನ್ನು ಹಿಡಿದುಕೊಡಲಾಯಿತು, ಶಿಕ್ಷಿಸಲಾಯಿತು. ಅವರಿಗೆ 'ಧರ್ಮವೀರ ಸಂಭಾಜಿ' ಎಂಬ ಹೆಸರಿಟ್ಟು ಇತಿಹಾಸ ಬರೆದಿದ್ದಾರೆ. ಈ ದೇಶದ ಇತಿಹಾಸ ವಿಚಿತ್ರವಾಗಿದೆ. ತಿಳಿಯಲು ಬಹಳ ಸಮಯ ಬೇಕು' ಎಂದು ಅವರು ಹೇಳಿದ ವಿಡಿಯೊ ತುಣುಕು ಇದೆ.

ಟ್ವೀಟ್‌ನಲ್ಲಿ ಏನಿದೆ?: 'ಮಿಸ್ಟರ್ ರಾಹುಲ್ ಗಾಂಧಿ, ಈ ರೀತಿಯ 'ನಾನ್‌ಸೆನ್ಸ್' ಹೇಳಿಕೆಯನ್ನು ನೀವು ಒಪ್ಪುತ್ತೀರಾ? ಕಾಂಗ್ರೆಸ್‌ನ ಶಾಸಕ ಒಬ್ಬರು ಮಹಾನ್ ನಾಯಕ ಸಂಭಾಜಿ ಮಹಾರಾಜರ ಬಗ್ಗೆ ಈ ರೀತಿ ಹೇಳುವುದನ್ನು ನೀವು ಒಪ್ಪುತ್ತೀರಾ? ತಪ್ಪು ಮಾಹಿತಿ ನೀಡುವ, ದಾರಿ ತಪ್ಪಿಸುವ, ಅವಮಾನಿಸುವ ಈ ಹೇಳಿಕೆ ನಿಮ್ಮ ಕಾಂಗ್ರೆಸ್ ಪಕ್ಷದ ಅಧಿಕೃತ ಹೇಳಿಕೆಯೇ? ಮಹಾರಾಷ್ಟ್ರ ಇದನ್ನು ಒಪ್ಪುವುದಿಲ್ಲ' ಎಂದು ಫಡಣವೀಸ್ ಪೋಸ್ಟ್ ಮಾಡಿದ್ದಾರೆ.

ಸ್ಪಷ್ಟನೆ

ಕಲಬುರಗಿ: ಇದೇ ಮೊದಲ ಬಾರಿಗೆ ಪದವಿಪೂರ್ವ ಶಿಕ್ಷಣ ಇಲಾಖೆ ವತಿಯಿಂದ ಪಿಸಿಎಂಬಿ ಪುಸ್ತಕಗಳು ಕನ್ನಡದಲ್ಲಿ ಲಭ್ಯವಾಗಿವೆ ಎಂಬ ವರದಿ ಪ್ರಜಾವಾಣಿಯ ನವೆಂಬರ್ 9ರ ಸಂಚಿಕೆಯಲ್ಲಿ ಪ್ರಕಟವಾಗಿತ್ತು. ಆದರೆ ಇದು ಮೊದಲ ಬಾರಿ ಅಲ್ಲ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ 1966ರ ಅವಧಿಯಲ್ಲಿ ಅಧ್ಯಾಪಕ ಜಿ.ಟಿ ನಾರಾಯಣರಾವ್ ಅವರು ಭೌತವಿಜ್ಞಾನ, ರಸಾಯನ ವಿಜ್ಞಾನ, ಗಣಿತ ಮತ್ತು ಜೀವವಿಜ್ಞಾನದ (ಪಿಸಿಎಂಬಿ) ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಿ ಮುದ್ರಿಸಿದ್ದರು ಎಂದು ಅವರ ಪುತ್ರ ಅಶೋಕವರ್ಧನ ತಿಳಿಸಿದ್ದಾರೆ.

ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ
ರಾಮನಗರ ವಿಶೇಷ ವಿಭಾಗ, ರಾಮನಗರ.

ಟೆಂಡರ್ ಪ್ರಕಟಣೆ ಸಂಖ್ಯೆ : 06/2022–23 ದಿನಾಂಕ : 10–11–2022

ಟೆಂಡರ್ ಪ್ರಕಟಣೆ

ರಾಮನಗರ ವಿಶೇಷ ವಿಭಾಗ ವ್ಯಾಪ್ತಿಯಲ್ಲಿ 2022–23 ನೇ ಸಾಲಿನಲ್ಲಿ ಅರ್ಹ ಗುತ್ತಿಗೆದಾರರಿಂದ ಅಂದಾಜು ಮೊತ್ತ ರೂ. 693.00 ಲಕ್ಷಗಳ ಕಾಮಗಾರಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಯ ವಿವರ, ಟೆಂಡರ್‌ಗಿಟ್ಟಿರುವ ಮೊತ್ತ, ಇ.ಎಂ.ಡಿ. ಮುಂತಾದ ಇತರೆ ಮಾಹಿತಿಗಳನ್ನು http://www.eproc.karnataka.gov.in. ವೆಬ್‌ಸೈಟ್ ಮೂಲಕ ಅಥವಾ ಸದರಿ ಕಛೇರಿಯಿಂದ ಪಡೆಯಬಹುದಾಗಿರುತ್ತದೆ. ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ.

1) ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಟೆಂಡರ್ ಡಾಕ್ಯುಮೆಂಟ್ ಅನ್ನು ದಿನಾಂಕ : 15–11–2022 ರಿಂದ 14–12–2022 ರವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. 2) ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ದಿನಾಂಕ : 14–12–2022 ವೇಳೆ 16.00 ಗಂಟೆಯೊಳಗೆ ಸಲ್ಲಿಸುವುದು. 3) ಪ್ರೀ ಬಿಡ್ ಸಭೆಯ ದಿನಾಂಕ : 30–11–2022 ರ ವೇಳೆ 11.30. 4) ಟೆಂಡರ್‌ಗಳನ್ನು ತೆರೆಯುವ ದಿನಾಂಕ : 15–12–2022 ವೇಳೆ 16.30 ಗಂಟೆ. (ಸಾಧ್ಯವಾದಲ್ಲಿ).

"ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು".

ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ,
ರಾಮನಗರ.

ಡಿಐಪಿಆರ್/ರಾಮನಗರ/330/ಮಣಿಪಾಲ್/2022–23

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ ಜಿಲ್ಲೆ,
(ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿತ್ರದುರ್ಗ–577501)
(ದೂ ಸಂಖ್ಯೆ 08194–225713 ಇ–ಮೇಲ್ : dudc_ctg@yahoo.co.in

ಸಂಖ್ಯೆ ಜಿನಕೋ(2)ಸಿ.ಆರ್ 287/2022–23 ದಿನಾಂಕ: 09/11/2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಚಿತ್ರದುರ್ಗ ಜಿಲ್ಲೆಯ ನಗರ ಸ್ಥಳೀಯ ಪ್ರದೇಶಗಳಲ್ಲಿರುವ ಇಂದಿರಾ ಕ್ಯಾಂಟೀನ್‌ಗಳಿಗೆ ಅಡುಗೆ ಸೇವೆಗಳನ್ನು ಒದಗಿಸಲು ಅರ್ಹ ಟೆಂಡರುದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರುದಾರರು ಕೋಷ್ಟಕದಲ್ಲಿ ನೀಡಿರುವ ಎಲ್ಲಾ ಸರಕು / ಸೇವೆಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬೇಕು. ಕೆ.ಟಿ.ಪಿ.ಪಿ ಕಾಯಿದೆ, ನಿಯಮ 28 ರ ದ್ವಿ ಲಕೋಟೆ ಟೆಂಡರ್ ಪದ್ಧತಿಯನ್ನು ಅನುಸರಿಸಬೇಕು. ಟೆಂಡರನ್ನು ಎರಡು ಪ್ರತ್ಯೇಕ ಲಕೋಟೆಯಲ್ಲಿ ಸಲ್ಲಿಸಬೇಕಿದ್ದು, ಮುಂಗಡ ಠೇವಣಿ ಮತ್ತು ಟೆಂಡರ್ ಕೈಗೊಳ್ಳಲು ತಮ್ಮ ಸಾಮರ್ಥ್ಯದ ವಿವರಗಳನ್ನು (ಐಟಿಟಿ ದರ್ಜೆ 2 ಮತ್ತು 3 ರಲ್ಲಿನ ವಿವರದಂತೆ) ಒಳಗೊಂಡಿರುವ ಒಂದು ತಾಂತ್ರಿಕ ಲಕೋಟೆಯನ್ನು ಮೊದಲು ತೆರೆಯಲಾಗುವುದು ಮತ್ತು ದರ ಟೆಂಡರ್‌ನ್ನು ಹೊಂದಿರುವ ಎರಡನೇ ಆರ್ಥಿಕ ಲಕೋಟೆಯನ್ನು ಟೆಂಡರುದಾರರು ಟೆಂಡರ್ ಯೋಜನೆಯನ್ನು ಕಾರ್ಯಗತಗೊಳಿಸಲು ತಾಂತ್ರಿಕವಾಗಿ ಅರ್ಹರಾಗಿದ್ದಾಗ ಮಾತ್ರ ತೆರೆಯಲಾಗುವುದು. ಆಹಾರ ಸರಬರಾಜು ಗುತ್ತಿಗೆ ಪಡೆಯುವುದಾಕ್ಕಾಗಿ ಟೆಂಡರುದಾರರು ನಿಬಂಧನೆಗಳಲ್ಲಿನ 3ನೇ ಕಲಂನಲ್ಲಿ ನಿರ್ದಿಷ್ಟಪಡಿಸಿರುವ ಕನಿಷ್ಠ ಅರ್ಹತಾ ಮಾನದಂಡಗಳನ್ನು ಗಮಿಸಲು ಟೆಂಡರುದಾರರಿಗೆ ಸೂಚಿಸಲಾಗಿದೆ.

ಸಂಕ್ಷಿಪ್ತ ವಿವರ:– (1) **ಪ್ಯಾಕೇಜ್ ಸಂ. 01** ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದರ ವೇಳಾಪಟ್ಟಿಯಂತೆ ಕರ್ನಾಟಕ ರಾಜ್ಯದಲ್ಲಿ ಚಿತ್ರದುರ್ಗ ಜಿಲ್ಲೆಯ ಚಿತ್ರದುರ್ಗ ನಗರಸಭಾ ವ್ಯಾಪ್ತಿಯಲ್ಲಿನ ಇಂದಿರಾ ಕ್ಯಾಂಟೀನ್‌ಗಳಿಗೆ ಅಡುಗೆ ಸೇವೆಗಳನ್ನು ಒದಗಿಸುವುದು. **Indent No. DMA/2022-23/IND14575. ವರ್ಷಕ್ಕೆ ಸರಕು ಮತ್ತು ಸೇವೆಗಳ ಅಂದಾಜು ಮೊತ್ತ:–** 208.05. **ಇಎಂಡಿ:–**3.12

(2) **ಪ್ಯಾಕೇಜ್ ಸಂ. 02** ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದರ ವೇಳಾಪಟ್ಟಿಯಂತೆ ಕರ್ನಾಟಕ ರಾಜ್ಯದಲ್ಲಿ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ–01, ಹಿರಿಯೂರು–01, ಹೊಸದುರ್ಗ–01, ಹೊಳಲ್ಕೆರೆ–01 ಮತ್ತು ಮೊಳಕಾಲ್ಮೂರು–01 ನಗರ ಸ್ಥಳೀಯ ಪ್ರದೇಶಗಳಲ್ಲಿನ ಇಂದಿರಾ ಕ್ಯಾಂಟೀನ್‌ಗಳಿಗೆ ಅಡುಗೆ ಸೇವೆಗಳನ್ನು ಒದಗಿಸುವುದು. **Indent No. DMA/2022-23/IND14576 ವರ್ಷಕ್ಕೆ ಸರಕು ಮತ್ತು ಸೇವೆಗಳ ಅಂದಾಜು ಮೊತ್ತ:–** 374.49. **ಇಎಂಡಿ:–**5.62 **ವಿತರಣಾ ವೇಳಾಪಟ್ಟಿ:–** ಟೆಂಡರ್ ದಸ್ತಾವೇಜಿನಲ್ಲಿ ತಿಳಿಸಿರುವಂತೆ. ಆಸಕ್ತಿಯುಳ್ಳ ಆಹಾರ ಸರಬರಾಜು ಮಾಡುವ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಲು ಇ–ಪ್ರಕ್ಯೂರ್‌ಮೆಂಟ್ ಪ್ಲಾಟ್‌ಫಾರಂನಲ್ಲಿ ನೋಂದಾಯಿಸಬೇಕು. ಗುತ್ತಿಗೆದಾರರು ಟೆಂಡರ್ ದಸ್ತಾವೇಜುಗಳನ್ನು ಇ–ಪ್ರಕ್ಯೂರ್‌ಮೆಂಟ್ ಪ್ಲಾಟ್‌ಫಾರಂ www.eproc.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಟೆಂಡರ್ ಪ್ರಕ್ರಿಯೆ ಶುಲ್ಕವನ್ನು ಸಹ ವಿದ್ಯುನ್ಮಾನವಾಗಿಯೇ ಸಲ್ಲಿಸುವುದು. **ಟೆಂಡರ್ ವೇಳಾಪಟ್ಟಿ :–** (1) ಟೆಂಡರ್‌ನ ಬಗ್ಗೆ ವಿಚಾರಿಸಲು ಕೊನೆ ದಿನಾಂಕ 17–11–2022 05.30 ಸಂಜೆ (2) ಪೂರ್ವಭಾವಿ ಸಭೆಯ ದಿನಾಂಕ 23–11–2022 11–30 ಬೆಳಿಗ್ಗೆ (3) ಟೆಂಡರ್ ದಾಖಲೆಯನ್ನು ಅಪ್‌ಲೋಡ್ ಮಾಡಲು ಕೊನೆಯ ದಿ: 30–11–2022 5.30 ಸಂಜೆ (4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ 02–12–2022 11.00 ಬೆಳಿಗ್ಗೆ (5) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ **ತಾಂತ್ರಿಕ ಬಿಡ್ ಅನುಮೋದನೆ ನಂತರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು.** ಟೆಂಡರ್ ಕುರಿತಾದ ಹೆಚ್ಚಿನ ಮಾಹಿತಿಗಳನ್ನು ಮೇಲೆ ತಿಳಿಸಲಾದ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು. ವೇಳಾಪಟ್ಟಿಯಲ್ಲಾಗುವ ಯಾವುದೇ ಬದಲಾವಣೆಗಳನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಸೂಚಿಸಲಾಗುವುದು ಮತ್ತು ದಿನಪತ್ರಿಕೆ ಜಾಹಿರಾತು ಪ್ರಕಟಣೆಯಲ್ಲಿ ನೀಡಲಾಗುವುದಿಲ್ಲ.

DIPR/CTA/MCA/682/2022-23

ಸಹಿ/– ಕಾರ್ಯಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿತ್ರದುರ್ಗ

TNPL TAMILNADU NEWSPRINT AND PAPERS LIMITED
Kagithapuram - 639 136. Karur Dist. Tamil Nadu.
Ph.: 04324 - 277001 (10 Lines). E-Mail: purchase.wood@tnpl.co.in

NOTICE INVITING TENDER

Tender No.	Material Description	Due date
222313 004840	Supply of Debarked Acacia pulpwood from open market sources of Karnataka to TNPL Unit - I, Kagithapuram, Karur District.	19.11.2022
222313 004841	Supply of Eucalyptus withbark pulpwood from open market sources of Karnataka to TNPL Unit - I, Kagithapuram, Karur District.	21.11.2022

Corrigendum if any will be published in TNPL website only. Detailed terms & conditions, Tender fee, EMD, etc., are available in tender document at our websites: www.tnpl.com / www.tenders.tn.gov.in

DIPR/5061/Tender/2022 *TNPL - Maker of bagasse based eco-friendly Paper*

"சோதனை கடந்து சுதந்திரம் அடைந்தோம், சாதனை புரிந்து சரித்திரம் படைப்போம்."

ಕರ್ನಾಟಕ ರಾಜ್ಯ ಪೋಲೀಸ್

ಕರ್ನಾಟಕ ರಾಜ್ಯದಲ್ಲಿ ಖಾಲಿ ಇರುವ ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ (ಸಿಎಆರ್/ಡಿಎಆರ್) (ಪುರುಷ ಮತ್ತು ಪುರುಷ ತೃತೀಯಲಿಂಗ) (ಎನ್‌ಕೆಕೆ)–3064 ಮತ್ತು ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ (ಸಿಎಆರ್/ಡಿಎಆರ್) (ಪುರುಷ ಮತ್ತು ಪುರುಷ ತೃತೀಯಲಿಂಗ) (ಕೆಕೆ)–420 ಒಟ್ಟು–3484 ಹುದ್ದೆಗಳಿಗೆ ಆನ್‌ಲೈನ್ (Online) ಮುಖಾಂತರ ಅರ್ಜಿಯನ್ನು ಆಹ್ವಾನಿಸಲು ಈಗಾಗಲೇ ಪ್ರಕಟಿಸಲಾಗಿದ್ದು, ಅಭ್ಯರ್ಥಿಗಳಿಗೆ ಸರ್ಕಾರದಿಂದ ಒಂದು ಬಾರಿಗೆ ಮಾತ್ರ ಎರಡು ವರ್ಷಗಳ ವಯೋಮಿತಿಯನ್ನು ಹೆಚ್ಚಿಸಿ ಆದೇಶಿಸಲಾಗಿರುತ್ತದೆ.

ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: 30.11.2022.

ಟಿಪ್ಪಣಿ: ಪೊಲೀಸ್ ಇಲಾಖೆಯ ನೇಮಕಾತಿಯು ಸಂಪೂರ್ಣ ಪಾರದರ್ಶಕತೆಯಿಂದ ಕೂಡಿರುತ್ತದೆ. ಇಲಾಖೆಯು ನಿಗಧಿಪಡಿಸಿದ ಶುಲ್ಕವನ್ನು ಮಾತ್ರ ಬ್ಯಾಂಕ್ ಮತ್ತು ಅಂಚೆ ಕಛೇರಿಗಳಲ್ಲಿ ಪಾವತಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಅಧಿಕೃತ ವೆಬ್‌ಸೈಟ್ https://ksp.karnataka.gov.in/ or https://ksp-recruitment.in/ ನ್ನು ವೀಕ್ಷಿಸುವುದು.

ಸಹಿ/–
ಡಿಜಿಪಿ, ನೇಮಕಾತಿ

DIPR/CP/3062/Zen/2022-23

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ ಜಿಲ್ಲೆ,
(ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿತ್ರದುರ್ಗ–577501)
(ದೂ ಸಂಖ್ಯೆ 08194–225713 ಇ–ಮೇಲ್ : dudc_ctg@yahoo.co.in

ನಂ. ಜಿ.ನ.ಕೋ/ನಗರೋತ್ಥಾನ ಹಂತ 04/ಟಿ.ಎಸ್ 05/2022–23 ದಿ: 08.11.2022

ಮರು ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿತ್ರದುರ್ಗ ಇವರು ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ–4) ರಡಿ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ನಗರಸಭೆಯ ಕಾಮಗಾರಿಗಳಿಗೆ ದ್ವಿ ವಿದ್ಯುನ್ಮಾನ ಟೆಂಡರ್ ಡಾಕ್ಯೂಮೆಂಟ್ ಪದ್ಧತಿಯಲ್ಲಿ ಕೆಡಬ್ಲ್ಯೂ–4 ಟೆಂಡರ್ ದಾಸ್ತವೇಜುನಂತೆ, ಪಿ.ಡಬ್ಲ್ಯೂ.ಡಿ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ (ಸಿವಿಲ್) 1 ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.

ಕಾಮಗಾರಿಗಳ ವಿವರ:– 1) **ಪ್ಯಾಕೇಜ್ ಸಂ. 01:–** ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ–4) ರಡಿ ಹಿರಿಯೂರು ನಗರಸಭಾ ವ್ಯಾಪ್ತಿಯಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗಳ ಇಂಡೆಂಟ್ **No. DMA/2022-23/RD/ WORK_INDENT 133412/CALL-2** ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):–1617.29. ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)(ಜಿಎಸ್‌ಟಿ ಹೊರತುಪಡಿಸಿ):–1374.77. ಇ.ಎಂ.ಡಿ ಮೊತ್ತ (ರೂ.ಲಕ್ಷಗಳಲ್ಲಿ):– 15.00 ಕಾಮಗಾರಿಯ ಅವಧಿ (ಮಳೆಗಾಲ ಸೇರಿ):– 18 ತಿಂಗಳು ಆಸಕ್ತ ಗುತ್ತಿಗೆದಾರರು ಹೆಚ್ಚಿನ ಮಾಹಿತಿ, ಟೆಂಡರ್ ದಾಖಲೆಗಳು ಮತ್ತು ಇತರೆ ಸೂಚನೆಗಳನ್ನು **(www.eproc.karnataka.gov.in)**. ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು ಹಾಗೂ ಠೇವಣಿ ಮತ್ತು ಟೆಂಡರ್ ಫೀಗಳನ್ನು ಆನ್‌ಲೈನ್‌ನಲ್ಲಿ **(www.eproc.karnataka.gov.in)**. ಪಾವತಿಸತಕ್ಕದ್ದು. **ಟೆಂಡರ್ ವೇಳಾಪಟ್ಟಿ :–** (1) ಪೂರ್ವಭಾವಿ ಸಭೆ ದಿನಾಂಕ: 14–11–2022 11.00 ಬೆಳಿಗ್ಗೆ (2) ಪ್ರಶ್ನೆ / ಮಾಹಿತಿಗಾಗಿ ಸಲ್ಲಿಸುವ ಕೊನೆಯ ದಿನಾಂಕ 18–11–2022 5.30 ಸಂಜೆ (3) ಟೆಂಡರ್ ದಾಖಲೆಯನ್ನು ಅಪ್‌ಲೋಡ್ ಮಾಡಲು ಕೊನೆಯ ದಿ: 23–11–2022 5.30 ಸಂಜೆ (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ 25–11–2022 11.00 ಬೆಳಿಗ್ಗೆ (5) ಹಣಕಾಸು ಬಿಡ್ ತೆರೆಯುವ ದಿನಾಂಕ **ತಾಂತ್ರಿಕ ಬಿಡ್ ಅನುಮೋದನೆ ನಂತರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು.** ಟೆಂಡರ್ ನಿಬಂಧನೆಗಳ ಬಗ್ಗೆ ಏನಾದರೂ ಬದಲಾವಣೆಯಾದರೂ, ಆಡಳಿತಾತ್ಮಕ ಸಮಸ್ಯೆಗಳು ಬಂದಲ್ಲಿ ಅಥವಾ ದಿನಾಂಕ ಮುಂದೂಡಿದರು ಸಹ ಈ ಬಗ್ಗೆ ಮಾಹಿತಿಯನ್ನು ಇ–ಪೋರ್ಟಲ್‌ನಲ್ಲಿ ಮಾತ್ರ ಪ್ರಚುರಪಡಿಸಲಾಗುವುದು ಯಾವುದೇ ದಿನ ಪತ್ರಿಕೆಯಲ್ಲಿ ಪ್ರಕಟಣೆಯನ್ನು ಹೊರಡಿಸುವುದಿಲ್ಲ.

DIPR/CTA/MCA/676/2022-23

ಸಹಿ/– ಕಾರ್ಯಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿತ್ರದುರ್ಗ

ಕರ್ನಾಟಕ ರಾಜ್ಯ ಪೋಲೀಸ್

ಕರ್ನಾಟಕ ರಾಜ್ಯದಲ್ಲಿ ಖಾಲಿ ಇರುವ ಪೊಲೀಸ್ ಕಾನ್ಸ್‌ಟೇಬಲ್ (ಸಿವಿಲ್) (ಪುರುಷ ಮತ್ತು ಮಹಿಳಾ) & (ತೃತೀಯಲಿಂಗ – ಪುರುಷ & ಮಹಿಳಾ) ಹಾಗೂ ಸೇವಾನಿರತ & ಬ್ಯಾಕ್‌ಲಾಗ್ (ಕಲ್ಯಾಣ ಕರ್ನಾಟಕ–454 ಹುದ್ದೆಗಳು) (ಮಿಕ್ಕುಳಿದ ವೃಂದ–1137 ಹುದ್ದೆಗಳು) ಒಟ್ಟು–1591 ಹುದ್ದೆಗಳಿಗೆ ಆನ್‌ಲೈನ್ (Online) ಮುಖಾಂತರ ಅರ್ಜಿಯನ್ನು ಆಹ್ವಾನಿಸಲು ಈಗಾಗಲೇ ಪ್ರಕಟಿಸಲಾಗಿದ್ದು, ಅಭ್ಯರ್ಥಿಗಳಿಗೆ ಸರ್ಕಾರದಿಂದ ಒಂದು ಬಾರಿಗೆ ಮಾತ್ರ ಎರಡು ವರ್ಷಗಳ ವಯೋಮಿತಿಯನ್ನು ಹೆಚ್ಚಿಸಿ ಆದೇಶಿಸಲಾಗಿರುತ್ತದೆ.

ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: 21.11.2022.

ಟಿಪ್ಪಣಿ: ಪೊಲೀಸ್ ಇಲಾಖೆಯ ನೇಮಕಾತಿಯು ಸಂಪೂರ್ಣ ಪಾರದರ್ಶಕತೆಯಿಂದ ಕೂಡಿರುತ್ತದೆ. ಇಲಾಖೆಯು ನಿಗಧಿಪಡಿಸಿದ ಶುಲ್ಕವನ್ನು ಮಾತ್ರ ಬ್ಯಾಂಕ್ ಮತ್ತು ಅಂಚೆ ಕಛೇರಿಗಳಲ್ಲಿ ಪಾವತಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಅಧಿಕೃತ ವೆಬ್‌ಸೈಟ್ https://ksp.karnataka.gov.in/ or https://ksp-recruitment.in/ ನ್ನು ವೀಕ್ಷಿಸುವುದು.

ಸಹಿ/–
ಡಿಜಿಪಿ, ನೇಮಕಾತಿ

DIPR/CP/3063/Zen/2022-23

ಕಾರಾಗೃಹ ಮತ್ತು ಸುಧಾರಣೆ ಸೇವೆ
ಮುಖ್ಯ ಅಧೀಕ್ಷಕರವರ ಕಛೇರಿ,
ಕೇಂದ್ರ ಕಾರಾಗೃಹ ಬೆಂಗಳೂರು, ಎಲೆಕ್ಟ್ರಾನಿಕ್ ಸಿಟಿ (ಅಂಚೆ) ಪರಪ್ಪನ ಅಗ್ರಹಾರ,
ಬೆಂಗಳೂರು – 560 100. ದೂರವಾಣಿ : 080–2573 1611.

ಸಂಖ್ಯೆ : ಕೇ.ಕಾ.ಬೆಂ./ಆಹಾರ/11735/2022–23 ದಿನಾಂಕ : 07–11–2022

ಟೆಂಡರ್ ಪ್ರಕಟಣೆ

ಬೆಂಗಳೂರು ಕೇಂದ್ರ ಕಾರಾಗೃಹದ ಅಡುಗೆ ಮನೆಯಲ್ಲಿ ಬಂಧಿಗಳಿಗೆ ಅಡುಗೆ ತಯಾರಿಸಲು ಉಪಯೋಗಿಸುವ ಈ ಕೆಳಕಂಡ ವಿವಿಧ ಅಳತೆಯ ಅಲ್ಯೂಮಿನಿಯಂ ಹಾಗೂ ಇನ್ನಿತರೆ ಪಾತ್ರಗಳ ಖರೀದಿಗೆ ಸಂಬಂಧಿಸಿದಂತೆ ವ್ಯಾಪಾರಸ್ಥರಿಂದ ಮೋಹರು ಮಾಡಿ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ. ಸದರಿ ಮುಚ್ಚಿದ ಲಕೋಟೆ ದರಪಟ್ಟಿಗಳನ್ನು ದಿನಾಂಕ : 14–11–2002 ರ ಬೆಳಿಗ್ಗೆ 11.00 ಗಂಟೆಯೊಳಗೆ ಸ್ವೀಕರಿಸಲಾಗುವುದು. ಹಾಗೂ ಅದೇ ದಿನದಂದು ಎಲ್ಲಾ ಸರಬರಾಜುದಾರರ / ದರಪಟ್ಟಿದಾರರ ಸಮಕ್ಷಮದಲ್ಲಿ ಮುಖ್ಯ ಅಧೀಕ್ಷಕರು ಕೇಂದ್ರ ಕಾರಾಗೃಹ ಬೆಂಗಳೂರು ಇವರ ಕಛೇರಿಯಲ್ಲಿ ಮೋಹರು ಮಾಡಿದ ದರಪಟ್ಟಿಗಳ ಲಕೋಟೆಯನ್ನು ತೆರೆಯಲಾಗುವುದು.

ಕ್ರ.ಸಂ.	ಅವಶ್ಯವಿರುವ ಪಾತ್ರೆಗಳ ವಿವರ	ಪ್ರಮಾಣ	ಸಂಖ್ಯೆ
01	ಸಾಂಬರ್ ಪಾತ್ರೆ (ಅಲ್ಯೂಮಿನಿಯಂ)	84 ಸೈಟ್ (ಮುಚ್ಚಳ ಸೇರಿ)	04
02	ಉಪಹಾರ ತಯಾರಿಸಲು ಪಾತ್ರೆ (ಅಲ್ಯೂಮಿನಿಯಂ)	750 ಲೀ (ಮುಚ್ಚಳ ಸೇರಿ)	04
03	ಎಸ್.ಎಸ್. ಪಾತ್ರೆ (ಹಾಲು ಕಾಯಿಸಲು)	500 ಲೀ (ಮುಚ್ಚಳ ಸೇರಿ)	02
04	ಎಸ್.ಎಸ್. ಬಕೆಟ್	15 ಲೀ	20
05	ಚಿಕ್ಕ ಪಾತ್ರೆಗಳು (ಅಲ್ಯೂಮಿನಿಯಂ)	250 ಲೀ	02

ಸಹಿ/– ಪಿ. ಎಸ್. ರಮೇಶ್
ಮುಖ್ಯ ಅಧೀಕ್ಷಕರು,
ಕೇಂದ್ರ ಕಾರಾಗೃಹ, ಬೆಂಗಳೂರು.

ವಾಸಾಇ/ಬೆಂ.ನ./3050/ಮಣಿಪಾಲ್/2022–23

ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ

ಮಕ್ಕಳೇಕೆ ರೆಬೆಲ್ ಆಗುತ್ತಾರೆ?

ಸುಶೀಲಾ ಡೋಣೂರ

ಅವನು ನಮ್ಮೊಂದಿಗೆ ಕುಳಿತು ಊಟ ಮಾಡದೆ ವರ್ಷವಾಯಿತೇನೊ. ನಾವಾಗಿಯೇ ಕರೆದರೂ ನುಣುಚಿಕೊಳ್ಳುತ್ತಾನೆ. ಏನಾದರೂ ಹೇಳಲು ಹೋದರೆ ಸಿಡುಕುತ್ತಾನೆ. ಅಸಹನೆ ತೋರಿಸುತ್ತಾನೆ. ಅವನದೇ ಬೇರೆ ಲೋಕ ಕಟ್ಟಿಕೊಂಡಿದ್ದಾನೇನೊ ಎನ್ನುವ ಆತಂಕ ಶುರುವಾಗಿದೆ.

***

ಎಲ್ಲದಕ್ಕೂ ತನ್ನ ಸ್ನೇಹಿತರ ಉದಾಹರಣೆ ಕೊಡುತ್ತಾನೆ. ನಾವು ಅವನಿಗಾಗಿ ಮಾಡುತ್ತಿರುವುದು ಏನೂ ಅಲ್ಲ ಅನ್ನುತ್ತಾನೆ. ಅಮ್ಮ ಅಪ್ಪ ಇರುವುದೇ ತನ್ನ ಬೇಕು ಬೇಡಗಳನ್ನು ನೋಡಿಕೊಳ್ಳಲು, ಅವರಿಗೆ ಅವರದೇ ಆದ ಅಸ್ತಿತ್ವ ಇದೆ ಅಂತಲೇ ಅವನಿಗೆ ಅನಿಸುತ್ತಿಲ್ಲ. ಮಗನ ಈ ವರ್ತನೆ ಬಹಳ ಬೇಸರ ತರಿಸುತ್ತಿದೆ...

***

ಒಂದು ಮಾತಾಡಿದರೆ ಹತ್ತು ಉತ್ತರ ಕೊಡುತ್ತಾಳೆ. ನಾವು ತರುವ ಬಟ್ಟೆ-ಬರೆ ಅವಳಿಗೆ ಈಗ ಇಷ್ಟವಾಗುತ್ತಿಲ್ಲ. ಏನಾದ್ರೂ ಪ್ರಶ್ನೆ ಮಾಡಿದರೆ ಕಟುವಾಗಿ ವರ್ತಿಸುತ್ತಾಳೆ. ಅವಳಿಗಾಗಿ ಏನು ಮಾಡಿದರೂ ತೃಪ್ತಿ ಇಲ್ಲ. ಕೇಳಿದ್ದನ್ನೆಲ್ಲಾ ಕೊಟ್ಟರೂ ಅವಳಿಗೆ ಖುಷಿ ಇಲ್ಲ.

***

ಭಾರತಿ ಸಿಂಗ್

ಹಲವು ಮನೆಗಳ ಕಥೆಯಿದು. ಮಕ್ಕಳ ಬಗ್ಗೆ ಪೋಷಕರ ದೂರು, ಪೋಷಕರ ಬಗ್ಗೆ ಮಕ್ಕಳ ದುಮ್ಮಾನವೆಂಬುದು ಎಲ್ಲ ಕಾಲಕ್ಕೂ ಇರುವಂಥದ್ದು. ಈ ಘರ್ಷಣೆಯು ತನ್ನ ರೂಪ–ವ್ಯಾಖ್ಯಾನ ಬದಲಿಸುತ್ತ ಮನೆಗಳಲ್ಲಿ ಒಂದು ಬಗೆಯ ಅಶಾಂತಿಗೆ ಕಾರಣವಾಗಿದೆ. ಈ ಸಂಘರ್ಷದಿಂದಾಗಿ ಪೋಷಕರು ಮತ್ತು ಮಕ್ಕಳು ಆಪ್ತ ಸಮಾಲೋಚನಾ ಕೇಂದ್ರಗಳ ಬಾಗಿಲನ್ನು ಎಡತಾಕುವಂತಾಗಿದೆ.

ಈ ಕಾಲದ ದೊಡ್ಡ ಸವಾಲು ಎಂದರೆ ಪೇರೆಂಟಿಂಗ್. ಮಕ್ಕಳ ಪೋಷಣೆ ವಿಚಾರದಲ್ಲಿ ಗೊಂದಲ ಇದ್ದೇ ಇರುತ್ತದೆ. ಹೇಗೆ ಬೆಳೆಸಿದರೂ ಆತಂಕ; ಏನೋ ಕಳವಳ. ಇನ್ನು ದುಡಿಯುವ ಅಪ್ಪ ಅಮ್ಮಂದಿರಾದರೆ ಅವರ ಚಡಪಡಿಕೆ ಹೇಳತೀರದು. ಮಕ್ಕಳಲ್ಲಿ ದಿನ ದಿನಕ್ಕೂ ಬದಲಾಗುವ ಮಾತಿನ ವರಸೆ, ಕಟುವರ್ತನೆ, ಶೀಘ್ರ ಪ್ರತಿಕ್ರಿಯೆಗಳಿಗೆ ಕಳವಳಗೊಳ್ಳುತ್ತ, ಆತಂಕಕ್ಕೀಡಾಗುತ್ತ ಸಂತೈಸಿಕೊಳ್ಳಲೆತ್ನಿಸುವ ಪಾಡು ಅವರದ್ದು.

ಮಕ್ಕಳು ಕೊಡುವ ಸಣ್ಣ ಸಣ್ಣ ಖುಷಿಗಳಿಗೆ ಹಿಗ್ಗುತ್ತ, ಅವರು ತರುವ ಚಿಕ್ಕಪುಟ್ಟ ಸಿಹಿ ಸುದ್ದಿಗಳಿಗೆ ಮೈಯೆಲ್ಲಾ ಕಿವಿಯಾಗುತ್ತ, ಅವರು ಬಯಸುವ ಖುಷಿಗಳಲ್ಲೇ ಸಂತಸ ಕಾಣುತ್ತ, ತಾವು ದುಡಿದ್ದನ್ನೆಲ್ಲಾ ಸುರಿದು, ಮಕ್ಕಳ ಕನಸನ್ನೇ ಬದುಕುತ್ತಿದ್ದರೂ. ನಾವೇ ಹೆತ್ತ ಮಕ್ಕಳು ಏಕೆ ನಮ್ಮನ್ನು ಕಂಡರೆ ದುರುಗುಡುತ್ತಾರೆ ಎನ್ನುವ ಪ್ರಶ್ನೆ ಮಾತ್ರ ಹಲವರದ್ದು.

ಬಯಸಿದ ಲೋಕವನ್ನೇ ತಂದು ಅವರ ಮುಂದಿಟ್ಟರೂ ಮಕ್ಕಳೇಕೆ ರೆಬೆಲ್ ಆಗುತ್ತಾರೆ. ಗೌರವ ಇರಲಿ, ಕಿಂಚಿತ್ ಪ್ರೀತಿಗೂ ಅನರ್ಹರೂ ಎಂಬಂತೆ ಅಪ್ಪ ಅಮ್ಮಂದಿರನ್ನು ಕಾಣುತ್ತಾರೆ. ಈ ತಲ್ಲಣಕ್ಕೆ ತಂಪು ಸುರಿಯುವುದು ಹೇಗೆ? .

ಮಕ್ಕಳು ಹಾಗೂ ಪೋಷಕರ ನಡುವಿನ ಸಂಘರ್ಷ ಬೆಳೆಯದಂತೆ ಏನು ಮಾಡಬಹುದು. ಎಲ್ಲದಕ್ಕೂ ಪೋಷಕರೇ ರಾಜಿ ಆಗುತ್ತ, ಅವರು ಬಯಸುವುದನ್ನೆಲ್ಲಾ ಅವರಿಗೆ ಒದಗಿಸಿ ಕೊಡುತ್ತ ಹೋಗುವುದರಿಂದ ಎದುರಾಗಬಹುದಾದ ಆಪತ್ತುಗಳು ಕಡಿಮೆಯಲ್ಲ. ಅಮ್ಮ ಅಪ್ಪನ ಆರ್ಥಿಕ–ಸಾಮಾಜಿಕ ಇತಿಮಿತಿಗಳನ್ನು ಒಪ್ಪಿಕೊಳ್ಳುವಂತೆ ಮಕ್ಕಳನ್ನು ಸಿದ್ಧಗೊಳಿಸುವುದು ಅಷ್ಟು ಸುಲಭವೇ?

> ದೊಡ್ಡವರ ಮನಸು 'ಮಗು'ವಾಗದ ಹೊರತು ಮಕ್ಕಳನ್ನು ಅರಿಯಲಾಗದು. ಮುಕ್ತವಾಗಿ ಬಿಟ್ಟರೆ ಹಾರಿ ಹೋಗುವ, ಬಿಗಿಯಾಗಿ ಹಿಡಿದರೆ ಉಸಿರುಗಟ್ಟುವ ನಾಜೂಕಿನ ಗಿಳಿಗಳಂತೆ ಮಕ್ಕಳು. ದುಡಿಯುವ ಅಪ್ಪ ಅಮ್ಮಂದಿರಿಗೆ ಮಕ್ಕಳನ್ನು ಬೆಳೆಸುವುದು ಎಂದರೆ ಮುಳ್ಳಿನ ಮೇಲೆ ನಿಂತಂತಹ ಅನುಭವ. ಮಕ್ಕಳ ವರ್ತನೆಯ ಬಗ್ಗೆ ಬೆಚ್ಚುವ ಪೋಷಕರಿಗಾಗಿ ಮಕ್ಕಳ ದಿನಾಚರಣೆಯ ಈ ಹೊತ್ತಿನಲ್ಲಿ ಇಲ್ಲಿದೆ ಕಿವಿಮಾತು...

'ಮಕ್ಕಳು ಹಾಗೂ ಪೋಷಕರ ಸಂಘರ್ಷ ಹೊಸದೇನಲ್ಲ, ಎಲ್ಲಾ ಕಾಲಘಟ್ಟದಲ್ಲೂ, ಎಲ್ಲಾ ವರ್ಗಗಳಲ್ಲೂ ಇರುವಂಥದ್ದೇ. ಅದನ್ನು ನೋಡುವ ಪರಿ ಈಗ ಬದಲಾಗಿದೆಯಷ್ಟೆ' ಎನ್ನುತ್ತಾರೆ ದಾವಣಗೆರೆಯ ಮಕ್ಕಳ ಮನಶ್ಶಾಸ್ತ್ರಜ್ಞೆ ಡಾ. ಆಶಾ ಎಚ್.ಎನ್.

'ಬಾಲ್ಯದಲ್ಲಿ ತಾವು ಅನುಭವಿಸಿದ ಕಷ್ಟಗಳು, ನೋವು, ಅವಮಾನ, ಸೋಲುಗಳನ್ನು ತಮ್ಮ ಮಕ್ಕಳು ಅನುಭವಿಸಬಾರದು. ಅವರಿಗೆ ಎಲ್ಲಾ ಸವಲತ್ತುಗಳನ್ನು ಒದಗಿಸಬೇಕು ಎನ್ನುವ ಪೋಷಕರು ಇದು ತಮ್ಮ ಮಕ್ಕಳ ಬೆಳವಣಿಗೆಗೆ ಪೂರಕವಾದ ಮನಸ್ಥಿತಿಯಲ್ಲ ಎನ್ನುವುದನ್ನು ಮನಗಾಣಬೇಕು. ಬಯಸುವ ಮುನ್ನವೇ ಎಲ್ಲವನ್ನೂ ಅವರಿಗೆ ಒದಗಿಸಿಕೊಡುವುದು ಈ ಸಮಸ್ಯೆಗೆ ಪರಿಹಾರವಲ್ಲ. ಮಕ್ಕಳಿಗೆ ಪಡೆದುಕೊಳ್ಳುವುದರ ಜತೆಗೆ ಕಳೆದುಕೊಳ್ಳುವ ಅನುಭವವೂ ಬೇಕು. ಬರೀ ಗೆಲುವೇ ಜೀವನ ಅಲ್ಲ. ಸೋಲಿನ ಅನುಭವವೂ ಆಗಬೇಕು. ಒಂದು ವಸ್ತುವನ್ನು ಕೇಳಿದೊಡನೆಯೇ ಅವರ ಕೈಗಿಟ್ಟುಬಿಟ್ಟರೆ, ಪ್ರಯಾಸವಿಲ್ಲದೆ ಎಲ್ಲವೂ ಸಿಕ್ಕುಬಿಟ್ಟರೆ ಅವರಿಗೆ ಜೀವನಾನುಭವ ದಕ್ಕದು. ಕೇಳಿದ್ದನ್ನೆಲ್ಲ ಕೊಡುತ್ತಿದ್ದರೆ ನೀವು ಮಕ್ಕಳನ್ನು ತಪ್ಪು ದಾರಿಯಲ್ಲಿ ನಡೆಸುತ್ತಿದ್ದೀರಿ ಎಂದೇ ಅರ್ಥ. ಸಹನೆ, ತಾಳ್ಮೆ, ಹೊಂದಾಣಿಕೆಯ ಜತೆಗೆ ಕಳೆದುಕೊಳ್ಳುವುದನ್ನೂ ಕಲಿಸಬೇಕು' ಎನ್ನುತ್ತಾರೆ ಅವರು.

ಆದರೆ, ಬಹುತೇಕ ಪೋಷಕರಿಗೆ ಇಂಥ ಮಕ್ಕಳನ್ನು ನಿರ್ವಹಿಸುವ ಕೌಶಲದ ಕೊರತೆ ಇದೆ. ಇದರಿಂದ ತಾವೂ ಆತಂಕಕ್ಕೀಡಾಗುವ ಜತೆಗೆ, ಮಕ್ಕಳನ್ನೂ ಪೀಡಿಸುತ್ತಾರೆ. ತಮ್ಮ ಸಾಮಾಜಿಕ–ಕೌಟುಂಬಿಕ ನಿರೀಕ್ಷೆಗಳು, ವೈಯಕ್ತಿಕ ಆದರ್ಶಗಳು, ಚಿಂತನೆಗಳು, ಕೆಲಸದ ಸ್ಥಳದಲ್ಲಿನ ಕಿರಿಕಿರಿ, ಮಾನಸಿಕ ಒತ್ತಡ ಸೇರಿ ಎಲ್ಲಾ ಭಾವಾತಿರೇಕಗಳನ್ನು ಮಕ್ಕಳ ಮೇಲೆ ಹೇರಲು ಹೋಗುತ್ತಾರೆ. ಹೀಗಾಗಿ, ತಾವೂ ನಿರಾಶೆಗೆ ಒಳಗಾಗುತ್ತಾರೆ, ಮಕ್ಕಳಲ್ಲಿಯೂ ಅಸಹನೆ ಬಿತ್ತುತ್ತಾರೆ.

'ಸಂಘರ್ಷಕ್ಕೆ ಮುಖ್ಯ ಕಾರಣ ಇಬ್ಬರ ನಡುವಿನ ವಯಸ್ಸಿನ ಅಂತರ. ಮಕ್ಕಳು ಹಾಗೂ ಪೋಷಕರ ನಡುವೆ ಕನಿಷ್ಠ 30 ವರ್ಷಗಳ ಅಂತರವಿರುತ್ತದೆ. 30 ವರ್ಷಗಳ ಹಿಂದೆ ಇದ್ದ ಬಾಲ್ಯ, ಬದುಕು, ವರ್ತನೆಯನ್ನು ಮಕ್ಕಳಲ್ಲಿ ಕಾಣುವುದು ತಪ್ಪು. ನಿಮ್ಮ ಬದುಕಿಗೂ ಅವರ ಬದುಕಿಗೂ 30 ವರುಷಗಳ ಅಂತರವಿರುವುದನ್ನು ಮರೆಯಬಾರದು' ಎನ್ನುತ್ತಾರೆ ಬೆಂಗಳೂರಿನ ಆಪ್ತ ಸಮಾಲೋಚಕಿ ಭಾರತಿ ಸಿಂಗ್.

ಕಾರಣ ಅರಿತರೆ ಪರಿಹಾರ ಸುಲಭ

ಮಕ್ಕಳ ಪ್ರತಿ ವರ್ತನೆಗೂ ಒಂದು ಕಾರಣವಿರುತ್ತದೆ. ಆ ಕಾರಣವನ್ನು ಗುರುತಿಸಿದಷ್ಟು ಬೇಗ ಸಮಸ್ಯೆಗೆ ಪರಿಹಾರ ಸಿಗುತ್ತದೆ. ಕೆಲವೊಮ್ಮೆ, ತಮ್ಮ ನಡವಳಿಕೆ, ದರ್ಪ, ನಿರ್ಧಾರಗಳನ್ನು ಒಪ್ಪಿಕೊಳ್ಳುವಿರಾ ಎಂದು ತಿಳಿದುಕೊಳ್ಳಲು ಕೆಲವು ಮಕ್ಕಳು ಹೀಗೆ ವರ್ತಿಸಿ ನೋಡುತ್ತಾರೆ. ಕೆಲವೊಮ್ಮೆ ಬೇರೆ ಮಕ್ಕಳನ್ನು ನೋಡಿ ಅನುಕರಣೆ ಮಾಡಬಹುದು. ಸಂಬಂಧಿಕರ ಮಕ್ಕಳು, ಅಕ್ಕಪಕ್ಕದವರು ಅಥವಾ ಸ್ನೇಹಿತರಲ್ಲಿ ಇಂಥ ವರ್ತನೆ ನೋಡಿ ತಾವೂ ಹಾಗೆ ಮಾಡಲು ಹೋಗಬಹುದು. ಇದು ಸರಿಯಾದ ನಡವಳಿಕೆ ಅಲ್ಲ. ಇಂತಹ ವರ್ತನೆಗಳು ಸಮ್ಮತವಲ್ಲ, ಅವುಗಳಿಗೆ ಆಸ್ಪದವಿಲ್ಲ ಎನ್ನುವುದನ್ನು ಸೌಮ್ಯ ರೀತಿಯಲ್ಲಿ ಮನವರಿಕೆ ಮಾಡಿಕೊಡಬೇಕು.

ನಿಮ್ಮ ಗಮನ ಸೆಳೆಯಲು, ನಿಮ್ಮೊಂದಿಗೆ ಸಮಯ ಕಳೆಯಲು, ಬೆರೆತು ಹಗುರಾಗಲು ಮಗು ಇಂತಹ ವರ್ತನೆಯನ್ನು ತೋರಬಹುದು. ಅವರಿಗಾಗಿ ಸ್ವಲ್ಪ ಸಮಯ ಮೀಸಲಿಡಿ. ತಮ್ಮ ಜೀವನದ ಮೇಲೆ ಪೋಷಕರ ನಿಯಂತ್ರಣವನ್ನು ತಪ್ಪಿಸಲು ಮತ್ತು ಸ್ವಾತಂತ್ರ್ಯ ಪಡೆಯಲು ಹೀಗೆ ಮಾಡಬಹುದು. ತಮಗೇ ಅರ್ಥವಾಗದ, ಹಾರ್ಮೋನ್ ಬದಲಾವಣೆಯ ಪರಿಣಾಮವೂ ಇರಬಹುದು. ತುಸು ಶಾಂತವಾಗಿ, ತಾಳ್ಮೆಯಿಂದ ವರ್ತಿಸಿ. ಅವರ ನಡವಳಿಕೆಯ ಹಿಂದಿನ ಕಾರಣವನ್ನು ತಿಳಿಯಿರಿ ಮತ್ತು ಅದನ್ನು ಸರಿಯಾದ ರೀತಿಯಲ್ಲಿ ಪರಿಹರಿಸಲು ಯತ್ನಿಸಿ. ನಿಮ್ಮ ಮಿತಿಯಲ್ಲಿ ಅದು ಸಾಧ್ಯವಾಗದಿದ್ದರೆ ಬಂಧುಗಳ, ಸ್ನೇಹಿತರ, ಶಿಕ್ಷಕರ ಅಥವಾ ತಜ್ಞರ ನೆರವು ಪಡೆಯಬಹುದು.

ಮಗು ಎನ್ನುವುದೊಂದು ಚಂದದ ಕವಿತೆ. ಒಮ್ಮೆಲೆ ಅರ್ಥವಾಗಿ ಬಿಡುವಂಥದ್ದಲ್ಲ. ಹಾಗೇ ಅದು ಅರ್ಥವಾಗದ ಮಹಾಗ್ರಂಥವೇನಲ್ಲ. ಮುದ್ದಿನಿಂದ ಓದಬೇಕು. ಪ್ರೀತಿಯಿಂದ ತಿದ್ದಬೇಕು. ಅಂದಾಗ ಮಾತ್ರ ಅದು ನಮ್ಮ ಬದುಕಿನ ಮಹಾಕಾವ್ಯವಾಗಬಹುದು.

ಹೀಗೆ ಮಾಡಿ...

- ಮಕ್ಕಳು ಪ್ರತಿ ಹೆಜ್ಜೆಯನ್ನು ಪೋಷಕರ ಅನುಮತಿ ಪಡೆದೇ ಇಡಬೇಕು ಎನ್ನುವ ನಿರೀಕ್ಷೆ ಬೇಡ.
- ನಿಮ್ಮೆಲ್ಲ ಕನಸುಗಳನ್ನು ಮಕ್ಕಳ ಮೇಲೆ ಹೇರಬೇಡಿ. ಅವರು ನಿಮ್ಮ ಕೈ ಜಾರಿದ ಕನಸುಗಳನ್ನು, ಕೈಗೂಡದ ಆಕಾಂಕ್ಷೆಗಳನ್ನು ಹೊರುವ ಗೋಣಿ ಚೀಲಗಳಲ್ಲ.
- ನಿಮ್ಮ ಸಾಮಾಜಿಕ, ಆರ್ಥಿಕ, ಕೌಟುಂಬಿಕ ಪರಿಸ್ಥಿತಿಗಳನ್ನು, ಇತಿಮಿತಿಗಳನ್ನು ಅವರಿಗೆ ಮನಮುಟ್ಟುವಂತೆ ಅರ್ಥ ಮಾಡಿಸಿ.
- ಮಕ್ಕಳ ಸಾಮರ್ಥ್ಯವನ್ನು ಅರಿಯದೇ ಅವರ ಮೇಲೆ ಅತಿಯಾದ ನಿರೀಕ್ಷೆಗಳನ್ನು ಇಟ್ಟುಕೊಳ್ಳಬೇಡಿ
- ನಿಮ್ಮ ಜವಾಬ್ದಾರಿ, ಒತ್ತಡ, ಅಸಹನೆ, ಅಸಹಾಯಕತೆಗಳ ನಿಟ್ಟುಸಿರನ್ನು ಮಕ್ಕಳಿಗೆ ತಲುಪಿಸಬೇಡಿ.
- ನಿಮ್ಮ ಅಮೂಲ್ಯ ಸಮಯವನ್ನು ಮಕ್ಕಳೊಂದಿಗೆ ಅರ್ಥಪೂರ್ಣವಾಗಿ ಕಳೆಯಿರಿ.
- ಇಬ್ಬರ ನಡುವೆ ಅಂತರ ಸೃಷ್ಟಿಯಾಗಲು ಅವಕಾಶ ಕೊಡಬೇಡಿ.
- ನಾವೇ ಹೆಚ್ಚು ತಿಳಿದುಕೊಂಡವರು, ವಿದ್ಯಾವಂತರು, ಬುದ್ಧಿವಂತರು ಎಂಬ ನಿಲುವನ್ನು ಮಕ್ಕಳ ಮುಂದೆ ಪ್ರದರ್ಶಿಸಬೇಡಿ.
- ಪ್ರೀತಿ, ಸಹನೆ, ಪರಸ್ಪರ ಗೌರವಾದರಗಳನ್ನು ನಿಮ್ಮ ವರ್ತನೆಯ ಮೂಲಕ ಅವರಿಗೆ ಕಲಿಸಿ

ಡಾ. ಆಶಾ ಎಚ್.ಎನ್, ಮನಶಾಸ್ತ್ರಜ್ಞೆ

ಗರಿ ಗರಿ ಕುರುಕಲು

ನಳಪಾಕ

ಹಂಸಿಣಿ ಎಸ್ ಮುಲ್ಕಿ

ಹರಭರ ಕಬಾಬ್

ಬೇಕಾಗುವ ಸಾಮಗ್ರಿಗಳು:

2 ಕಟ್ಟು ಪಾಲಕ್ ಸೊಪ್ಪು, ಒಂದು ಹಸಿಮೆಣಸು, ಒಂದು ಕ್ಯಾಪ್ಸಿಕಂ, ಅರ್ಧ ಕಪ್ ಬೀನ್ಸ್, ಅರ್ಧ ಕಪ್ ಹಸಿರು ಬಟಾಣಿ, ಅರ್ಧ ಕಪ್ ಬೇಯಿಸಿದ ಆಲೂಗಡ್ಡೆ, ಅರ್ಧಕಪ್ ಪನ್ನೀರ್, 3 ಚಮಚ ಕೊತ್ತಂಬರಿ ಸೊಪ್ಪು, ಒಂದು ಚಮಚ ಕಾರ್ನ್ ಫ್ಲೋರ್, 2 ಚಮಚ ಬ್ರೆಡ್ ಪುಡಿ, ಕಾಲು ಚಮಚ ಮೆಣಸಿನಪುಡಿ, ದನಿಯಾ ಪುಡಿ, ಗರಂ ಮಸಾಲ, ಅರಿಶಿನ ಪುಡಿ, ಉಪ್ಪು ರುಚಿಗೆ ತಕ್ಕಷ್ಟು.

ತಯಾರಿಸುವ ವಿಧಾನ:

ಮೊದಲು ಪಾಲಕ್ ಸೊಪ್ಪನ್ನು ಒಂದು ಬಾಣಲೆಯಲ್ಲಿ ಬೇಯಿಸಿಕೊಂಡು ಅದರಲ್ಲಿನ ನೀರು ತೆಗೆದು ಮಿಕ್ಸಿ ಜಾರ್‌ಗೆ ಹಾಕಿಕೊಳ್ಳಬೇಕು. ಮತ್ತೊಂದು ಬಾಣಲೆಗೆ ಎಣ್ಣೆ ಹಾಕಿ ಕಾದ ನಂತರ ಹೆಚ್ಚಿದ ಹಸಿಮೆಣಸು ಮತ್ತು ಕ್ಯಾಪ್ಸಿಕಂ, ಬೀನ್ಸ್, ಹಸಿಬಟಾಣಿಯನ್ನು ಬಾಡಿಸಿಕೊಳ್ಳಬೇಕು. ಅವಶ್ಯಕತೆ ಇದ್ದಲ್ಲಿ ಆಲೂಗಡ್ಡೆಯನ್ನು ಬಳಸಬಹುದು. ಈ ಮಿಶ್ರಣವನ್ನು ಜಾರ್‌ನಲ್ಲಿರುವ ಪಾಲಕ್ ಸೊಪ್ಪಿನ ಜೊತೆಗೆ ಸೇರಿಸಿ, ನೀರು ಹಾಕದೇ ಸ್ವಲ್ಪ ತರಿತರಿಯಾಗಿ ರುಬ್ಬಿಕೊಳ್ಳಬೇಕು. ಇದನ್ನು ಒಂದು ಪಾತ್ರೆಗೆ ಹಾಕಿ ಇದರ ಜೊತೆಗೆ ಬೇಯಿಸಿದ ಆಲೂಗಡ್ಡೆ, ಪನ್ನೀರ್, ಕೊತ್ತಂಬರಿ ಸೊಪ್ಪು, ಕಾರ್ನ್ ಫ್ಲೋರ್, ಬ್ರೆಡ್ ಕ್ರಮ್ಸ್, ಮೆಣಸಿನಕಾಯಿ ಪುಡಿ, ದನಿಯಾ ಪುಡಿ, ಗರಂ ಮಸಾಲ, ಅರಿಶಿನ ಪುಡಿ, ರುಚಿಗೆ ತಕ್ಕಷ್ಟು ಉಪ್ಪು ಸೇರಿಸಿ ಕಲೆಸಿಕೊಳ್ಳಬೇಕು. ನೀರನ್ನು ಉಪಯೋಗಿಸಬಾರದು. ಬಳಿಕ ಇದನ್ನು ಚಪ್ಪಟೆ ರೂಪದಲ್ಲಿ ಮಾಡಿಕೊಂಡು ಬ್ರೆಡ್ ಕ್ರಮ್ಸ್ ಮೇಲೆ ಉರುಳಾಡಿಸಿ. ಮೇಲೊಂದು ಗೋಡಂಬಿ ಇಟ್ಟು ಬಂಗಾರದ ಬಣ್ಣ ಬರುವವರೆಗೂ ಎಣ್ಣೆಯಲ್ಲಿ ಕರಿಯಬೇಕು. ಇದನ್ನು ಕೊತ್ತಂಬರಿ ಸೊಪ್ಪಿನ ಚಟ್ನಿಯೊಂದಿಗೆ ಸವಿಯಬಹುದು.

ಅವಲಕ್ಕಿ ಕಟ್ಲೆಟ್

ಬೇಕಾಗುವ ಸಾಮಗ್ರಿಗಳು:

ಒಂದು ಕಪ್ ತೆಳು ಅವಲಕ್ಕಿ, ಎರಡು ಬೇಯಿಸಿದ ಆಲೂಗಡ್ಡೆ, ತಲಾ ಕಾಲು ಚಮಚ ಅರಿಶಿನ, ಖಾರದ ಪುಡಿ, ಗರಂ ಮಸಾಲ, ಆಮ್ ಚೂರ್, ಚಾಟ್ ಮಸಾಲ, ಶುಂಠಿ, ಬೆಳ್ಳುಳ್ಳಿ ಪೇಸ್ಟ್, ಕಾಳು ಮೆಣಸಿನ ಪುಡಿ, 3 ಚಮಚ ಕಾರ್ನ್ ಫ್ಲೋರ್, 3 ಚಮಚ ಬ್ರೆಡ್ ಪುಡಿ, ಎರಡು ಚಮಚ ಕೊತ್ತಂಬರಿ ಸೊಪ್ಪು, ಒಂದು ಚಮಚ ಮೈದಾ ಹಿಟ್ಟು, ಅರ್ಧ ಲೀಟರ್ ಎಣ್ಣೆ, ಉಪ್ಪು ರುಚಿಗೆ ತಕ್ಕಷ್ಟು.

ತಯಾರಿಸುವ ವಿಧಾನ: ತೆಳು ಅವಲಕ್ಕಿಯನ್ನು ತೆಗೆದುಕೊಂಡು ಅದನ್ನು ನೀರಿನಲ್ಲಿ ತೊಳೆದ ತಕ್ಷಣವೇ ಒಂದು ಅಗಲವಾದ ಪಾತ್ರೆಗೆ ಹಾಕಿಕೊಳ್ಳಬೇಕು. ಅದೇ ಪಾತ್ರೆಗೆ ಎರಡು ಬೇಯಿಸಿದ ಆಲೂಗಡ್ಡೆ, ಅರಿಶಿನ, ಖಾರದ ಪುಡಿ, ಗರಂ ಮಸಾಲ, ಆಮ್ ಚೂರ್ ಪುಡಿ (ಮಾವಿನಹಣ್ಣಿನ ಪುಡಿ), ಚಾಟ್ ಮಸಾಲ, ಶುಂಠಿ, ಬೆಳ್ಳುಳ್ಳಿ ಪೇಸ್ಟ್, ಕೊತ್ತಂಬರಿ ಸೊಪ್ಪು, ಕಾಳು ಮೆಣಸಿನ ಪುಡಿ ಹಾಕಬೇಕು. ನೀರು ಹಾಕದೇ ಚಪಾತಿ ಹಿಟ್ಟಿನ ಹದಕ್ಕಿಂತ ಕಡಿಮೆ ಹದದಲ್ಲಿ ಕಲೆಸಿಕೊಳ್ಳಬೇಕು. ಮತ್ತೊಂದು ಪಾತ್ರೆಗೆ ಕಾರ್ನ್ ಫ್ಲೋರ್, ಮೈದಾಹಿಟ್ಟು, ಮೆಣಸಿನ ಪುಡಿ, ಉಪ್ಪು, ನೀರು ಹಾಕಿ ನೀರು ದೋಸೆ ಹಿಟ್ಟಿನ ಹದಕ್ಕೆ ಮಿಶ್ರಣ ಮಾಡಿಕೊಳ್ಳಬೇಕು. ಇದೇ ಮಿಶ್ರಣಕ್ಕೆ ಈ ಹಿಂದೆ ಮಾಡಿದ್ದ ಮಿಶ್ರಣವನ್ನು ದಪ್ಪವಾಗಿ ಚಪ್ಪಟೆ ಆಕಾರದಲ್ಲಿ ಮಾಡಿ ಹಾಕಬೇಕು. ತಕ್ಷಣವೇ ತೆಗೆದು ಬ್ರೆಡ್ ಪುಡಿಯೊಳಗೆ ಅದ್ದಿ ಸ್ವಲ್ಪವೇ ಎಣ್ಣೆ ಹಾಕಿಕೊಂಡು ಬಂಗಾರದ ಬಣ್ಣ ಬರುವವರೆಗೆ ಕರಿಯಬೇಕು.

ಸ್ತನ್ಯಪಾನದ ವೇಳೆ ಋತುಚಕ್ರದಲ್ಲಿ ಏರುಪೇರು

ಸ್ಪಂದನ

ಡಾ. ವೀಣಾ ಎಸ್. ಭಟ್

1. ಶಸ್ತ್ರಚಿಕಿತ್ಸೆಯ ಮೂಲಕ ಎರಡು ಮಕ್ಕಳಾಗಿವೆ. ಎರಡನೇ ಮಗುವಿನ ಹೆರಿಗೆ ಸಂದರ್ಭದಲ್ಲಿ ಉಸಿರಾಟದ ತೊಂದರೆ ಇದ್ದಿದ್ದರಿಂದ ಮಕ್ಕಳಾಗದ ಆಪರೇಷನ್ ಮಾಡಲಿಲ್ಲ. ಈಗ ಎರಡನೇ ಮಗುವಿಗೆ 8 ತಿಂಗಳು. ತಿಂಗಳು ಮುಟ್ಟಾಗಿಲ್ಲ. ಗರ್ಭಧಾರಣೆಯನ್ನು ತಿಳಿಸುವ ಕಿಟ್‌ನಿಂದ ಮನೆಯಲ್ಲಿ ಪರೀಕ್ಷೆ ನಡೆಸಿದೆ. ಗರ್ಭಿಣಿ ಅಲ್ಲವೆಂದು ತಿಳಿಯಿತು. ಆದರೂ ಮನಸ್ಸಿನ ಮೂಲೆಯಲ್ಲಿ ಅಳುಕಿದೆ. ಸಲಹೆ ನೀಡಿ ಮೇಡಂ.

ಅಪರ್ಣ, ಕೆ.ಆರ್. ಪೇಟೆ

ಅಪರ್ಣ ಅವರೇ, ನೀವೀಗ ಮಗುವಿಗೆ ಎದೆಹಾಲು ಕುಡಿಸುತ್ತಿರುವುದರಿಂದ ಮುಟ್ಟಾಗದೇ ಇರಬಹುದು. ಇದನ್ನು ಲ್ಯಾಕ್ಟೇಷನಲ್ ಅಮೆನೂರಿಯಾ ಎನ್ನುತ್ತಾರೆ. ಹೆಚ್ಚಿನ ಸಂದರ್ಭಗಳಲ್ಲಿ ಹೆರಿಗೆಯ ನಂತರ ಆರು ತಿಂಗಳ ಕಾಲ ಮಗುವಿಗೆ ಕೇವಲ ಎದೆಹಾಲು ಕುಡಿಸುವುದರಿಂದ, ಮಗು ಮೊಲೆತೊಟ್ಟನ್ನು ಹೆಚ್ಚು ಚೀಪುವುದರಿಂದ ಮೆದುಳಿನ ಹೈಪೋಥಲಾಮಸ್-ಪಿಟ್ಯೂಟರಿ-ಅಂಡಾಶಯ ಅಕ್ಷೆಯ ಕಾರ್ಯವೈಖರಿಯಲ್ಲಿ ವ್ಯತ್ಯಾಸ ಉಂಟಾಗಿ ಅಂಡಾಶಯದಿಂದ ಅಂಡಾಣು ಉತ್ಪಾದನೆಯಾಗುವುದಿಲ್ಲ. ಇದರಿಂದ ಮಾಸಿಕ ಋತುಚಕ್ರವು ಆಗುವುದಿಲ್ಲ. ಇದು ತಾತ್ಕಾಲಿಕ ಅಷ್ಟೇ. ಹೆಚ್ಚಿನ ಸಂದರ್ಭದಲ್ಲಿ ಆರು ತಿಂಗಳ ನಂತರ ಋತುಚಕ್ರ ಆರಂಭವಾಗುತ್ತದೆ. ಈ ಪ್ರಕ್ರಿಯೆ ಎಂಟು ತಿಂಗಳವರೆಗೆ ಮುಂದುವರೆದಿರಬಹುದು. ನೀವು ಸಂತಾನ ನಿಯಂತ್ರಣ ಕ್ರಮವಾಗಿ ಕಾಪರ್ಟಿ ಅಳವಡಿಕೆ, ಶಾಶ್ವತ ಸಂತಾನಶಕ್ತಿ ಹರಣ ಚಿಕಿತ್ಸೆ ವಿಧಾನಗಳನ್ನು ವೈದ್ಯರ ಸಲಹೆ ಮೇರೆಗೆ ಅನುಸರಿಸಿ.

2. ನನಗೆ 40 ವರ್ಷ. ವರ್ಷದಿಂದ 2 ರಿಂದ 3 ತಿಂಗಳಿಗೊಮ್ಮೆ ಮುಟ್ಟಾಗುತ್ತಿದೆ. ಮುಟ್ಟಾದಾಗ 8 ರಿಂದ10 ದಿನಗಳ ರಕ್ತಸ್ರಾವ ಇರುತ್ತದೆ. ಹತ್ತಿರದ ವೈದ್ಯರಲ್ಲಿ ತೋರಿಸಿದಾಗ ಸ್ಕ್ಯಾನಿಂಗ್ ಮಾಡಿಸಿ, ತೊಂದರೆ ಏನಿಲ್ಲ ಎಂದು ಮಾತ್ರೆ ಕೊಟ್ಟಿದ್ದರು. ಮಾತ್ರೆ ತಗೊಂಡ ಮೇಲೆ ಸ್ವಲ್ಪ ಕಡಿಮೆಯಾಯಿತು. ಈಗ ಮತ್ತೆ ಹಾಗೇ ಆಗುತ್ತಿದೆ. ಬೇಕಾದರೆ ಗರ್ಭಕೋಶ ತೆಗೆಯಬಹುದು ಎಂದು ವೈದ್ಯರು ಹೇಳಿದ್ದಾರೆ. ಮುಟ್ಟು ನಿಲ್ಲುವಾಗ ಹೀಗೆ ಆಗುತ್ತದೆ ಎಂದು ಕೆಲವರು ಹೇಳಿದರೆ, ಹೀಗೆ ಬಿಟ್ಟರೆ ಕ್ಯಾನ್ಸರ್ ಆಗುತ್ತೆ ಎಂದು ಕೆಲವರು ಹೆದರಿಸುತ್ತಿದ್ದಾರೆ. ಏನು ಮಾಡಬೇಕು ತಿಳಿಯುತ್ತಿಲ್ಲ.

ಗಿರಿಜಾ, ಬೆಂಗಳೂರು.

ಗಿರಿಜಾರವರೇ ನಿಮಗಿನ್ನೂ 40ವರ್ಷಗಳಷ್ಟೆ. ಮುಟ್ಟು ನಿಲ್ಲುವ ವಯಸ್ಸಲ್ಲ. ಹಾರ್ಮೋನ್ ತೊಂದರೆಯಿಂದ ಹೀಗೆ ಆಗುತ್ತಿರಬಹುದು. ಸ್ಕ್ಯಾನಿಂಗ್ ನಾರ್ಮಲ್ ಇದೆ ಎಂದು ಹೇಳಿದ್ದೀರಿ. ಅಸಮರ್ಪಕವಾದ ಹಾರ್ಮೋನ್‌ಗಳಿಂದ ಹೀಗೆ ಆಗುತ್ತಿದೆ. ಈ ವಯಸ್ಸಿನಲ್ಲಿ ನಿಯಮಿತವಾಗಿ ಆಗುವ ಅಂಡಾಣು ಬಿಡುಗಡೆಯಾಗದೇ ಈಸ್ಟ್ರೋಜನ್ ಮಟ್ಟಕ್ಕೆ ತಕ್ಕದಾದ ಪ್ರೊಜೆಸ್ಟಿರಾನ್ ಎಂಬ ಹಾರ್ಮೋನು ಸರಬರಾಜು ಆಗದೇ ಗರ್ಭಕೋಶದ ಒಳಪದರವು ಹೆಚ್ಚು ಹೆಚ್ಚು ಬೆಳೆಯುತ್ತದೆ. ಎರಡು ಮೂರು ತಿಂಗಳ ನಂತರ ಒಳಪದರಕ್ಕೆ ರಕ್ತಸರಬರಾಜು ಆಗದೇ ಅದು ಕಿತ್ತುಕೊಂಡು ಹೊರಬರುವಾಗ ಈ ರೀತಿ ಅತಿಯಾದ ರಕ್ತಸ್ರಾವವಾಗುತ್ತದೆ. ದೀರ್ಘಾವಧಿ ರಕ್ತಸ್ರಾವವಾದಾಗ ಹೆಚ್ಚಿನ ಮಹಿಳೆಯರಲ್ಲಿ ರಕ್ತಹೀನತೆ ಉಂಟಾಗಿ ಸುಸ್ತಿನ ಅನುಭವವಾಗುತ್ತದೆ. ಕೆಲವರು ರೋಸಿಹೋಗಿ ಗರ್ಭಕೋಶವನ್ನೇ ತೆಗೆದುಬಿಡಿ ಎಂದು ವೈದ್ಯರನ್ನು ಬೇಡಿಕೊಳ್ಳುವ ಸಂದರ್ಭಗಳಿವೆ. ಅತಿಯಾಗಿ ಚಿಂತಿಸದೇ, ತಜ್ಞವೈದ್ಯರನ್ನು ಸಂಪರ್ಕಿಸಿ.

ಗರ್ಭಕೋಶದ ಒಳಪದರವು(ಎಂಡೋಮೆಟ್ರಿಯ) ದಪ್ಪನಾಗಿ ಬೆಳೆದಿದ್ದರೆ ಆಗ ಬಯಾಪ್ಸಿ ಅಥವಾ ಡಿ ಆ್ಯಂಡ್ ಸಿ ಮೂಲಕ ಗರ್ಭಕೋಶದಿಂದ ಸಂಪೂರ್ಣವಾಗಿ ಹೊರತೆಗೆದು ಅದನ್ನು ಪರೀಕ್ಷೆಗೆ ಕಳಿಸುತ್ತಾರೆ. ಇದರಿಂದ ಹಾರ್ಮೋನುಗಳ ತೊಂದರೆಯ ಬಗ್ಗೆ ಪತ್ತೆ ಮಾಡಲು ನಿಖರವಾಗಿ ಸಾಧ್ಯವಾಗುತ್ತದೆ ಮತ್ತು ಭವಿಷ್ಯದಲ್ಲಿ ಎಂಡೋಮೆಟ್ರಿಯಂನ ಕ್ಯಾನ್ಸರ್ ಉಂಟಾಗುವುದರ ಬಗ್ಗೆ ಮಾಹಿತಿಯೂ ದೊರಕುತ್ತದೆ. ಅಷ್ಟೇ ಅಲ್ಲ ಎಷ್ಟೋ ಬಾರಿ ಕೇವಲ ಡಿ ಆ್ಯಂಡ್ ಸಿಯಿಂದ ರಕ್ತಸ್ರಾವ ನಿಯಂತ್ರಣಕ್ಕೆ ಬಂದಿದೆ.

ರಕ್ತಸ್ರಾವ ಪುನರಾವರ್ತನೆಗೊಳ್ಳದ ಹಾಗೇ ಕೃತಕ ಪ್ರೊಜೆಸ್ಟಿರನ್ ಹಾರ್ಮೋನು ಮಾತ್ರೆಗಳನ್ನು ನೀಡಲಾಗುತ್ತದೆ. ಈಗಂತೂ ಪ್ರೊಜೆಸ್ಟ್ರಾನ್ ಹಾರ್ಮೋನನ್ನು ನಿಯಮಿತವಾಗಿ ಬಿಡುಗಡೆಗೊಳಿಸುವ, ಗರ್ಭಾಶಯದಲ್ಲಿ ಅಳವಡಿಸುವ ಕಾಪರ್ಟಿಯಂತಹ ಸಾಧನವನ್ನು ಬಳಸಿ ಇಂತಹ ರಕ್ತಸ್ರಾವವನ್ನು ಸಂಪೂರ್ಣ ಹತೋಟಿಯಲ್ಲಿ ಇಡಬಹುದು.

ಪ್ರಬಲವಾದ ತೊಂದರೆ ಅಥವಾ ಕಾರಣಗಳಿಲ್ಲದೆ ಗರ್ಭಕೋಶ ತೆಗೆಸುವ ನಿರ್ಧಾರ ಮಾಡಬೇಡಿ. ಬೇಗನೆ ಗರ್ಭಕೋಶ ಹಾಗೂ ಅಂಡಾಶಯ ತೆಗೆಸಿಕೊಂಡರೆ ಹೆಣ್ತನದ ಹಾರ್ಮೋನುಗಳ ಸ್ರಾವ ಕಡಿಮೆಯಾಗುವುದರಿಂದ ಮೂಳೆಗಳ ಸವೆತ ಉಂಟಾಗಬಹುದು. ಹೃದಯದ ಆರೋಗ್ಯದ ಮೇಲೆ ಪರಿಣಾಮ ಬೀರಬಹುದು.

ಸ್ಪಂದನ

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

Advertorial

ಲ್ಯಾಪರೋಸ್ಕೋಪಿಕ್ ಗೈನಾಕಾಲಾಜಿ ಸರ್ಜರಿ

motherhood
women & children's hospital

ಇತ್ತೀಚಿನ ವರ್ಷಗಳಲ್ಲಿ ಸ್ತ್ರೀರೋಗ ಸಮಸ್ಯೆಗಳ ಹೆಚ್ಚಳ.

ಇತ್ತೀಚಿನ ವರ್ಷಗಳಲ್ಲಿ ಮಹಿಳೆಯರಲ್ಲಿ ಅವರ ಮುಟ್ಟಿನ ಮತ್ತು ಸಂತಾನೋತ್ಪತ್ತಿ ಅಂಗಗಳಿಗೆ ಸಂಬಂಧಿಸಿದ ಸಮಸ್ಯೆಗಳು ಹೆಚ್ಚುತ್ತಿವೆ. ಇಂತಹ ಪ್ರಕರಣಗಳ ಸಂಖ್ಯೆಯಲ್ಲಿನ ಹೆಚ್ಚಳವು ಪ್ರಪಂಚದಾದ್ಯಂತದ ಮಹಿಳೆಯರಲ್ಲಿ ಬದಲಾಗುತ್ತಿರುವ ಜೀವನಶೈಲಿಗೆ ಕಾರಣವಾಗಿದೆ. ಜಡತ್ವದ ಜೀವನಶೈಲಿಯನ್ನು ಹೊಂದಿರುವ ಮಹಿಳೆಯರು ಅಗತ್ಯವಾದ ಪೋಷಕಾಂಶಗಳ ಕೊರತೆಯನ್ನು ಎದುರಿಸುತ್ತಾರೆ. ಅವರು ಈ ಕಾರಣದಿಂದ ಪ್ರಮುಖವಾದ ಸ್ತ್ರೀರೋಗ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಕಳಪೆ ಗುಣಮಟ್ಟದ ಆಹಾರದ ಜೊತೆಗೆ ಯಾವುದೇ ರೀತಿಯ ವ್ಯಾಯಾಮದಲ್ಲಿ ತೊಡಗದೇ ಇರುವುದು ಈ ಸಮಸ್ಯೆಗಳ ಹೆಚ್ಚಳಕ್ಕೆ ಕಾರಣವಾಗುತ್ತದೆ. ಹೆಚ್ಚು ಹೆಚ್ಚು ಜನರು ಸಂಸ್ಕರಿಸಿದ ಆಹಾರಗಳ ಮೇಲೆ ಅವಲಂಬಿತರಾಗಿದ್ದಾರೆ. ಇದು ಮಹಿಳೆಯರ ಸಂತಾನೋತ್ಪತ್ತಿ ಆರೋಗ್ಯದ ಮೇಲೆ ದುಷ್ಪರಿಣಾಮವನ್ನು ಬೀರುತ್ತದೆ. ಇತ್ತೀಚಿನ ಸಾಂಕ್ರಾಮಿಕ ರೋಗದ ಏಕಾಏಕಿ, ಜಡತ್ವದ ಜೀವನಶೈಲಿ ಮತ್ತು ಕಳಪೆ ಪೋಷಣೆಯೊಂದಿಗೆ ಹೆಚ್ಚಿನ ಒತ್ತಡದ ಮಟ್ಟಗಳಿಂದ ಮಹಿಳೆಯರಲ್ಲಿ ಅನಾರೋಗ್ಯ ಸಮಸ್ಯೆಗಳು ಇನ್ನಷ್ಟು ಹೆಚ್ಚುತ್ತಿವೆ. ಆರೋಗ್ಯ ಸಮಸ್ಯೆಗಳ ಬಗ್ಗೆ ಈ ಅರಿವು ಮತ್ತು ಆರೋಗ್ಯ ರಕ್ಷಣಾ ವ್ಯವಸ್ಥೆಯ ಲಭ್ಯತೆಗಳು ಅನೇಕ ಸಮಸ್ಯೆಗಳನ್ನು ಮೊದಲೇ ಪತ್ತೆ ಹಚ್ಚಲು ಹಾಗೂ ಅವುಗಳಿಗೆ ಚಿಕಿತ್ಸೆ ನೀಡಲು ಸಾಧ್ಯವಾಗಿಸುತ್ತಿವೆ. ಫೈಬ್ರಾಯ್ಡ್‌ಗಳು, ಅಸಹಜ ಗರ್ಭಾಶಯದ ರಕ್ತಸ್ರಾವ, ಎಂಡೋಮೆಟ್ರಿಯೊಸಿಸ್ ಮತ್ತು ಎಂಡೊಮೆಟ್ರಿಯಲ್ ಅಸಹಜತೆಯಂತಹ ಕೆಲವು ಸಾಮಾನ್ಯ ಸ್ತ್ರೀರೋಗ ಸಮಸ್ಯೆಗಳಿಗೆ ಶಾಶ್ವತ ಪರಿಹಾರಕ್ಕಾಗಿ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುವುದು ಅಗತ್ಯವಿರುತ್ತದೆ.

ಸ್ತ್ರೀರೋಗ ಸ್ಥಿತಿಗೆ ಚಿಕಿತ್ಸೆ ನೀಡಲು ಶಸ್ತ್ರಚಿಕಿತ್ಸೆಯ ಲ್ಯಾಪರೋಸ್ಕೋಪಿಕ್ ವಿಧಾನ

ಲ್ಯಾಪರೋಸ್ಕೋಪಿಕ್ ಗೈನಾಕಾಲಾಜಿಕಲ್ ಸರ್ಜರಿಯು ಅತ್ಯಂತ ಕಡಿಮೆ ಗಾಯ ಅಥವಾ ಆಕ್ರಮಣಕಾರಿ ವಿಧಾನವಾಗಿದೆ. ಇದರಲ್ಲಿ ಸರ್ಜನ್‌ಗಳು ದೊಡ್ಡ ಮಟ್ಟದಲ್ಲಿ ದೇಹದ ಭಾಗವನ್ನು ಕತ್ತರಿಸದೇ ಅಥವಾ ಛೇದಿಸದೇ ಸಣ್ಣ ಪ್ರಮಾಣದ ಛೇದನ ಮಾಡಿ ಶಸ್ತ್ರಚಿಕಿತ್ಸೆ ನೀಡಲು ಅವಕಾಶವಿರುತ್ತದೆ. ಅತ್ಯಂತ ಸಣ್ಣದಾದ ಲೈಟ್ ಇರುವ ಟ್ಯೂಬ್ ನ ಒಂದು ತುದಿಗೆ ಕ್ಯಾಮೆರಾವನ್ನು ಅಳವಡಿಸಲಾಗಿರುತ್ತದೆ. ಇದನ್ನು ಲ್ಯಾಪರೋಸ್ಕೋಪ್ ಎಂದು ಕರೆಯಲಾಗುತ್ತದೆ. ಇದನ್ನು ಹೊಟ್ಟೆಯಲ್ಲಿ ಒಂದು ಸಣ್ಣ ರಂಧ್ರ ಕೊರೆದು ಸೇರಿಸಲಾಗುತ್ತದೆ. ಈ ಕ್ಯಾಮೆರಾ ದೇಹದೊಳಗಿನ ಚಿತ್ರಗಳನ್ನು ಮಾನಿಟರ್‌ಗೆ ರವಾನಿಸುತ್ತದೆ. ಈ ಚಿತ್ರಗಳನ್ನು ಗಮನಿಸುವ ಸರ್ಜನ್ ಸಮಸ್ಯೆಗೆ ತಕ್ಕಂತೆ ಶ್ರೋಣಿಯ ಅಂಗಾಂಗಳ ಮೇಲೆ ಯಾವುದೇ ದೊಡ್ಡ ಮಟ್ಟದ ಛೇದನ ಮಾಡದೇ ಶಸ್ತ್ರಚಿಕಿತ್ಸೆಯನ್ನು ನಡೆಸುತ್ತಾರೆ. ಅತ್ಯಂತ ಸೂಕ್ಷ್ಮವಾದ ವಿಶೇಷ ಶಸ್ತ್ರಚಿಕಿತ್ಸಾ ಉಪಕರಣಗಳನ್ನು ಸೇರಿಸಲು ಹೊಟ್ಟೆಯಲ್ಲಿ ಇತರ ಸಣ್ಣ ಛೇದನಗಳನ್ನು ಮಾಡಬಹುದು, ಅಂತೆಯೇ, ಗರ್ಭಾಶಯದೊಳಗೆ ಉಂಟಾಗುವ ಪರಿಸ್ಥಿತಿಗಳನ್ನು ಸಹ ಹಿಸ್ಟರೋಸ್ಕೋಪಿಯ ನೆರವಿನಿಂದ ದೃಶ್ಯೀಕರಿಸಬಹುದು ಮತ್ತು ಚಿಕಿತ್ಸೆ ಮಾಡಬಹುದಾಗಿದೆ. ತೆರೆದ ಶಸ್ತ್ರಚಿಕಿತ್ಸೆಗೆ ಹೋಲಿಸಿದರೆ ಲ್ಯಾಪರೋಸ್ಕೋಪಿಕ್ ಗೈನಾಕಾಲಾಜಿಕಲ್ ಸರ್ಜರಿಯಿಂದ ಅನೇಕ ಪ್ರಯೋಜನಗಳಿವೆ. ಈ ಲ್ಯಾಪರೋಸ್ಕೋಪಿಕ್ ಸರ್ಜರಿ ಮಾಡಿಸಿಕೊಂಡವರಿಗೆ ಕಡಿಮೆ ನೋವು ಇರುತ್ತದೆ ಮತ್ತು ನೋವು ನಿವಾರಕ ಔಷಧಿ ಸೇವನೆ ಪ್ರಮಾಣ ಕಡಿಮೆ ಇರುತ್ತದೆ. ಕೆಲವೇ ಕೆಲವು ಸಂಕೀರ್ಣತೆಗಳು, ಕಡಿಮೆ ಗಾಯದ ಗುರುತು, ಆಸ್ಪತ್ರೆಯಲ್ಲಿ ಕಡಿಮೆ ಅವಧಿಯ ವಾಸ್ತವ್ಯ, ವೇಗವಾಗಿ ಚೇತರಿಸಿಕೊಳ್ಳುವಂತಹ ಪ್ರಯೋಜನಗಳಿವೆ. ಅನೇಕ ಕಾರ್ಯವಿಧಾನಗಳನ್ನು ಡೇ ಕೇರ್ ಮಾದರಿಯಲ್ಲಿ ಕೈಗೊಳ್ಳಲಾಗುತ್ತದೆ ಮತ್ತು ರೋಗಿಗಳನ್ನು ಶಸ್ತ್ರಚಿಕಿತ್ಸೆಯಾದ ದಿನವೇ ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಗುತ್ತದೆ. ವಿವಿಧ ಸ್ತ್ರೀರೋಗ ಸಮಸ್ಯೆಗಳಿಗೆ ನಿಯೋಜಿಸಲಾದ ಕೆಲವು ಸಾಮಾನ್ಯ ಲ್ಯಾಪರೋಸ್ಕೋಪಿಕ್ ಶಸ್ತ್ರಚಿಕಿತ್ಸೆಗಳನ್ನು ಇಲ್ಲಿ ಪಟ್ಟಿ ಮಾಡಲಾಗಿದೆ.

ಬಂಜೆತನದ ಮೌಲ್ಯಮಾಪನ

ಡಯಾಗ್ನಾಸ್ಟಿಕ್ ಹಿಸ್ಟರೋಲ್ಯಾಪರೋಸ್ಕೋಪಿ (DHL) ಎನ್ನುವುದು ಗರ್ಭಾಶಯ, ಅಂಡಾಶಯದ ಒಳಭಾಗವನ್ನು ನಿರ್ಣಯ ಮಾಡಲು ಮತ್ತು ಫಾಲೋಪಿಯನ್ ಟ್ಯೂಬ್ ನ ಪೇಟೆನ್ಸಿಯನ್ನು ಪರೀಕ್ಷಿಸಲು

ಮಹಿಳೆಯರಲ್ಲಿ ನಡೆಸುವ ಒಂದು ವಿಧಾನ ಇದಾಗಿದೆ. DHL ನಿಂದ ಆಗುವ ಪ್ರಯೋಜನಗಳೆಂದರೆ ರೋಗ ನಿರ್ಣಯದ ಯಾವುದೇ ಅಸಹಜತೆಯ ತಿದ್ದುಪಡಿಯನ್ನು ಅದೇ ಸಮಯದಲ್ಲಿ ಏಕಕಾಲದಲ್ಲಿ ನಡೆಸಬಹುದಾಗಿದೆ. ಇದು ಗರ್ಭಾಶಯದ ಕುಹರದಿಂದ ಪೋಲ್ಪ್‌ಗಳನ್ನು ತೆಗೆಯುವುದು, ಗರ್ಭಾಶಯದ ಸೆಪ್ಟಮ್ ಅನ್ನು ತೆಗೆದುಹಾಕುವುದು, ಫಾಲೋಪಿಯನ್ ಟ್ಯೂಬ್ ನಲ್ಲಿ ಗುರುತಿಸಲಾದ ಬ್ಲಾಕ್ ಅನ್ನು ತೆರೆಯುವುದು ಮತ್ತು ಅಂಡಾಶಯದ ಚೀಲಗಳನ್ನು ತೆಗೆಯುವಂತಹ ಪ್ರಕ್ರಿಯೆಯಲ್ಲಿ ಪ್ರಯೋಜನಕಾರಿಯಾಗಿದೆ.

ಲ್ಯಾಪರೋಸ್ಕೋಪಿಕ್ ಹಿಸ್ಟರೆಕ್ಟಮಿ

ಗರ್ಭಕಂತವು ಅಂಡಾಶಯ ಮತ್ತು ಟ್ಯೂಬ್ ಗಳೊಂದಿಗೆ ಅಥವಾ ಟ್ಯೂಬ್ ಇಲ್ಲದೇ ಗರ್ಭಾಶಯವನ್ನು ತೆಗೆದುಹಾಕುವುದನ್ನು ಒಳಗೊಂಡಿರುತ್ತದೆ. ಮಹಿಳೆಯರಿಗೆ ಗರ್ಭಾಶಯದಲ್ಲಿ ಅಸಹಜತೆ ಉಂಟಾದ ಸಂದರ್ಭದಲ್ಲಿ ಈ ಶಸ್ತ್ರಚಿಕಿತ್ಸೆಯನ್ನು ನಡೆಸಲಾಗುತ್ತದೆ. ಇದು ಭಾರೀ ಮುಟ್ಟಿನ ರಕ್ತಸ್ರಾವ ಮತ್ತು ನೋವಿನಂತಹ ಅತಿಯಾದ ಸಮಸ್ಯೆಗಳನ್ನು ಉಂಟುಮಾಡುತ್ತದೆ. ಗರ್ಭಕಂತದ ಕೆಲವು ಸಾಮಾನ್ಯ ಸೂಚನೆಗಳೆಂದರೆ ಫೈಬ್ರಾಯ್ಡ್ ಗರ್ಭಕೋಶ, ಅಡೆನೊಮೈಯೋಸಿಸ್, ವ್ಯಾಪಕವಾದ ಎಂಡೋಮೆಟ್ರಿಯೊಸಿಸ್, ಗರ್ಭಾಶಯದ ದೀರ್ಘಾವಧಿಯ ಸೋಂಕು ಮತ್ತು ಸುತ್ತಮುತ್ತಲಿನ ರಚನೆಗಳು ಆರಂಭದಲ್ಲಿ ಈ ಎಲ್ಲಾ ಸ್ಥಿತಿಯನ್ನು ಔಷಧಿಗಳ ಮೂಲಕ ಚಿಕಿತ್ಸೆ ನೀಡಲಾಗುತ್ತದೆ. ಅದೇ ರೀತಿ ಪರಿಸ್ಥಿತಿಯು ವ್ಯಾಪಕವಾಗಿದ್ದಾಗ ಅಥವಾ ವೈದ್ಯಕೀಯ ನಿರ್ವಹಣೆಗೆ ಅನುಕೂಲಕರವಾಗಿಲ್ಲದಿದ್ದ ಸಂದರ್ಭದಲ್ಲಿ ಮಾತ್ರ ಶಸ್ತ್ರಚಿಕಿತ್ಸೆಯನ್ನು ಸೂಚಿಸಲಾಗುತ್ತದೆ.

ಫೈಬ್ರಾಯ್ಡ್ ರಿಮೂವಲ್ ಸರ್ಜರಿ:

ಫೈಬ್ರಾಯ್ಡ್ ಗಳು ಗರ್ಭಾಶಯದ ಗೋಡೆಗಳಿಂದ ಉಂಟಾಗುವ ಸಾಮಾನ್ಯವಾದ ಕ್ಯಾನ್ಸರ್ ಅಲ್ಲದ ಅಸಹಜತೆಯಾಗಿದೆ. ಸಮಸ್ಯೆಗಳನ್ನು ಉಂಟು ಮಾಡಿದರೆ ಮತ್ತು ಗರ್ಭಾಶಯವನ್ನು ಉಳಿಸಿಕೊಳ್ಳಲು ಮಹಿಳೆಯರು ಬಯಸಿದಲ್ಲಿ ಅದನ್ನು ತೆಗೆದುಹಾಕಲು ಸಮರ್ಥಿಸುತ್ತದೆ. ಲ್ಯಾಪರೋಸ್ಕೋಪಿಕ್ ಮಯೋಮೆಕ್ಟಮಿಯು ಗರ್ಭಾಶಯದ ಗೋಡೆಯಿಂದ ಫೈಬ್ರಾಯ್ಡ್ ಗಳನ್ನು ತೆಗೆದುಹಾಕುವ ವಿಧಾನವಾಗಿದೆ ಮತ್ತು ಹಿಸ್ಟರೊಸ್ಕೋಪಿಕ್ ಮಯೋಮೆಕ್ಟಮಿಯು ಗರ್ಭಾಶಯದ ಕುಹರದೊಳಗೆ ಫೈಬ್ರಾಯ್ಡ್ ಗಳನ್ನು ತೆಗೆದುಹಾಕುವ ವಿಧಾನವಾಗಿದೆ.

ಲ್ಯಾಪರಸ್ಕೋಪಿಕ್ ಓವರಿಯನ್ ಸಿಸ್ಟೆಕ್ಟಮಿ:

ಓವರಿಯನ್ ಸೆಸ್ಟ್ ಅಥವಾ ಅಂಡಾಶಯದ ಚೀಲಗಳು ಅಂಡಾಶಯದಿಂದ ಉಂಟಾಗುವ ದ್ರವ ತುಂಬಿದ ಕುಳಿಗಳಾಗಿವೆ. ಅದರಲ್ಲಿರುವ ದ್ರವದ ಪ್ರಕಾರ ಮತ್ತು ಚೀಲದ ಕುಹರದ ರೇಖೆಯನ್ನು ಅವಲಂಬಿಸಿ, ಅಂಡಾಶಯದ ಚೀಲಗಳನ್ನು ವಿವಿಧ ಪ್ರಕಾರಗಳಾಗಿ ವಿಂಗಡಿಸಲಾಗಿದೆ. ಎಂಡೊಮೆಟ್ರಿಯಾಟಿಕ್, ಡರ್ಮಾಯ್ಡ್ ಪಾಲಿ ಸಿಸ್ಟಿಕ್ ಓವರಿ (PCOD) ಮತ್ತು ಸರಳವಾದ ಕೆಲವು ಸಾಮಾನ್ಯ ವಿಧಗಳಾಗಿವೆ. ಚೀಲದ ಪ್ರಕಾರ ಮತ್ತು ಗಾತ್ರವನ್ನು ಅವಲಂಬಿಸಿ ಲ್ಯಾಪರೋಸ್ಕೊಪಿಕ್ ಚಿಕಿತ್ಸೆಯನ್ನು ನೀಡಲಾಗುತ್ತದೆ.

ಹಿಸ್ಟರೋಸ್ಕೋಪಿಕ್ ಸರ್ಜರಿ

ಗರ್ಭಾಶಯದ ಕುಹರದೊಳಗೆ ಉಂಟಾಗುವ ಅಸಹಜತೆಗಳಿಗೆ ಚಿಕಿತ್ಸೆ ನೀಡಲು ಹಿಸ್ಟರೊಸ್ಕೋಪಿಕ್ ಶಸ್ತ್ರಚಿಕಿತ್ಸೆಗಳನ್ನು ನೆರವೇರಿಸಲಾಗುತ್ತದೆ. ಪಾಲಿಪ್ಸ್ ಎಂದು ಕರೆಯಲಾಗುವ ಅಸಹಜ ಬೆಳವಣಿಗೆಯನ್ನು ತೆಗೆದುಹಾಕಬಹುದು. ಕಾಣೆಯಾದ ಕಾಪರ್ ಟಿ, ಗರ್ಭಾಶಯ ಗರ್ಭ ನಿರೋಧಕ ಸಾಧನಗಳನ್ನು ಹೊರ ತೆಗೆಯಬಹುದು. ಸೆಪ್ಟಂ ಎಂದು ಕರೆಯಲಾಗುವ ಅಸಹಜ ರಿಡ್ಜ್ ಅನ್ನು ಹೊರ ಹಾಕಬಹುದಾಗಿದೆ.

ನಿರ್ಣಯ:

ಕೇವಲ ಒಂದು ಶಸ್ತ್ರಚಿಕಿತ್ಸೆಯ ಚಿಂತನೆಯು ಅರ್ಥವಾಗುವಂತೆ ಅಗಾಧವಾಗಿರಬಹುದು; ಆದಾಗ್ಯೂ, ವರ್ಷಗಳಲ್ಲಿ ವೈದ್ಯಕೀಯ ವಿಜ್ಞಾನದ ವಿಕಸನಗಳೊಂದಿಗೆ ಶಸ್ತ್ರಚಿಕಿತ್ಸೆಗಳ ಯಶಸ್ಸಿನ ಪ್ರಮಾಣವು ಹೆಚ್ಚು ವೇಗವಾಗಿ ಚೇತರಿಸಿಕೊಳ್ಳುವ ದರಗಳೊಂದಿಗೆ ನಂಬಲಾಗದಷ್ಟು ಹೆಚ್ಚಾಗಿದೆ. ಲ್ಯಾಪರೋಸ್ಕೋಪಿಕ್ ಶಸ್ತ್ರಚಿಕಿತ್ಸೆಗಳು ಕಡಿಮೆ ನೋವಿನಿಂದ ಕೂಡಿರುತ್ತವೆ. ಏಕೆಂದರೆ, ಇದು ಕನಿಷ್ಠ ಆಕ್ರಮಣಕಾರಿ ಶಸ್ತ್ರಚಿಕಿತ್ಸೆಯಾಗಿದೆ. ಒಂದು ವೇಳೆ ನೀವು ಲ್ಯಾಪರೋಸ್ಕೋಪಿಕ್ ಶಸ್ತ್ರಚಿಕಿತ್ಸೆಗೆ ಒಳಪಡುವ ಯಾವುದೇ ಪ್ರತಿಬಂಧಕಗಳನ್ನು ಹೊಂದಿದ್ದರೆ, ನಿಮ್ಮ ವೈದ್ಯರನ್ನು ಭೇಟಿ ಮಾಡಿ ಸಲಹೆ ಪಡೆದುಕೊಳ್ಳಬಹುದು. ಅವರು ಸಂಪೂರ್ಣ ಪ್ರಕ್ರಿಯೆಯ ಬಗ್ಗೆ ನಿಮಗೆ ಮಾಹಿತಿ ನೀಡುತ್ತಾರೆ ಮತ್ತು ಆತ್ಮವಿಶ್ವಾಸವನ್ನು ತುಂಬುತ್ತಾರೆ.

ಲೇಖಕರು
ಡಾ. ಬೀರೇಶ್ ಸಿ. ಎಸ್.
ಕನ್ಸಲ್ಟೆಂಟ್– ಒಬ್ಸ್ಟೆಟ್ರಿಶಿಯನ್, ಗೈನಾಕಾಲಾಜಿಸ್ಟ್ ಮತ್ತು ಲ್ಯಾಪರೋಸ್ಕೋಪಿಕ್ ಸರ್ಜನ್, ಮದರ್‌ಹುಡ್ ಹಾಸ್ಪಿಟಲ್ಸ್, ಬನಶಂಕರಿ, ಬೆಂಗಳೂರು

080 6723 8986
writetous@motherhoodindia.com
MOTHERHOOD HOSPITALS, BANGALORE
BANASHANKARI | ELECTRONIC CITY | HEBBAL | HRBR LAYOUT | INDIRANAGAR | KANAKAPURA ROAD | KANNAMANGALA | SARJAPUR ROAD | WHITEFIELD

Care like no other.
www.motherhoodindia.com

ಸುಭಾಷಿತ

ನಿಮ್ಮ ಹೃದಯದ ಕರೆ ಹಾಗೂ ಆತ್ಮಸಾಕ್ಷಿಯನ್ನು ಅನುಸರಿಸುವ ಧೈರ್ಯ ಪಡೆದುಕೊಳ್ಳಿ.

-ಸ್ಟೀವ್ ಜಾಬ್ಸ್

ಗುಂಡಿ ಮುಚ್ಚಿಸಲು ಪ್ರಧಾನಿಯೇ ಬರಬೇಕೇ? ನಾಗರಿಕರಿಗೆ ಸ್ಪಂದಿಸದ ಬಿಬಿಎಂಪಿ ಆಡಳಿತ

ರಸ್ತೆ ನಿರ್ವಹಣೆಯ ವಿಷಯದಲ್ಲಿ ಕುಂಭಕರ್ಣ ನಿದ್ರೆಗೆ ಜಾರಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು (ಬಿಬಿಎಂಪಿ) ಬಡಿದೆಬ್ಬಿಸಲು ಒಂದೋ ಹೈಕೋರ್ಟ್ ಆದೇಶದ 'ಅಸ್ತ್ರ' ಬೇಕು, ಇಲ್ಲದಿದ್ದರೆ ಈ ನಗರಕ್ಕೆ ಯಾರಾದರೂ ಅತಿಗಣ್ಯ ವ್ಯಕ್ತಿಗಳು ಬರಬೇಕು ಎನ್ನುವಂತಾಗಿದೆ. ರಸ್ತೆಗುಂಡಿಗಳ ಕಾರಣದಿಂದ ಹಲವಾರು ಜೀವ ಕಳೆದುಕೊಳ್ಳುತ್ತಿದ್ದರೂ ಬಿಬಿಎಂಪಿಯ 'ಹೃದಯ'ವು ಕರಗದಷ್ಟು ಕಲ್ಲಾಗಿದೆ. ಆದ್ದರಿಂದಲೇ 'ನಾಗರಿಕ ಸಮಸ್ಯೆಗಳಿಗೂ ನನಗೂ ಯಾವುದೇ ಸಂಬಂಧವಿಲ್ಲ' ಎನ್ನುವಂತೆ ನಗರದ ಆಡಳಿತ ವ್ಯವಸ್ಥೆ ನಿರುಮ್ಮಳವಾಗಿದೆ. ಆದರೆ, ಪ್ರಧಾನಿ ನರೇಂದ್ರ ಮೋದಿ ಅವರ ಬೆಂಗಳೂರು ಭೇಟಿಯ ಕಾರಣಕ್ಕಾಗಿ ಬಿಬಿಎಂಪಿ ಹೇಗೆ ಮೈಕೊಡವಿಕೊಂಡು ಎದ್ದಿದೆ ಎಂದರೆ, ಪ್ರಧಾನಿ ಓಡಾಡುವ ಎಲ್ಲ ಮಾರ್ಗಗಳಲ್ಲಿ ರಾತ್ರಿ ಕಳೆದು ಬೆಳಗಾಗುವ ಹೊತ್ತಿಗೆ ಗುಂಡಿಗಳನ್ನು ಕಣ್ಮರೆಯಾಗಿಸಿದೆ. ರಸ್ತೆ ದುರಸ್ತಿಯ ಈ ಕಾಮಗಾರಿಯ ಗುಣಮಟ್ಟದ ಬಣ್ಣವು ಇನ್ನು ಕೆಲವೇ ದಿನಗಳಲ್ಲಿ ಬಯಲಾಗಬಹುದು. ಏಕೆಂದರೆ, ಈ ಹಿಂದೆ ಪ್ರಧಾನಿಯವರು ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್‌ನ ಹೊಸ ಕಟ್ಟಡ ಉದ್ಘಾಟನೆಗಾಗಿ ಬರುವ ಮೊದಲೂ ರಸ್ತೆಯನ್ನು ಹೀಗೇ ರಾತ್ರೋರಾತ್ರಿ ದುರಸ್ತಿ ಮಾಡಲಾಗಿತ್ತು. ಮೋದಿ ಅವರು ಅತ್ತ ದೆಹಲಿ ತಲುಪುವ ಮೊದಲೇ ಇತ್ತ ದುರಸ್ತಿಯಾದ ರಸ್ತೆಯಲ್ಲಿ ಮತ್ತೆ ಗುಂಡಿ ನಿರ್ಮಿತ್ತು. ಬಿಬಿಎಂಪಿಯ ರಸ್ತೆ ನಿರ್ವಹಣೆಯ ಗುಣಮಟ್ಟ ಎಷ್ಟೊಂದು ಕಳಪೆ ಎಂಬುದಕ್ಕೆ ಕನ್ನಡಿ ಹಿಡಿಯಲು ಈ ಪ್ರಕರಣವೊಂದೇ ಸಾಕು. ನಾಗರಿಕರು, ವಾಹನ ಸವಾರರು ಬಾರಿ ಬಾರಿ ಗೋಗರೆದರೂ ಹೈಕೋರ್ಟ್ ತಿವಿದರೂ ಗುಂಡಿ ಮುಚ್ಚದ ಧಾರ್ಷ್ಟ್ಯ ಪ್ರದರ್ಶಿಸಿದ್ದ ಬಿಬಿಎಂಪಿ ಅಧಿಕಾರಿಗಳು, ಪ್ರಧಾನಿ ಬರುತ್ತಾರೆ ಎಂದೊಡನೆ ಅಷ್ಟೊಂದು ತರಾತುರಿಯಲ್ಲಿ ರಸ್ತೆ ದುರಸ್ತಿಯನ್ನು ಮಾಡಿಸಿದ್ದೇಕೆ? ಮೊದಲಿನ ಅಸಹಾಯಕತೆ ಏಕಾಏಕಿ ನೀಗಿ, ದುರಸ್ತಿಗೆ ಬೇಕಾದ 'ಶಕ್ತಿ' ಧುತ್ತೆಂದು ಸಿಕ್ಕಿದ್ದಾದರೂ ಎಲ್ಲಿಂದ?

ರಸ್ತೆಗುಂಡಿಗಳ ಕಾರಣದಿಂದ ಹಲವರು ಜೀವ ಕಳೆದುಕೊಳ್ಳುತ್ತಿದ್ದರೂ ಸ್ಪಂದಿಸದ ಕಲ್ಲೆದೆಯ ಬಿಬಿಎಂಪಿಗೆ, ಪ್ರಧಾನಿ ಓಡಾಡುವ ಮಾರ್ಗಗಳ ರಸ್ತೆ ದುರಸ್ತಿಗೆ ಬೇಕಾದ 'ಶಕ್ತಿ' ಧುತ್ತೆಂದು ಸಿಕ್ಕಿದ್ದಾದರೂ ಎಲ್ಲಿಂದ?

ಯಾವುದೇ ರಸ್ತೆಯನ್ನು ಬಿಬಿಎಂಪಿಯಿಂದ ದುರಸ್ತಿ ಮಾಡಿಸಿದರೆ, ಆ ಕಾಮಗಾರಿ ನಡೆಸಿದ ಗುತ್ತಿಗೆದಾರರು ಇಂತಿಷ್ಟು ಅವಧಿಗೆ (ಸಾಮಾನ್ಯವಾಗಿ ಎರಡು ವರ್ಷ) ಆ ರಸ್ತೆಯನ್ನು ನಿರ್ವಹಣೆ ಮಾಡಬೇಕು ಎಂಬ ಷರತ್ತನ್ನು ವಿಧಿಸಲಾಗಿರುತ್ತದೆ. ಗುತ್ತಿಗೆದಾರರಿಂದ ರಸ್ತೆಗಳ ನಿರ್ವಹಣೆ ಸರಿಯಾಗಿ ನಡೆದಿದೆಯೋ ಇಲ್ಲವೋ ಎಂಬುದನ್ನು ಪರಿಶೀಲಿಸುವುದು ಪಾಲಿಕೆ ಎಂಜಿನಿಯರ್‌ಗಳ ಹೊಣೆ. ರಸ್ತೆಗಳ ಇಂದಿನ ದುಃಸ್ಥಿತಿಗೆ ಇವರಿಬ್ಬರ ನಡುವಿನ ಅಪವಿತ್ರ ಮೈತ್ರಿಯೇ ಕಾರಣ ಎನ್ನದೆ ವಿಧಿಯಿಲ್ಲ. ಇಲ್ಲದಿದ್ದರೆ ಹತ್ತು ವರ್ಷಗಳಲ್ಲಿ ಪಾಲಿಕೆ ಮಾಡಿರುವ ಖರ್ಚನ್ನು ಒಟ್ಟು ಲೆಕ್ಕ ಹಾಕಿದರೆ ಬೆಂಗಳೂರಿನ ಎಲ್ಲ ರಸ್ತೆಗಳ ಮೇಲ್ಮೈ ಫಳ ಫಳ ಹೊಳೆಯಬೇಕಿತ್ತು. ಪ್ರತೀ ರಸ್ತೆಯೂ ಗುಂಡಿಮಯ ಆಗಿರುವುದು ಎಲ್ಲ ಕಾಣುತ್ತಿದ್ದರೂ ಅಧಿಕಾರಿಗಳು ಮಾತ್ರ 'ನಗರದಲ್ಲಿ ಇರುವುದು ನೂರಾರು ಗುಂಡಿಗಳಷ್ಟೆ' ಎಂದು ಪ್ರತಿಪಾದಿಸುವುದು ಹಾಸ್ಯಾಸ್ಪದ. ನಿಜ, ನಗರದ ರಸ್ತೆಗಳಡಿ ಅವುಗಳನ್ನು ರಾಷ್ಟ್ರೀಯ ಹೆದ್ದಾರಿಗಳಂತಲ್ಲ, ಒಡಲಾಳದಲ್ಲಿ ವಿದ್ಯುತ್, ದೂರವಾಣಿ ಕೇಬಲ್‌ಗಳನ್ನು, ನೀರು ಸರಬರಾಜು, ಒಳಚರಂಡಿ ಮಾರ್ಗಗಳನ್ನು ಅವು ಹೊಂದಿರುತ್ತವೆ. ದುರಸ್ತಿ ಮಾಡಿದ ರಸ್ತೆಯನ್ನು ಸಮನ್ವಯದ ಕೊರತೆಯಿಂದ ಸರ್ಕಾರದ ಒಂದಿಲ್ಲೊಂದು ಇಲಾಖೆಯು ಅಗೆಯುತ್ತಲೇ ಇರುತ್ತದೆ. ಇವೆಲ್ಲದರ ಜೊತೆ ಇಚ್ಛಾಶಕ್ತಿಯ ಕೊರತೆ, ಕಳಪೆ ಕಾಮಗಾರಿಯೂ ಗುಂಡಿಗಳು ಪದೇ ಪದೇ ಕಾಣಿಸಿಕೊಳ್ಳಲು ಕಾರಣವಾಗಿದೆ. ಭಾರತೀಯ ರಸ್ತೆ ಕಾಂಗ್ರೆಸ್ ಮಾರ್ಗಸೂಚಿಯ ಪ್ರಕಾರ, ಗುಂಡಿ ಮುಚ್ಚುವಾಗ ಅದನ್ನು ಮೊದಲು ಚೌಕಾಕಾರವಾಗಿ ಕೊರೆದುಕೊಳ್ಳಬೇಕು. ಒಳಗಿನ ದೂಳನ್ನು ಪೂರ್ಣ ತೆಗೆಯಬೇಕು. ರಸ್ತೆ ಮೇಲ್ಮೈಗೆ ಸಮತಟ್ಟಾಗುವಂತೆ ಗುಣಮಟ್ಟದ ಡಾಂಬರು ಹಾಕಬೇಕು. ಆದರೆ, ಈ ಯಾವ ನಿಯಮವೂ ಬೆಂಗಳೂರಿನಲ್ಲಿ ಪಾಲನೆಯಾಗುತ್ತಿಲ್ಲ.

ಭಾರತಕ್ಕೆ ಬೆಂಗಳೂರು ಇದ್ದಂತೆ ಚೀನಾಕ್ಕೆ ಶೆಂಜೆನ್ ನಗರ. ಆ ನಗರವನ್ನು ಚೀನಾದ ಮಾಹಿತಿ ತಂತ್ರಜ್ಞಾನದ ರಾಜಧಾನಿ ಎಂದೇ ಕರೆಯಲಾಗುತ್ತದೆ. ಸುವ್ಯವಸ್ಥಿತ ರಸ್ತೆ, ಸಿಗ್ನಲ್‌ಮುಕ್ತ ಸಂಚಾರ ವ್ಯವಸ್ಥೆ, ಪ್ರತಿಯೊಂದು ದೊಡ್ಡ ವೃತ್ತದಲ್ಲೂ ಮೇಲ್ಸೇತುವೆ, ಮಳೆನೀರು ಹರಿದುಹೋಗಲು ಚರಂಡಿಗಳ ಜಾಲ- ಎಲ್ಲವನ್ನೂ ಅಲ್ಲಿ ಸರ್ವಸಜ್ಜಿತವಾಗಿ ರೂಪಿಸಲಾಗಿದೆ. ಸಂಚಾರಿ ದುರಸ್ತಿ ಘಟಕಗಳಂತೂ ಸದಾ ಗಸ್ತು ತಿರುಗುತ್ತಿರುತ್ತವೆ. ಎಲ್ಲಿಯೇ ಸಣ್ಣ ಗುಂಡಿ ಕಾಣಿಸಿಕೊಂಡರೂ ತಕ್ಷಣ ರಿಪೇರಿ ಮಾಡಲಾಗುತ್ತದೆ. ಸಿಂಗಪುರದಲ್ಲೂ ಇಂತಹ ವ್ಯವಸ್ಥೆ ಇದೆ. ಜಾಗತಿಕ ಮಟ್ಟದಲ್ಲಿ 'ಬ್ರ್ಯಾಂಡ್ ಬೆಂಗಳೂರು' ಕುರಿತು ಪ್ರತಿಪಾದಿಸುವ ಆಡಳಿತಗಾರರು ಇಂತಹ ಅತ್ಯುತ್ತಮ ಮಾದರಿಗಳ ಕಡೆಗೆ ಕಣ್ತೆರೆದು ನೋಡಬೇಕು. 'ತೇಪೆ ಹಚ್ಚುವುದೇ ನಿಮ್ಮ ಕೆಲಸವಲ್ಲ. ಗುಂಡಿಗಳೇ ಬೀಳದಂತೆ ಗುಣಮಟ್ಟದ ರಸ್ತೆಗಳನ್ನು ನಿರ್ಮಿಸಬೇಕು' ಎಂದು ಹೈಕೋರ್ಟ್, ಈ ಹಿಂದೆಯೇ ಬಿಬಿಎಂಪಿ ಅಧಿಕಾರಿಗಳನ್ನು ಕುಟುಕಿತ್ತು. ಈಗಿನ ವಿದ್ಯಮಾನ ನೋಡಿದರೆ ಬಿಬಿಎಂಪಿಯು ಯಾವ ಹಳೆಯ ತಪ್ಪಿನಿಂದಲೂ ಬುದ್ಧಿ ಕಲಿತಿಲ್ಲ ಎನ್ನುವುದು ವೇದ್ಯ.

ದಿನದ ಟ್ವೀಟ್

ಕ್ಷಮೆಯೇ ಎಲ್ಲವೂ

ರಾಜೀವ್ ಗಾಂಧಿ ಅವರ ಹತ್ಯೆ ಒಂದು ದುರಂತ. ಆದರೆ ಈ ಅಪರಾಧ ಎಸಗಿದ್ದ, 24ರಿಂದ 30 ವರ್ಷ ಬಂಧಿತರಾಗಿದ್ದ ಆರು ಜನರನ್ನು ಬಿಡುಗಡೆ ಮಾಡುವ ಮೂಲಕ ಸುಪ್ರೀಂ ಕೋರ್ಟ್ ಅನುಕಂಪ ಮತ್ತು ವಿವೇಕ ತೋರಿದೆ. ಅಪರಾಧಿಗಳನ್ನು ಕ್ಷಮಿಸುವ ಮೂಲಕ ಗಾಂಧಿ ಕುಟುಂಬವು ಹೃದಯವೈಶಾಲ್ಯ ತೋರಿದೆ. ಕೆಟ್ಟ ಘಟನೆಯೊಂದರ ಒಳ್ಳೆಯ ಅಂತ್ಯ ಇದು. ಕ್ಷಮೆಯೇ ಎಲ್ಲವೂ.

ಪ್ರೀತೀಶ್ ನಂದಿ, ಚಿತ್ರ ನಿರ್ದೇಶಕ, ಪತ್ರಕರ್ತ

ಕಿಡಿನುಡಿ

ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಎರಡನೇ ಟರ್ಮಿನಲ್ ಲೋಕಾರ್ಪಣೆಗೊಳಿಸಲು ತೆರಳಿದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅನೇಕರು 'ಹೆಬ್ಬಾಳ ಸವಾಲನ್ನು' ಸ್ವೀಕರಿಸಲು ಪಂಥಾಹ್ವಾನ ಒಡ್ಡಿದರು. ಕೋವಿಡ್ ನಂತರದ ಅವಧಿಯಲ್ಲಿ ಇಡೀ ಬೆಂಗಳೂರಿನಲ್ಲಿ ಹೆಬ್ಬಾಳವು ಸಂಚಾರ ದಟ್ಟಣೆಯಲ್ಲಿ ಸಿಲ್ಕ್ ಬೋರ್ಡ್ ಪ್ರದೇಶವನ್ನೂ ಹಿಂದಿಕ್ಕಿದೆ. ಇದು ಆಗಿದ್ದಾದರೂ ಹೇಗೆ? ಇದಕ್ಕೆ ಪರಿಹಾರ ಇದೆಯೇ?

ಶ್ರೀನಿವಾಸ್ ಅಲವಿಲ್ಲಿ, ಸದಸ್ಯ, ಜನಾಗ್ರಹ ಸಂಸ್ಥೆ

25 ವರ್ಷಗಳ ಹಿಂದೆ

ಬುಧವಾರ, 12-11-1997

● **'ಅಧಿಕ ಸ್ಥಾನ ಗೆಲ್ಲಿಸುವ ಹೊಣೆ ಪಟೇಲ್‌ಗೆ'**

ಬೆಂಗಳೂರು, ನ. 11- ಮುಂದಿನ ಜನವರಿ ಅಥವಾ ಫೆಬ್ರುವರಿ ಹೊತ್ತಿಗೆ ಲೋಕಸಭೆಗೆ ಮಧ್ಯಂತರ ಚುನಾವಣೆ ಬರುವ ಇಂಗಿತ ನೀಡಿರುವ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರು, ರಾಜ್ಯದಲ್ಲಿ ಕಳೆದ ಬಾರಿಗಿಂತ ಹೆಚ್ಚಿನ ಸ್ಥಾನಗಳನ್ನು ಗೆಲ್ಲುವ ದಿಕ್ಕಿನಲ್ಲಿ ಪಕ್ಷ ಸಂಘಟಿತ ಪ್ರಯತ್ನ ನಡೆಸಲು ಸಜ್ಜಾಗಬೇಕು ಎಂದು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರಿಗೆ ಸಂಪೂರ್ಣ ಜವಾಬ್ದಾರಿಯನ್ನು ಹೊರಿಸಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ಕೃಷಿ ಸಚಿವ ಸಿ. ಬೈರೇಗೌಡ ಅವರು, 'ದೇವೇಗೌಡ ಮತ್ತು ಪಟೇಲರು ನಿನ್ನೆ ರಾತ್ರಿ 'ಅನುಗ್ರಹ'ದಲ್ಲಿ ನಡೆಸಿದ ಸುದೀರ್ಘ ಚರ್ಚೆ ಸಂದರ್ಭದಲ್ಲಿ ನಾನೂ ಅಲ್ಲಿದ್ದೆ. ಮಾಜಿ ಪ್ರಧಾನಿ ಅವರು ತಮ್ಮ ಬಳಿ ಶಾಸಕರು ಹೇಳಿಕೊಂಡಿರುವ ಸಮಸ್ಯೆಗಳನ್ನು ಮುಖ್ಯಮಂತ್ರಿ ಅವರಿಗೆ ವಿವರಿಸಿ ಅವನ್ನು ಪರಿಹರಿಸಲು ಸೂಚಿಸಿದರು' ಎಂದು ಹೇಳಿದರು.

● **ಕಾವೇರಿ ಪ್ರಾಧಿಕಾರ ರಚನೆ ಜನವರಿ 6ರವರೆಗೆ ಗಡುವು**

ನವದೆಹಲಿ, ನ. 11- ಕಾವೇರಿ ಜಲ ವಿವಾದಗಳ ನ್ಯಾಯಮಂಡಳಿಯ ಮಧ್ಯಂತರ ವರದಿಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಕೇಂದ್ರ ಸರ್ಕಾರವು ರೂಪಿಸಿರುವ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಸುಪ್ರೀಂ ಕೋರ್ಟ್ ಮತ್ತೆ ಜನವರಿ 6ರವರೆಗೆ ಗಡುವು ನೀಡಿತು.

50 ವರ್ಷಗಳ ಹಿಂದೆ

ಭಾನುವಾರ, 12-11-1972

● **ಅನಿಯಂತ್ರಿತ ನೀರಾವರಿ ಪರಿಣಾಮ ತುಂಗಭದ್ರೆ ಪ್ರದೇಶದಲ್ಲಿ ಕ್ಷಾರದ ಸಮಸ್ಯೆ**

ಬೆಂಗಳೂರು, ನ. 11- ಸಮರ್ಪಕ ತೋಡು, ಚರಂಡಿಗಳ ವ್ಯವಸ್ಥೆಯಿಲ್ಲದೆ ಅನಿಯಂತ್ರಿತ ನೀರಾವರಿಯಿಂದಾಗಿ, ತುಂಗಭದ್ರೆಯಿಂದ ಸಾಗುವಳಿಯಾಗುತ್ತಿರುವ ಬಳ್ಳಾರಿ ಮತ್ತು ರಾಯಚೂರಿನ ತಗ್ಗಿನ ಪ್ರದೇಶಗಳಲ್ಲಿ ಕ್ಷಾರ ಹೆಚ್ಚುತ್ತಿರುವ ಸಮಸ್ಯೆ ಉದ್ಭವವಾಗಿದೆ.

ಈ ಆತಂಕಕಾರಿ ವಿಷಯವನ್ನು ಇಂದು ಹೆಬ್ಬಾಳದಲ್ಲಿ ನಡೆದ ಕೃಷಿ ವಿಶ್ವವಿದ್ಯಾಲಯದ ಘಟಿಕೋತ್ಸವ ಸಮಾರಂಭದಲ್ಲಿ ತಿಳಿಸಿದ ಭಾರತ ಕೃಷಿ ಸಂಶೋಧನಾ ಸಂಸ್ಥೆಯ ಡೈರೆಕ್ಟರ್ ಜನರಲ್ ಡಾ.ಎಂ.ಎಸ್. ಸ್ವಾಮಿನಾಥನ್ ಅವರು, 'ತೋಡುಗಳಲ್ಲಿ ಕೆಸರು ತುಂಬಿ, ಪ್ರವಾಹಕ್ಕೆ ತಡೆಯಾಗಿ, ಭೂಸಾರ ಕೆಡುವುದರಿಂದ ಈ ಪರಿಸ್ಥಿತಿ ಉಂಟಾಗಿದೆ' ಎಂದು ಹೇಳಿದರು.

● **ಪಾಕ್ ಧೋರಣೆಯಲ್ಲಿ ಬಿಗಿ, ಬರುವ ವರ್ಷ ಕಷ್ಟ ಕಾಲ: ಪ್ರಧಾನಿ ಎಚ್ಚರಿಕೆ**

ನವದೆಹಲಿ, ನ. 11- ಪಾಕಿಸ್ತಾನದ ಧೋರಣೆಯಲ್ಲಿ ಬಿಗುವು ಕಂಡುಬರುತ್ತಿದೆ ಎಂದು ಪ್ರಧಾನಮಂತ್ರಿ ಇಂದಿರಾ ಗಾಂಧಿ ಅವರು ಇಂದು ಇಲ್ಲಿ ತಿಳಿಸಿದರು.

ಪಾಕಿಸ್ತಾನದ ಈ ಬಿಗುವಿನ ಮನೋಭಾವದಲ್ಲಿ ಬೃಹತ್ ಶಕ್ತಿ ರಾಷ್ಟ್ರಗಳ ಕೈವಾಡ ಏನಾ ದರೂ ಇದೆಯೇ ಅಥವಾ ಒತ್ತಡ ಏನಾದರೂ ಇದೆಯೇ ಎಂಬುದನ್ನು ಖಚಿತವಾಗಿ ಹೇಳಲಾಗದೆಂದು ನುಡಿದರು.

'ಬರುವ ವರ್ಷ ತೀವ್ರ ಕಷ್ಟದ ದಿನಗಳನ್ನು ಎದುರಿಸಬೇಕಾಗುತ್ತದೆಂದು' ಶ್ರೀಮತಿ ಗಾಂಧಿ ಅವರು ಕಾಂಗ್ರೆಸ್ ಪಾರ್ಲಿಮೆಂಟರಿ ಪಕ್ಷದ ಸದಸ್ಯರ ಸಭೆಯಲ್ಲಿ ಎಚ್ಚರಿಕೆ ನೀಡಿದರು.

ಈ ಉತ್ತರವನ್ನು ಬಿತ್ತರಿಸುವ ಹೊಣೆ ನಮ್ಮದಾಗಿದೆ

ಮತೀಯತ್ವಕ್ಕೆ ಕನ್ನಡತ್ವದಲ್ಲಿ ಉತ್ತರ

ವಿಶ್ಲೇಷಣೆ

ಬರಗೂರು ರಾಮಚಂದ್ರಪ್ಪ

ನವೆಂಬರ್ ಎಂದರೆ ಕನ್ನಡ ರಾಜ್ಯೋತ್ಸವದ ಸಂಭ್ರಮದ ತಿಂಗಳು. 1956ರ ನವೆಂಬರ್ ಒಂದರಂದು ಅಧಿಕೃತಗೊಂಡ ಕರ್ನಾಟಕ ಏಕೀಕರಣದ ಕಾರಣಕ್ಕಾಗಿ ನಮ್ಮಲ್ಲಿ ರಾಜ್ಯೋತ್ಸವವನ್ನು ಅಪಾರ ಉತ್ಸಾಹದಿಂದ ಆಚರಿಸುತ್ತೇವೆ. ಉತ್ಸಾಹದ ಜೊತೆಗೆ ವಿವೇಕವೂ ಮುಖ್ಯ. ಕನ್ನಡ ವಿವೇಕವು ಕನ್ನಡಿಗರ ಬದುಕು ಮತ್ತು ಸಾಹಿತ್ಯದಲ್ಲಿ ಅಭಿವ್ಯಕ್ತಿಗೊಳ್ಳುತ್ತ ಬಂದಿದೆ.

ಕನ್ನಡವೆಂದರೆ ಅದು ಭಾಷೆ ಮಾತ್ರವಲ್ಲ. ಕನ್ನಡ ಎನ್ನುವುದು ಭಾಷೆ, ಭಾವ, ಬುದ್ಧಿ, ಬದುಕು, ಸಂಸ್ಕೃತಿ, ಸಂವೇದನೆ, ಚಿಂತನೆ ಎಲ್ಲವೂ ಹೌದು. ಇಂಥ ಬಹುತ್ವವೇ ನಮ್ಮ 'ಕನ್ನಡತ್ವ'. ಮತೀಯತ್ವ ಮೇಲುಗೈ ಪಡೆಯುತ್ತಿರುವ ಇಂದಿನ ದಿನಮಾನದಲ್ಲಿ ಕನ್ನಡತ್ವವು ಹೇಗೆ ಉತ್ತರ ಆಗಬಲ್ಲದು ಎಂಬ ಆಯಾಮವನ್ನು ಅರ್ಥ ಮಾಡಿಕೊಳ್ಳುವಲ್ಲಿ ಕನ್ನಡದ ವಿವೇಕವೂ ವಿಸ್ತರಿಸುತ್ತದೆ, ಕನ್ನಡತ್ವದ ತಾತ್ವಿಕ ಶಕ್ತಿಯೂ ಗೋಚರವಾಗುತ್ತದೆ.

ಕನ್ನಡದ ಬೆಳವಣಿಗೆಯಲ್ಲೇ ಒಂದು ರೀತಿಯ ಸೌಹಾರ್ದ ಸಂಯೋಜನೆಯಿದೆ. ಕನ್ನಡ ಭಾಷೆ, ಸಾಹಿತ್ಯವನ್ನು ಕಟ್ಟುವಲ್ಲಿ ವಿವಿಧ ಜಾತಿ, ಮತ, ಧರ್ಮಗಳ ತೊಡಗುವಿಕೆಯಿಂದ ಕನ್ನಡವು ತನಗೆ ತಾನೆ ಜಾತ್ಯತೀತವಾಗಿದೆ. ದ್ವೇಷಾತೀತವಾಗಿದೆ. ಕನ್ನಡ ಸಾಹಿತ್ಯವನ್ನು ಸಾರ್ಥಕಗೊಳಿಸಿದ ಆಧುನಿಕ ಪೂರ್ವ ಕವಿಗಳು ಒಂದೇ ಧರ್ಮದವರಲ್ಲ. ಜೈನರು, ವೈದಿಕರು, ವೀರಶೈವ ಲಿಂಗಾಯತರು, ವಚನಕಾರರು, ದಾಸರು ಎಲ್ಲರೂ ಇದ್ದಾರೆ. ಆಧುನಿಕ ಸಂದರ್ಭದಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತ ಮೂಲದ ಕನ್ನಡ ಸಾಹಿತಿಗಳು, ಚಳವಳಿಗಾರರು ಕನ್ನಡವನ್ನು ಕಟ್ಟಿದ್ದಾರೆ. ಮಹಿಳೆಯರು, ತಳಸಮುದಾಯದವರು ಮತ್ತು ಬುಡಕಟ್ಟಿನವರು ಕರ್ನಾಟಕ ಸಂಸ್ಕೃತಿಗೆ ಬಹುತ್ವದ ಬದುಕು ಕೊಟ್ಟಿದ್ದಾರೆ.

ಕನ್ನಡದಲ್ಲಿ ಲಭ್ಯವಾದ ಮೊದಲ ಕೃತಿ 'ಕವಿರಾಜಮಾರ್ಗ'ದ ಒಂದು ಪದ್ಯವು ಪ್ರಜಾಸತ್ತಾತ್ಮಕ ಮೌಲ್ಯವನ್ನು ಸಹಿಷ್ಣುತೆಯ ನೆಲೆಯಲ್ಲಿ ಮಂಡಿಸುತ್ತದೆ. 'ಕಸವರವೆಂಬುದು ನೆರೆ ಸೈರಿಸಲಾರ್ಪೊಡೆ ಪರ ವಿಚಾರಮಂ ಧರ್ಮಮುಮಂ' ಅಂದರೆ ಅನ್ಯವಿಚಾರ ಮತ್ತು ಧರ್ಮವನ್ನು ಸಹಿಸಿಕೊಳ್ಳುವುದು ಬಂಗಾರ ಎಂದರ್ಥ. ಈ ಸಹಿಷ್ಣುತೆಯು ಕನ್ನಡತ್ವದ ದಿಕ್ಸೂಚಿಯಾಗಿದೆ. ಇಂಥ ಅರಿವಿನ ಕನ್ನಡತ್ವವು ಭಾರತೀಯತ್ವವೂ ಆಗುತ್ತದೆ.

ಆದಿಕವಿಯೆಂದೇ ಖ್ಯಾತಿ ಪಡೆದ ಪಂಪ ಮಹಾಕವಿಯ 'ಮನುಷ್ಯ ಜಾತಿ ತಾನೊಂದೇ ವಲಂ' ಎಂಬ ನುಡಿ ಸಾರ್ವಕಾಲಿಕ ಸಂದೇಶವಾಗಿದೆ. ಅಷ್ಟೇಕೆ ಕನ್ನಡದ ಸಾಹಿತ್ಯದಲ್ಲಿ ಕರ್ಣನ ಮೂಲಕ ಕುಲದ ಪ್ರಶ್ನೆಯನ್ನು ಎತ್ತಿ ಜಾತಿ ತಾರತಮ್ಯ ವಿರೋಧಿಸಿದ ಕೀರ್ತಿ ಪಂಪ ಕವಿಯ ಕಾವ್ಯಕ್ಕೆ ಸಲ್ಲುತ್ತದೆ. ತನ್ನ ಧರ್ಮದೊಳಗಿದ್ದು ಅದನ್ನು ಮೀರಿದ ಮಾನವತ್ವದ ಆಶಯ ಪಂಪ ಕವಿಯಲ್ಲಿ ಕಾಣುತ್ತದೆ.

ಹೀಗೆ ವೃತ್ತಿ ನೆಲೆಯಲ್ಲಿ ವ್ಯಕ್ತವಾಗುತ್ತಿದ್ದ ಪ್ರಜಾಸತ್ತಾತ್ಮಕ ಸಮತೆಯ ಆಶಯಗಳು ಚಳವಳಿ ಪ್ರಜ್ಞೆಯಾಗಿ ಬೆಳೆದದ್ದು ಬಸವಣ್ಣನವರ ನೇತೃತ್ವದಲ್ಲಿ ಸಂಭವಿಸಿದ 'ವಚನ ಚಳವಳಿ'ಯಲ್ಲಿ. ಇದೊಂದು ಸಾಮಾಜಿಕ ಆಯಾಮದ ಧಾರ್ಮಿಕ ಸ್ವಾತಂತ್ರ್ಯ ಚಳವಳಿ. ನಾಡಿನ ಬಹುಪಾಲು ತಳಸಮುದಾಯ ಮತ್ತು ಮಹಿಳೆಯರನ್ನು ಒಳಗೊಂಡ ಈ ಚಳವಳಿಯ ಫಲಿತವಾಗಿ ಪ್ರಚಲಿತವಾದ 'ದೇಹವೇ ದೇಗುಲ', 'ಶರಣ ಸತಿ ಲಿಂಗ ಪತಿ' ಎಂಬ ಬಸವಣ್ಣ ಅವರ ತಾತ್ವಿಕತೆಯು ಇವತ್ತಿಗೂ ದೊಡ್ಡ ಆದರ್ಶವಾಗಿದೆ. ದೇವಾಲಯವನ್ನು ದೇಹಕ್ಕೆ ಸ್ಥಳಾಂತರಿಸಿದ ಈ ವೈಚಾರಿಕ ವಿಪ್ಲವವು ದೇವರ ಹೆಸರಿನ ಸ್ಥಾವರ ಜಡತ್ವವನ್ನು ನಿರಾಕರಿಸುತ್ತದೆ. 'ಶರಣ ಸತಿ ಲಿಂಗ ಪತಿ'ಯೆಂಬ ಉಕ್ತಿಯು ಭಕ್ತಿಯ ಖಾಸಗಿತನವನ್ನು ಪ್ರತಿಪಾದಿಸುತ್ತದೆ. ಇದು ಇಡೀ ವಚನ ಚಳವಳಿಯ ಆದರ್ಶವಾಗಿದೆ. ಆದರೆ ಇಂದು ಬಹಿರಾಡಂಬರವೇ ಭಕ್ತಿ ಎಂಬಂತಾಗಿದೆ. ವಿವಿಧ ಧರ್ಮಗಳ `ಕೆಲವರು' ಅಧರ್ಮದ ಕೆಲಸಗಳನ್ನು ಧರ್ಮದ ಹೆಸರಲ್ಲಿ ಮಾಡುತ್ತಿದ್ದಾರೆ. ನೈಜ ಧಾರ್ಮಿಕರ ದನಿ ಕ್ಷೀಣವಾಗುತ್ತಿದೆ.

ಕುಮಾರವ್ಯಾಸ ಕವಿಯು ತನ್ನ ಕೃತಿಯಲ್ಲಿ ಮತೀಯತ್ವಕ್ಕೆ ಮಣೆ ಹಾಕದೆ ಸಂಕೀರ್ಣ ಸಮಸ್ಯೆಗಳಿಗೆ ಮುಖಾಮುಖಿಯಾಗಿರುವುದನ್ನೂ ಗಮನಿಸಬೇಕು. ಸಭಾಪರ್ವದಲ್ಲಿ ದ್ರೌಪದಿಯ ಮೂಲಕ ಸ್ಫೋಟಗೊಳ್ಳುವ ಧರ್ಮದ ಪ್ರಶ್ನೆ, ಕರ್ಣಪರ್ವದಲ್ಲಿ ಬರುವ ಯುದ್ಧದ ವ್ಯಾಖ್ಯಾನ ಮತ್ತು ಮನುಷ್ಯ ಸಂಬಂಧಗಳ ನೈತಿಕ ಪ್ರಶ್ನೆಗಳ ಜೊತೆಗೆ ವ್ಯಾಧನನ್ನು 'ಧರ್ಮವ್ಯಾಧ' ಎಂದು ಕರೆದು ಧಾರ್ಮಿಕ ಮನ್ನಣೆ ನೀಡುವುದಲ್ಲದೆ 'ಆಹಾರ ಸಂಸ್ಕೃತಿ ಸ್ವಾತಂತ್ರ್ಯ'ದ ಸಂಕೇತವಾಗಿಸುವುದು ವಿಶೇಷವಾಗಿದೆ.

ಕನಕದಾಸರ 'ರಾಮಧಾನ್ಯ ಚರಿತೆ'ಯು ವರ್ಗಮೂಲ ಸಮಾಜದ ಒಂದು ಪ್ರತಿಮಾತ್ಮಕ ವ್ಯಾಖ್ಯಾನವಾಗಿದ್ದು ಶ್ರೀರಾಮ 'ರಾಗಿ'ಯ ಪರವಾಗಿ ನಿಲ್ಲುವ ಮೂಲಕ ಶ್ರಮಿಕ ಸಮುದಾಯಕ್ಕೆ 'ದೈವ ಮನ್ನಣೆ' ದೊರಕಿಸಿದ ವಿಶಿಷ್ಟತೆಯನ್ನು ಮೆರೆದಿದೆ. ಕುಲ ಕುಲವೆಂದು ಹೊಡೆದಾಡುವವರ ಬಗ್ಗೆ ಕನಕದಾಸರು ಎತ್ತುವ ಪ್ರಶ್ನೆಯು ಜಾತಿ ಸಮತೆಯ ಸಂದೇಶವನ್ನು ಸಾರುತ್ತದೆ. ಪುರಂದರ ದಾಸರು ಪುಡಿ ಮೈಲಿಗೆಯನ್ನು ವಿರೋಧಿಸಿದ್ದು ಉಲ್ಲೇಖನೀಯ.

ಒಟ್ಟಾರೆ, ದಾಸ ಪರಂಪರೆಯು ರಾಜರಿಗೆ ದಾಸರಾಗದೆ ದೈವಕ್ಕೆ ಮಾತ್ರ ದಾಸರೆಂಬ ನಿಲುವು ತಾಳಿದ್ದು ಪ್ರಭುತ್ವ ದೂರ ತಾತ್ವಿಕತೆಯಾಗಿದೆ.

ಸರ್ವಜ್ಞ ಕವಿಯು ದೈವವನ್ನು ಕಂಡದ್ದು ಅನ್ನದಲ್ಲಿ. 'ಅನ್ನದೇವರ ಮುಂದೆ ಇನ್ನು ದೇವರು ಉಂಟೆ' ಎಂದ ಈ ಕವಿ ಎಂದೂ ಮತೀಯತ್ವಕ್ಕೆ ಮಣೆ ಹಾಕಲಿಲ್ಲ.

ಕನ್ನಡದಲ್ಲಿ ನುಡಿದ ಸೂಫಿ ಸಂತರು ಮತ್ತು ತತ್ವಪದಕಾರರು ಸದಾ ಧಾರ್ಮಿಕ ಸಾಮರಸ್ಯದ ಸಂವೇದನಾಶೀಲರಾಗಿದ್ದರು. ಬಂದೇನವಾಜರಿಗೆ ಸಿದ್ದಪ್ಪ, ನಾಸಿರುದ್ದೀನರಿಗೆ ಹೆಗ್ರಾಸ್ವಾಮಿ, ಕಡಕೋಳ ಮಡಿವಾಳಪ್ಪ ಅವರಿಗೆ ಚೆನ್ನೂರು ಜಲಾಲ ಸಾಹೇಬ, ಗೋವಿಂದ ಭಟ್ಟರಿಗೆ ಶಿಶುನಾಳ ಶರೀಫರು ಶಿಷ್ಯರಾಗಿದ್ದನ್ನು ಧಾರ್ಮಿಕ ಸಾಮರಸ್ಯದ ಸಾರ್ಥಕ ಪ್ರತೀಕವೆನ್ನಬಹುದು. ತಾರತಮ್ಯ ಇಲ್ಲದ ಧಾರ್ಮಿಕತೆಯನ್ನು ಬದುಕಿದ ಸೂಫಿ ಸಂತರು ಮತ್ತು ತತ್ವಪದಕಾರರು ಯಾವತ್ತೂ ಸಮಾಜದ ಸೌಹಾರ್ದಕ್ಕೆ ಬದ್ಧರಾಗಿ ಬದುಕಿದರು. ಕುವೆಂಪು ಅವರು ರಾವಣನಿಗೇ ರಾಮತ್ವ ನೀಡಿದ ಸರ್ವೋದಯ ಸಂವೇದನೆಯ ಮಹಾಕವಿ. 'ನನಗೆ ಯಾವ ಮತದ ಗೋಜೂ ಇಲ್ಲ, ನನ್ನದು ಮನುಜ ಮತ, ವಿಶ್ವಪಥ' ಎಂದು ಸಾರಿ, 'ಸರ್ವೋದಯ, ಸಮನ್ವಯ ಮತ್ತು ಪೂರ್ಣದೃಷ್ಟಿ- ಇವು ಎಲ್ಲರ ಧ್ಯೇಯಮಂತ್ರವಾಗಲಿ ಎಂದು ಆಶಿಸಿದರು. ವರಕವಿ ಬೇಂದ್ರೆಯವರು 'ಒಳ್ಳೆಯ ಮನಸ್ಸಿನಿಂದ ಒಂದುಗೂಡಿಸುವುದೇ ಧರ್ಮ, ದ್ವೇಷ ದಿಂದ ದೂರವಾಗುವುದೇ ಅಧರ್ಮ' ಎಂದು ಪ್ರತಿಪಾದಿಸಿದರು. ಸರ್ವೋದಯದಿಂದ ಹಿಡಿದು ದಲಿತ-ಬಂಡಾಯದವರೆಗಿನ 'ಬಹುಪಾಲು' ಲೇಖಕ-ಲೇಖಕಿಯರು ಧರ್ಮದ್ವೇಷಕ್ಕೆ ಕೊರಳಾಗಲಿಲ್ಲ, ಮಾನವೀಯತೆಯ ಕರುಳಾದರು. ಹೀಗೆ ಸಮತೆ ಮಮತೆಗಳ ಕರುಳ ಕನ್ನಡಿಯಾಗಿ ಮುನ್ನುಡಿಯುವುದೇ ಕನ್ನಡತ್ವ.

ಕನ್ನಡವು ಸಂವೇದನೆಯ ಅದೆಷ್ಟು ವ್ಯಾಪ್ತಿಯನ್ನು ಹೊಂದಿದೆಯೆಂದರೆ, ಅದು ಏಕಕಾಲಕ್ಕೆ ಸ್ಥಳೀಯವೂ ರಾಷ್ಟ್ರೀಯವೂ ಅಂತರರಾಷ್ಟ್ರೀಯವೂ ಆಗುತ್ತದೆ. ಪ್ರಾದೇಶಿಕ ಸಂಸ್ಕೃತಿಗಳನ್ನು ಅಭಿವ್ಯಕ್ತಿಸಿದ ಅಸಂಖ್ಯಾತರ ಮೂಲಕ ಕನ್ನಡವು ಸ್ಥಳೀಯವಾಗಿದೆ. ಅಂತೆಯೇ ಅಂಬೇಡ್ಕರ್, ಗಾಂಧಿ, ಬೋಸ್, ಭಗತ್‌ಸಿಂಗ್, ವಿವೇಕಾನಂದ, ಟ್ಯಾಗೋರ್ ಮುಂತಾದವರನ್ನು ನಮ್ಮವರನ್ನಾಗಿಸಿಕೊಂಡು ಕನ್ನಡಸ್ಥಗೊಳಿಸಿ ರಾಷ್ಟ್ರೀಯವಾಗಿದೆ. ದೂರದ ದೇಶದ ಕ್ರಾಂತಿಕಾರಿ ಯುವಕವಿ ಬೆಂಜಮಿನ್ ಮೊಲಾಯಿಸ್ ಅವರನ್ನು ಗಲ್ಲಿಗೇರಿಸಿದಾಗ ಮೂರು ನಾಲ್ಕು ತಿಂಗಳಲ್ಲೇ ಅವರ ಬಗ್ಗೆ ನಲವತ್ತರಷ್ಟು ಕನ್ನಡ ಕವಿತೆಗಳು ಹುಟ್ಟಿದ್ದು ಕನ್ನಡದ ಅಂತರರಾಷ್ಟ್ರೀಯ ಸಂವೇದನೆಗೆ ಸಾಂಕೇತಿಕ ಸಾಕ್ಷಿಯಾಗಿದೆ. ಹೀಗೆ ಕನ್ನಡತನದ ಸತ್ವಕ್ಕೆ ನೂರಾರು ನಿದರ್ಶನ ನೀಡಬಹುದಾಗಿದೆ.

ಇಷ್ಟೆಲ್ಲ ವಿವರಿಸಲು ಕಾರಣವಿದೆ. ಕನ್ನಡವನ್ನು ಭಾಷೆಯಾಗಿ ಉಳಿಸಿಕೊಳ್ಳುವುದರ ಜೊತೆಗೆ ಕನ್ನಡದಲ್ಲಿ ಅರಳಿದ ಮಾನವೀಯ ಸಂವೇದನೆ ಮತ್ತು ಚಿಂತನೆಗಳನ್ನು ನಮ್ಮದಾಗಿಸಿಕೊಂಡಾಗ ಕನ್ನಡತನಕ್ಕೆ ಗೌರವ ಕೊಟ್ಟಂತಾಗುತ್ತದೆ. ಇಂದು ನಾವು ಮತೀಯತ್ವದಿಂದ ದೂರವಾದ ಕನ್ನಡತ್ವದ ಪ್ರತಿಪಾದಕರೂ ಪರಿಚಾರಕರೂ ಪರಿಪಾಲಕರೂ ಆಗುವ ಅಗತ್ಯವಿದೆ. ಯಾಕೆಂದರೆ, ಒಂದೇ ಅಲ್ಲ, ಎಲ್ಲ ಧರ್ಮಗಳ ಮೂಲಭೂತವಾದಿ ಮತೀಯತ್ವಕ್ಕೆ ಕನ್ನಡತ್ವದಲ್ಲಿ ಉತ್ತರವಿದೆ. ಈ ಉತ್ತರವನ್ನು ಬಿತ್ತರಿಸುವ ಹೊಣೆ ನಮ್ಮದಾಗಿದೆ.

ಚುರುಮುರಿ

ಚಿನ್ನದಾತುರ ತೀಕ್ಷ್ಣ!

● ನಾರಾಯಣ ರಾಯಚೂರ್

'ರೀ, ತುಮಕೂರ್‌ಗೆ ಯಾವಾಗ ಕರಕೊಂಡು ಹೋಗ್ತೀರಿ?'

'ಏನೇ ಇದು?! ಸ್ವಿಟ್ಜರ್ಲೆಂಡು, ನೆದರ್ಲ್ಯಾಂಡ್ಸು ಅಂತಿದ್ದೋಳು, ತುಮಕೂರ್‌ಗೆ ಅಂತಾಯಿದ್ದೀಯಲ್ಲ, ಏನು ಸಮಾಚಾರ?'

'ಏನಿಲ್ಲಾರಿ, ಮಸಾಲೆ ದೋಸೆ ತಿನ್ಬೇಕು ಅನ್ನಿಸ್ತು ಅದಕ್ಕೆ'.

'ಮಸಾಲೆ ದೋಸೆ ತಿನ್ನೋಕೆ ನೂರಾರು ಕಿಲೊಮೀಟರ್ ಹೋಗ್ಬೇಕೇ? ನೂರಡಿ ರಸ್ತೆಯಲ್ಲೇ ಸಿಗೋಲ್ವೆ?'

'ಅಯ್ಯೋ, ನೀವು ಯಾವಾಗ್ಲೂ ಹೀಗೇ. ಮದುವೆ ಆದಾಗಿಂದ ಇದೇ ರಾಗ' ಮುನಿಸಿಕೊಂಡಳು ಮಹಾರಾಯ್ತಿ.

'ಸಾರಿ, ಚಿನ್ನಾ...'

'ಹೆಗ್ಗನ್ನಿ ದಾರೀಗೆ, ತುಮಕೂರ ಹೋಟೆಲಲ್ಲಿ ಸಿಗೋದು ಚಿನ್ನದ ದೋಸೆನೇ!'

'ನಾನೂ ದೋಸೆಗಳಲ್ಲಿ 99 ವೆರೈಟಿ ಅಂತ ಬೋರ್ಡ್ ನೋಡಿದ್ದೆ, ಅದರಲ್ಲಿ ಚಿನ್ನದ ಮಸಾಲೆ ಅಂತ ಇರಲಿಲ್ಲವಲ್ಲ?'

'ನೀವು ನೋಡದೇ ಇರೋದನ್ನೇ ತೋರ್ಸಿ, ತಿನ್ನಿಸಿ ನಿಮ್ಮಿಂದ ಭೇಷ್ ಅನ್ನಿಸಿಕೊಬೇಕು, ಅದಕ್ಕೇ...'

'ಚಿನ್ನಾನ ಆ ಥರ ಹೊಟ್ಟೆಗೆ ಸೇರಿಸ್ಕೊಳ್ಳೋಕೆ ನಾವೇನು ಗೋಲ್ಡ್ ಸ್ಮಗಲ್ ಮಾಡೋರಾ? ಮತ್ತೆ ಹೊಟ್ಟೆ ಗತಿ?'

'ಹೊಟ್ಟೆಗೇನೂ ಅಪಾಯ ಇಲ್ಲವಂತೆ, ಪೇಪರಲ್ಲೇ ಬಂದಿದೆ. ಬೇಗ ರೆಡಿ ಆಗಿ'.

'ಒಂದೇ ಕೊನೆಯ ಪ್ರಶ್ನೆ, ರೇಟೆಸ್ಟೂ?'

'ಒಂದಕ್ಕೆ ಒಂದು ಸಾವಿರದಾ ಒಂದು, ಅಷ್ಟೇ'.

'ಅಲ್ಲ ಕಣೆ, ಮೈ ಮೇಲೆ ಹಾಕ್ಕೊಂಡು ಮೆರೀಬೇಕಾದ್ದನ್ನ ಹೊಟ್ಟೇಲಿ ಹಾಕ್ಕೊಂಡು ಸಾವಿರ, ಸಾವಿರ ರೂಪಾಯಿನೂ ಕೊಟ್ಕೊಂಡು, ಈ ಟೆರಿಫಿಕ್ ಟ್ರಾಫಿಕ್ಕಿನಲ್ಲಿ ಯಾಕೆ ಅಂತ? ಕೇಳಿಲ್ಲವಾ ಗಾದೆನಾ 'ಚಿನ್ನದ ಸೂಜಿ ಅಂತ ಮುತ್ತು ಕೊಡೋಕಾಗತ್ಯೇ?!'

'ಮದ್ವೆ ಆಗಿ 30 ವರ್ಷ ಆದ್ರೂ ಮತ್ತೆ ವಾದಾನಾ?'

'ಆಯ್ತು ಒಪ್ಪಿದೆ, ರೆಡಿಯಾದೆ. ಮಂಕುತಿಮ್ಮ ಸರಿಯಾಗೇ ಹೇಳಿದಾರೆ 'ಅನ್ನದಾತುರಕಿಂತ ಚಿನ್ನದಾತುರ ತೀಕ್ಷ್ಣ'!

ಸಂಗತ

ಅಡಕತ್ತರಿಯಲ್ಲಿ ಸಿಲುಕಿದ ಅಡಿಕೆ

'ಅತಿಯಾದರೆ ಅಮೃತವೂ ವಿಷವಾಗುತ್ತದೆ' ಎಂಬ ಮಾತನ್ನು ರಾಜ್ಯದಲ್ಲಿನ ಅಡಿಕೆ ಬೆಳೆಯ ಸದ್ಯದ ಸ್ಥಿತಿ ಸಾರಿ ಹೇಳುತ್ತಿದೆ

● ಸತೀಶ್ ಜಿ.ಕೆ. ತೀರ್ಥಹಳ್ಳಿ

ಮಲೆನಾಡಿನ ಜನಜೀವನದಲ್ಲಿ ಹಾಸುಹೊಕ್ಕಾಗಿರುವ ಅಡಿಕೆ ಬೆಳೆಯ ವಿಸ್ತರಣಾ ಪ್ರಮಾಣವನ್ನು ಕಂಡವರಿಗೆಲ್ಲಾ 'ಜನ ಅನ್ನ ತಿನ್ನೋದಕ್ಕಿಂತ ಅಡಿಕೆ ತಿನ್ನೋದೆ ಹೆಚ್ಚಾ?' ಎಂಬ ಸಂಶಯ ಮೂಡುವುದು ಸಹಜವೇ. ಆದರೆ ಅಡಿಕೆ ಎಂಬ ದುಡ್ಡಿನ ಬೆಳೆ ಇದೀಗ ಸಂಕಷ್ಟದಲ್ಲಿದೆ.

2012ರಲ್ಲಿ ಅಡಿಕೆ 'ಹಾನಿಕಾರಕ' ಎಂಬ ಸರ್ಕಾರದ ವರದಿಯಿಂದ ಶುರುವಾದ ಆತಂಕ ಇತ್ತೀಚೆಗೆ ಜಾರ್ಖಂಡ್ ರಾಜ್ಯದ ಸಂಸದರು 'ಅಡಿಕೆಯನ್ನು ನಿಷೇಧಿಸಿ' ಎಂಬ ಬೇಡಿಕೆಯನ್ನು ಮಂಡಿಸುತ್ತಿದ್ದಂತೆ ದ್ವಿಗುಣಗೊಂಡಿತು. ಅದರೊಟ್ಟಿಗೆ ಪ್ರತಿವರ್ಷ ಭೂತಾನ್‌ನಿಂದ 17 ಸಾವಿರ ಟನ್ ಅಡಿಕೆ ಆಮದು ಮಾಡಿಕೊಳ್ಳುವ ಸರ್ಕಾರದ ತೀರ್ಮಾನವು ದೇಶೀಯ ಅಡಿಕೆ ಬೆಳೆಗಾರರನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ಹಾಗೆಯೇ ಮಲೆನಾಡಿನಲ್ಲಿ ಈಗೆಲ್ಲಾ ಡಿಸೆಂಬರ್‌ವರೆಗೂ ಸುರಿಯುವ ಮಳೆಯ ಕಾರಣಕ್ಕೆ ಅಡಿಕೆ ಬೆಳೆಗಾರರಲ್ಲಿ ಹೊಸ ಬಗೆಯ ಆತಂಕ, ಅಭದ್ರತೆ ಮನೆಮಾಡಿದೆ.

ಮಾಮೂಲಿಯಂತೆ ವರ್ಷವೂ ಕಾಡುವ ಕೊಳೆರೋಗ, ಮೂರು ದಶಕಗಳಿಂದ ಕಾಳ್ಗಿಚ್ಚಿನಂತೆ ವ್ಯಾಪಿಸುತ್ತಿರುವ ಹಳದಿರೋಗ ಮತ್ತು ಹಿಂದಿನ ವರ್ಷದಿಂದೀಚೆಗೆ ತೀವ್ರವಾದ ಎಲೆಗುಕ್ಕೆರೋಗ ಉಲ್ಬಣಿಸಿ, ಅಡಿಕೆ ತೋಟವನ್ನು ಉಳಿಸಿಕೊಳ್ಳುವುದು ರೈತರ ಮುಂದಿರುವ ದೊಡ್ಡ ಸವಾಲಾಗಿದೆ. ಸೂಕ್ತ ಸಂಶೋಧನೆ ಕೈಗೊಂಡು ರೋಗ ನಿಯಂತ್ರಣಕ್ಕೆ ಮುಂದಾಗುವಂತೆ ಸರ್ಕಾರವನ್ನು ಒತ್ತಾಯಿಸಲಾಗುತ್ತಿದೆ.

ಮೂಲತಃ ಮಲೇಷ್ಯಾ ಮೂಲದ ಅಡಿಕೆ, ಭಾರತದ ಪ್ರಮುಖ ವಾಣಿಜ್ಯ ಬೆಳೆಯಾಗಿ ಆರ್ಥಿಕತೆಗೆ ಒದಗಿರುವುದು ಸತ್ಯ. ಕರ್ನಾಟಕವೇ ಮುಂಚೂಣಿ ಬೆಳೆಗಾರ ರಾಜ್ಯವಾಗಿರುವ ಕಾರಣಕ್ಕೆ, ಅಡಿಕೆ ಸೋತರೆ ಮೊದಲು ಸೋಲುವ ರಾಜ್ಯ ನಮ್ಮದೇ. ಮಲೆನಾಡಿನ ಶಿವಮೊಗ್ಗ, ಚಿಕ್ಕಮಗಳೂರು, ದಾವಣಗೆರೆ, ಹಾಸನ, ಕೊಡಗು ಮತ್ತು ಕರಾವಳಿಯ ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳ ಆರ್ಥಿಕ ವಹಿವಾಟಿನಲ್ಲಿ ಅಡಿಕೆಯದೇ ಪ್ರಮುಖ ಪಾತ್ರ.

ಸದ್ಯ ದೇಶದಲ್ಲಿರುವ 18 ಲಕ್ಷ ಎಕರೆ ಅಡಿಕೆ ತೋಟದಲ್ಲಿ 5.5 ಕೋಟಿ ಮೌಲ್ಯದ 12 ಲಕ್ಷ ಟನ್‌ನಷ್ಟು ಅಡಿಕೆ ಉತ್ಪಾದನೆ ಇದೆ. ಸುಮಾರು 5 ಕೋಟಿ ಜನ ಪ್ರತ್ಯಕ್ಷ- ಪರೋಕ್ಷವಾಗಿ ಅಡಿಕೆ ಬೆಳೆಯನ್ನು ಅವಲಂಬಿಸಿದವರು. ಇನ್ನು ನಾಲ್ಕೈದು ವರ್ಷಗಳಲ್ಲಿ ಉತ್ಪಾದನೆ 18 ಲಕ್ಷ ಟನ್ ತಲುಪುವ ಅಂದಾಜಿದೆ. ಹಾಗಾಗಿ ಅಡಿಕೆ ಬೆಳೆಯ ಪ್ರಾಮುಖ್ಯ ಮತ್ತು ಬೆಲೆಯ ಸ್ಥಿರತೆಗಿರುವ ಬಹುದೊಡ್ಡ ಸವಾಲೇ ಅದರ ವಿಸ್ತರಣೆ!

ಮೂರ್ನಾಲ್ಕು ದಶಕಗಳವರೆಗೂ ಸಾಮಾಜಿಕವಾಗಿ ಇಬ್ಭಾಗವಾಗಿದ್ದ ಮಲೆನಾಡಿನ ಹಳ್ಳಿಗಳಲ್ಲಿ ಇದ್ದುದು ಜಮೀನ್ದಾರ ಹಾಗೂ ಕೂಲಿಕಾರ ವರ್ಗಗಳು ಮಾತ್ರ. ಇಲ್ಲಿಯ ಭೂಮಾಲೀಕರು ಹತ್ತಾರು ಎಕರೆ ಫಲವತ್ತಾದ ತೋಟ, ಗದ್ದೆಗಳನ್ನು ವಿಸ್ತರಿಸಿಕೊಳ್ಳುತ್ತಾ ಗುಡ್ಡಗಳಿಗೇ ಬೇಲಿ ಹಾಕಿ ಜೈಸಿಕೊಂಡವರು. ಆದರೆ ಸಣ್ಣ, ಅತಿಸಣ್ಣ ಹಿಡುವಳಿದಾರರಲ್ಲಿ ವರಾಹಿ- ಚಕ್ರಾ, ಶರಾವತಿ, ತುಂಗಾ ಮತ್ತು ಭದ್ರಾ ನದಿ ಯೋಜನೆಗಳ ನಿರಾಶ್ರಿತರು ಹಾಗೂ ಕೆಳಗಿನಿಂದ ಘಟ್ಟ ಹತ್ತಿಬಂದ ಕೂಲಿಕಾರರೇ ಪ್ರಮುಖರು. ಆರಂಭದಲ್ಲಿ ಘಟ್ಟದ ತಪ್ಪಲಲ್ಲಿ ನೈಜ ಅರಣ್ಯ ರಕ್ಷಕರೆಂದರೆ ಇವರೇ, ಸಣ್ಣರೈತರು ಮತ್ತು ಬುಡಕಟ್ಟು ಜನಾಂಗದವರು. ಪರಿಸರದೊಂದಿಗೆ ಇವರದು ಮುದ್ದಾದ ಸಂಬಂಧ. ಹಾಗಿದ್ದೂ ರೈತಾಪಿ ಬದುಕಿನಲ್ಲಿ ಅವರದು ಮುಗಿಯದ ಗೋಳು, ಥರ ಥರದ ಸವಾಲು.

ಕಾಡುಪ್ರಾಣಿಗಳ ಕಾಟದಿಂದ ಪೈರು- ಫಸಲನ್ನು ಕಾಪಾಡಿಕೊಳ್ಳಲು ಹರಸಾಹಸವನ್ನೇ ಮಾಡಬೇಕು. ಭತ್ತ ಬೆಳೆಯಲು ಅಲ್ಲಿ ಎಕರೆಯೊಂದಕ್ಕೆ ತಗಲುವ ವಾರ್ಷಿಕ ವೆಚ್ಚಕ್ಕಿಂತಲೂ ಆದಾಯ ಕಡಿಮೆ! ಅಂತಹ ಹೊತ್ತಿನಲ್ಲಿ ಸ್ವತಂತ್ರ ಬದುಕಿಗೆ ಹಂಬಲಿಸುತ್ತಿದ್ದ ಬಡ ತಲೆಮಾರುಗಳು ಶಿಕ್ಷಣ ಮತ್ತು ಜಾಗತೀಕರಣದ ಪರಿಣಾಮವಾಗಿ ಹೊರಜಗತ್ತಿಗೆ ಒಡ್ಡಿಕೊಂಡು ಆರ್ಥಿಕ ಸ್ವಾವಲಂಬನೆಯೊಂದಿಗೆ ಸಾಮಾಜಿಕ ಸ್ಥಿತ್ಯಂತರಕ್ಕೆ ಕಾರಣವಾದವು. ಉಳ್ಳವರ ಸ್ವತ್ತಾಗಿದ್ದ ದುಡ್ಡಿನಬೆಳೆ 'ಅಡಿಕೆ'ಯ ಬೆನ್ನುಬಿದ್ದರು ಅವರು. ಬಡತನ ಮತ್ತು ಸಾಲವನ್ನಷ್ಟೇ ದಯಪಾಲಿಸಿದ್ದ ತುಂಡರಸರಿಗೆ ತಣ್ಣಗೆ ಸಡ್ಡು ಹೊಡೆದರು. ಕೂಲಿಕಾರ್ಮಿಕರ ಹಿಡಿಯಷ್ಟಿದ್ದ ಭತ್ತದ ಗದ್ದೆಗಳು ತೋಟವಾಗಿ ಬದಲಾದವು. ನೋಡನೋಡುತ್ತ ಕಾಡುಗುಡ್ಡಗಳೆಲ್ಲ ಸೊಂಟ ಮುರಿದುಕೊಂಡು ಮಕಾಡೆ ಮಲಗಿದವು.

ಅಂತರಗಂಗೆಯನ್ನು ಮೇಲೆತ್ತಲು ಕಂಡಕಂಡಲ್ಲಿ ಕೊಳವೆಬಾವಿಗೆ ಕಿಂಡಿಕೊರೆದಿದ್ದಾಯ್ತು. ವರ್ಷದುದ್ದಕ್ಕೂ ಕಾಡಂಚಿನಲ್ಲಿದ್ದ ಒತ್ತುವರಿ ಒಡ್ಡುಗಳು ಒತ್ತಿನಕಾಡನ್ನು ಕಬಳಿಸುತ್ತಲಿದ್ದವು. ಕೂಲಿಕಾರರ ಬದುಕು ಕಡುಕಷ್ಟದಿಂದ ಹೊರಬರುತ್ತಿತ್ತಾದರೂ ಸುತ್ತ ಆವರಿಸಿದ್ದ ಕಾಡಿನ ಕವಚವೆಲ್ಲ ಕಳಚಿ ಬೀಳಲಾರಂಭಿಸಿತು. ಅಡಿಕೆಯೊಂದೇ ಮಲೆನಾಡಿನಲ್ಲಿ ಮರ್ಯಾದೆಯ ಬೆಳೆ ಎಂಬುದನ್ನು ಅರಿತುಕೊಂಡವರಿಗೆ ತಮ್ಮ ಬಗರ್‌ಹುಕುಂ ತುಂಡು ಜಮೀನನ್ನು ಅಷ್ಟಿಷ್ಟು ಒತ್ತುವರಿ ಮಾಡಿ ಅಡಿಕೆ ಸಸಿಗಳನ್ನು ಊರಲೇಬೇಕಾದ ಅನಿವಾರ್ಯ ಸೃಷ್ಟಿಯಾಗಿದ್ದುದು ಸುಳ್ಳಲ್ಲ!

'ಅತಿಯಾದರೆ ಅಮೃತವೂ ವಿಷವಾಗುತ್ತದೆ' ಎಂಬ ಮಾತನ್ನು ಅಡಿಕೆ ಬೆಳೆಯ ಸದ್ಯದ ಸ್ಥಿತಿ ಸಾರಿ ಹೇಳುತ್ತಿದೆ. ಮುಖ್ಯವಾಗಿ ಮಲೆನಾಡಿಗರು ಪರ್ಯಾಯ ಬೆಳೆ ಮತ್ತು ಮಿಶ್ರಬೆಳೆ ಸಾವಯವ ವಿಧಾನಗಳನ್ನು ಅಳವಡಿಸಿಕೊಂಡ ಸಂಯಮದ ಕೃಷಿಮಾರ್ಗವನ್ನು ಕಂಡುಕೊಳ್ಳಬೇಕಿದೆ.

ರೈತರ ಹಿತ ಕಾಯುವುದರೊಟ್ಟಿಗೆ, ಜನಸಂಖ್ಯೆ ಹೆಚ್ಚಿದಂತೆಲ್ಲಾ ಕುಗ್ಗುತ್ತಲೇ ಹೋಗುತ್ತಿರುವ ಅರಣ್ಯವ್ಯಾಪ್ತಿಯಲ್ಲೀಗ ಪರಿಸರ ರಕ್ಷಣೆಯ ಕೂಗು, 'ಕಸ್ತೂರಿ ರಂಗನ್ ವರದಿ' ಜಾರಿಗೊಳ್ಳಬೇಕೆಂಬ ವಾದವೂ ಬಲಗೊಂಡಿದೆ.

ವಾಚಕರ ವಾಣಿ

ಲೋಪದೋಷ ಮೊದಲು ಸರಿಯಾಗಲಿ

ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳಿಗೆ ಮತಾಂತರಗೊಂಡ ದಲಿತರಿಗೆ ಮೀಸಲಾತಿ ಸೌಲಭ್ಯ ನೀಡಲು ಸಾಧ್ಯವಿಲ್ಲ ಎಂದು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿರುವುದು (ಪ್ರ.ವಾ., ನ. 11) ಅದರ ಸರ್ವಾಧಿಕಾರಿ ಧೋರಣೆಯನ್ನು ಪ್ರತಿಬಿಂಬಿಸುತ್ತದೆ. ಹಿಂದೂ ಧರ್ಮದಲ್ಲಿದ್ದಾಗ ಅನುಭವಿಸಿದ್ದಕ್ಕಿಂತ ಹೆಚ್ಚಿನ ದೌರ್ಜನ್ಯವನ್ನು ಕ್ರೈಸ್ತ ಮತ್ತು ಇಸ್ಲಾಂ ಧರ್ಮದಲ್ಲಿ ದಲಿತರು ಎದುರಿಸುತ್ತಿದ್ದಾರೆ ಎಂಬುದಕ್ಕೆ ದಾಖಲೆ ಲಭ್ಯವಿಲ್ಲ ಎಂದು ಹೇಳುವ ಮೂಲಕ, ಹಿಂದೂ ಧರ್ಮದಲ್ಲಿ ದಲಿತರಿಗೆ ಸಂಬಂಧಿಸಿದಂತೆ ಇರುವ ಲೋಪದೋಷಗಳನ್ನು ಸರ್ಕಾರ ಬಹಿರಂಗವಾಗಿ ಒಪ್ಪಿಕೊಂಡಿದೆ.

ತಾರತಮ್ಯದಂತಹ ಲೋಪದೋಷಗಳನ್ನು ಸರಿಪಡಿಸಿದರೆ, ದಲಿತರು ಹಿಂದೂ ಧರ್ಮದಿಂದ ಇತರ ಧರ್ಮಗಳಿಗೆ ಮತಾಂತರಗೊಳ್ಳುವುದು ತಪ್ಪುತ್ತದೆ. ಮುಂದೆ ಅವರಿಗೆ ಮೀಸಲಾತಿ ಸೌಲಭ್ಯಗಳನ್ನು ಮುಂದುವರಿಸುವ ಅಗತ್ಯವೂ ಇರುವುದಿಲ್ಲ.

ಎಲ್.ಚಿನ್ನಪ್ಪ, ಬೆಂಗಳೂರು

ಆದರ್ಶ ಗುಣ ಅರಿಯಬೇಕಿದೆ

ನಾಡಪ್ರಭು ಕೆಂಪೇಗೌಡರ ಕಂಚಿನ ಪ್ರತಿಮೆಯು ಇದೀಗ ಲೋಕಾರ್ಪಣೆಗೊಂಡಿದೆ. ಇದು ಬೆಂಗಳೂರಿನ ನಿರ್ಮಾತೃಗೆ ನಾವು ಸಲ್ಲಿಸಿದ ಗೌರವ ಎಂದು ಸ್ಮರಿಸಿಕೊಳ್ಳಬಹುದಷ್ಟೇ. ಆದರೆ, ಅವರ ಆದರ್ಶಗಳನ್ನು ನಾವು ಪಾಲಿಸುತ್ತಿದ್ದೇವೆಯೇ ಎಂದು ಪ್ರಶ್ನಿಸಿಕೊಂಡಾಗ, ಉತ್ತರ ಮಾತ್ರ ನಿರಾಶಾದಾಯಕ.

ಕೆಂಪೇಗೌಡ ಅವರಲ್ಲಿದ್ದ ಆದರ್ಶ ಗುಣ, ದೂರದರ್ಶಿತ್ವ, ಜನಪರ ಕಾಳಜಿ, ಉದಾತ್ತ ಧ್ಯೇಯ ಯಾವುವೂ ನಮ್ಮ ಜನಪ್ರತಿನಿಧಿಗಳಲ್ಲಿ ಇಲ್ಲದಿರುವುದು ಎದ್ದು ಕಾಣುತ್ತದೆ. ಉದಾಹರಣೆಗೆ, ಕೆಂಪೇಗೌಡರು ಅಂದು ಕಟ್ಟಿಸಿದ್ದ ಹಲವಾರು ಕೆರೆಗಳನ್ನು ಮುಚ್ಚಿ ರಿಯಲ್ ಎಸ್ಟೇಟ್ ದಂಧೆಯನ್ನಾಗಿ ಮಾಡಿರುವುದನ್ನು, ಆಗಾಗ್ಗೆ ಸುರಿಯುವ ಭಾರಿ ಮಳೆಯು ಜಗಜ್ಜಾಹೀರು ಮಾಡುತ್ತಲೇ ಇರುತ್ತದೆ. ನಗರದ ಆಡಳಿತ ಕೇಂದ್ರವಾಗಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು (ಬಿಬಿಎಂಪಿ) ರಸ್ತೆಗಳಲ್ಲಿನ ಗುಂಡಿಗಳನ್ನು ಸರಿಪಡಿಸದೇ ಇರುವುದರಿಂದ ಅಪಘಾತಕ್ಕೀಡಾಗಿ ಹಲವು ಮಂದಿ ಸಾವಿಗೀಡಾಗಿರುವುದು ಕಣ್ಮುಂದೆಯೇ ಇದೆ. ಇವು ಆಡಳಿತ ವೈಫಲ್ಯಕ್ಕೆ ಹಿಡಿದ ಕನ್ನಡಿಯಂತಿವೆ. ಕೆಂಪೇಗೌಡರ ಹಿರಿಮೆಯನ್ನು ಸಾರುವ ಕೆಲಸಗಳು ಆಗುತ್ತಿಲ್ಲ. ಸರ್ಕಾರಗಳು ಗಣ್ಯರ ಪ್ರತಿಮೆಗಳನ್ನು ನಿರ್ಮಿಸುವುದಕ್ಕಿಂತ ಹೆಚ್ಚಾಗಿ ಅಂತಹವರ ವ್ಯಕ್ತಿತ್ವ ಹಾಗೂ ಆದರ್ಶ ಗುಣಗಳನ್ನು ಅರಿತು ಅದರಂತೆ ನಡೆಯುವುದನ್ನು ಕಲಿಯಬೇಕಿದೆ.

ನಾಗರಾಜ್ ಮಾದೇಗೌಡ, ಕನಕಪುರ

ಕಾಸು- ತಾಸು?!

7ನೇ ವೇತನ ಆಯೋಗ
ರಚಿಸಿಯೇಬಿಟ್ಟರು ಸಿ.ಎಂ
ಹೌದು, ಹೆಚ್ಚಾಗಬಹುದು ಇನ್ನು
ರಾಜ್ಯ ಸರ್ಕಾರಿ ನೌಕರರ
ಸಂಬಳದ ಕಾಸು...!
ಜೊತೆಯಲ್ಲೇ ಕೊಟ್ಟರು
ಸಿ.ಎಂ ಸಲಹೆ,
ಹೆಚ್ಚು ಕೆಲಸ ಮಾಡಿ
ನಿತ್ಯ ಒಂದು ತಾಸು!

ಮ.ಗು.ಬಸವಣ್ಣ, ಸುತ್ತೂರು, ಮೈಸೂರು

ರಥದಲ್ಲಿ ಸಂವಿಧಾನಮೌಲ್ಯ ಪ್ರತಿಪಾದನೆ

ವಿಜಯನಗರ ಜಿಲ್ಲೆ ಹರಪನಹಳ್ಳಿಯ ವೀರಭದ್ರೇಶ್ವರ ದೇವಸ್ಥಾನ ಸಮಿತಿಯು ಈಚೆಗೆ ನೂತನವಾಗಿ ನಿರ್ಮಿಸಿರುವ ರಥದಲ್ಲಿ ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ಸೇರಿದಂತೆ ಹಲವಾರು ದಾರ್ಶನಿಕರ ಭಾವಚಿತ್ರಗಳನ್ನು ಅಳವಡಿಸಿರುವ ವರದಿ (ಪ್ರ.ವಾ., ನ. 8) ಓದಿ ಹೆಮ್ಮೆ ಎನಿಸಿತು.

ಅಂಬೇಡ್ಕರ್ ಅವರು ರೂಪಿಸಿರುವ ನಮ್ಮ ದೇಶದ ಸಂವಿಧಾನವು ವಿಶ್ವಕ್ಕೇ ಆದರ್ಶವಾಗಿದೆ. ಸಂವಿಧಾನದ ನಿರ್ಮಾಣಕ್ಕಾಗಿ ಅಂಬೇಡ್ಕರ್ ಅವರು ಪಟ್ಟ ಪರಿಶ್ರಮ ದೊಡ್ಡದು. ಅಂಥ ಮಹನೀಯರ ಭಾವಚಿತ್ರವನ್ನು ರಥದಲ್ಲಿ ಅಳವಡಿಸುವ ಮೂಲಕ ದೇವಸ್ಥಾನ ಸಮಿತಿಯು ಸಂವಿಧಾನದ ಮೌಲ್ಯಗಳನ್ನು ಸಾರುತ್ತಿರುವುದು ಶ್ಲಾಘನೀಯ ಕಾರ್ಯ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಪರಿಶಿಷ್ಟ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್: ತಡೆ ಸಲ್ಲದು

ಅತ್ಯುನ್ನತ ಶ್ರೇಣಿಯಲ್ಲಿ ಪಾಸಾದ ಪರಿಶಿಷ್ಟ ಜಾತಿಯ ಎಸ್‌ಎಸ್‌ಎಲ್‌ಸಿ ಮತ್ತು ಪಿಯು ವಿದ್ಯಾರ್ಥಿಗಳಿಗೆ ಕೇಂದ್ರ ಸರ್ಕಾರ ಹಾಗೂ ರಾಜ್ಯದ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಮೆರಿಟ್ ಸ್ಕಾಲರ್‌ಶಿಪ್ ದೊರೆಯುತ್ತಿತ್ತು. ಆದರೆ, ಎರಡು ವರ್ಷಗಳಿಂದ ಈ ಸ್ಕಾಲರ್‌ಶಿಪ್ ಅನ್ನು ಕೆಲವರಿಗೆ ನೀಡಿದರೆ, ಮತ್ತೆ ಕೆಲವರಿಗೆ ತಡೆಹಿಡಿಯಲಾಗುತ್ತಿದೆ. ವಿದ್ಯಾರ್ಥಿಗಳು ಪದವಿ ತರಗತಿಯ ಪ್ರವೇಶ ಪಡೆದಿದ್ದರೂ ಇದುವರೆಗೆ ಈ ಸ್ಕಾಲರ್‌ಶಿಪ್ ದೊರೆತಿಲ್ಲ.

ಈ ಬಗ್ಗೆ ಇಲಾಖೆಯ ಅಧಿಕಾರಿಗಳನ್ನು ಪ್ರಶ್ನಿಸಿದರೆ ಬಜೆಟ್ ಕೊರತೆಯ ನೆಪ ಹೇಳುತ್ತಿದ್ದಾರೆ. ಪತ್ರಿಕೆಗಳಲ್ಲಿ ದೊಡ್ಡ ಜಾಹೀರಾತುಗಳನ್ನು ನೀಡಿ, ಪರಿಶಿಷ್ಟ ವಿದ್ಯಾರ್ಥಿಗಳಿಗೆ ಕೋಟ್ಯಂತರ ರೂಪಾಯಿ ಖರ್ಚು ಮಾಡುತ್ತಿದ್ದೇವೆ ಎನ್ನುತ್ತದೆ ಸರ್ಕಾರ. ಆದರೆ ಮೆರಿಟ್ ಸ್ಕಾಲರ್‌ಶಿಪ್ ನೀಡಲು ಇರುವ ನಿಜವಾದ ಅಡೆತಡೆಗಳಾದರೂ ಏನು?

ಡಾ. ಎ.ಆರ್.ಗೋವಿಂದಸ್ವಾಮಿ, ಬೆಂಗಳೂರು

ಚಿಕಿತ್ಸೆಗೆ ನೆರವು ನೀಡಿ

ಮೈಸೂರು ಜಿಲ್ಲೆಯ ಎಚ್.ಡಿ. ಕೋಟೆ ತಾಲ್ಲೂಕಿನ ಎನ್. ಬೇಗೂರಿನಲ್ಲಿರುವ ನಾನು ಸೋಲಿಗ ಸಮುದಾಯಕ್ಕೆ ಸೇರಿದವನಾಗಿದ್ದು, ಈಚೆಗೆ ಕೆಲ ತಿಂಗಳುಗಳಿಂದ ಯಕೃತ್ತಿಗೆ ಸಂಬಂಧಿಸಿದ ಕಾಯಿಲೆಯಿಂದ ಬಳಲುತ್ತಿದ್ದೇನೆ. ಈಗಾಗಲೇ ಚಿಕಿತ್ಸೆಗಾಗಿ ₹ 70 ಸಾವಿರ ಸಾಲ ಮಾಡಿದ್ದೇನೆ. ಕುಟುಂಬದಲ್ಲಿ ದುಡಿಯುವ ವ್ಯಕ್ತಿ ನಾನೊಬ್ಬನೇ ಆಗಿದ್ದು, ಈಗ ಕಾಯಿಲೆಯ ಕಾರಣದಿಂದ ಸರಿಯಾಗಿ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ. ಚಿಕಿತ್ಸೆಯ ಭಾಗವಾಗಿ ವೈದ್ಯರು ಲಿವರ್ ಬಯಾಪ್ಸಿಗೆ ಸೂಚಿಸಿದ್ದಾರೆ. ಅಗತ್ಯ ಬಂದರೆ ಶಸ್ತ್ರಚಿಕಿತ್ಸೆ ನಡೆಸುವುದಾಗಿಯೂ ತಿಳಿಸಿದ್ದಾರೆ. ಈ ಚಿಕಿತ್ಸೆಗೆ ವೆಚ್ಚವಾಗುವ ಹಣವನ್ನು ಭರಿಸುವ ಶಕ್ತಿ ನಮ್ಮ ಕುಟುಂಬಕ್ಕೆ ಇಲ್ಲ. ದಾನಿಗಳು ದಯಮಾಡಿ ನನಗೆ ಆರ್ಥಿಕ ಸಹಾಯ ನೀಡಬೇಕೆಂದು ಮನವಿ. ಬ್ಯಾಂಕ್ ವಿವರ: ರಾಜೇಶ್ ಬಿ., ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಎಚ್.ಡಿ. ಕೋಟೆ ಶಾಖೆ, ಖಾತೆ ಸಂಖ್ಯೆ 64076360913, IFSC: SBIN0040068, ಮೊಬೈಲ್: 81050 88530.

ರಾಜೇಶ್ ಬಿ., ಎನ್‌.ಬೇಗೂರು, ಎಚ್‌.ಡಿ.ಕೋಟೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಹಿಂದೂ ಎಂಬುದು ಭಾರತ ಮೂಲದ ಪದ ಅಲ್ಲವೇ?

ಹಿಂದೂ ಪದದ ಕುರಿತ ಗುದ್ದಾಟವೇ ಬಾಲಿಶ



'ಹಿಂದೂ' ಎಂಬ ಪದದ ವ್ಯಾಖ್ಯಾನದಲ್ಲಿ ಅಷ್ಟೇನೂ ಪ್ರಸ್ತುತವಲ್ಲದ ಕೆಲವು ಪ್ರಶ್ನೆಗಳನ್ನು ಪದೇ ಪದೇ ಎತ್ತಲಾಗುತ್ತಿದೆ. ಆ ಪದವು ಪ್ರಚಲಿತವಾಗಿದೆ ಮತ್ತು ಅದನ್ನು ಬಳಸುತ್ತಿದ್ದೇವೆ. ಆದಾಗ್ಯೂ ಪದವು ಹೇಗೆ ಮತ್ತು ಎಲ್ಲಿಂದ ಬಂದಿತೆಂಬ ವಿಷಯದಲ್ಲಿ ಸಂಶಯಾಸ್ಪದ ತೀರ್ಮಾನಗಳಿಂದಾಗಿ ವರ್ತಮಾನದಲ್ಲಿ ಮತ್ತೆ ಗೊಂದಲ ಉಂಟಾಗಿದೆ. ಪದ ಹೇಗೇ ಬಂದಿರಲಿ, ಅದಕ್ಕೊಂದು ವ್ಯಾಪ್ತಿ ದಕ್ಕಿದೆಯಾದ್ದರಿಂದ ಅದನ್ನು ಬಳಸಲು ಸಂಕೋಚವೇನೂ ಇರಬಾರದು. ಆದರೆ ನಮ್ಮಲ್ಲೇ ಸಂಕೋಚ ಪ್ರವೃತ್ತಿ ತೋರ್ಪಡುತ್ತಾ ಅದಕ್ಕೆ ವಿರೋಧ ವ್ಯಕ್ತವಾಗುತ್ತದೆಯೆಂದು ಭಾಸವಾಗುತ್ತದೆ

● ಜಿ. ರಾಮಕೃಷ್ಣ

ಅತ್ಯಂತ ಪ್ರಾಚೀನ ಸಾಹಿತ್ಯವಾದ ಋಗ್ವೇದದಲ್ಲಿ ಹಲವು ಬುಡಕಟ್ಟುಗಳ ಪ್ರಸ್ತಾಪವಿದೆ: ಪಣಿಗಳು, ದಾಸ - ದಸ್ಯು - ಕೀಕಟ - ಶಮ್ಯು, ಮುಂತಾದವು. ಮಹಾಭಾರತದಲ್ಲಿ ಆರಟ್ಟರು ಮತ್ತು ಚರಕಸಂಹಿತೆಯಲ್ಲಿ ಅಂಬಷ್ಠರು ಸಹ ಇದ್ದಾರೆ. ಇವರೆಲ್ಲಾ ಆರ್ಯರೆಂಬುವವರಿಂದ ಭಿನ್ನರು, ಆದರೆ ಯಾರು ಹಿಂದೂ, ಯಾರು ಮುಂದು ಎಂಬ ಪ್ರಶ್ನೆ ಬಾಧಿಸಿಲ್ಲ. ಪ್ರಾಚೀನ ಪರ್ಷಿಯಾದ ಅವೆಸ್ತಾ ಗ್ರಂಥದಲ್ಲಿಯೂ 'ಹಿಂದೂ' ಎಂಬ ಪದ ಲಭ್ಯವಿಲ್ಲ; ಅಂತೆಯೇ ವೈದಿಕ ಸಾಹಿತ್ಯದಲ್ಲಿ ಸಹ. ಋಗ್ವೇದದಲ್ಲಿ ಕುಭ್ಯರು ಎಂಬ ಒಂದು ಬಣ ಇದೆ. ಕುಭ ಮತ್ತು ಕೋಫೆನ್ ವಾಯವ್ಯದಲ್ಲಿರುವ ಕಾಬೂಲಿಗೆ ಇದ್ದ ಹೆಸರುಗಳು. ಆರ್ಯರು ಆ ಕಡೆಯಿಂದ ಸರಸ್ವತಿ ನದಿಯಾಚೆಯ ಗಂಗಾ ಬಯಲಿಗೆ ಕ್ರಮೇಣ ತಲುಪಿದ್ದು ಇತಿಹಾಸ. ಹಿಂದುಸ್ತಾನದ ಕಲ್ಪನೆಯು ಆ ನಂತರದ ಸಂಗತಿ. ಆರ್ಯರು ಹೊರಗಿನಿಂದ ಬಂದವರಲ್ಲವೆಂದು ಮಾನ್ಯ ಮಾಡಿದರೂ ಅದಕ್ಕೆ ಮುನ್ನವೇ ಒಳಗಿದ್ದವರ ಸಮುದಾಯದ ಹೆಸರೇನೆಂಬ ತಿಳಿವು ನಮಗೆ ದೊರೆಯದು. ಆರ್ಯರು ಸಮ್ಮಿಲನಗೊಂಡ ನಂತರದಲ್ಲಿ ಕೂಡ ವಿವಿಧ ಬುಡಕಟ್ಟುಗಳ ಹೆಸರುಗಳಿವೆಯೇ ವಿನಾ ಇಡೀ ಸಮುದಾಯದ್ದು ಇಲ್ಲ.

ಹಾಗಿದ್ದರೆ ನಮ್ಮ ಸಮುದಾಯದ ನಾಮಧೇಯವೇನು? ಆಪಸ್ತಂಬ ಧರ್ಮಸೂತ್ರವು ಆರಂಭವಾಗುವುದೇ ನಾಲ್ಕು ವರ್ಣಗಳ ಹೆಸರುಗಳಿಂದ. ಮನು ಮುಂತಾದ ಧರ್ಮಶಾಸ್ತ್ರಕಾರರು ಮತ್ತು ಭಗವದ್ಗೀತೆ ಅದೇ ಕಟ್ಟುಪಾಡಿಗೆ ಸಿಲುಕಿವೆ. ಮೂಲಭೂತವಾದ ಪ್ರಶ್ನೆ ಇದು: ಈ ನಾಲ್ಕನ್ನೂ ಒಳಗೊಂಡ ಒಂದು ಸಮುದಾಯದ ಹೆಸರೇನು? ಅಂದರೆ, ಶ್ರೇಣೀಕೃತ ಸಮಾಜದಲ್ಲಿ ಒಟ್ಟಾಗಿ ಜೀವನ ಸಾಗಿಸುತ್ತಿದ್ದ ಇಡೀ ಸಮೂಹದ ಹೆಸರೇನು? ಸೋಜಿಗವೆಂದರೆ, ನಮ್ಮಲ್ಲಿ ಸಮಷ್ಟಿಯ ನಾಮಪದವೇ ಇಲ್ಲ. ಕಡೇಪಕ್ಷ ಅಮರಕೋಶದಲ್ಲಿಯಾದರೂ ಇರಬೇಕಿತ್ತು, ಆದರೆ ಇಲ್ಲ. ಅಶೋಕನ ಶಾಸನಗಳು ಬೋಧನೆ ಮಾಡುತ್ತವಲ್ಲಾ, ಯಾರಿಗೆ? ತಥಾಕಥಿತ ಹಿಂದೂಗಳಿಗಂತೂ ಅಲ್ಲ, ಏಕೆಂದರೆ ಅಂತಹ ಸಮಷ್ಟಿಯನ್ನು ಹಾಗೆ ಕಲ್ಪಿಸಿಕೊಳ್ಳಲಾಗಿರಲಿಲ್ಲ. ಏಳನೆಯ ಶತಮಾನದ ಬಾಣಭಟ್ಟ ತನ್ನ 'ಹರ್ಷಚರಿತ'ದಲ್ಲಿ ಹಲವು ವೃತ್ತಿಗಳ ಜನರನ್ನು ನಮೂದಿಸಿದ್ದಾನೆ, ಆದರೆ ಅವರೆಲ್ಲರೂ ಸೇರಿದ ಸಮುದಾಯಕ್ಕೆ ಒಂದು ನಿರ್ದಿಷ್ಟ ಹೆಸರಿಲ್ಲ.

ಜಯದೇವ ಕವಿಯು ಅವತಾರಪುರುಷನು ಮ್ಲೇಚ್ಛರನ್ನು ಕಂಗಾಲಾಗಿಸುತ್ತಾನೆ, ಎನ್ನುತ್ತಾನೆ (ಮ್ಲೇಚ್ಛಾನ್ ಮೂರ್ಛಯತೇ). ಆದರೆ ಊರ್ಜಿತಗೊಳಿಸಲಾಗುವ ಒಟ್ಟು ಬಣದ ಹೆಸರೇನೆಂಬುದನ್ನು ತಿಳಿಸುವುದಿಲ್ಲ.

ನಮ್ಮ ದೇಶಕ್ಕೆ 'ಭಾರತ' ಎಂಬ ಹೆಸರೇಕಿದೆಯೆಂಬುದಕ್ಕೆ ಉತ್ತರವು ಐತಿಹ್ಯ ರೂಪದಲ್ಲಿದೆ, ಯಾವನೋ ಭರತನ ಮೂಲವನ್ನು ಅರಸಬೇಕಾಗಿದೆ. ಅದರಿಂದ ಊನವೇನೂ ಉಂಟಾಗಿಲ್ಲ. 'ಭಾ' ಎಂದರೆ ಜ್ಞಾನ, ಅದರಲ್ಲಿ ಆಸಕ್ತವಾಗಿರುವುದು ಭಾರತ. ಇದಕ್ಕೆ ಸಂವಾದಿಯಾಗಿ 'ಹಿಂದೂ' ಎಂಬ ಪದವನ್ನು ಅರ್ಥೈಸಲು ಸಾಧ್ಯವಾಗುವುದಿಲ್ಲ. ಹೋಗಲಿ, ಹ್ಯುಯನ್‌ತ್ಸಾಂಗ್‌ನ ಕಾಲದಲ್ಲಿ 'ಹಿಂದೂಕುಶ್' ಎಂಬುದಿತ್ತೇ, ಅವನು ಆ ಮಾರ್ಗವಾಗಿ ಬಂದನೇ? ಅಥವಾ, ಅವನಿಗಿಂತಲೂ ಮುಂಚೆ ಎಂದೋ ಬಂದಿದ್ದವರಿಂದಾಗಿ ಆ ಹೆಸರು ಬಂದಿತೆ? ಸಂಸ್ಕೃತದಲ್ಲಿ ಒಂದು ಪರಿಪಾಟವಿದೆ: ಪದಗಳ ವ್ಯುತ್ಪತ್ತಿ ಹೇಳುವುದು. ರಂಜನೆ ನೀಡುವವನು ರಾಜ (ರಂಜಯತಿ ಇತಿ), ಶುಕ್ ಅಸ್ಯ ಇತಿ ಶೂದ್ರಃ (ಬವಣೆಗೆ ಸಿಲುಕಿದವನು ಶೂದ್ರ), ಇತ್ಯಾದಿ. ನಾಮಪದಗಳೆಲ್ಲಾ ಕ್ರಿಯಾಸೂಚಕ 'ಆಖ್ಯಾತ'ಗಳಿಂದ ಬಂದಿವೆ; ಆದರೆ ಆಖ್ಯಾತಗಳಿಗೆ ನಿರ್ದಿಷ್ಟವಾದ ಅರ್ಥ ಹೇಗೆ ನೀಡಲಾಯಿತೋ ತಿಳಿಯದು. ಇರಲಿ, 'ಹಿಂದೂ' ಎಂಬ ಪದಕ್ಕೆ ವ್ಯುತ್ಪತ್ತಿ ಏನು? 'ಹಿಂಕರೋತಿ ಇತಿ ಹಿಂದುಃ' ಎಂದು ಇಟ್ಟುಕೊಳ್ಳಬಹುದೇ? ಅದು ನಮ್ಮ ತಥಾಕಥಿತ ಕ್ಷಾತ್ರಧರ್ಮದ ಸೂಚಕವೂ ಆಗುತ್ತದೇನೊ! ಅಥವಾ 'ಹಿಂದೂ' ಎಂಬುದು 'ಸಿಂಧು' ಎಂಬುದಕ್ಕೆ ಸಂಬಂಧಿಸಿದ್ದೆ?

ತೌಲನಿಕ ಭಾಷಾಶಾಸ್ತ್ರದಲ್ಲಿ ಗುರುತಿಸಿರುವಂತೆ ಇಂಡೋ - ಯೂರೋಪಿಯನ್ ಭಾಷಾವರ್ಗದಲ್ಲಿ 'ಶತಂ' ಮತ್ತು 'ಕೆಂಟುಂ' ಎಂದು ಎರಡು ಶಾಖೆಗಳಿವೆ. ಒಂದು ವರ್ಗದ 'ಶ' ಇನ್ನೊಂದು ವರ್ಗದಲ್ಲಿ 'ಹ' ಆಗಿ ಕಾಣಿಸಿಕೊಳ್ಳುತ್ತದೆ ಎಂಬುದು ಅದರ ಸಾರ. 'ಶತಂ' ಎಂಬುದು 'ಹುಂದ್' (ಹಂಡ್ರಡ್) ಆಗುತ್ತದೆ; ಹಾಗೆಯೇ 'ಸಿಂಧು' ಎಂಬುದು 'ಹಿಂದು' ಆಗುತ್ತದೆ. ಗ್ರಿಮ್ ನಿಯಮ, ಫಾರ್ಚುನಟೋವ್ ನಿಯಮ ಇತ್ಯಾದಿಗಳು ಇಂಡೋ-ಜರ್ಮನಿಕ್ ಮತ್ತು ಇಂಡೋ-ಇರಾನಿಯನ್ ಭಾಷೆಗಳಲ್ಲಿ ಪರಸ್ಪರ ವ್ಯತ್ಯಾಸಗಳು ಉಂಟಾಗಿರುವುದನ್ನು ಸಮರ್ಪಕವಾಗಿ ವಿವರಿಸಿವೆ. ಭಾಷಾಶಾಸ್ತ್ರದ ಅಧ್ಯಯನದಿಂದ 'ಸಿಂಧು' ಮತ್ತು 'ಹಿಂದು' ಪದಗಳ ನಡುವಣ ಸಾಮ್ಯವು ಆಕಸ್ಮಿಕವಲ್ಲವೆಂಬುದು ಸಿದ್ಧವಾಗಿದೆ; ಆದರೆ 'ಹಿಂದೂ' ಮತ್ತು 'ಸನಾತನ ಧರ್ಮ' ಎಂಬ ಸೂತ್ರದ ಸಮರ್ಥನೆಗೆ ವಿವರಣೆ ನೀಡುವುದು ದುಷ್ಕರ. ಯಾವ ಕಾಲದಲ್ಲಿ ಮತ್ತು ಏಕೆ ಒಂದು ಸಮುದಾಯಕ್ಕೆ 'ಹಿಂದೂ' ಎಂಬ ಹೆಸರು ಬಂದಿತು, ಅದನ್ನು ಕೊಟ್ಟವರು ಯಾರು, ಎಂಬಿತ್ಯಾದಿ ಪ್ರಶ್ನೆಗಳಿಗೆ ಸಮಂಜಸ ಹಾಗೂ ನಿಖರ ಉತ್ತರ ನೀಡಹೊರಡುವುದು ಹುಚ್ಚುಸಾಹಸವಾಗುತ್ತದೆ. ಆದರೆ ಅವೆರಡರ ನಡುವಣ ಸಂಬಂಧವು ಕಾಲ್ಪನಿಕವಂತೂ ಅಲ್ಲ. ಹಿಂದೂಗಳು ನೀತಿವಂತರೋ ಅಲ್ಲವೋ ಎಂಬುದು ಬೇರೊಂದು ಭಾಷೆಯ 'ಸಿಂಧು' ಪದದ ಅರ್ಥವನ್ನು ಆಧರಿಸಿರುವುದು ಸಾಧ್ಯವಿಲ್ಲದ ಮಾತು. ಅದರ ಬಗೆಗಿನ ಗುದ್ದಾಟವು ಬಾಲಿಶವಾಗುತ್ತದೆ.

ನಿರ್ದಿಷ್ಟವಾಗಿ ಕನ್ನಡದ ಸಂದರ್ಭದಲ್ಲಿ 'ಹಿಂದೂ' ಎಂಬ ಪದವು ನಮ್ಮ ಯಾವ ಪ್ರಾಚೀನ ಅಭಿಜಾತ ಸಾಹಿತ್ಯ ಕೃತಿಯಲ್ಲೂ ಇಲ್ಲ: ವಡ್ಡಾರಾಧನೆ, ಗದಾಯುದ್ಧ, ವಚನಗಳು ಇಲ್ಲೆಲ್ಲೂ ಅದರ ಸುಳಿವಿಲ್ಲ. ಆದ್ದರಿಂದ ಆ ಸಂಬಂಧವಾಗಿ ಭಾವೋದ್ರೇಕವು ತೀರಾ ಅಪ್ರಾಸಂಗಿಕ. ಒಂದು ಹೆಸರಿನ ಊಹಿತ ಅರ್ಥದಿಂದ ಗಾಸಿಗೊಳ್ಳುವುದು ಸರ್ವಥಾ ಅನರ್ಥಕ. ಗಾಸಿಗೊಳ್ಳುವಂತಿದ್ದರೆ ಸ್ವತಂತ್ರವಾಗಿ 'ಹಿಂದೂ' ಎಂಬುದನ್ನು 'ಮುಂದು' ಎಂದು ಪರಿವರ್ತಿಸಿಕೊಳ್ಳಲು ಅಡ್ಡಿಯಿಲ್ಲ. ಸರ್ವೋಚ್ಚ ನ್ಯಾಯಾಲಯವು 'ಹಿಂದೂ' ಎಂಬುದು ಒಂದು ಜೀವನ ಮಾದರಿ ಎಂದು ತೀರ್ಪು ಕೊಟ್ಟಿದೆ. ಅದೆಂತಹ ಮಾದರಿ ಎಂಬುದು ಆಚರಣೆಯಲ್ಲಿ ತಿಳಿದಿಲ್ಲದ ವಿಚಾರವಲ್ಲ. ಆ ಮಾದರಿಯು ಯೋಗ್ಯವಾದುದೂ ಅಲ್ಲ. ಏಕೆಂದರೆ, ನಮ್ಮದು ಶ್ರೇಣೀಕೃತ ಮಾದರಿ, ಅದನ್ನು ಬದಲಾಯಿಸುವಂತೆಯೂ ಇಲ್ಲ. ಹಾಗಾದರೆ ಮುಂದಿನ ಹೆಜ್ಜೆ ಏನು? ನಿಜಕ್ಕೂ ಉತ್ತಮ ಪರ್ಯಾಯವನ್ನು ಕಂಡುಕೊಳ್ಳುವುದು ನಮ್ಮ ಕೈಯಲ್ಲೇ ಇದೆ: ಹಿಂದುತ್ವದ ಬದಲು ಭಾರತೀಯತೆ ಎಂಬ ತತ್ವಕ್ಕೆ ಪುಷ್ಟಿ ನೀಡಿದರೆ ಸಾಕು. ಹಿಂದುತ್ವದಲ್ಲಿಲ್ಲದ ಸಮಷ್ಟಿಭಾವವು ಭಾರತೀಯತೆಯಲ್ಲಿದೆ, ಏಕೆಂದರೆ ಅದು ಪ್ರತ್ಯೇಕತೆಯನ್ನು ಪೋಷಿಸುವುದಿಲ್ಲ. ಒಂದು ಪದವನ್ನು ಬೇರಾವುದೋ ಭಾಷೆಯಲ್ಲಿ ಹೇಗೆ ಬಳಸಲಾಗುತ್ತದೆ ಎಂಬುದು ಗೌಣ, ನಾವು ನಮ್ಮ ಭಾಷೆಯಲ್ಲಿ ಯಾವ ವ್ಯಾಪ್ತಿಯನ್ನು ಆ ಪದಕ್ಕೆ ನೀಡುತ್ತೇವೆಂಬುದು ಮಾತ್ರವೇ ಪ್ರಸ್ತುತವಾದ್ದು. ಅಷ್ಟಾದರೂ ಮುಜುಗರವು ಗಾಢವಾಗುವಂತಿದ್ದರೆ ಪರ್ಯಾಯವು ಲಭ್ಯವಿದೆ: ಹಿಂದುತ್ವವನ್ನು ದೂರೀಕರಿಸೋಣ, ಭಾರತೀಯತೆಯನ್ನು ಸ್ವೀಕರಿಸೋಣ ಮತ್ತು ಪೋಷಿಸೋಣ.

ಲೇಖಕ: ಬರಹಗಾರ ಮತ್ತು ಸಂಸ್ಕೃತಿ ಚಿಂತಕ



ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 273

ಕಲ್ಯಾಣಮಂಟಪಕ್ಕೆ ಬಂದ ಶಿವ

ಕಲ್ಯಾಣಮಂಟಪಕ್ಕೆ ಶಿವನನ್ನು ಉತ್ಸವದ ಮೂಲಕ ಹಿಮವಂತನ ಬಂಧುಗಳು ಕರೆತರುತ್ತಾರೆ. ಈ ಸಂದರ್ಭದಲ್ಲಿ ಕೆಲವರು ಶಂಕರನಿಗೆ ಛತ್ರಿಯನ್ನು ಹಿಡಿದಿದ್ದರೆ, ಅದರಮೇಲೆ ಕೆಲವರು ಮೇಲುಕಟ್ಟನ್ನು ಹಿಡಿದಿದ್ದರು. ಇನ್ನು ಕೆಲವರು ಎಡಬಲಗಳಲ್ಲಿ ಚಾಮರವನ್ನು ಬೀಸುತ್ತಿದ್ದರು. ಗಂಧರ್ವ ಗಾಯಕರು ಮಂಗಳವಾದ ಗಾನವನ್ನು ಮಾಡುತ್ತಾ, ಅಪ್ಸರೆಯರು ನರ್ತಿಸುತ್ತಾ ಸಾಗುತ್ತಿದ್ದರು. ಇವರೊಂದಿಗೆ ಶಿವಗಣಗಳು ಭೇರಿ-ಮದ್ದಳೆಯ ಲಯತಾಳಕ್ಕೆ ತಕ್ಕಂತೆ ನರ್ತನ ಮಾಡುತ್ತಿದ್ದರು. ಜನರು ಮಹಾದೇವನನ್ನು ಬಗೆಬಗೆಯ ಸ್ತೋತ್ರಮಾಡುತ್ತಿದ್ದರು. ಶಿವ ವಿವಾಹಮಂಟಪವನ್ನು ಪ್ರವೇಶಿಸಿದ. ಆಗ ಹಿಮವಂತನ ಬಂಧುಗಳಾದ ಪರ್ವತಶ್ರೇಷ್ಠರೆಲ್ಲ ಶಿವನನ್ನು ಗೌರವದಿಂದ ನಂದಿವಾಹನದಿಂದ ಇಳಿಸಿಕೊಂಡರು. ನಂತರ ಕಲ್ಯಾಣಮಂಟಪಕ್ಕೆ ಕರೆದುಕೊಂಡು ಹೋದರು.

ವಿವಾಹಮಂಟಪದ ಬಳಿ ಕಾದಿದ್ದ ಹಿಮವಂತ, ದೇವಗಣಗಳೊಡನೆ ಬಂದ ಈಶ್ವರನಿಗೆ ಭಕ್ತಿಯಿಂದ ನಮಸ್ಕರಿಸಿದ. ನಂತರ ಪುರದ ಸುಮಂಗಲೆಯರಿಂದ ವಿಧಿವತ್ತಾಗಿ ಆರತಿಯನ್ನು ಮಾಡಿಸಿ, ಮಂಟಪದೊಳಗೆ ಕರೆದೊಯ್ದ. ಶಿವನ ಜೊತೆ ಬಂದಿದ್ದ ಹರಿ, ಬ್ರಹ್ಮ ಸೇರಿದಂತೆ ಎಲ್ಲಾ ದೇವತೆಗಳು, ಮುನಿಗಳಿಗೂ ಪಾದ್ಯ ಅರ್ಘ್ಯಗಳನ್ನು ಕೊಟ್ಟು ಆತ್ಮೀಯವಾಗಿ ಬರಮಾಡಿಕೊಂಡು, ಅವರಿಗೆ ಸೂಕ್ತವಾದ ಆತಿಥ್ಯ ನೀಡಿದ.

ಬ್ರಹ್ಮ, ವಿಷ್ಣು, ಮತ್ತಿತರ ದೇವೋತ್ತಮರನ್ನು ಮದುಮಗ ಶಂಕರ ಕುಳಿತ್ತಿದ್ದ ರತ್ನಸಿಂಹಾಸನದ ಅಕ್ಕಪಕ್ಕ ಕುಳ್ಳಿರಿಸಿದ. ಅಲ್ಲಿಗೆ ಸುಮಂಗಲೆಯರೊಂದಿಗೆ ಬಂದ ಮೇನಾದೇವಿ ಸಂತಸದಿಂದ ಶಿವನಿಗೆ ಆರತಿಯನ್ನು ಎತ್ತಿದಳು. ಗರ್ಗಮುನಿ ಶಂಕರನಿಗೆ ಮಧುಪರ್ಕ ಮುಂತಾದ ವಿವಾಹಾಂಗವಿಧಿಗಳನ್ನು ಶಾಸ್ತ್ರೋಕ್ತವಾಗಿ ಮಾಡಿಸಿದ. ಬ್ರಹ್ಮನ ಆದೇಶದಂತೆ ವಿವಾಹಕ್ಕೆ ಮೊದಲು ಮಾಡಬೇಕಾದ ಮಂಗಳಕಾರ್ಯವನ್ನು ಮನಃಸಂತೋಷದಿಂದ ಮಾಡಿದ.

ವಧುವಿನ ತಂದೆ ಹಿಮವಂತ ಕಲ್ಯಾಣಮಂಟಪದ ವೇದಿಕೆಗೆ ಮಗಳು ಪಾರ್ವತಿಯನ್ನು ಕರೆದುಕೊಂಡುಬಂದ. ಆಗ ಬ್ರಹ್ಮ, ವಿಷ್ಣು ವರಮಹಾಶಯ ಮಹಾದೇವನನ್ನು ವಿವಾಹ ವೇದಿಕೆಗೆ ಕರೆತಂದರು. ಬೃಹಸ್ಪತಿ ಮೊದಲಾದ ಶಾಸ್ತ್ರವೇತ್ತರು ಹರ್ಷದಿಂದ ಕನ್ಯಾದಾನಕ್ಕೆ ಯೋಗ್ಯವಾದ ಮುಹೂರ್ತ ಸಮೀಪಿಸುವುದನ್ನು ನಿರೀಕ್ಷಿಸುತ್ತಿದ್ದರು. ಪುರೋಹಿತನಾದ ಗರ್ಗಮುನಿ ಘಟಿಕಾಯಂತ್ರದ ಬಳಿಯಲ್ಲೇ ಕುಳಿತು, ಲಗ್ನದ ಘಳಿಗೆ ಬರುವವರೆಗೂ ಓಂಕಾರ ಮಂತ್ರವನ್ನು ಪಠಿಸುತ್ತಲೇ ಇದ್ದ.

ಗರ್ಗಮುನಿ ಪುಣ್ಯಾಹಮಂತ್ರವನ್ನು ಹೇಳಿ ಗಿರಿಜಾ-ಶಿವರಿಗೆ ಅಂಜಲಿ ಹಿಡಿಯುವಂತೆ ಹೇಳಿದ. ಪಾರ್ವತಿಯು ತನ್ನ ಅಂಜಲಿಯಲ್ಲಿರುವ ಅಕ್ಷತೆಯನ್ನು ಶಿವನ ಮೇಲೆ ಪ್ರೀತಿಯಿಂದ ಹಾಕಿದಳು. ನಂತರ ಸುಂದರಮುಖಿಯಾದ ಗಿರಿಜೆ ಮಂಗಳದ್ರವ್ಯಗಳಾದ ಮೊಸರು, ಅಕ್ಷತೆ, ಕುಶಜಲಗಳಿಂದ ಶಿವನನ್ನು ಮಹಾಪ್ರೇಮದಿಂದ ಪೂಜಿಸಿದಳು. ಹೀಗೆ ಪೂಜಿಸುವಾಗ ಪಾರ್ವತಿ ಯಾರನ್ನು ಪಡೆಯುವುದಕ್ಕಾಗಿ, ಹಿಂದೆ ಮಹಾತಪಸ್ಸು ಮಾಡಿದ್ದಳೋ, ಅಂತಹ ಶಂಕರನನ್ನು ಬಹಳ ಹತ್ತಿರದಿಂದ ನೋಡಿ ಪುಳಕಿತಳಾದಳು. ಆಗ ಗಿರಿಜೆ ಮುಖ ಲಜ್ಜೆಯಿಂದ ಕೆಂಪೇರಿತು.

ಬ್ರಹ್ಮ ಮತ್ತು ಗರ್ಗ ಮೊದಲಾದ ಮುನಿಗಳ ಮಾತಿನಂತೆ ಶಿವನೂ ಲೋಕಾಚಾರದಂತೆ ಗಿರಿಜೆಯನ್ನು ಪೂಜಿಸಿದ. ಹೀಗೆ ಅನ್ಯೋನ್ಯವಾಗಿ ಪರಸ್ಪರ ಪೂಜಿಸುತ್ತಾ ವಧು-ವರರಾಗಿ ಶೋಭಿಸಿದ ಜಗದ್ರೂಪರಾದ ಪಾರ್ವತೀ ಪರಮೇಶ್ವರರಿಗೆ ಲಕ್ಷ್ಮಿ, ಸರಸ್ವತಿ, ಪುರದ ಸುಮಂಗಲೆಯರು ಮಂಗಳಾರತಿ ಬೆಳಗಿದರು.

ಇಲ್ಲಿಗೆ ಶ್ರೀಶಿವಮಹಾಪುರಾಣದಲ್ಲಿ ಪಾರ್ವತೀಖಂಡದ ನಲವತ್ತೇಳನೆಯ ಅಧ್ಯಾಯ ಮುಗಿಯುತ್ತದೆ.

ಪ್ರಜಾವಾಣಿ ಚರ್ಚೆ

ಧರ್ಮ, ಹಿಂದೂ ಪದಗಳ ಹಿನ್ನಲೆ– ಒಂದು ಸಮೀಕ್ಷೆ

● ಡಾ. ಆರತೀ ಬಿ.ವಿ.

ಹಿಂದೂ ಪದವು ಎಲ್ಲಿಂದ ಹೇಗೆ ಯಾವಾಗ ಬಂತೆನ್ನುವುದು ಖಚಿತವಾಗಿ ಹೇಳಲಾಗದ್ದಾದರೂ, ಈಗ ನಮ್ಮ ವ್ಯವಹಾರದಲ್ಲಿ 'ಧರ್ಮ' ಎನ್ನುವ ಅರ್ಥದಲ್ಲೇ ನಿಂತುಬಿಟ್ಟಿವೆ. 'ಸನಾತನ', 'ಧರ್ಮ' ಪದಗಳಂತೆಯೇ 'ಹಿಂದೂ' ಪದವೂ ಈ ನೆಲದ ಮೂಲಸಂಸ್ಕೃತಿ-ಮತಪಂಥಗಳ ಸಮುಚ್ಚಯದ ಅಸ್ಮಿತೆಯ ಗುರುತಾಗಿಬಿಟ್ಟಿದೆ

ಪರ್ಯಾಯ ನಾಮಗಳನ್ನು ಬಳಸುವುದು ಭಾರತದಲ್ಲಿ ಸರ್ವೇಸಾಮಾನ್ಯ. ಅಂತೆಯೇ, ಅನಾದಿಯಿಂದ ವಿಕಾಸವಾಗುತ್ತ ಬಂದ ಜೀವನನೀತಿಯನ್ನು ಧರ್ಮ, ಸನಾತನಧರ್ಮ, ಆರ್ಷಧರ್ಮ, ಆರ್ಯಸಂಸ್ಕೃತಿ, ಋಷಿಸಂಸ್ಕೃತಿ ಮುಂತಾದ ನಾಮಧೇಯಗಳಿಂದ ನಿರ್ದೇಶಿಸುವುದು ಪದ್ಧತಿ. ಸಮಷ್ಟಿಹಿತಕ್ಕೆ ಬಾಧಕವಾಗದಂತಹ ಯಾವುದೇ ವಿಶೇಷಧರ್ಮವು (ಮತಪಂಥಗಳು) 'ಸನಾತನ'ವೇ. ಈ ನೆಲದಲ್ಲಿ ಸಹಜವಾಗಿ ಅರಳಿ ಸಮರಸವಾಗಿ ಬಾಳಿದ ವೈದಿಕ-ಆಗಮ-ತಂತ್ರ-ಜಾನಪದ-ವನ್ಯ-ಬೌದ್ಧ-ಜೈನ-ಸಿಖ್ ಆದಿಯಾಗಿ ಎಲ್ಲ ಮತಪಂಥಗಳೂ ಅವುಗಳ ಪ್ರಭೇದಗಳೂ 'ಸನಾತನ'ವೆಂಬ ಈ ಅರ್ಥವ್ಯಾಪ್ತಿಗೆ ಒಳಪಡುತ್ತವೆ. ಕೀಟದಿಂದ ಹಿಡಿದು ಆನೆಯವರೆಗೂ, ಹುಲ್ಲಿನಿಂದ ಹಿಡಿದು ಹೆಮ್ಮರದವರೆಗೂ ಎಲ್ಲವನ್ನೂ ಧರಿಸಿ ಪೋಷಿಸುವ ದೊಡ್ಡ ಅಡವಿಯಂತೆ, ಈ ನೆಲದ ಸನಾತನ ಸಂಸ್ಕೃತಿಯೂ, ಅನಾದಿಯಿಂದಲೂ ಅಸಂಖ್ಯ ವೈವಿಧ್ಯಮಯ ಮತ-ಪಂಥ-ಪದ್ಧತಿಗಳ ತವರಾಗಿದೆ. ತತ್ವಶಾಸ್ತ್ರ-ಉಪಾಸನಾ ಶೈಲಿಗಳಿಂದ ಹಿಡಿದು ಆಹಾರ-ವೇಷ-ಭೂಷ-ಭಾಷೆ-ಕಲೆ-ಸಾಹಿತ್ಯ- ಜೀವನಶೈಲಿಗಳವರೆಗೂ ಸರ್ವತ್ರ ವೈವಿಧ್ಯಮಯ ಅಭಿವ್ಯಕ್ತಿಯು ಮೆರೆದಿವೆ. ನಿರಂತರ ತತ್ವಾನುಸಂಧಾನ, ಪ್ರಕೃತಿಯಲ್ಲಿ ದೇವರನ್ನು ಕಾಣುವ ಭಾವ ಹಾಗೂ ಕಲಾಭಿಜ್ಞತೆಯಿಂದ ತಮ್ಮತಮ್ಮ ಬದುಕನ್ನು ಕಟ್ಟಿಕೊಳ್ಳುವ ಸ್ವೋಪಜ್ಞತೆ- ಇವು ಈ ನೆಲದಲ್ಲಿ ಹುಟ್ಟಿಬೆಳೆದ ಎಲ್ಲ ಮತಪಂಥಗಳಲ್ಲೂ ಅಂತರ್ಗತವಾಗಿವೆ, ಎಲ್ಲರನ್ನೂ ಬೆಸೆಯುವ ಐಕ್ಯಸೂತ್ರವಾಗಿವೆ.

ಅನಾದಿಯಿಂದಲೂ ಭಾರತೀಯರು ತಮ್ಮ ಹೆಸರುಗಳನ್ನು ತಮ್ಮ ನೆಲ-ಜಲ-ಬೆಟ್ಟ-ವನಸ್ಪತಿಗಳ ಜೊತೆಗೆ ಬೆಸೆದುಕೊಂಡಿದ್ದಾರೆ. ನಮ್ಮ ಪಾಲಿಗೆ ಭೂಮಿ-ನದಿಗಳು ಮಾತೃರೂಪಗಳೇ. ಹೀಗಾಗಿ 'ಸಪ್ತಸಿಂಧುಗಳ ದೇಶ' (ಸರಸ್ವತೀ, ಸಿಂಧು, ವಿತಸ್ತಾ, ಅಸಿಕ್ನೀ, ವೃಷ್ಣಿ, ವಿಪಾಶಾ, ವ್ಯಾಸ, ಶತದ್ರುಗಳನ್ನು ಸಪ್ತಸಿಂಧುಗಳೆಂದು ಕರೆಯಲಾಗುತ್ತದೆ), ಸಾರಸ್ವತರು, ಸೈಂಧವರು ಮುಂತಾದ ನದಿಸಂಬಂಧಿತ ನಾಮೋಪನಾಮಗಳನ್ನು ಆಯಾ ಪ್ರದೇಶದವರು ತಳೆಯುವುದುಂಟು. ಸಪ್ತಸಿಂಧುಗಳ ದೇಶವೇ 'ಸಿಂಧುಸ್ಥಾನ'ವಾಯಿತೆಂದೂ, ಸಿಂಧುನದೀತೀರದ ನಿವಾಸಿಗಳಿಗೂ ಕಾಲಾಂತರದಲ್ಲಿ ಸಿಂಧುನದಿಯ ಪೂರ್ವಕ್ಕಿರುವ ಸಮಸ್ತಭೂಭಾಗಕ್ಕೂ 'ಸಿಂಧುಸ್ಥಾನ'ವೆಂಬ ಹೆಸರು ಮುಂಬರೆಯಿತೆನ್ನುವ ಅಭಿಮತವಿದೆ. ಪರ್ಷಿಯಾ-ಮೆಸೊಪೊಟಾಮಿಯ ಇತ್ಯಾದಿಗಳೂ ಸೇರಿದಂತೆ ಆ ಕಾಲದ ಭಾರತದ ಪಶ್ಚಿಮದ ಭಾಗಗಳಲ್ಲಿ ಕಾಲಾಂತರದಲ್ಲಿ ಸೆಮಾಂಟಿಕ್ ಬದಲಾವಣೆ ಯಿಂದಾಗಿ 'ಸ'-ಕಾರವು 'ಹ' ಕಾರವಾಗುತ್ತ ಬಂದು ಸಪ್ತ = ಹೆಪ್ತ ಆದಂತೆ ಸಿಂಧು = ಹಿಂದು' ಆಯಿತು ಎಂದೂ, ಪ್ರಾಚೀನಕಾಲದಿಂದಲೂ ವಿಖ್ಯಾತ ಗುರುಕುಲಗಳೂ ಸಮೃದ್ಧ ವ್ಯಾಪಾರಕೇಂದ್ರಗಳೂ ಇದ್ದಂತಹ ಭಾರತಕ್ಕೆ ವಿದೇಶೀಯರು ಬೃಹತ್ ಪ್ರಮಾಣದಲ್ಲಿ ಬರುತ್ತಿದ್ದ ಕಾರಣ ಈ ನಾಡನ್ನು ಅವರು 'ಹಿಂದುಸ್ಥಾನ', ಇಂಡಸ್, ಇಂಡೀಸ್, ಇಂಡಿಯಾ ಎಂದು ಕರೆದರು ಎಂದೂ ಪ್ರಸಿದ್ಧ ಅಭಿಮತವಿದೆ. (ಭಾಷೆಯ ಪದವರ್ಣ-ಉಚ್ಚಾರ-ಅರ್ಥಗಳ, ಬದಲಾವಣೆಗಳ, ಭಾಷೆ-ಉಪಭಾಷೆಗಳ ಸಂಬಂಧಗಳ ಅಧ್ಯಯನವೇ ಸೆಮಾಂಟಿಕ್ಸ್). 'ಇಂದುವನ್ನು (ಚಂದ್ರ) ಅನುಸರಿಸಿ, ಅರ್ಥಾತ್ ಚಾಂದ್ರಪಂಚಾಂಗವನ್ನು ಅನುಸರಿಸಿ ವ್ಯವಹರಿಸುವವರು' ಎಂದೂ ಭಾರತವನ್ನು ಇಂದುಸ್ ಎಂದು ಕೆಲವಿದೇಶಿಯರು ಕರೆದರು ಎನ್ನುವ ಅಭಿಮತವೂ ಇದೆ.

ಅದೇನೇ ಆಗಲಿ, 'ಸಿಂಧು', 'ಇಂದು' ಮುಂತಾದ ಮೂಲಪದಗಳು ಭಾರತ ಮೂಲದ್ದೇ ಆಗಿದ್ದು, ಉಚ್ಚಾರ ಭೇದದಿಂದಲೂ, ಅರ್ವಾಚೀನ ಕಾಲದಲ್ಲಿ ವಿದೇಶೀಯರ ಬಾಯಲ್ಲೂ ಅಪಭ್ರಂಶಗೊಂಡು ಹಿಂದೂ-ಇಂಡಿಯಾ ಇತ್ಯಾದಿ ಬಂದಿವೆ ಎನ್ನುವುದು ದಿಟ.

ಶತಮಾನಗಳ ರಾಜಕೀಯ ವೈಪರೀತ್ಯಗಳ ಮಧ್ಯೆ ಈ ಅಪಭ್ರಂಶಗಳು 'ಧರ್ಮ' ಮತ್ತು 'ಭಾರತ' ಪದಗಳಿಗೆ ಪರ್ಯಾಯವಾಗಿ ವ್ಯವಹಾರದಲ್ಲಿ ಸೇರಿಹೋಗಿ, ಈಗ ನಮ್ಮದಾಗಿಬಿಟ್ಟಿವೆ. ಹೀಗಾಗಿ 'ಧರ್ಮ', 'ಸನಾತನಧರ್ಮ', 'ಭಾರತ' ಎನ್ನುವಾಗ ಬರುವ ಅರ್ಥ ಭಾವ ವಿಶೇಷಗಳೇ ಈ ಪದಗಳ ವಿಷಯದಲ್ಲೂ ಹೊಮ್ಮುತ್ತವೆ.



ಆಕ್ರಮಣಗಳಿಗೆ ಬಹುಭೂಭಾಗವನ್ನು ಕಳೆದುಕೊಂಡು ಚಿಕ್ಕದಾಗಿರುವ ಇಂದಿನ ಭೂಪಟವನ್ನಷ್ಟೇ 'ಎಲ್ಲ ಕಾಲದ ಭಾರತ' ಎಂದು ನಾವು ಭ್ರಮಿಸಬಾರದು. ಆಕ್ರಮಣಗಳ ಪೂರ್ವದಲ್ಲಿ ಪಶ್ಚಿಮದ ಪರ್ಷಿಯಾ ಮೆಸೊಪೊಟಾಮಿಯಾಗಳವರೆಗೂ, ಪೂರ್ವದಲ್ಲಿ ಬರ್ಮಾ-ಕಂಬೋಡಿಯಾಗಳವರೆಗೂ ಭಾರತದ ಸನಾತನ ಸಂಸ್ಕೃತಿಯು ಹರಡಿನಿಂತಿತ್ತು. ಹಲವು ಜನಪದಗಳ ಸಮುಚ್ಚಯದ ವಿಶಾಲ ಭೂಖಂಡವಾದ ಭಾರತವನ್ನೂ, ವಿವಿಧ ಭಾಷೆ-ಮತ-ಪಂಥಗಳ ಇಲ್ಲಿನ ವಿಕಾಸಪ್ರಾಯ ಸಂಸ್ಕೃತಿಯನ್ನೂ 'ಹಿಂದೂ' ಪದದಿಂದ ಗುರುತಿಸುವುದು ಕೆಲವು ಶತಮಾನಗಳಿಂದ ಬೆಳೆದುಬಂದಿದೆ. ಭಾರತೀಯರಾದ ಹಿಂದೂ-ಬೌದ್ಧ-ಜೈನ-ಸಿಖ್ಖರನ್ನಷ್ಟೇ ಅಲ್ಲದೆ, ಭಾರತದ ಕ್ರೈಸ್ತ-ಇಸ್ಲಾಮ್ ಮತಗಳವರನ್ನೂ, ಪಾಕಿಸ್ತಾನ-ಬಾಂಗ್ಲಾದೇಶಗಳವರನ್ನೂ 'ಹಿಂದೂ' ಎಂದೇ ಸಂಬೋಧಿಸುವ ವಾಡಿಕೆ ಇಂದಿಗೂ ಹಲವು ಪಶ್ಚಿಮ ಹಾಗೂ ಮಧ್ಯಪ್ರಾಚ್ಯದೇಶಗಳಲ್ಲಿರುವುದನ್ನು ಕಾಣಬಹುದು.

ಅದೇನೇ ಇರಲಿ, ಪ್ರಾಚೀನ ಮಧ್ಯಯುಗಗಳವರೆಗೂ ಈ ನಾಡಿನ ಜೀವನಸಂಹಿತೆಯನ್ನು 'ಧರ್ಮ', 'ಆರ್ಷ' ಮುಂತಾದ ಪದಗಳಿಂದಲೇ ನಿರ್ದೇಶಿಸುವುದು ಮೂಲಪದ್ಧತಿಯಾಗಿತ್ತು. ವೇದ, ಸ್ಮೃತಿ, ಪುರಾಣ, ಕಾವ್ಯ ಶಾಸನಾದಿಗಳಲ್ಲೂ 'ಧರ್ಮ' ಪದವೇ ಬಳಕೆಯಲ್ಲಿರುವುದೇ ಹೊರತು 'ಹಿಂದೂ' ಪದವಲ್ಲ. ಒಟ್ಟಿನಲ್ಲಿ ಹಿಂದೂ ಪದವು ಎಲ್ಲಿಂದ ಹೇಗೆ ಯಾವಾಗ ಬಂತೆನ್ನುವುದು ಖಚಿತವಾಗಿ ಹೇಳಲಾಗದ್ದಾದರೂ, ಈಗ ನಮ್ಮ ವ್ಯವಹಾರದಲ್ಲಿ 'ಧರ್ಮ' ಎನ್ನುವ ಅರ್ಥದಲ್ಲೇ ನಿಂತುಬಿಟ್ಟಿವೆ. 'ಸನಾತನ', 'ಧರ್ಮ' ಪದಗಳಂತೆಯೇ 'ಹಿಂದೂ' ಪದವೂ ಈ ನೆಲದ ಮೂಲಸಂಸ್ಕೃತಿ-ಮತಪಂಥಗಳ ಸಮುಚ್ಚಯದ ಅಸ್ಮಿತೆಯ ಗುರುತಾಗಿಬಿಟ್ಟಿದೆ. ಇದಕ್ಕೆ ಅಪಮಾನವೆಸಗಿದರೆ ನಮಗೆಲ್ಲರಿಗೂ ನೋವಾಗುತ್ತದೆ. ಅಂತಹ ಮಾತುಗಳು, ಕೃತಿಗಳು ಖಂಡನೀಯ.

ನಮ್ಮನ್ನು ಒಡೆದು ಆಳಲೆಂದೇ ಅಂದು ಆಂಗ್ಲರು, ನಮ್ಮ ಭಾವೈಕ್ಯವನ್ನು ಸಂಕೇತಿಸುವಂತಹ 'ಧರ್ಮ', 'ಸನಾತನ' ಎಂಬ ಪದಗಳಿಂದ ನಮ್ಮನ್ನು ಗುರುತಿಸುವ ಬದಲು, ನಮ್ಮನ್ನು ಬೇರೆ ಬೇರೆಯೆಂದೇ ಎತ್ತಿತೋರಿಸಬೇಕೆಂದೇ 'ಬ್ರಾಹ್ಮಣ', 'ಬೌದ್ಧ', 'ಲಿಂಗಾಯತ', 'ಜೈನ', 'ಕುರುಬ', 'ಗೌಡ'... ಎನ್ನುತ್ತ, ಅಲ್ಲೂ 'ಕೆಳದರ್ಜೆ' 'ಮೇಲ್ದರ್ಜೆ' ಎಂದೆಲ್ಲ ಕರೆಕರೆದು, ಇದ್ದ ಸಣ್ಣಪುಟ್ಟ ಭೇದಗಳ ಬಿರುಕುಗಳನ್ನು ಕಂದಕವನ್ನಾಗಿಸಿದರು. ಇಂದಿಗೂ ಭಾರತವನ್ನು ಸರ್ವಥಾ ದಮನಿಸಿ ನಿಯಂತ್ರಿಸ ಬಯಸುವ ವೈಶ್ವಿಕ ಹುನ್ನಾರಗಳೂ ಅವರ ಗುಲಾಮರಾದ ಇಲ್ಲಿನ ದೇಶದ್ರೋಹಿಗಳೂ ಈ ದೇಶದ ವೈವಿಧ್ಯಮಯವಾದ ಮೂಲ ಧರ್ಮ-ಸಂಸ್ಕೃತಿ-ಕಲೆ-ಸಾಹಿತ್ಯ-ಜೀವನ ಶೈಲಿಗಳನ್ನೆಲ್ಲ ಅಳಿಸುತ್ತ, ಎಲ್ಲರನ್ನೂ ಮತಾಂತರಕ್ಕೊಡ್ಡಲು ಶ್ರಮಿಸಿದ್ದಾರೆ. ಇವರಿಗೆಲ್ಲ 'ಹಿಂದೂ', 'ಸನಾತನ', 'ಧರ್ಮ', 'ಭಾರತ', 'ಸಂಸ್ಕೃತಿ' ಮುಂತಾದ ಭಾವೈಕ್ಯ ಸಾಧಕ ಪದಗಳೆಂದರೆ ಅದೇನೋ ಅಸಹನೆ, ದ್ವೇಷ. ನಮ್ಮಲ್ಲಿ ಭೇದವನ್ನೇ ಎತ್ತಿತೋರುವಂತಹ ಜಾತಿವಾಚಕ ಪದಗಳೆಂದರೆ ಇಷ್ಟ! ಹಾಗಾಗಿ ನೇರವಾಗಿಯೋ ಪರೋಕ್ಷವಾಗಿಯೋ ದೊಡ್ಡದಾಗಿಯೋ ಚಿಕ್ಕದಾಗಿಯೋ ಮಾತು-ಕೃತಿ-ಚಲನಚಿತ್ರ-ಮಾಧ್ಯಮ-ಪತ್ಯಗಳ ಮೂಲಕ ತಮ್ಮ ಈ ದ್ವೇಷವಿಷವನ್ನು ಹಿಂಡುತ್ತಲೇ ಇರುತ್ತಾರೆ. ಈಗೀಗಲಂತೂ ತನ್ನ ನಾಡು-ನುಡಿ-ಧರ್ಮ-ಸಂಸ್ಕೃತಿಗಳ ಗುರುತಾಗಿ 'ನಾನು ಹಿಂದೂ' ಎಂದು ಯಾರಾದರೂ ಸುಮ್ಮನೆ ಲೋಕಾಭಿರಾಮವಾಗಿ ಹೇಳಿದರೂ ಮೈಪರಚಿಕೊಂಡು ದ್ವೇಷ ಕಾರುವ ಮಟ್ಟಕ್ಕೆ ಈ ಮನೋರೋಗ ಬಲಿತಿದೆ. ಗ್ರಾಮ-ನಗರ-ಸರ್ಕಾರದವರೆಲ್ಲರೂ ದೈವ-ಧರ್ಮಗಳನ್ನಾಧರಿಸಿ ಒಗ್ಗಟ್ಟಾಗಿ ಬಾಳಬೇಕೆಂಬ ಸಂದೇಶವನ್ನು ಸಾರುವ 'ಕಾಂತಾರ' ಚಲನಚಿತ್ರವನ್ನೂ ಇವರಿಗೆ ಸಹಿಸಲಾಗಲಿಲ್ಲ! ಈ ದೇಶದ ಎಲ್ಲವೂ ಹಾಳು, ಎಲ್ಲೆಲ್ಲೂ ಇರುವುದು ಕೇವಲ ಜಾತಿ-ಕಲಹಗಳೇ ಎಂದು ಕಿರುಚುತ್ತಿದ್ದರೇ ಮಾತ್ರ ಇವರಿಗೆ ನಿದ್ರೆ. 'ಇಲ್ಲ! ನಾವೆಲ್ಲ, ಎಷ್ಟಾದರೂ ಒಂದೇ ನೆಲಜಲಸಂಸ್ಕೃತಿಯ ಚಿಗುರುಗಳು, ಒಂದಾಗೋಣ ಬನ್ನಿ' ಎಂದರೆ ಅದೇನೋ ಕಿರಿಕಿರಿ!

ಇರಲಿ, ವಾಸ್ತವವನ್ನು ಹುಡುಕುತ ಹಿಂದಕ್ಕೆ ಹೋದರೆ, ನಮಗೊದಗುವುದು ಸರ್ವರನೂ ಒಗ್ಗೂಡಿಸುವ ಸನಾತನ ಸಂಸ್ಕೃತಿ ಸೂತ್ರವೇ.

ಲೇಖಕಿ: ಸಂಸ್ಕೃತಿ ಚಿಂತಕಿ

ಪದಬಂಧ 5136

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಇತರರನ್ನು ಅವಲಂಬಿಸದೇ ಇರುವುದು (5)
3.ವ್ಯಾಕರಣದಲ್ಲಿ ಗಂಡು ಜಾತಿಯನ್ನು ಸೂಚಿಸುವ ಶಬ್ದ (3)
5.ತೆಳುವಾಗಿ ಬಡಿದ ಲೋಹದ ಹಾಳೆ (3)
7.ಜಳಕ ಎಂದಿದ್ದಕ್ಕೇ ಈ ರೋಮಾಂಚನ! (3)
9.ಕಬ್ಬಿಣದ ಭಾರೀ ಪೆಟ್ಟಿಗೆ (3)
12.ಜಗಳಕ್ಕೊಂದು ಪರ್ಯಾಯ ಪದ (3)
14.ಸರಕ್ಕನೆ ಹೋಗಿ ತಂದಿರುವ ಸಾಮಾನು (3)
16.ಹಳೆಯ ಸಾಮಾನುಗಳನ್ನು ಮಾರುವ ಸ್ಥಳ (3)
17.ತೆನಾಲಿರಾಮನಿಗಿದ್ದ ಬಿರುದು (5)

ಮೇಲಿಂದ ಕೆಳಕ್ಕೆ

1.ಆದರದಿಂದ ಬರಮಾಡಿಕೊಳ್ಳುವುದು(3)
2.ಒನಪು ತೋರಿದಾಗ ಬಂದಿರುವ ಸ್ಮರಣೆ (3)
3.ಮಸ್ತಕದ ಹತ್ತಿರವಿರುವ ಹೊತ್ತಗೆ (3)
4.ದುಷ್ಟ ಸ್ವಭಾವದ ಹೆಂಗಸು (3)
6.ಗಟ್ಟಿಯಾದ ಕೂಗು (3)
8.ಕಳವಳದಿಂದ ತಿಂದಿರುವ ತುತ್ತು ಉಲ್ಟಾ ಆಗಿದೆ (3)
9.ಕುಲದ ಕೊನೆಗಿರುವ ಸಮೂಹ (3)
10.ಮಧುರವಾದ ತುಟಿ (3)
11.ಕತ್ತಿಯ ಅಂಚು (3)
12.ಕರಿಯಲ್ಲಿರುವ ಸುಗಂಧ ದ್ರವ್ಯ (3)
13.ಮಣ್ಣಿನ ಬಾನಿ (3)
15.ಕೂಸಿನ ತಲೆಗೆ ಕಟ್ಟುವ ಟೊಪ್ಪಿಗೆ (3)



5135ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಡಮರುಗ 3.ಮಳಿಗೆ
5.ಯಾತ್ರಿಕ 6.ಸದಾಚಾರ
8.ರಸಪೂರ್ಣ 10.ನವರಂಗ
12.ಮರಕತ 13.ಜಾತಕ
16.ವಸನ 17.ದಸಕತ್ತು

ಮೇಲಿಂದ ಕೆಳಕ್ಕೆ:
1.ಡಬ್ಬ 2.ಗಡಿಯಾರ
3.ಮಧುಕರ 4.ಗೆಣ್ಣು
7.ದಾನವ 9.ಪೂರ್ವಿಕ
11.ಗಜಾನನ 12.ಮಕರಂದ
14.ರವ 15.ತುತ್ತು

ಸುಡೊಕು 5522

4			3		8			2
		1		6		3	8	
9					2			6
							6	
	2	6	9	4	7			
	4		6		1		7	5
			1		9	8		
8		7					9	
1	9		8		6	4		3

5521 ಸುಡೊಕು

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

1	5	8	4	3	2	9	7	6
3	7	6	9	8	1	2	4	5
9	2	4	6	5	7	1	8	3
8	9	5	2	7	4	6	3	1
4	6	1	5	9	3	7	2	8
7	3	2	1	6	8	5	9	4
5	4	9	3	2	6	8	1	7
2	1	7	8	4	5	3	6	9
6	8	3	7	1	9	4	5	2

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ನವೆಂಬರ್ 12, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ಚತುರ್ಥಿ ಗಂ. 22-26 ನಕ್ಷತ್ರ: ಮೃಗಶಿರ ಗಂ. 07-33 ಯೋಗ: ಸಿದ್ಧ ಗಂ. 22-03, ಕರಣ: ಬವ ಗಂ. 09-19, ತುಲಾ ಮಾಸದ 25 ನೇ ದಿನ.
ರಾಹುಕಾಲ : ಬೆಳಿಗ್ಗೆ 09-00 – 10-30,
ಸೂರ್ಯೋದಯ : 06-32 **ಸೂರ್ಯಾಸ್ತ :** 05-57
ಮುಸ್ಲಿಂ ದಿನಾಂಕ : 16 ರಬಿಯುಸ್ಸಾನಿ
ಅದೃಷ್ಟ ಸಂಖ್ಯೆ : 1, 5

ಮೇಷ: ಯೋಜನೆಯ ಬೆಳವಣಿಗೆಗೆ ಸಂಬಂಧಿಸಿದವರ ಜತೆ ಚರ್ಚೆ ನಡೆಸಿ, ಬಾಕಿ ಇದ್ದ ಯೋಜನೆಯನ್ನುಪೂರ್ಣಗೊಳಿಸುವ ಬಗ್ಗೆ ಗಮನಹರಿಸಿ. ಧಾರ್ಮಿಕತೆಯ ಫಲವಾಗಿ ನಕಾರಾತ್ಮಕ ಭಾವನೆಯಿಂದ ಹೊರಬರುವಿರಿ.

ವೃಷಭ: ಆಸ್ತಿಗೆ ಸಂಬಂಧಪಟ್ಟ ನಿರ್ಧಾರಗಳನ್ನು ಮನೆಯವರೊಂದಿಗೆ ಚರ್ಚಿಸಿ ಕೈಗೊಳ್ಳಿ. ಜೀವನೋಪಾಯಕ್ಕೆ ರಾಜಾಶ್ರಯದಂತಹ ಪರ್ಯಾಯ ವ್ಯವಸ್ಥೆ ಪ್ರಾಪ್ತಿಯಾಗಲಿದೆ. ವಿದ್ಯಾರ್ಥಿಗಳಿಗೆ ಅವಕಾಶ ಸಿಗುವುದು.

ಮಿಥುನ: ಕಾಗದಪತ್ರ ನಿರ್ವಹಣೆಯಲ್ಲಿ ಎಚ್ಚರವಹಿಸಿ. ಈ ದಿನ ನೀವು ಕೈ ಹಾಕಿದ ಎಲ್ಲಾ ಕಾರ್ಯಗಳಲ್ಲಿಯೂ ಅಡೆತಡೆ ಉಂಟಾಗುತ್ತದೆ. ಸತ್ಯದ ಮಾರ್ಗದಲ್ಲಿ ಸಾಗುವುದರಿಂದ ಶುಭ ಫಲ ಅನುಭವಿಸುವಿರಿ.

ಕರ್ಕಾಟಕ: ಅನಗತ್ಯ ಮಧ್ಯಸ್ಥಿಕೆ ವಹಿಸುವುದು ಸಮಸ್ಯೆಯನ್ನು ಕೈ ಬೀಸಿ ಕರೆದಂತಾಗುತ್ತದೆ. ಬರವಣಿಗೆ ಮುಖಾಂತರ ಹೆಚ್ಚುವರಿ ಆದಾಯವಿರುವುದು. ನಟನೆ ವೃತ್ತಿಯವರಿಗೆ ಜನಪ್ರಿಯತೆ, ಅವಕಾಶವಿರುವುದು.

ಸಿಂಹ: ದೇವತಾನುಗ್ರಹದಿಂದ ನಿಮ್ಮ ತುರ್ತು ಕಾರ್ಯಗಳು ಶೀಘ್ರ ಜಾರಿಯಾಗಿ ಮನಸ್ಸಿಗೆ ನೆಮ್ಮದಿ ಉಂಟಾಗುವುದು. ವೈವಾಹಿಕ ಮಾತುಕತೆಗಳಿಗೆ ಸೂಕ್ತ ವಾತಾವರಣ ಪಡೆಯುವಿರಿ.

ಕನ್ಯಾ: ಕೃಷಿ ಸಂಬಂಧಿತ ಕಾರ್ಯಕ್ರಮಗಳು ವೇಗದಲ್ಲಿ ಸಾಗಲಿದೆ. ಔದ್ಯೋಗಿಕ ವ್ಯವಹಾರಗಳಲ್ಲಿ ಅಡಚಣೆ ಎದುರಾಗಬಹುದು. ಗುರು-ಹಿರಿಯರ ಮಾತುಗಳನ್ನು ಅಲ್ಲಗಳೆಯುವುದು ಸರಿಯಲ್ಲ.

ತುಲಾ: ವೃತ್ತಿ ವಿಷಯದಲ್ಲಿ ಒಪ್ಪಂದ ಏರ್ಪಡುವ ಸಾಧ್ಯತೆ ಇದೆ. ಮಹತ್ವದ ವಿಷಯವಾದ್ದರಿಂದ ಗಂಭೀರ ಚಿಂತನೆ ಅಗತ್ಯ. ವಿದ್ಯಾರ್ಥಿಗಳಿಗೆ ಈ ದಿನ ಉತ್ತಮವಾಗಿರುವುದು.

ವೃಶ್ಚಿಕ: ಸ್ನೇಹಿತರ ಒಡನಾಟದಿಂದ ನಿಮ್ಮ ಭವಿಷ್ಯ ಹಾಳಾಗುತ್ತಿರುವುದು ಅರಿವಾಗುವುದು. ಹಿರಿಯಸಹೋದ್ಯೋಗಿಯೊಬ್ಬರ ಸಲಹೆ ಸೂಕ್ತವಾದುದು ಎನಿಸಲಿದೆ. ಆದಾಯಕ್ಕಿಂತ ವ್ಯಯದ ಪ್ರಮಾಣ ಹೆಚ್ಚಿರುವುದು.

ಧನು: ಆಗು-ಹೋಗುಗಳನ್ನು ಅರಿತು ವ್ಯವಹಾರದಲ್ಲಿ ಮುಂದುವರಿಯುವುದು ಉತ್ತಮ. ನಂಬಿಸಿ ಮೋಸ ಮಾಡುವವರ ಬಲೆಗೆ ಬೀಳುವ ಸಾಧ್ಯತೆಗಳಿದೆ. ಎಚ್ಚರಿಕೆಯಿಂದಿರಿ. ಪ್ರವಾಸದಿಂದ ಸಂತೋಷ ಹೊಂದುವಿರಿ.

ಮಕರ: ದೇಹದಲ್ಲಿ ಅಧಿಕ ಉಷ್ಣಾಂಶದ ಪರಿಣಾಮದಿಂದಾಗಿ ಅನಾರೋಗ್ಯ ಉಂಟಾಗಬಹುದು. ಮಹತ್ವದ ನಿರ್ಧಾರಗಳನ್ನು ಕೈಗೊಳ್ಳಲು ಕಾದು ನೋಡುವ ತಂತ್ರ ಅನುಸರಿಸುವುದು ಸೂಕ್ತ.

ಕುಂಭ: ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ಏಕಾಗ್ರತೆಯನ್ನು ಬೆಳೆಸಿಕೊಳ್ಳಿ. ಹೂವಿನ ಬೆಳೆಗಾರರಿಗೆ, ಹೈನುಉದ್ಯಮಿಗಳಿಗೆ ಲಾಭವಿದ್ದರೂ , ಮಧ್ಯವರ್ತಿಗಳ ತುಸು ಕಿರಿಕಿರಿ ಆತಂಕವನ್ನು ಸೃಷ್ಟಿಸಲಿದೆ.

ಮೀನ: ಅಭಿವೃದ್ಧಿಯ ದಾರಿಗೆ ಕಗ್ಗಂಟು ಉಂಟುಮಾಡುವ ಸಂಬಂಧಿಕರಲ್ಲಿ ವಿಚಾರ ವಿನಿಮಯ ಮಾಡದಿರುವುದು ಉತ್ತಮ. ನಿಶ್ಚಿತ ಯೋಜನೆಗಳಿಗೆ ಸಿದ್ಧತೆಗಳೊಡನೆ ಸನ್ನದ್ಧರಾಗುವ ಬಗ್ಗೆ ಗಮನವಿರಲಿ.

ಜ್ಞಾನವಾಪಿ ಪ್ರಕರಣ: ನ.28ಕ್ಕೆ ವಿಚಾರಣೆ ಮುಂದೂಡಿಕೆ

ಪ್ರಯಾಗರಾಜ್, ಉತ್ತರ ಪ್ರದೇಶ (ಪಿಟಿಐ): ಮಸೀದಿ ಆಡಳಿತ ಮಂಡಳಿಯ ಮೇಲ್ಮನವಿ ಮೇರೆಗೆ ಕಾಶಿ ವಿಶ್ವನಾಥ ದೇವಾಲಯ-ಜ್ಞಾನವಾಪಿ ಮಸೀದಿ ಪ್ರಕರಣದ ವಿಚಾರಣೆಯನ್ನು ಅಲಹಾಬಾದ್ ಹೈಕೋರ್ಟ್ ಶುಕ್ರವಾರ ನ. 28 ಕ್ಕೆ ಮುಂದೂಡಿದೆ.

ಮುಂದಿನ ದಿನಾಂಕದಂದು ಈ ಪ್ರಕರಣ ವಿಚಾರಣೆಯನ್ನು ಮುಂದೂಡಲಾಗುವುದಿಲ್ಲ ಎಂದು ನ್ಯಾಯಾಲಯ ಹೇಳಿದೆ.

ದೇವಾಲಯದ ಪರವಾಗಿ ಹಾಜರಾದ ವಕೀಲ ಸಿ.ಎಸ್. ವೈದ್ಯನಾಥನ್, ತಾರ್ಕಿಕ ಅಂತ್ಯಕ್ಕೆ ಬರಲು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ಎಎಸ್‌ಐ) ಮೂಲಕ ಸತ್ಯ ಹೊರತರುವ ಸಮೀಕ್ಷೆ ನಡೆಸಬೇಕು ಎಂದು ವಾದಿಸಿದರು.

ಅಂಜುಮನ್ ಇಂತೆಜಾಮಿಯಾ ಮಸೀದಿ ಸಮಿತಿಯು ವಾರಾಣಸಿ ಜಿಲ್ಲಾ ನ್ಯಾಯಾಲಯದಲ್ಲಿ 1991 ರಲ್ಲಿ ಸಲ್ಲಿಸಿದ ಮೂಲ ದಾವೆಯ ನಿರ್ವಹಣೆಯನ್ನು ಪ್ರಶ್ನಿಸಿ ಅರ್ಜಿ ಸಲ್ಲಿಸಿತ್ತು.

18ನೇ ಶತಮಾನದ ಕಾಶಿ ವಿಶ್ವನಾಥ ದೇವಾಲಯವನ್ನು ಪ್ರಸ್ತುತ ಜ್ಞಾನವಾಪಿ ಮಸೀದಿ ಇರುವ ಸ್ಥಳದಲ್ಲಿ ಮರುಸ್ಥಾಪಿಸಬೇಕೆಂದು ಮೂಲ ದಾವೆಯಲ್ಲಿ ಕೋರಲಾಗಿದೆ. ಮಸೀದಿ ದೇವಾಲಯದ ಒಂದು ಭಾಗ ಎಂದು ಅರ್ಜಿದಾರರು ದಾವೆಯಲ್ಲಿ ಹೇಳಿದ್ದಾರೆ.

ನೀಟ್ ಕೌನ್ಸೆಲಿಂಗ್ ಪೂರ್ಣಕ್ಕೆ ಗಡುವು

ನವದೆಹಲಿ (ಪಿಟಿಐ): ಸ್ನಾತಕೋತ್ತರ ವೈದ್ಯಕೀಯ ಪದವಿ ಪ್ರವೇಶಕ್ಕೆ ನಡೆಸುವ ಎರಡನೇ ಸುತ್ತಿನ ನೀಟ್ ಕೌನ್ಸೆಲಿಂಗ್ ಪ್ರಕ್ರಿಯೆಯನ್ನು ನ.16ರ ಒಳಗೆ ಪೂರ್ಣಗೊಳಿಸಬೇಕು ಎಂದು ಸುಪ್ರೀಂಕೋರ್ಟ್ ಶುಕ್ರವಾರ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸೂಚಿಸಿದೆ.

ಇದೇ ವೇಳೆ, ಈ ಕುರಿತ ಅಂಕಿಅಂಶಗಳನ್ನು ಅದೇ ದಿನ ವೈದ್ಯಕೀಯ ಕೌನ್ಸೆಲಿಂಗ್ ಸಮಿತಿಗೆ ಸಲ್ಲಿಸಬೇಕು ಎಂದಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಹಿಮಾ ಕೊಹ್ಲಿ ಅವರಿದ್ದ ನ್ಯಾಯಪೀಠ, 'ನೀಟ್ ಪಿ.ಜಿ ಎರಡನೇ ಸುತ್ತಿನ ಕೌನ್ಸೆಲಿಂಗ್ ಪ್ರಕ್ರಿಯೆ ಪೂರ್ಣಗೊಂಡರೆ ಕೇಂದ್ರ ಸರ್ಕಾರ ಕೊನೆಯ ಸುತ್ತಿನ ಕೌನ್ಸೆಲಿಂಗ್ ನಡೆಸಬಹುದು' ಎಂದು ತಿಳಿಸಿದೆ.

ಇತಿಹಾಸ ಸೃಷ್ಟಿಸುವತ್ತ ದೃಷ್ಟಿ ನೆಟ್ಟ ಬಿಜೆಪಿ • ಕಾಂಗ್ರೆಸ್‌ಗೆ ಅಳಿವು– ಉಳಿವಿನ ಪ್ರಶ್ನೆ

ಹಿಮಾಚಲ ಪ್ರದೇಶ: ಮತದಾನ ಇಂದು

ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶ ವಿಧಾನಸಭೆಯ 68 ಕ್ಷೇತ್ರಗಳಿಗೆ ಶನಿವಾರ ಮತದಾನ ನಡೆಯಲಿದೆ. ಮುಖ್ಯಮಂತ್ರಿ ಜೈರಾಮ್ ಠಾಕೂರ್, ಮಾಜಿ ಮುಖ್ಯಮಂತ್ರಿ ವೀರಭದ್ರ ಸಿಂಗ್ ಅವರ ಮಗ ವಿಕ್ರಮಾದಿತ್ಯ ಸಿಂಗ್ ಸೇರಿ 412 ಅಭ್ಯರ್ಥಿಗಳು ಕಣದಲ್ಲಿದ್ದಾರೆ. 55 ಲಕ್ಷಕ್ಕೂ ಹೆಚ್ಚು ಮತದಾರರು ಇವರ ರಾಜಕೀಯ ಭವಿಷ್ಯ ನಿರ್ಧರಿಸಲಿದ್ದಾರೆ.

ಅಭಿವೃದ್ಧಿ ಮಂತ್ರವನ್ನೇ ಪ್ರಮುಖ ಕಾರ್ಯಸೂಚಿ ಮಾಡಿಕೊಂಡು ಮತ ಯಾಚಿಸಿದ್ದ ಬಿಜೆಪಿಯು ರಾಜ್ಯದಲ್ಲಿ ಎರಡನೇ ಬಾರಿಗೆ ಅಧಿಕಾರ ಹಿಡಿದು ಇತಿಹಾಸ ಸೃಷ್ಟಿಸುವ ಕಡೆ ದೃಷ್ಟಿ ನೆಟ್ಟಿದೆ. ಆಡಳಿತಾರೂಢ ಪಕ್ಷಕ್ಕೆ ಎರಡನೇ ಬಾರಿ ಅಧಿಕಾರ ನೀಡಿರುವ ಉದಾಹರಣೆಯು ನಾಲ್ಕು ದಶಕದಿಂದ ಈಚೆಗೆ ರಾಜ್ಯದಲ್ಲಿ ಇಲ್ಲ. ಈ ಇತಿಹಾಸವನ್ನು ಮುಂದುವರಿಸುವಂತೆ ವಿರೋಧ ಪಕ್ಷ ಕಾಂಗ್ರೆಸ್ ಮತದಾರರಲ್ಲಿ ಮನವಿ ಮಾಡಿದೆ.

ಪ್ರಧಾನಿ ನರೇಂದ್ರ ಮೋದಿ, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ನೇತೃತ್ವದಲ್ಲಿ ಬಿಜೆಪಿ ಸರಣಿ ಚುನಾವಣಾ ಸಮಾವೇಶಗಳನ್ನು ನಡೆಸಿದೆ.

ಎಎಪಿ ಸಂಸದ ರಾಘವ ಛಡ್ಡಾ ಮತ್ತು ಗುಜರಾತ್ ಎಎಪಿ ಅಧ್ಯಕ್ಷ ಗೋಪಾಲ್ ಇಟಾಲಿಯಾ ಅವರು ಸೂರತ್‌ನಲ್ಲಿ ಶುಕ್ರವಾರ ರೋಡ್ ಶೋ ನಡೆಸಿದರು —ಪಿಟಿಐ ಚಿತ್ರ

ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರ ನೇತೃತ್ವದಲ್ಲಿ ಪಕ್ಷದ ಬಹುತೇಕ ಪ್ರಚಾರ ಸಮಾವೇಶಗಳು ನಡೆದಿವೆ. ಬಿಜೆಪಿ ಮುಷ್ಟಿಯಿಂದ ರಾಜ್ಯವನ್ನು ಪಡೆದುಕೊಳ್ಳುವುದು ಕಾಂಗ್ರೆಸ್‌ಗೆ ಅಳಿವು ಉಳಿವಿನ ಪ್ರಶ್ನೆಯಾಗಿದೆ.

24 ವರ್ಷಗಳ ಬಳಿಕ ಗಾಂಧಿ ಕುಟುಂಬದವರಲ್ಲದ ನಾಯಕನನ್ನು ಕಾಂಗ್ರೆಸ್ ಅಧ್ಯಕ್ಷರನ್ನಾಗಿ ನೇಮಕ ಮಾಡಿದ ನಂತರ ನಡೆಯುತ್ತಿರುವ ಮೊದಲ ಚುನಾವಣೆ ಇದಾಗಿದೆ ಮತ್ತು ಚುನಾವಣಾ ಕಣದಿಂದ ಪಕ್ಷದ ಪ್ರಮುಖ ನಾಯಕ ರಾಹುಲ್ ಗಾಂಧಿ ಸಂಪೂರ್ಣವಾಗಿ ಹೊರಗಿದ್ದದ್ದೂ ಈ ಚುನಾವಣೆಯ ಪ್ರಮುಖ ಅಂಶಗಳಲ್ಲಿ ಒಂದು.

ಕಣದಲ್ಲಿ ಕೋಟ್ಯಧಿಪತಿಗಳು: ಹಿಮಾಚಲ ಪ್ರದೇಶದಲ್ಲಿ ಕಣಕ್ಕಿಳಿದಿರುವ ಕಾಂಗ್ರೆಸ್ ಅಭ್ಯರ್ಥಿಗಳಲ್ಲಿ ಶೇ 90ರಷ್ಟು ಅಭ್ಯರ್ಥಿಗಳು ಕೋಟ್ಯಧಿಪತಿಗಳಾಗಿದ್ದಾರೆ. ಈ ಮೂಲಕ ಅತ್ಯಂತ ಹೆಚ್ಚು ಶ್ರೀಮಂತ ಅಭ್ಯರ್ಥಿಗಳನ್ನು ಹೊಂದಿರುವ ಪಕ್ಷ ಎಂದು ಕಾಂಗ್ರೆಸ್ ಕರೆಸಿಕೊಂಡಿದೆ. ಶೇ 82ರಷ್ಟು ಕೊಟ್ಯಧಿಪತಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿರುವ ಬಿಜೆಪಿ ನಂತರದ ಸ್ಥಾನದಲ್ಲಿದೆ ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರೆಟಿಕ್ ರಿಫಾರ್ಮ್ಸ್ ಎಂಬ ಸಂಸ್ಥೆ ಬಿಡುಗಡಿ ಮಾಡಿರುವ ವರದಿಯಲ್ಲಿ ಮಾಹಿತಿ ನೀಡಲಾಗಿದೆ.

ಅತ್ಯಾಚಾರಿಗಳನ್ನು 'ಸಂಸ್ಕಾರಿ' ಎಂದ ಶಾಸಕನಿಗೆ ಟಿಕೆಟ್: ಬಿಲ್ಕಿಸ್ ಬಾನೊ ಅತ್ಯಾಚಾರಿಗಳನ್ನು 'ಉತ್ತಮ ಸಂಸ್ಕಾರ ಹೊಂದಿರುವ ಬ್ರಾಹ್ಮಣರು' ಎಂದು ಕರೆದಿದ್ದ ಗುಜರಾತ್ ಮಾಜಿ ಸಚಿವ ಚಂದ್ರಸಿನ್ಹಾ ರೌಲ್ಜಿ ಅವರನ್ನು ಬಿಜೆಪಿಯು ಗೋಧ್ರಾ ಕ್ಷೇತ್ರದಿಂದ ಕಣಕ್ಕಿಳಿಸಿದೆ ಎಂದು ಎನ್‌ಡಿಟಿವಿ ವರದಿ ಮಾಡಿದೆ.

ಪ್ರಜಾ ಮತ
ಜನತಂತ್ರದ ಹಬ್ಬ 2022

ಭಾರಿ ಮೌಲ್ಯದ ಮದ್ಯ, ಉಡುಗೊರೆ ವಶ

ಹಿಮಾಚಲ ಪ್ರದೇಶ ಮತ್ತು ಗುಜರಾತ್‌ನಲ್ಲಿ 11 ಲಕ್ಷ ಲೀಟರ್ ಮದ್ಯ, ₹65 ಕೋಟಿ ಮೌಲ್ಯದ ಉಡುಗೊರೆಗಳು ಮತ್ತು ₹17.84 ಕೋಟಿ ನಗದನ್ನು ಶುಕ್ರವಾರ ವಶಕ್ಕೆ ಪಡೆಯಲಾಗಿದೆ ಎಂದು ಚುನಾವಣಾ ಆಯೋಗವು ಹೇಳಿದೆ. ಇದೊಂದು ದಾಖಲೆ ಎಂದೂ ಆಯೋಗ ತಿಳಿಸಿದೆ.

ಕಳೆದ ಚುನಾವಣೆಗೆ ಹೋಲಿಸಿದರೆ ಹಿಮಾಚಲ ಪ್ರದೇಶದಲ್ಲಿ ವಶಕ್ಕೆ ಪಡೆಯಲಾದ ನಗದು ಮತ್ತು ವಸ್ತುಗಳ ಮೌಲ್ಯವು ಐದು ಪಟ್ಟು ಹೆಚ್ಚು.

ಚುನಾವಣಾ ಘೋಷಣೆಯಾಗಿ ಕೆಲವೇ ದಿನಗಳಲ್ಲಿ ಗುಜರಾತ್‌ನಲ್ಲಿ ₹71.88 ಕೋಟಿ ನಗದು ವಶಕ್ಕೆ ಪಡೆಯಲಾಗಿತ್ತು. 2017ರ ಚುನಾವಣೆ ಸಂದರ್ಭದಲ್ಲಿ ಒಟ್ಟು ₹27.21 ಕೋಟಿ ನಗದು ವಶಕ್ಕೆ ಪಡೆಯಲಾಗಿತ್ತು ಎಂದು ಆಯೋಗ ತಿಳಿಸಿದೆ.

ಚತುರ್ಥ ಪುಣ್ಯಸ್ಮರಣೆ



ದಿ. ಅನಂತಕುಮಾರ

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕನಸನ್ನು
ನನಸಾಗಿಸಿ ನಾಡಪ್ರಭು ಕೆಂಪೇಗೌಡರ ಹೆಸರಿಟ್ಟು
ಸ್ಮರಣೀಯವಾಗಿಸಿದ ದೂರದರ್ಶಿ ನಾಯಕ,
ನಾಡಿನ ಅಸಂಖ್ಯ ಅಭಿಮಾನಿಗಳ
ಕಾರ್ಯಕರ್ತರ – ಜನಮಾನಸದ ಪ್ರೀತ್ಯಾದರಕ್ಕೆ ಪಾತ್ರರಾದ
ತಮ್ಮ ನೆನಪು ಸದಾ ಅನಂತ...
ನೀವು ನಡೆದ ದಾರಿ ತೋರಿದ ಮಾರ್ಗ ಸದಾಕಾಲ ನಮಗೆ ಪ್ರೇರಣೆ.

ಶ್ರೀಮತಿ ತೇಜಸ್ವಿನಿ ಅನಂತಕುಮಾರ
ಅಧ್ಯಕ್ಷರು : ಅದಮ್ಯ ಚೇತನ ಫೌಂಡೇಶನ್
ಶ್ರೀಮತಿ ಐಶ್ವರ್ಯಾ ಅನಂತಕುಮಾರ
ಕುಮಾರಿ ವಿಜೇತಾ ಅನಂತಕುಮಾರ
ನಂದಕುಮಾರ
ವಿಭವ ಸಮೂಹ ಸಂಸ್ಥೆಗಳು
ಅನಂತಕುಮಾರ ಪ್ರತಿಷ್ಠಾನ ಬೆಂಗಳೂರು

ಹತ್ಯಾಕಾಂಡದ ತಪ್ಪಿತಸ್ಥನ ಮಗಳಿಗೆ ಬಿಜೆಪಿ ಟಿಕೆಟ್

ಅಹಮದಾಬಾದ್ (ಪಿಟಿಐ): ನರೋಡ ಪಾಟಿಯಾ ಹತ್ಯಾಕಾಂಡದ ತಪ್ಪಿತಸ್ಥ ಮನೋಜ್ ಕುಕ್ರಾಣಿ ಅಲಿಯಾಸ್ ಸಿಂಧಿಯ ಮಗಳು ಅನಸ್ತೇಸಿಯಾ ತಜ್ಞೆ ಪಾಯಲ್ ಕುಕ್ರಾಣಿ ಅವರಿಗೆ ನರೋಡ ಕ್ಷೇತ್ರದಿಂದ ಬಿಜೆಪಿ ಟಿಕೆಟ್ ಸಿಕ್ಕಿದೆ. 2002ರ ಗೋಧ್ರೋತ್ತರ ಕೋಮು ಗಲಭೆಯಲ್ಲಿ ನರೋಡ ಪಾಟಿಯಾದಲ್ಲಿ 97 ಮುಸ್ಲಿಮರ ಹತ್ಯೆ ಮಾಡಲಾಗಿತ್ತು. ಪ್ರಕರಣದಲ್ಲಿ 32 ಆರೋಪಿಗಳಿಗೆ ಶಿಕ್ಷೆ ಆಗಿತ್ತು. ಆದರೆ, ಗುಜರಾತ್ ಹೈಕೋರ್ಟ್‌ನ ವಿಭಾಗೀಯ ಪೀಠವು 17 ತಪ್ಪಿತಸ್ಥರನ್ನು 2018ರಲ್ಲಿ ಖುಲಾಸೆ ಮಾಡಿತ್ತು. ಅವರಲ್ಲಿ ಮಾಜಿ ಸಚಿವೆ ಮಾಯಾ ಕೊಡ್ನಾನಿ ಅವರೂ ಸೇರಿದ್ದಾರೆ. ಮನೋಜ್ ಕುಕ್ರಾಣಿ ಸೇರಿ 15 ತಪ್ಪಿತಸ್ಥರ ಶಿಕ್ಷೆಯನ್ನು ಎತ್ತಿ ಹಿಡಿದಿತ್ತು. ಈ ಆದೇಶವನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಾಗಿದೆ. ಎಲ್ಲ ತಪ್ಪಿತಸ್ಥರೂ ಜಾಮೀನಿನಲ್ಲಿ ಬಿಡುಗಡೆಯಾಗಿದ್ದಾರೆ.

ಗಲಭೆ ಸಂದರ್ಭದಲ್ಲಿ ಕೊಡ್ನಾನಿ ಅವರು ನರೋಡ ಕ್ಷೇತ್ರದ ಶಾಸಕಿಯಾಗಿದ್ದರು. ಮೂರು ಅವಧಿಗೆ ಅವರು ಈ ಕ್ಷೇತ್ರವನ್ನು ಪ್ರತಿನಿಧಿಸಿದ್ದರು. ಅವರ ಬಂಧನ ಮತ್ತು ಶಿಕ್ಷೆಯ ಸಂದರ್ಭದಲ್ಲಿಯೇ ಅವರ ಮೂರನೇ ಅವಧಿ ಕೊನೆಗೊಂಡಿತ್ತು. ಈ ಬಾರಿಯೂ ಅವರು ಟಿಕೆಟ್ ಆಕಾಂಕ್ಷಿಯಾಗಿದ್ದರು. ಸಿಂಧಿ ಸಮುದಾಯದವರೇ ಹೆಚ್ಚಾಗಿರುವ ಈ ಕ್ಷೇತ್ರವು ಮೂರು ದಶಕಗಳಿಂದ ಬಿಜೆಪಿ ತೆಕ್ಕೆಯಲ್ಲಿಯೇ ಇದೆ.

ಹಾಲಿ ಶಾಸಕ ಬಲರಾಂ ಥವಾಣಿ ಅವರನ್ನು ಕೈಬಿಟ್ಟು ಪಾಯಲ್ ಅವರಿಗೆ ಬಿಜೆಪಿ ಟಿಕೆಟ್ ನೀಡಲಾಗಿದೆ. 160 ಅಭ್ಯರ್ಥಿಗಳ ಪಟ್ಟಿಯಲ್ಲಿರುವ ನಾಲ್ವರು ಮಹಿಳೆಯರಲ್ಲಿ ಇವರೂ ಒಬ್ಬರು.

ಪಾಯಲ್ ಅವರಿಗೆ ಟಿಕೆಟ್ ನೀಡಿರುವುದು ಪಕ್ಷದ ಮುಖಂಡರಲ್ಲಿ ಹಲವರಿಗೆ ಅಸಮಾಧಾನ ಉಂಟು ಮಾಡಿದೆ. ಅವರು ಸ್ವಜಾತಿಯವರಲ್ಲದವರನ್ನು ಮದುವೆ ಆಗಿರುವುದು ಇದಕ್ಕೆ ಕಾರಣ. 'ಅವರು ದಲಿತರೊಬ್ಬರನ್ನು ಮದುವೆ ಆಗಿದ್ದಾರೆ. ಹಾಗಾಗಿ ಅವರು ನಿಜವಾದ ಸಿಂಧಿ ಅಲ್ಲ. ಪಾಯಲ್ ಅವರು ತಮ್ಮ ಗಂಡನ ಹೆಸರಿನ ಬದಲಿಗೆ ತಂದೆಯ ಹೆಸರು ಬಳಸುತ್ತಿದ್ದಾರೆ. ಪಕ್ಷದ ನಿರ್ಧಾರವು ಸಮುದಾಯದ ಮುಖಂಡರು ಮತ್ತು ಪಕ್ಷದ ಕಾರ್ಯಕರ್ತರಲ್ಲಿ ಅಸಮಾಧಾನ ಉಂಟು ಮಾಡಿದೆ' ಎಂದು ಪಕ್ಷದ ಕಾರ್ಯಕರ್ತರೊಬ್ಬರು ಹೇಳಿದ್ದಾರೆ.

'ನಾವು 21ನೇ ಶತಮಾನದಲ್ಲಿ ಜೀವಿಸುತ್ತಿದ್ದೇವೆ. ಆದರೆ, ಜನರು ಇನ್ನೂ ಜಾತಿಯ ಕುರಿತು ಮಾತನಾಡುತ್ತಿದ್ದಾರೆ. ಅದು ಮುಖ್ಯ ವಿಷಯ ಅಲ್ಲ ಮತ್ತು ಮುಖ್ಯ ವಿಷಯ ಆಗಬಾರದು. ನನ್ನ ಗಂಡ ಅನಿಲ್ ಚೌಹಾಣ್ ಅವರೂ ವೃತ್ತಿಯಲ್ಲಿ ವೈದ್ಯ. ನಾವು ಜೊತೆಯಾಗಿ ಕಲಿತವರು. ನಮ್ಮ ಮಧ್ಯೆ ಜಾತಿ ಯಾವತ್ತೂ ವಿಷಯ ಆಗಿರಲಿಲ್ಲ. ಜನರು ಈಗ ಜಾತಿಯ ಬಗ್ಗೆ ಮಾತನಾಡಲು ಆರಂಭಿಸಿದ್ದಾರೆ' ಎಂದು ಪಾಯಲ್ ಅವರು ಹೇಳಿದ್ದಾರೆ.

ಬಿಲ್ಕಿಸ್ ಬಾನು ಅವರ ಮೇಲೆ ಅತ್ಯಾಚಾರ ಎಸಗಿ ಅವರ ಕುಟುಂಬದ ಸದಸ್ಯರನ್ನು ಹತ್ಯೆ ಮಾಡಿದ್ದವರನ್ನು ಜೈಲಿನಿಂದ ಬಿಡುಗಡೆ ಮಾಡುವ ಪ್ರಕ್ರಿಯೆಯಲ್ಲಿ ಭಾಗಿಯಾಗಿದ್ದ ಶಾಸಕ ಚಂದ್ರಸಿಂಹ ರೌಲ್ಜಿ ಅವರಿಗೆ ಗೋಧ್ರಾ ಕ್ಷೇತ್ರದಿಂದ ಟಿಕೆಟ್ ನೀಡಲಾಗಿದೆ. ಬಿಲ್ಕಿಸ್ ಮೇಲೆ ಅತ್ಯಾಚಾರ ಎಸಗಿದವರು 'ಸಂಸ್ಕಾರಿ ಬ್ರಾಹ್ಮಣರು' ಎಂದು ಅವರ ಬಿಡುಗಡೆಯ ಬಳಿಕ ರೌಲ್ಜಿ ಅವರು ಹೇಳಿದ್ದರು.

ಪ್ರಜಾವಾಣಿ@75
ಫೋನ್–ಇನ್ ಕಾರ್ಯಕ್ರಮ
ಕಾಲ್ ಮಾಡಿ ಸಮಸ್ಯೆ ಹೇಳ್ಕೊಳ್ಳಿ
- ಸರಿಯಾದ ಸಮಯಕ್ಕೆ ಕೆಎಸ್‌ಆರ್‌ಟಿಸಿ ಬಸ್‌ಗಳು ಬರುತ್ತಿಲ್ಲವೇ?
- ನಿಮ್ಮ ಮಾರ್ಗದ ಬಸ್ ಸೇವೆ ಸ್ಥಗಿತ ಆಗಿದೆಯೇ?
- ರಾತ್ರಿ ವೇಳೆ ಬಸ್ ಸಿಗದೆ ತೊಂದರೆ ಅನುಭವಿಸುತ್ತಿದ್ದೀರಾ?
- ಬಸ್‌ಗಳಲ್ಲಿ ಸಿಬ್ಬಂದಿ ವರ್ತನೆ ಬಗ್ಗೆ ತಕರಾರು ಇದೆಯಾ?
- ಬಸ್‌ಗಳಲ್ಲಿ ಮಹಿಳೆಯರಿಗೆ ಸುರಕ್ಷತೆ ಇಲ್ಲವೇ?

ನಿಮ್ಮ ಅಹವಾಲುಗಳಿಗೆ ಸ್ಪಂದಿಸಲಿದ್ದಾರೆ

ವಿ.ಅನ್ಬುಕುಮಾರ್, ವ್ಯವಸ್ಥಾಪಕ ನಿರ್ದೇಶಕ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ(ಕೆಎಸ್‌ಆರ್‌ಟಿಸಿ)

ದಿನಾಂಕ: 14.11.2022 ಸೋಮವಾರ
ಸಮಯ: ಮಧ್ಯಾಹ್ನ 12.00 ರಿಂದ ಮಧ್ಯಾಹ್ನ 1.00ರವರೆಗೆ
ದೂರವಾಣಿ: 080 45557261
LIVE /prajavani.net /prajavani

ರಷ್ಯಾ ನಿಯಂತ್ರಿತ ಹಲವು ಪ್ರದೇಶ ಉಕ್ರೇನ್‌ಗೆ

ಕೀವ್ (ರಾಯಿಟರ್ಸ್/ಎಎಫ್‌ಪಿ/ಎಪಿ): ಆಕ್ರಮಣದ ವೇಳೆ ವಶಕ್ಕೆ ಪಡೆದಿದ್ದ ದಕ್ಷಿಣ ಉಕ್ರೇನ್‌ನ ಪ್ರಾದೇಶಿಕ ರಾಜಧಾನಿ ಕೆರ್ಸಾನ್‌ನಿಂದ ಸೇನೆ ಹಿಂತೆಗೆತವನ್ನು ರಷ್ಯಾ ಘೋಷಣೆ ಮಾಡಿದ ಎರಡು ದಿನಗಳಲ್ಲಿ ಉಕ್ರೇನ್ ಹಲವು ಪಟ್ಟಣಗಳು ಮತ್ತು ಹಳ್ಳಿಗಳನ್ನು ಮರು ವಶಕ್ಕೆ ಪಡೆದಿದೆ.

ಕೆರ್ಸಾನ್‌ನಿಂದ ರಕ್ಷಣಾ ಪಡೆಗಳನ್ನು ಸಂಪೂರ್ಣ ಹಿಂತೆಗೆದುಕೊಳ್ಳಲಾಗಿದೆ ಎಂದು ರಷ್ಯಾ ರಕ್ಷಣಾ ಸಚಿವಾಲಯ ಶುಕ್ರವಾರ ಹೇಳಿದೆ.

'ಕೆರ್ಸಾನ್‌ನಲ್ಲಿ 40ಕ್ಕೂ ಹೆಚ್ಚು ಪಟ್ಟಣಗಳು ಮತ್ತು 41 ಜನವಸತಿ ಪ್ರದೇಶಗಳನ್ನು ರಷ್ಯಾ ನಿಯಂತ್ರಣದಿಂದ ವಿಮೋಚನೆಗೊಳಿಸಲಾಗಿದೆ' ಎಂದು ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿದ್ದಾರೆ.

ಉಕ್ರೇನ್ ನಗರಗಳು ಮತ್ತು ಪಟ್ಟಣಗಳ ಮೇಲೆ ರಷ್ಯಾ ದೂರ ವ್ಯಾಪ್ತಿಯ ಕ್ಷಿಪಣಿ ದಾಳಿ ಮುಂದುವರಿಸಿದೆ. ಗುರುವಾರ ರಾತ್ರಿ ಮೈಕೊಲೈವ್ ನಗರದ ಜನವಸತಿ ಕಟ್ಟಡಕ್ಕೆ ಅಪ್ಪಳಿಸಿದ ಕ್ಷಿಪಣಿಯಿಂದ 6 ನಾಗರಿಕರು ಮೃತಪಟ್ಟಿದ್ದಾರೆ. ಅಮೆರಿಕವು ಸುಮಾರು ₹3,200 ಕೋಟಿಯ ಭದ್ರತಾ ನೆರವಿನ ಹೊಸ ಪ್ಯಾಕೇಜ್ ಅನ್ನು ಉಕ್ರೇನ್‌ಗೆ ನೀಡಿದೆ. ಇದರಲ್ಲಿ ರಕ್ಷಣಾ ವ್ಯವಸ್ಥೆ ಭೂ ಮೇಲ್ಮೈನಿಂದ ವಾಯು ದಾಳಿ ನಡೆಸುವ ಕ್ಷಿಪಣಿಗಳು ಸೇರಿವೆ.

ಧಾರ್ಮಿಕ ಟ್ಯಾಟುಗೆ ನಿರ್ಬಂಧ: ಹೈಕೋರ್ಟ್ ಮೊರೆಹೋದ ಅಭ್ಯರ್ಥಿ

ನವದೆಹಲಿ (ಪಿಟಿಐ): ಬಲಗೈಯಲ್ಲಿ ಧಾರ್ಮಿಕ ಚಿಹ್ನೆಯ ಟ್ಯಾಟೂ (ಹಚ್ಚೆ) ಹೊಂದಿದ್ದ ಕಾರಣಕ್ಕೆ ಕೇಂದ್ರ ಸಶಸ್ತ್ರ ಪೊಲೀಸ್ ಪಡೆ, ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಮತ್ತು ಇತರ ರಕ್ಷಣಾ ಪಡೆಗಳಲ್ಲಿ ಉದ್ಯೋಗ ನಿರಾಕರಿಸಿರುವುದನ್ನು ಪ್ರಶ್ನಿಸಿ ಅಭ್ಯರ್ಥಿಯೊಬ್ಬರು ದೆಹಲಿ ಹೈಕೋರ್ಟ್ ಮೊರೆಹೋಗಿದ್ದಾರೆ.

'ಬಲಗೈ ಸೆಲ್ಯೂಟ್ ಮಾಡುವ ಕೈ. ಗೃಹ ವ್ಯವಹಾರಗಳ ಸಚಿವಾಲಯದ ಮಾರ್ಗಸೂಚಿಗಳಡಿ ಬಲಗೈಯಲ್ಲಿ ಹಚ್ಚೆ ಇರುವಂತಿಲ್ಲ' ಎಂದು ಸಂಬಂಧಿಸಿದ ಇಲಾಖೆಗಳ ಪರ ವಕೀಲರು ವಾದಿಸಿದರು.'ಸಣ್ಣ ಲೇಸರ್ ಶಸ್ತ್ರಚಿಕಿತ್ಸೆ ಮೂಲಕ ಹಚ್ಚೆ ತೆಗೆಸುವೆ. ಅಲ್ಲದೇ, ವೈದ್ಯಕೀಯ ಪರೀಕ್ಷೆಯಲ್ಲಿ ಯಾವುದೇ ದೋಷಗಳು ಕಂಡುಬಂದಿಲ್ಲವೆಂದು ವರದಿ ದೃಢಪಡಿಸಿದೆ' ಎಂಬ ಅರ್ಜಿದಾರನ ಹೇಳಿಕೆಯನ್ನು ಹೈಕೋರ್ಟ್ ಪರಿಗಣಿಸಿತು.

ನ್ಯಾಯಮೂರ್ತಿಗಳಾದ ಸುರೇಶ್ ಕುಮಾರ್ ಕೇತ್ ಮತ್ತು ಸೌರಭ್ ಬ್ಯಾನರ್ಜಿ ಅವರಿದ್ದ ಪೀಠವು, ಹಚ್ಚೆ ತೆಗೆಸಿದ ನಂತರ ಇಲಾಖೆಗಳು ರಚಿಸಿದ ಹೊಸ ವೈದ್ಯಕೀಯ ಮಂಡಳಿಯ ಎದುರು ಪರೀಕ್ಷೆಗೆ ಹಾಜರಾಗಲು ಅರ್ಜಿದಾರನಿಗೆ ಅವಕಾಶ ನೀಡಿ, ಅರ್ಜಿ ವಿಲೇವಾರಿ ಮಾಡಿತು.

ಎನ್‌ಐಎ, ಎಸ್‌ಎಸ್‌ಎಫ್ ಮತ್ತು ಅಸ್ಸಾಂ ರೈಫಲ್ಸ್ ಪಡೆಯ ಜಿಡಿ ರೈಫಲ್‌ಮನ್ ಮತ್ತು ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆಯ ಕಾನ್‌ಸ್ಟೆಬಲ್ (ಸಾಮಾನ್ಯ ಕರ್ತವ್ಯ) ಹುದ್ದೆ ಪರೀಕ್ಷೆಯಲ್ಲಿ ಆಯ್ಕೆಯಾಗಿದ್ದ ಅಭ್ಯರ ಬಲಗೈ ಮೇಲಿದ್ದ ಧಾರ್ಮಿಕ ಚಿಹ್ನೆಯ ಹಚ್ಚೆಯ ಕಾರಣಕ್ಕೆ ವೈದ್ಯಕೀಯ ಪರೀಕ್ಷೆಯಲ್ಲಿ ಅನರ್ಹಗೊಳಿಸಲಾಗಿತ್ತು.

ನ್ಯಾಯಮೂರ್ತಿಗಳ ನೇಮಕ ವಿಳಂಬ: ಸುಪ್ರೀಂ ಕೋರ್ಟ್ ಅಸಮಾಧಾನ

ನವದೆಹಲಿ (ಪಿಟಿಐ): ಉನ್ನತ ನ್ಯಾಯಾಲಯಗಳಿಗೆ ನೇಮಕ ಮಾಡುವ ಸಂಬಂಧ ಶಿಫಾರಸು ಮಾಡಲಾಗಿರುವ ನ್ಯಾಯಮೂರ್ತಿಗಳ ಹೆಸರುಗಳ ಕುರಿತು ಕೇಂದ್ರ ಸರ್ಕಾರ ತ್ವರಿತವಾಗಿ ತೀರ್ಮಾನ ಕೈಗೊಳ್ಳದಿರುವ ಕುರಿತು ಸುಪ್ರೀಂಕೋರ್ಟ್ ಶುಕ್ರವಾರ ಅಸಮಾಧಾನ ವ್ಯಕ್ತಪಡಿಸಿದೆ.

'ಕೆಲ ನ್ಯಾಯಮೂರ್ತಿಗಳ ಹೆಸರುಗಳನ್ನು ಕೊಲಿಜಿಯಂ ಪುನಃ ಶಿಫಾರಸು ಮಾಡಿದೆ. ಅಂಥವರ ನೇಮಕಾತಿ ಬಗ್ಗೆಯೂ ತೀರ್ಮಾನ ಕೈಗೊಂಡಿಲ್ಲ. ಕೇಂದ್ರದ ಈ ನಡೆಯನ್ನು ಒಪ್ಪಿಕೊಳ್ಳಲಾಗದು' ಎಂದು ನ್ಯಾಯಮೂರ್ತಿಗಳಾದ ಎಸ್.ಕೆ.ಕೌಲ್ ಮತ್ತು ಎ.ಎಸ್. ಓಕಾ ಅವರಿದ್ದ ನ್ಯಾಯಪೀಠ ಹೇಳಿದೆ.

'ನೇಮಕಾತಿಗೆ ಸಂಬಂಧಿಸಿದಂತೆ ತಮ್ಮ ಹೆಸರುಗಳನ್ನು ಅಂತಿಮಗೊಳಿಸುವಲ್ಲಿ ವಿಳಂಬ ಆಗುತ್ತಿರುವುದನ್ನು ಕಂಡು, ಶಿಫಾರಸುಗೊಂಡಿರುವ ನ್ಯಾಯಮೂರ್ತಿಗಳು ತಮ್ಮ ಒಪ್ಪಿಗೆಯನ್ನು ಹಿಂಪಡೆಯುವಂತೆ ಮಾಡಲು ಈ ವಿಳಂಬ ಧೋರಣೆಯನ್ನು ಒಂದು ಸಾಧನವಾಗಿ ಬಳಸಲಾಗುತ್ತಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

'ಉನ್ನತ ನ್ಯಾಯಾಲಯಗಳಿಗೆ ಕಾಲಮಿತಿಯಲ್ಲಿ ನೇಮಕಾತಿ ಮಾಡಬೇಕು ಎಂದು ಸುಪ್ರೀಂಕೋರ್ಟ್ ಕಳೆದ ವರ್ಷ ಏಪ್ರಿಲ್ 20ರಂದು ಆದೇಶಿಸಿತ್ತು. ಆದರೆ, ಈ ಆದೇಶವನ್ನು ಉದ್ದೇಶಪೂರ್ವಕವಾಗಿ ಪಾಲನೆ ಮಾಡುತ್ತಿಲ್ಲ' ಎಂಬ ಆರೋಪಗಳ ಬಗ್ಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಕೇಂದ್ರ ಕಾನೂನು ಸಚಿವಾಲಯದ ಕಾರ್ಯದರ್ಶಿಗೆ (ನ್ಯಾಯಾಂಗ) ನೋಟಿಸ್ ನೀಡಿದ ನ್ಯಾಯಪೀಠ, ವಿಚಾರಣೆಯನ್ನು ನವೆಂಬರ್ 28ಕ್ಕೆ ಮುಂದೂಡಿತು.

ಉಚ್ಚ ನ್ಯಾಯಾಲಯಗಳಿಗೆ ನ್ಯಾಯಮೂರ್ತಿಗಳ ನೇಮಕಾತಿಯಲ್ಲಿ ಆಗುತ್ತಿರುವ ವಿಳಂಬವನ್ನು ಪ್ರಶ್ನಿಸಿ ಬೆಂಗಳೂರು ವಕೀಲರ ಸಂಘ ಅರ್ಜಿ ಸಲ್ಲಿಸಿದೆ. ಸಂಘದ ಪರವಾಗಿ ವಕೀಲ ಅಮಿತ್ ಪೈ ವಾದ ಮಂಡಿಸಿದರು.

ಸಂಕ್ಷಿಪ್ತ ಸುದ್ದಿ

ಕಿರುತೆರೆ ನಟ ಸಿದ್ಧಾಂತ್ ಸೂರ್ಯವಂಶಿ ನಿಧನ

ಮುಂಬೈ (ಪಿಟಿಐ): 'ಕುಸುಮ್', 'ಕಸೌತಿ ಝಿಂದಗಿ ಕಿ' ಮತ್ತು 'ಝಿದ್ದಿ ದಿಲ್ ಮಾನೆ ನಾ' ನಂತಹ ಧಾರಾವಾಹಿಗಳಲ್ಲಿ ಅಭಿನಯಿಸಿದ್ದ ಕಿರುತೆರೆ ನಟ ಸಿದ್ಧಾಂತ್ ಸೂರ್ಯವಂಶಿ (46) ಅವರು ಜಿಮ್‌ನಲ್ಲಿ ವ್ಯಾಯಾಮ ಮಾಡುವಾಗ ಹೃದಯಾಘಾತದಿಂದ ಶುಕ್ರವಾರ ನಿಧನರಾದರು.

ಸಿದ್ಧಾಂತ್ ಅವರನ್ನು ಮಧ್ಯಾಹ್ನ 12.30 ಕ್ಕೆ ಕೋಕಿಲಾಬೆನ್ ಧೀರೂಭಾಯಿ ಅಂಬಾನಿ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅಲ್ಲಿ ಅವರು ಮೃತಪಟ್ಟಿದ್ದಾರೆ ಎಂದು ಘೋಷಿಸಲಾಯಿತು ಎಂದು ಆಸ್ಪತ್ರೆ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಜಿಮ್‌ನಲ್ಲಿದ್ದಾಗ ಹೃದಯಾಘಾತ ಆಗಿರುವ ಸಾಧ್ಯತೆ ಇದೆ. ಅಲ್ಲಿದ್ದವರು ನಟನನ್ನು ಉಳಿಸಿಕೊಳ್ಳಲು ಪ್ರಯತ್ನ ನಡೆಸಿದ್ದಾರೆ ಎಂದು ಕುಟುಂಬಸ್ಥರು ತಿಳಿಸಿರುವುದಾಗಿ ಆಸ್ಪತ್ರೆ ಸಿಬ್ಬಂದಿ ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಜಾಕ್ವೆಲಿನ್ ಜಾಮೀನು ಅರ್ಜಿ ಆದೇಶ ನ.15ಕ್ಕೆ

ನವದೆಹಲಿ (ಪಿಟಿಐ): ವಂಚಕ ಸುರೇಶ್ ಚಂದ್ರಶೇಖರ್ ಆರೋಪಿಯಾಗಿರುವ ₹ 200 ಕೋಟಿ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ನಟಿ ಜಾಕ್ವೆಲಿನ್ ಫರ್ನಾಂಡಿಸ್ ಅವರ ಜಾಮೀನು ಅರ್ಜಿಯ ಆದೇಶವನ್ನು ಶುಕ್ರವಾರ ದೆಹಲಿ ನ್ಯಾಯಾಲಯ ನ.15ಕ್ಕೆ ಮುಂದೂಡಿದೆ.

ನ್ಯಾಯಾಲಯವು ಫರ್ನಾಂಡಿಸ್ ಅವರ ಮಧ್ಯಂತರ ಜಾಮೀನು ಅವಧಿಯನ್ನು ಮಂಗಳವಾರದವರೆಗೆ ವಿಸ್ತರಿಸಿದೆ.

ಈ ಹಿಂದೆ ಫರ್ನಾಂಡಿಸ್ ಅವರಿಗೆ ಮಧ್ಯಂತರ ಜಾಮೀನು ನೀಡಿದ್ದ ವಿಶೇಷ ನ್ಯಾಯಾಧೀಶ ಶೈಲೇಂದ್ರ ಮಲಿಕ್, ಆದೇಶ ಸಿದ್ಧವಾಗಿಲ್ಲ ಎಂದು ಹೇಳಿದರು.

ವಿದೇಶಿ ಉಗ್ರನ ಹತ್ಯೆ

ಶ್ರೀನಗರ: ಜೈಷ್–ಎ–ಮುಹಮ್ಮದ್ ಉಗ್ರ ಸಂಘಟನೆಯ ವಿದೇಶಿ ಭಯೋತ್ಪಾದಕ ಕಮ್ರಾನ್ ಭಾಯ್ ಅಲಿಯಾಸ್ ಹನೀಸ್‌ನನ್ನು ಕಾಶ್ಮೀರದ ಶೋಪಿಯಾನ್ ಜಿಲ್ಲೆಯಲ್ಲಿ ಶುಕ್ರವಾರ ಭದ್ರತಾ ಪಡೆಯ ಸಿಬ್ಬಂದಿ ಶುಕ್ರವಾರ ಹತ್ಯೆ ಮಾಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೀಸಲಾತಿ ಶೇ 77ಕ್ಕೆ ಮಸೂದೆ ಅಂಗೀಕಾರ

ರಾಂಚಿ: ವಿವಿಧ ವರ್ಗಗಳಿಗೆ ನೀಡಿರುವ ಮೀಸಲಾತಿ ಪ್ರಮಾಣವನ್ನು ಒಟ್ಟು ಶೇ 77ಕ್ಕೆ ಹೆಚ್ಚಿಸುವ ಮಸೂದೆಯನ್ನು ಜಾರ್ಖಂಡ್ ವಿಧಾನಸಭೆ ಅಂಗೀಕರಿಸಿತು.

'ಜಾರ್ಖಂಡ್ ರಾಜ್ಯದ ಹುದ್ದೆಗಳು ಹಾಗೂ ಸೇವೆಗಳಲ್ಲಿ ಮೀಸಲಾತಿ ಕಾಯ್ದೆ, 2001'ಕ್ಕೆ ತಿದ್ದುಪಡಿ ತರುವ ಮೂಲಕ ಮಸೂದೆಗೆ ಒಪ್ಪಿಗೆ ನೀಡಲಾಯಿತು.

ರಾಜ್ಯದಲ್ಲಿ ಪ್ರಸ್ತುತ ಮೀಸಲಾತಿ ಪ್ರಮಾಣ ಶೇ 60ರಷ್ಟಿದೆ.

ಖಾಸಗಿ ಉಡಾವಣಾ ರಾಕೆಟ್‌ಗೆ ಇಸ್ರೊ ನೆರವು

ಬೆಂಗಳೂರು (ಪಿಟಿಐ): ದೇಶದಲ್ಲಿ ಖಾಸಗಿಯಾಗಿ ಅಭಿವೃದ್ಧಿಪಡಿಸಿರುವ ಉಪಗ್ರಹ ಉಡಾವಣಾ ರಾಕೆಟ್‌ಗೆ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಇದೇ ಮೊದಲ ಬಾರಿಗೆ ತನ್ನ ರಾಕೆಟ್ ವ್ಯವಸ್ಥೆಯನ್ನು ನೀಡಿದೆ.

ಚೆನ್ನೈ ಮೂಲದ ಬಾಹ್ಯಾಕಾಶ ತಂತ್ರಜ್ಞಾನ ನವೋದ್ಯಮ ಅಗ್ನಿಕುಲ್ ಕಾಸ್ಮೋಸ್ ಮೊದಲ ಫ್ಲೈಟ್ ಟರ್ಮಿನೇಷನ್ ಸಿಸ್ಟಮ್ ಅನ್ನು ಪಡೆದುಕೊಂಡಿದೆ. ಇದನ್ನು ನವೆಂಬರ್ 7ರಂದು ಹಸ್ತಾಂತರಿಸಲಾಗಿದೆ ಎಂದು ಇಸ್ರೊ ಶುಕ್ರವಾರ ಹೇಳಿಕೆಯಲ್ಲಿ ತಿಳಿಸಿದೆ.

14ರಂದು ಸೇಡಂನಲ್ಲಿ 69ನೇ ಸಹಕಾರ ಸಪ್ತಾಹ

ಕಲಬುರಗಿ: 'ರಾಜ್ಯ ಸಹಕಾರ ಮಹಾಮಂಡಳ ನಿಯಮಿತ, ಕಲಬುರಗಿ–ಯಾದಗಿರಿ ಜಿಲ್ಲಾ ಸಹಕಾರಿ ಕೇಂದ್ರ(ಡಿಸಿಸಿ) ಬ್ಯಾಂಕ್ ಸೇರಿ ಇತರೆ ಆರು ಸಂಘಟನೆಗಳು ಜೊತೆಗೂಡಿ ಜಿಲ್ಲೆಯ ಸೇಡಂನಲ್ಲಿ ನವೆಂಬರ್ 14ರಂದು 69ನೇ ಅಖಿಲ ಭಾರತ ಸಹಕಾರ ಸಪ್ತಾಹ ಉದ್ಘಾಟನಾ ಕಾರ್ಯಕ್ರಮ ಆಯೋಜಿಸಿವೆ' ಎಂದು ಡಿಸಿಸಿ ಬ್ಯಾಂಕ್ ಅಧ್ಯಕ್ಷ, ಸೇಡಂ ಶಾಸಕ ರಾಜಕುಮಾರ ಪಾಟೀಲ ತೇಲ್ಕೂರ ಹೇಳಿದರು.

'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕಾರ್ಯಕ್ರಮ ಉದ್ಘಾಟಿಸುವರು. ಅವರು ಸಹಕಾರ ರತ್ನ ಪ್ರಶಸ್ತಿ ಪ್ರದಾನ ಮಾಡುವರು ಮತ್ತು ಯಶಸ್ವಿನಿ ಕಾರ್ಡ್ ವಿತರಿಸುವರು. ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷ ಜಿ.ಟಿ.ದೇವೇಗೌಡ ಅಧ್ಯಕ್ಷತೆ ವಹಿಸುವರು' ಎಂದು ಅವರು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ಸಪ್ತಾಹದ ಸಮಾರೋಪ ಸಮಾರಂಭ ಮೈಸೂರಿನಲ್ಲಿ ಜರುಗಲಿದೆ. ಹುಬ್ಬಳ್ಳಿ, ಮಂಗಳೂರು ಮತ್ತು ಬೆಂಗಳೂರು ವಿಭಾಗ ಸೇರಿ ರಾಜ್ಯದ 7 ವಿಭಾಗಗಳಲ್ಲಿ ಸಹಕಾರ ಸಪ್ತಾಹ ಸಮಾರಂಭ ನಡೆಯಲಿದೆ' ಎಂದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಪ್ರವಾಸ
Travel

18.11.2022 ಮತ್ತು 9.01.23ರಿಂದ 13/16ದಿನಗಳು ವಿಮಾನ ಮತ್ತು ಎಸಿ.ಬಸ್ಸಿನಲ್ಲಿ ಪಶುಪತಿನಾಥ್,ಮುಕ್ತಿನಾಥ್, ಪೋಕ್ರ,ಪುರಿ,ಜನಕಪುರಿ,ನೇಪಾಳ, ಕಾಶಿ,ಕೋಲ್ಕತ್ತ ಹಾಗು 9.12.2022ರಿಂದ 'ಮಹಾಶಿವರಾತ್ರಿ' ಪ್ರಯುಕ್ತ ಪಶುಪತಿನಾಥ' ದರ್ಶನ: ಏಷ್ಯನ್ 'ಟ್ರಾವೆಲ್' ಲೈನ್ಸ್. 164/3 'ಆರ್.ವಿ.ರಸ್ತೆ, ಬೆಂಗಳೂರು~04. ಸಂಪರ್ಕಿಸಿ: 'ಷಣ್ಮುಗಾನಂದ~ 8105657052/ 9480182865

ಶ್ರೀರಾಜರಾಜೇಶ್ವರಿ ಟೂರ್ಸ್ 9739618243 9743895346. 01.12.2022 7ದಿನ ಕೇರಳ ಪ್ರವಾಸ. 02.01.2023 6ದಿನ ಭುವನೇಶ್ವರ್ ಪುರಿಜಗನ್ನಾಥ್ ಕೊನಾರ್ಕ್ 3 ಶಕ್ತಿಪೀಠಗಳು.

22.11.2022 ಮಧ್ಯಪ್ರದೇಶ, ಗುಜರಾತ್, ಜ್ಯೋತಿರ್ಲಿಂಗ ಪ್ರವಾಸ 22.12.2022 ತಮಿಳುನಾಡು, ಕೇರಳ, ಶಿರಡಿ, ಪ್ರವಾಸ ಕರ್ನಾಟಕ ಹೆರಿಟೇಜ್ ಟೂರ್ಸ (ಹನುಮಂತನಗರ) 9845035349, 9482435755

ವ್ಯಾಪಾರ
Business Offers
General

SUYAMB MANAGEMENT, A Genuine Share Market Trading Company offers Genuine and Principle Safe Returns for your investment. 6% a Month Fixed Returns. For Details please call 90709 90709. Successful 5th Year. All Investments supported with Legal Document. 90709 90709.

ಉದ್ಯೋಗಾವಕಾಶ
Marketing & Sales

SUYAMB MANAGEMENT looking for Assistant Branch Manager for its new branch in Koramangla. Female Candidate Only. Pleasant Look and Strong Communication skills preferred. Salary 30000+, please send in your resume with latest photograph to roselilly5555@gmail.com

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಬುಕ್ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000-20,000 ಗಳಿಸಿ.(ಕೊರಿಯರ್ ಇದೆ). 8884686860, 8884686861.

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ. ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು & ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000-20000 ಗಳಿಸಿ. ಕರೆಮಾಡಿ: 9611225266/ 9611225388

Drivers

ಬೇಕಾಗಿದ್ದಾರೆ! ಬೈಕ್ ಚಾಲಕರು (Full Time & Part Time)
ಬೇಕಾಗಿರುವ ದಾಖಲೆಗಳು – Bike, Valid DL, RC ಹಾಗು Android Phone
ನೀವು ಬೈಕ್ ಹೊಂದಿದ್ದೀರಾ? ಕೆಲಸ ಹುಡುಕುತ್ತಿದ್ದೀರಾ? ಸಮಯ ಸಿಕ್ಕಾಗ ಬೈಕ್ ಚಲಾಯಿಸಿ ಹಾಗು 4 ಗಂಟೆಗಳಲ್ಲಿ Rs.1000/- ಸಂಪಾದಿಸಿ! ಈಗಲೇ ಕರೆ ಮಾಡಿ: 080-45686913

General

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಬಿಲ್ಡರ್ ಎಸೆನ್ಷಿಯಲ್
Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಭವಿಷ್ಯ
Astrology

"ಕೆಲಸಆದ ನಂತರ ಕಾಣಿಕೆ" ಎಲ್ಲಿಯೂ ಪರಿಹಾರವಾಗದ ಕಠಿಣ,ನಿಗೂಢ ಗುಪ್ತಸಮಸ್ಯೆಗಳಿಗೆ ಬ್ರಹ್ಮತಂತ್ರವಿದ್ಯೆಯಿಂದ, ಶ್ರೀರಾಘವೇಂದ್ರಶರ್ಮರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಶ್ರೀಬಂಡೆಮಹಾಕಾಳಿ ದೇವಸ್ಥಾನದ ಪಕ್ಕದಲ್ಲಿ, ಗವೀಪುರಂ,ಗುಟ್ಟಹಳ್ಳಿ. ಬೆಂ.9620201188

ಶ್ರೀ ದುರ್ಗಾದೇವಿ ಆರಾಧನೆಯಿಂದ ಆರೋಗ್ಯ, ಸಂತಾನ, ಶತ್ರುಕಾಟ, ಲೈಂಗಿಕ ಸಮಸ್ಯೆ ಹಾಗೂ ಸ್ತ್ರೀ ಪುರುಷ ವಶೀಕರಣ 3 ದಿನದಲ್ಲಿ ಮಾಡಿಕೊಡುತ್ತಾರೆ. ಫೋನಿನ ಮೂಲಕ ನೇರ ಪರಿಹಾರ. ಶ್ರೀ ಆಚಾರ್ಯ: 9945995681

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	70	100	80	135

CD Per Sqcm	Single Col	Double Col	Multi Col
	480	450	475

SPECIAL OFFER					
PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph: 080- 45557160 | 163 | 164 |
9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
conditions apply*

ದ್ರಾವಿಡ್‌ಗೆ ವಿಶ್ರಾಂತಿ; ಲಕ್ಷ್ಮಣ್ ಕೋಚ್

ಲಕ್ಷ್ಮಣ್

ಅಡಿಲೇಡ್ (ಪಿಟಿಐ): ಎನ್‌ಸಿಎ ಮುಖ್ಯಸ್ಥ ವಿವಿಎಸ್ ಲಕ್ಷ್ಮಣ್ ಅವರು ನ್ಯೂಜಿಲೆಂಡ್ ಕ್ರಿಕೆಟ್ ಪ್ರವಾಸಕ್ಕೆ ತೆರಳಲಿರುವ ಭಾರತ ತಂಡದ ಹಂಗಾಮಿ ಮುಖ್ಯಕೋಚ್ ಆಗಿ ಕಾರ್ಯನಿರ್ವಹಿಸಲಿದ್ದಾರೆ. ರಾಹುಲ್ ದ್ರಾವಿಡ್ ನೇತೃತ್ವದ ಕೋಚಿಂಗ್ ತಂಡಕ್ಕೆ ವಿಶ್ರಾಂತಿ ನೀಡಲಾಗಿದೆ.

ಭಾರತ ತಂಡ ನ್ಯೂಜಿಲೆಂಡ್‌ನಲ್ಲಿ ತಲಾ ಮೂರು ಟಿ20 ಮತ್ತು ಏಕದಿನ ಪಂದ್ಯಗಳನ್ನಾಡಲಿದೆ. ಮೊದಲ ಪಂದ್ಯ ನ.18 ರಂದು ವೆಲಿಂಗ್ಟನ್‌ನಲ್ಲಿ ನಡೆಯಲಿದೆ.

‘ವಿವಿಎಸ್ ಲಕ್ಷ್ಮಣ್, ಋಷಿಕೇಶ್ ಕಾನಿಟ್ಕರ್ (ಬ್ಯಾಟಿಂಗ್ ಕೋಚ್) ಮತ್ತು ಸಾಯಿರಾಜ್ ಬಹುತುಳೆ (ಬೌಲಿಂಗ್ ಕೋಚ್) ಅವರು ನ್ಯೂಜಿಲೆಂಡ್ ಪ್ರವಾಸಕ್ಕೆ ತೆರಳಲಿರುವ ಭಾರತ ತಂಡವನ್ನು ಸೇರಿಕೊಳ್ಳಲಿದ್ದಾರೆ’ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಲಕ್ಷ್ಮಣ್ ಅವರನ್ನು ಭಾರತ ತಂಡದ ಕೋಚ್ ಆಗಿ ನೇಮಕ ಮಾಡಿದ್ದು ಇದೇ ಮೊದಲಲ್ಲ. ಜಿಂಬಾಬ್ವೆ ಮತ್ತು ಐರ್ಲೆಂಡ್‌ನಲ್ಲಿ ನಡೆದ ಸರಣಿ ಹಾಗೂ ದಕ್ಷಿಣ ಆಫ್ರಿಕಾ ವಿರುದ್ಧ ಈಚೆಗೆ ತವರು ನೆಲದಲ್ಲಿ ನಡೆದ ಸರಣಿಯ ವೇಳೆಯೂ ಅವರು ಕೋಚ್ ಆಗಿ ಕಾರ್ಯನಿರ್ವಹಿಸಿದ್ದರು.

2015ರಿಂದೀಚೆಗೆ ಐಸಿಸಿ ಟ್ರೋಫಿ ನಾಲ್ಕು ಸೆಮಿಫೈನಲ್‌ಗಳಲ್ಲಿ ಮುಗ್ಗರಿಸಿದ ಭಾರತ ತಂಡ

ರೋಹಿತ್ ಪಡೆಗೆ ಆತ್ಮಾವಲೋಕನ ಕಾಲ

• ಆರ್. ಕೌಶಿಕ್

ರೋಹಿತ್ ಶರ್ಮಾ ಹಾಗೂ ಜೋಸ್ ಬಟ್ಲರ್

ಅಡಿಲೇಡ್: ರೋಹಿತ್ ಶರ್ಮಾ ನಾಯಕತ್ವದ ಭಾರತ ಕ್ರಿಕೆಟ್ ತಂಡವು ‘ದ ರಿಡೀಮ್ ಟೀಮ್’ ಚಲನಚಿತ್ರವನ್ನು ವೀಕ್ಷಿಸಿದರೆ ಒಳಿತು.

ಅಮೆರಿಕದ ಬ್ಯಾಸ್ಕೆಟ್‌ಬಾಲ್ ತಂಡದ ಪುನರುತ್ಥಾನದ ಕತೆಯೇ ಈ ಸಿನಿಮಾ. 2004ರ ಅಥೆನ್ಸ್ ಒಲಿಂಪಿಕ್ಸ್‌ನಲ್ಲಿ ಮೂರು ಪಂದ್ಯಗಳಲ್ಲಿ ಪರಾಭವಗೊಂಡಿತು. ಆದರೆ ಇದಕ್ಕೂ ಮುಂಚಿನ ಒಲಿಂಪಿಕ್ ಇತಿಹಾಸದಲ್ಲಿ ತಂಡವು ಕೇವಲ ಎರಡು ಬಾರಿ ಸೋತಿತ್ತು. ಅಥೆನ್ಸ್‌ನ ಸೋಲು ಅಮೆರಿಕ ತಂಡದ ಆತ್ಮಾವಲೋಕನಕ್ಕೆ ದಾರಿಯಾಯಿತು.

ಅಲ್ಲಿಯ ಎನ್‌ಬಿಎ (ನ್ಯಾಷನಲ್ ಬ್ಯಾಸ್ಕೆಟ್‌ಬಾಲ್ ಅಸೋಸಿಯೇಷನ್) ಲೀಗ್ ಟೂರ್ನಿಯಿಂದ ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಕ್ಷೇತ್ರದ ಹಿನ್ನಡೆಗೆ ಕಾರಣವಾಗುತ್ತಿರುವ ಬಗ್ಗೆ ಅನುಮಾನಗಳು ವ್ಯಕ್ತವಾಗಿದ್ದವು. 2007ರಲ್ಲಿ ಕೊಬೆ ಬ್ರಯಂಟ್ ನಾಯಕತ್ವದ ಬಳಗದಲ್ಲಿ ಮೂಲದಿಂದಲೇ ಸುಧಾರಣೆಗಳಿಗೆ ಮತ್ತು ನಡವಳಿಕೆಯಲ್ಲಿ ಬದಲಾವಣೆಗಳಿಗೆ ಚಾಲನೆ ನೀಡಲಾಯಿತು. ‘ಸೋಲುವುದನ್ನು ನೋಡಿ ಬಸವಳಿದಿದ್ದೇನೆ’ ಎಂದು ಬ್ರಯಂಟ್ ತಮ್ಮ ಸಹಆಟಗಾರರಿಗೆ ಹೇಳಿದ್ದನ್ನು 2008ರ ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ ಪದಕ ಜಯಿಸಿದಾಗ ನೆನಪಿಸಿಕೊಂಡಿದ್ದರು.

ಅಮೆರಿಕದ ಎನ್‌ಬಿಎ ತರಹ ಭಾರತದಲ್ಲಿ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ (ಐಪಿಎಲ್) ಇದೆ. ಅಪರಿಚಿತ ಪ್ರತಿಭೆಗಳನ್ನು ಹೀರೊಗಳನ್ನಾಗಿ ರೂಪಿಸುವ ವೇದಿಕೆ ಇದಾಗಿದೆ. ಒತ್ತಡದ ಸನ್ನಿವೇಶದಲ್ಲಿ ಉತ್ತಮವಾಗಿ ಆಡುವ ಸಾಮರ್ಥ್ಯವನ್ನು ಬೆಳೆಸುತ್ತದೆ. ಆದರೆ ಈ ಹಂತವೇ ಅಂತಿಮವಲ್ಲ. ರಾಷ್ಟ್ರೀಯ ತಂಡದಲ್ಲಿ ಪ್ರತಿನಿಧಿಸುವಾಗಲೂ ಈ ಸಾಮರ್ಥ್ಯ ವಿನಿಯೋಗವಾಗಬೇಕು. ಹಾಗಾಗದಿದ್ದಾಗ ನಿಜವಾದ ಸಮಸ್ಯೆ ಆರಂಭವಾಗುತ್ತದೆ.

2015ರಲ್ಲಿ ಆಸ್ಟ್ರೇಲಿಯಾದಲ್ಲಿ ನಡೆದಿದ್ದ ಏಕದಿನ ವಿಶ್ವಕಪ್ ಟೂರ್ನಿ ಸೇರಿದಂತೆ ಇಲ್ಲಿಯವರೆಗೆ ನಾಲ್ಕು ಐಸಿಸಿ ಟೂರ್ನಿಗಳ ಸೆಮಿಫೈನಲ್‌ನಲ್ಲಿ ಭಾರತವು ಸೋತಿದೆ. ಇದಕ್ಕೆ ಐಪಿಎಲ್ ಕಾರಣ ಎಂಬ ಟೀಕೆಗಳು ಕೇಳಿಬರುತ್ತಿವೆ. ಐಪಿಎಲ್ ಟೂರ್ನಿಗಳಿಂದಾಗಿ ಹಲವು ಉತ್ತಮ ಆಟಗಾರರು ರಾಷ್ಟ್ರೀಯ ತಂಡಕ್ಕೆ ಲಭ್ಯರಾಗಿದ್ದಾರೆ ಎನ್ನುವುದೂ ಸತ್ಯ. ವಿಶ್ವದಲ್ಲಿಯೇ ಅತ್ಯಂತ ಶ್ರೀಮಂತ ಹಾಗೂ ಬಲಾಢ್ಯ ಟಿ20 ಫ್ರ್ಯಾಂಚೈಸಿ ಲೀಗ್ ಐಪಿಎಲ್ ಎಂಬುದರಲ್ಲಿ ಸಂಶಯವೇ ಇಲ್ಲ. ಭಾರತ ಕೇಂದ್ರಿತವಾಗಿರುವುದರಿಂದ ಈ ಟೂರ್ನಿಯಲ್ಲಿ ಇಲ್ಲಿಯ ಆಟಗಾರರಿಗೆ ಹೆಚ್ಚು ಆದ್ಯತೆ ಸಿಗುತ್ತಿದೆ.

ಆದರೆ ಈ ಎಲ್ಲ ಸಂಪನ್ಮೂಲಗಳೂ ಭಾರತ ತಂಡಕ್ಕೆ ವಿಶ್ವಕಪ್ ಗೆದ್ದುಕೊಡದಿದ್ದರೆ ಎಲ್ಲೋ, ಏನೋ ಸಮಸ್ಯೆ ಇದೆ ಎಂಬುದು ಸ್ಪಷ್ಟವಾಗುತ್ತದೆ. ವರ್ಕ್‌ಲೋಡ್ ನಿರ್ವಹಣೆ ಮತ್ತಿತರ ಕ್ರಮಗಳ ಜೊತೆಗೆ ಟಿ20 ಪರಿಣತರನ್ನು ಒಳಗೊಳ್ಳುವಿಕೆಗೆ ಚಿತ್ತ ಹರಿಸಬೇಕು.

ಗುರುವಾರ ಇಂಗ್ಲೆಂಡ್ ಎದುರಿನ ಸೆಮಿಫೈನಲ್‌ನಲ್ಲಿ ಸೋತ ಭಾರತ ತಂಡದಲ್ಲಿದ್ದ ರೋಹಿತ್ ಶರ್ಮಾ, ಕೆ.ಎಲ್. ರಾಹುಲ್, ವಿರಾಟ್ ಕೊಹ್ಲಿ, ರಿಷಭ್ ಪಂತ್, ಆರ್. ಅಶ್ವಿನ್ ಮತ್ತು ಮೊಹಮ್ಮದ್ ಶಮಿ ಅವರು ಮೂರು ಮಾದರಿಗಳಲ್ಲಿ ಆಡುವ ಅನುಭವಿಗಳು. ಜಸ್‌ಪ್ರೀತ್ ಬೂಮ್ರಾ ಹಾಗೂ ರವೀಂದ್ರ ಜಡೇಜ ಕೂಡ ಇದೇ ಸಾಲಿನಲ್ಲಿರುವ ಆಟಗಾರರು. ಆದರೆ, ಗಾಯದಿಂದಾಗಿ ಅವರು ಈ ಟೂರ್ನಿಗೆ ಅಲಭ್ಯರಾದರು. ಒಂದು ಮಾದರಿಯಿಂದ ಮತ್ತೊಂದಕ್ಕೆ ಬದಲಾಗುತ್ತ ಆಟಕ್ಕೆ ಹೊಂದಿಕೊಳ್ಳುವುದು ನಿಜಕ್ಕೂ ಸವಾಲು. ಇಂತಹ ಒತ್ತಡದಲ್ಲಿ ಆಟಗಾರರನ್ನು ಸದಾ ಉಲ್ಲಸಿತರಾಗಿ ಇರುವಂತೆ ಅಪೇಕ್ಷಿಸುವುದು ಹೇಗೆ? ಬಹುಮಾದರಿಯ ಆಟಗಾರರು, ಐಪಿಎಲ್ ಪ್ರತಿಭೆಗಳು ಹಾಗೂ ಟಿ20 ಪರಿಣತರೊಂದಿಗೆ ಸೇರಿಸಿ ಒಂದು ಗುಂಪನ್ನು ಸಿದ್ಧಗೊಳಿಸಬಹುದಲ್ಲವೇ?

ಪ್ರಸ್ತುತ ಈ ವಿಶ್ವಕಪ್‌ನಲ್ಲಿ ಭಾರತ ತಂಡದ ಅಸ್ಥಿರ ಬ್ಯಾಟಿಂಗ್ ಹಾಗೂ ಸತ್ವರಹಿತ ಬೌಲಿಂಗ್ ಕುರಿತು ಚರ್ಚೆಗಳು ನಡೆಯುತ್ತಿವೆ. ಕಾಮನಬಿಲ್ಲಿನ ಕೊನೆಯಲ್ಲಿರುವ ಚಿನ್ನದ ಬಿಂದಿಗೆಯನ್ನು ಪಡೆಯಬೇಕಾದರೆ ಒಂದೇ ತಪ್ಪು ಪದೇ ಪದೇ ಮರುಕಳಿಸದಂತೆ ನೋಡಬೇಕು. ಕೆಲವು ಕ್ರಾಂತಿಕಾರಿ ಕ್ರಮಗಳನ್ನು ತಂದಿರುವ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಮುಂದೆಯೂ ಅದೇ ಹಾದಿಯಲ್ಲಿ ಮುಂದುವರಿಯಬೇಕಾಗಬಹುದು.

ವಿಶ್ವಕಪ್: ಫೈನಲ್ ನೆತ್ತಿಯ ಮೇಲೆ ‘ಮಳೆಮೋಡ’

ಮೆಲ್ಬರ್ನ್ (ಪಿಟಿಐ): ಭಾನುವಾರ ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಯ ಫೈನಲ್ ಪಂದ್ಯಕ್ಕೆ ಮಳೆ ಅಡ್ಡಿಯಾಗುವ ಸಾಧ್ಯತೆ ಇದೆ. ಇದರಿಂದಾಗಿ ಪಾಕಿಸ್ತಾನ ಮತ್ತು ಇಂಗ್ಲೆಂಡ್ ತಂಡಗಳು ಜಂಟಿ ಚಾಂಪಿಯನ್ ಆಗುವ ನಿರೀಕ್ಷೆ ಇದೆ.

ಪಂದ್ಯ ನಡೆಯುವ ಅವಧಿಯ ಶೇ 95ರಷ್ಟು ಭಾಗದಲ್ಲಿ ಮಳೆ ಸುರಿಯುವ ಸಾಧ್ಯತೆ ಇದೆ. ಸುಮಾರು 25 ಮಿಲಿಮೀಟರ್ ಮಳೆಯಾಗಲಿದೆ ಎಂದು ಸ್ಥಳೀಯ ಹವಾಮಾನ ಇಲಾಖೆಯು ‘ಇಎಸ್‌ಪಿಎನ್ ಕ್ರಿಕ್‌ಇನ್ಫೋ’ಗೆ ತಿಳಿಸಿದೆ.

ಭಾನುವಾರ ಮಳೆಯಾಗಿ ಪಂದ್ಯ ನಡೆಯದಿದ್ದರೆ ಸೋಮವಾರವನ್ನು ಮೀಸಲು ದಿನವನ್ನಾಗಿ ಇರಿಸಲಾಗಿದೆ ಆದರೆ ಆ ದಿನವೂ 5ರಿಂದ 10 ಮಿಲಿಮೀಟರ್ ಮಳೆಯಾಗುವ ಸಾಧ್ಯತೆ ಇದೆ.

‘ಟೂರ್ನಿಯ ನಿಯಮಗಳ ಪ್ರಕಾರ ಅವಕಾಶ ಸಿಕ್ಕರೆ ಕನಿಷ್ಠ 10 ಓವರ್‌ಗಳ ಪಂದ್ಯ ಆಯೋಜಿಸಬಹುದು. ಇದಕ್ಕೆ ಆದ್ಯತೆ ನೀಡಲಾಗುವುದು. ಒಂದೊಮ್ಮೆ ಭಾನುವಾರ ಪಂದ್ಯವು ಆರಂಭವಾಗಿ ಮಳೆಯಿಂದ ಅರ್ಧಕ್ಕೆ ನಿಂತರೆ ಮರುದಿವಸ ಉಳಿದ ಭಾಗವನ್ನು ಮುಂದುವರಿಸಲಾಗುವುದು’ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಸ್ಥಳೀಯ ಕಾಲಮಾನದ ಪ್ರಕಾರ ರಾತ್ರಿ 7ಕ್ಕೆ ಪಂದ್ಯ ಆರಂಭವಾಗಲಿದೆ.

‘ಭಾರತ ತಂಡ ಚೋಕರ್ಸ್’

ನವದೆಹಲಿ (ಪಿಟಿಐ): ಟಿ20 ವಿಶ್ವಕಪ್ ಟೂರ್ನಿಯ ಸೆಮಿಫೈನಲ್ ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ 10 ವಿಕೆಟ್‌ಗಳ ಹೀನಾಯ ಸೋಲು ಅನುಭವಿಸಿದ ಭಾರತ ಕ್ರಿಕೆಟ್ ತಂಡವನ್ನು ಮಾಜಿ ಕ್ರಿಕೆಟಿಗ ಹಾಗೂ 1983ರ ಏಕದಿನ ವಿಶ್ವಕಪ್ ಗೆದ್ದ ತಂಡದ ನಾಯಕ ಕಪಿಲ್ ದೇವ್ ಅವರು ‘ಚೋಕರ್ಸ್’ ಎಂದು ಕರೆದಿದ್ದಾರೆ.

‘ಭಾರತ ತಂಡವನ್ನು ಚೋಕರ್ಸ್ ಎಂದು ಕರೆಯುವುದರಲ್ಲಿ ಯಾವುದೇ ತಪ್ಪಿಲ್ಲ. ಅವರು ಟೂರ್ನಿಯ ಕೊನೆವರೆಗೂ ಬಂದು ಸೋಲುತ್ತಾರೆ’ ಎಂದು ಕಪಿಲ್ ದೇವ್ ಹೇಳಿದ್ದಾರೆ.

ವಿಜಯ್ ಹಜಾರೆ ಟ್ರೋಫಿ: ಇಂದು ಕರ್ನಾಟಕ–ಮೇಘಾಲಯ ಹಣಾಹಣಿ

ಕೋಲ್ಕತ್ತ: ಮಯಂಕ್ ಅಗರವಾಲ್ ನಾಯಕತ್ವದ ಬಳಗವು ಶನಿವಾರ ಆರಂಭವಾಗಲಿರುವ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ಬಿ ಗುಂಪಿನಲ್ಲಿ ತನ್ನ ಅಭಿಯಾನ ಆರಂಭಿಸಲಿದೆ.

ಕಲ್ಕತ್ತಾ ಕ್ರಿಕೆಟ್ ಮತ್ತು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆಯಲಿರುವ ಮೊದಲ ಪಂದ್ಯದಲ್ಲಿ ಕರ್ನಾಟಕವು ಮೇಘಾಲಯ ವಿರುದ್ಧ ಆಡಲಿದೆ.

ಅನುಭವಿ ಬ್ಯಾಟರ್ ಆರ್. ಸಮರ್ಥ್ ಹಾಗೂ ಮಧ್ಯಮವೇಗಿ ರೋನಿತ್ ಮೋರೆ ಅವರು ತಂಡಕ್ಕೆ ಮರಳಿದ್ದಾರೆ. ಇದರಿಂದಾಗಿ ಮಯಂಕ್ ಬಳಗದಲ್ಲಿ ಆತ್ಮವಿಶ್ವಾಸ ಮೂಡಿದೆ. ಹೊಸ ಪ್ರತಿಭೆ ನಿಕಿನ್ ಜೋಸ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ವಯೋಮಿತಿಯ ಕ್ರಿಕೆಟ್‌ನಲ್ಲಿ ಉತ್ತಮವಾಗಿ ಆಡಿರುವ ನಿಕಿನ್ ಅವಕಾಶಕ್ಕಾಗಿ ಕಾದಿದ್ದಾರೆ.

ರೋನಿತ್ ಜೊತೆಗೆ ವಿದ್ವತ್ ಕಾವೇರಪ್ಪ, ಕೌಶಿಕ್ ಅವರು ವೇಗದ ವಿಭಾಗದ ಪ್ರಮುಖರಾಗಿದ್ದಾರೆ. ಆಲ್‌ರೌಂಡರ್‌ಗಳಾಗಿರುವ ಕೆ. ಗೌತಮ್ ಹಾಗೂ ಶ್ರೇಯಸ್ ಗೋಪಾಲ್ ಅವರ ಮೇಲೆ ನಿರೀಕ್ಷೆಯ ಭಾರವಿದೆ.

ದೇವದತ್ತ ಪಡಿಕ್ಕಲ್ ಗಾಯದಿಂದ ಸಂಪೂರ್ಣ ಚೇತರಿಸಿಕೊಂಡಿಲ್ಲ. ಆದ್ದರಿಂದ ಅವರನ್ನು ಆಯ್ಕೆಗೆ ಪರಿಗಣಿಸಿರಲಿಲ್ಲ. ಇದರಿಂದಾಗಿ ಮಯಂಕ್ ಹಾಗೂ ಸಮರ್ಥ್ ಇನಿಂಗ್ಸ್ ಆರಂಭಿಸುವುದು ಬಹುತೇಕ ಖಚಿತ. ಕೀಪಿಂಗ್ ಮತ್ತು ಬ್ಯಾಟಿಂಗ್‌ನಲ್ಲಿ ಲಯಕ್ಕೆ ಮರಳಲು ಬಿ.ಆರ್. ಶರತ್ ಅವರಿಗೆ ಮತ್ತೊಂದು ಅವಕಾಶ ಲಭಿಸಿದೆ.

‘ಅನುಭವಿ ಹಾಗೂ ಯುವ ಆಟಗಾರರು ತಂಡದಲ್ಲಿದ್ದಾರೆ. ಉತ್ತಮ ಫಲಿತಾಂಶ ಪಡೆಯುವ ವಿಶ್ವಾಸವಿದೆ. ಬೌಲಿಂಗ್‌ನಲ್ಲಿ ವಿದ್ವತ್ ಕಾವೇರಪ್ಪ, ಬ್ಯಾಟರ್ ನಿಕಿನ್ ಜೋಸ್ ಹೊಸ ಭರವಸೆಯಾಗಿದ್ದಾರೆ’ ಎಂದು ತಂಡದ ಕೋಚ್ ಪಿ.ವಿ. ಶಶಿಕಾಂತ್ ‘ಪ್ರಜಾವಾಣಿ’ಗೆ ತಿಳಿಸಿದರು.

ದಿಪ್ಪು ಸಂಗ್ಮಾ ನಾಯಕತ್ವದ ಮೇಘಾಲಯ ತಂಡವು ತನಗಿರುವ ಅಲ್ಪ ಅನುಭವ ಬಲದಿಂದಲೇ ಕರ್ನಾಟಕ ತಂಡಕ್ಕೆ ಸವಾಲೊಡ್ಡುವ ಛಲದಲ್ಲಿದೆ.

ಕರ್ನಾಟಕವು ಈ ಹಿಂದೆ ನಾಲ್ಕು ಬಾರಿ ಪ್ರಶಸ್ತಿ ಜಯಿಸಿದೆ. 2019–20ರಲ್ಲಿ ಗೆದ್ದ ನಂತರ ಮತ್ತೆ ಟ್ರೋಫಿ ಜಯಿಸಿಲ್ಲ.

ಪಂದ್ಯ ಆರಂಭ: ಬೆಳಿಗ್ಗೆ 8.30

ಐಎಸ್‌ಎಲ್: ಬಿಎಫ್‌ಸಿಗೆ ನಿರಾಸೆ

• ಮಹಮ್ಮದ್ ನೂಮಾನ್

ಬಿಎಫ್‌ಸಿ ತಂಡದ ಸುನಿಲ್ ಚೆಟ್ರಿ ಅವರ ಗೋಲು ಗಳಿಸುವ ಪ್ರಯತ್ನವನ್ನು ಈಸ್ಟ್ ಬೆಂಗಾಲ್ ಗೋಲ್‌ಕೀಪರ್ ತಡೆಯಲು ಮುಂದಾದ ಕ್ಷಣ –ಪ್ರಜಾವಾಣಿ ಚಿತ್ರ/ ಎಸ್.ಕೆ.ದಿನೇಶ್

ಬೆಂಗಳೂರು: ಸಿಕ್ಕ ಅವಕಾಶಗಳನ್ನು ಬಳಸಿಕೊಳ್ಳುವಲ್ಲಿ ವಿಫಲವಾದ ಬೆಂಗಳೂರು ಎಫ್‌ಸಿ ತಂಡ, ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ತವರು ನೆಲದಲ್ಲೇ ನಿರಾಸೆ ಅನುಭವಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ರೋಚಕ ಹಣಾಹಣಿಯಲ್ಲಿ ಈಸ್ಟ್ ಬೆಂಗಾಲ್ 1–0 ರಲ್ಲಿ ಜಯಿಸಿತು. 69ನೇ ನಿಮಿಷದಲ್ಲಿ ಗೋಲು ಗಳಿಸಿದ ಬ್ರೆಜಿಲ್‌ನ ಸ್ಟ್ರೈಕರ್ ಕ್ಲೀಟನ್ ಸಿಲ್ವಾ, ಬೆಂಗಾಲ್ ಗೆಲುವಿಗೆ ಕಾರಣರಾದರು.

ಈ ಋತುವಿನಲ್ಲಿ ಬಿಎಫ್‌ಸಿಗೆ ಎದುರಾದ ಸತತ ಮೂರನೇ ಸೋಲು ಇದು. ಐದು ಪಂದ್ಯಗಳಿಂದ ನಾಲ್ಕು ಪಾಯಿಂಟ್ಸ್ ಹೊಂದಿರುವ ತಂಡ, ಒಂಬತ್ತನೇ ಸ್ಥಾನಕ್ಕೆ ಕುಸಿತ ಕಂಡಿತು.

69ನೇ ನಿಮಿಷದಲ್ಲಿ ಬಿಎಫ್‌ಸಿ ಆಟಗಾರರನ್ನುತಪ್ಪಿಸಿಕೊಂಡು ಅಂಗಳದ ಎಡಭಾಗದಲ್ಲಿ ಚೆಂಡಿನೊಂದಿಗೆ ಮುನ್ನುಗ್ಗಿದ ನೋರೆಮ್ ಮಹೇಶ್ ಸಿಂಗ್ ಅವರು ಬಲಭಾಗದಲ್ಲಿ ನಿಂತಿದ್ದ ಕ್ಲೀಟನ್‌ಗೆ ಪಾಸ್ ನೀಡಿದರು. ಬಿಎಫ್‌ಸಿ ಡಿಫೆಂಡರ್‌ಗಳು ತಮ್ಮತ್ತ ಧಾವಿಸುವ ಮುನ್ನವೇ ಕ್ಲೀಟನ್, ಗೋಲ್‌ಕೀಪರ್ ಗುರುಪ್ರೀತ್ ಅವರನ್ನು ತಪ್ಪಿಸಿ ಗುರಿ ಸೇರಿಸಿದರು.ಆ ಬಳಿಕ ಆತಿಥೇಯ ತಂಡ ಸಮಬಲದ ಗೋಲಿಗೆ ನಡೆಸಿದ ಪ್ರಯತ್ನಕ್ಕೆ ಫಲ ಲಭಿಸಲಿಲ್ಲ. ಬಿಎಫ್‌ಸಿ ಗೆಲುವಿನ ಹಾದಿಗೆ ಮರಳಬಹುದು ಎಂಬ ವಿಶ್ವಾಸದೊಂದಿಗೆ ಕಂಠೀರವ ಕ್ರೀಡಾಂಗಣದಲ್ಲಿ ನೆರೆದಿದ್ದ ಸಾವಿರಾರು ಪ್ರೇಕ್ಷಕರು ನಿರಾಸೆ ಅನುಭವಿಸಿದರು.

ಎರಡನೇ ಅವಧಿಗೆ ಹೋಲಿಸಿದರೆ ಮೊದಲ ಅವಧಿಯ ಆಟ ಹೆಚ್ಚಿನ ವೇಗದಿಂದ ಕೂಡಿತ್ತು. ಈಸ್ಟ್ ಬೆಂಗಾಲ್ ತಂಡದವರು ಆರಂಭದ 10 ನಿಮಿಷಗಳಲ್ಲಿ ಮೂರು ಲಾಂಗ್ ರೇಂಜ್ ಹೊಡೆತಗಳ ಮೂಲಕ ಪಂದ್ಯಕ್ಕೆ ರೋಚಕತೆ ತುಂಬಿದರು. ಅವುಗಳಲ್ಲಿ ಎರಡನ್ನು ಗುರುಪ್ರೀತ್ ತಡೆದರೆ, ಮತ್ತೊಂದು ಹೊರಕ್ಕೆ ಹೋಯಿತು.

ಆತಿಥೇಯ ತಂಡಕ್ಕೆ ಮೊದಲ ಅತ್ಯುತ್ತಮ ಅವಕಾಶ ಲಭಿಸಿದ್ದು 13 ನೇ ನಿಮಿಷದಲ್ಲಿ. ತಮಗೆ ದೊರೆತ ಉತ್ತಮ ಪಾಸ್‌ನಲ್ಲಿ ಸುನಿಲ್ ಚೆಟ್ರಿಗೆ ಚೆಂಡಿನ ಮೇಲೆ ಪೂರ್ಣ ನಿಯಂತ್ರಣ ಸಾಧಿಸಲು ಆಗಲಿಲ್ಲ. 23 ನೇ ನಿಮಿಷದಲ್ಲಿ ದೊರೆತ ಫ್ರೀಕಿಕ್ ಅವಕಾಶದಲ್ಲಿ ಜಾವಿ ಒದ್ದ ಚೆಂಡು ಗೋಲು ಪೆಟ್ಟಿಗೆಯ ಮೇಲಿಂದ ಹೊರಕ್ಕೆ ಹೋಯಿತು. 30ನೇ ನಿಮಿಷದಲ್ಲಿ ಎರಡೂ ತಂಡಗಳಿಗೆ ಒಳ್ಳೆಯ ಅವಕಾಶ ದೊರೆತರೂ ಕ್ಲೀಟನ್ ಮತ್ತು ಬಿಎಫ್‌ಸಿಯ ರಾಯ್ ಕೃಷ್ಣ ಗುರಿ ಸೇರಿಸುವಲ್ಲಿ ಎಡವಿದರು.

ಕಬಡ್ಡಿ: ಯು ಮುಂಬಾಗೆ ಮಣಿದ ಪುಣೇರಿ ಪಲ್ಟನ್

ಪುಣೆ: ಗುಮನ್ ಸಿಂಗ್ ಅವರ ಮಿಂಚಿನ ಆಟದ ನೆರವಿನಿಂದ ಯು ಮುಂಬಾ ತಂಡದವರು ಪ್ರೊ ಕಬಡ್ಡಿ ಲೀಗ್‌ನಲ್ಲಿ 34–33 ರಲ್ಲಿ ಪುಣೇರಿ ಪಲ್ಟನ್ ತಂಡವನ್ನು ಮಣಿಸಿದರು.

ಬಾಳೇವಾಡಿಯ ಶಿವಛತ್ರಪತಿ ಕ್ರೀಡಾ ಸಂಕೀರ್ಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಗುಮನ್ ಅವರು 13 ಪಾಯಿಂಟ್ಸ್ ಗಳಿಸಿ ಮುಂಬಾ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಆಶೀಶ್ 6 ಹಾಗೂ ರಿಂಕು 4 ಪಾಯಿಂಟ್ಸ್ ತಂದಿತ್ತರು.

ಆರಂಭದಿಂದಲೇ ತುರುಸಿನ ಹೋರಾಟ ನಡೆದ ಪಂದ್ಯದ ಪ್ರಥಮಾರ್ಧದಲ್ಲಿ ಎರಡೂ ತಂಡಗಳು 15–15 ರಲ್ಲಿ ಸಮಬಲ ಸಾಧಿಸಿದ್ದವು. ಪಲ್ಟನ್ ಪರ ಮೋಹಿತ್ ಗೋಯತ್ 13 ಹಾಗೂ ಅಸ್ಲಂ ಇನಾಂದಾರ್ 8 ಪಾಯಿಂಟ್ಸ್ ಗಳಿಸಿದರು. ದಿನದ ಮೊದಲ ಪಂದ್ಯದಲ್ಲಿ ಯು.ಪಿ.ಯೋಧಾಸ್ 40–34 ರಲ್ಲಿ ಹರಿಯಾಣ ಸ್ಟೀಲರ್ಸ್ ತಂಡವನ್ನು ಮಣಿಸಿತು.

ಪಾಯಿಂಟ್ಸ್ ಪಟ್ಟಿ
(ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಪುಣೇರಿ	13	7	4	2	44
ಬೆಂಗಳೂರು	12	7	4	1	41
ಮುಂಬಾ	12	7	5	0	38
ಜೈಪುರ	11	7	4	0	37
ಡೆಲ್ಲಿ	12	6	6	0	35
ಯುಪಿ	12	5	5	2	35

ಇಂದಿನ ಪಂದ್ಯಗಳು

ಬೆಂಗಾಲ್ ವಾರಿಯರ್ಸ್–ಗುಜರಾತ್ ಜೈಂಟ್ಸ್

ತೆಲುಗು ಟೈಟನ್ಸ್– ಯು.ಪಿ. ಯೋಧಾಸ್

ಜೈಪುರ ಪಿಂಕ್ ಪ್ಯಾಂಥರ್ಸ್–ದಬಂಗ್ ಡೆಲ್ಲಿ

ಎಲ್‌ಐಸಿ ಲಾಭ ₹ 15,952 ಕೋಟಿ

ಮುಂಬೈ (ಪಿಟಿಐ): ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಸೆಪ್ಟೆಂಬರ್ ತ್ರೈಮಾಸಿಕದ ಲಾಭ ಹಲವು ಪಟ್ಟು ಹೆಚ್ಚಾಗಿದೆ.

ಈ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಎಲ್‌ಐಸಿ ₹ 15,952 ಕೋಟಿ ಲಾಭ ಗಳಿಸಿದೆ. ಎಲ್‌ಐಸಿ ಹೂಡಿಕೆಗಳು ಹೆಚ್ಚು ಲಾಭ ತಂದುಕೊಟ್ಟಿದ್ದು ಈ ಹೆಚ್ಚಳಕ್ಕೆ ಮುಖ್ಯ ಕಾರಣ.

ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಎಲ್‌ಐಸಿ ₹ 1,434 ಕೋಟಿ ಲಾಭ ಗಳಿಸಿತ್ತು.

ಈ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಎಲ್‌ಐಸಿ ವರಮಾನವು ₹22.29 ಲಕ್ಷ ಕೋಟಿಗೆ ಏರಿಕೆ ಆಗಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ವರಮಾನವು ₹ 18.72 ಲಕ್ಷ ಕೋಟಿ ಆಗಿತ್ತು ಎಂದು ಎಲ್‌ಐಸಿ ಮಾಹಿತಿ ನೀಡಿದೆ.

ಮಹೀಂದ್ರ ಲಾಭ ಶೇ 44ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯ ಸೆಪ್ಟೆಂಬರ್ ತ್ರೈಮಾಸಿಕದ ಫಲಿತಾಂಶ ಪ್ರಕಟವಾಗಿದ್ದು, ಕಂಪನಿಯ ಲಾಭವು ಶೇಕಡ 44ರಷ್ಟು ಏರಿಕೆ ಆಗಿದೆ.

ಕಂಪನಿಯು ಜುಲೈ–ಸೆಪ್ಟೆಂಬರ್ ಅವಧಿಯಲ್ಲಿ ₹ 2,773 ಕೋಟಿ ಲಾಭ ಗಳಿಸಿದೆ. ವಾಹನ ಹಾಗೂ ಕೃಷಿ ಉಪಕರಣ ವಿಭಾಗಗಳಲ್ಲಿ ಒಳ್ಳೆಯ ವಹಿವಾಟು ನಡೆದಿದ್ದು ಲಾಭ ಹೆಚ್ಚಳಕ್ಕೆ ನೆರವಾಗಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹ 1,929 ಕೋಟಿ ಲಾಭ ಗಳಿಸಿತ್ತು. ಈ ಬಾರಿ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕಂಪನಿಯ ವರಮಾನವು ₹ 29,870 ಕೋಟಿಗೆ ಏರಿದೆ.

ಷೇರುಪೇಟೆ ವಹಿವಾಟು (▲ 1181)



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,028
ಇಂದಿನ ಅಂತ್ಯ	18,349
▲	321
ದಿನದ ಗರಿಷ್ಠ	18,362

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹530
12 ಮೊಟ್ಟೆಗೆ	₹68
ಮೈಸೂರು	
100 ಮೊಟ್ಟೆಗೆ	₹530

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹312-592
ದ್ವಿತಳಿ (ಬಿ.ವಿ)	₹470-708

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1520 (1500)
ಸೋಯಾ (ರಿಫೈನ್ಡ್)	₹1387 (1355)
ಸೂರ್ಯಕಾಂತಿ (ರಿಫೈನ್ಡ್)	₹1570 (1580)
ಪಾಮೋಲಿನ್	₹995 (980)

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹146.50
ಆರ್‌ಎಸ್‌ಎಸ್-5	₹138
ಗುಡ್ ಲಾಟ್	₹131

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹14300
ಎಸಿ	₹7000
ಆರ್‌ಪಿ	₹8500
ಆರ್‌ಸಿ	₹4530

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಪಾಡ್‌ಕಾಸ್ಟ್: ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8 ಪ್ರಚಲಿತ: ಬೆಳಿಗ್ಗೆ 9. ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ಕನ್ನಡ ಧ್ವನಿ
ನಾಳೆ

ಶಶಿರಾಜ್ ರಾವ್ ಕಾವೂರು,
ವಕೀಲರು, ರಂಗಕರ್ಮಿ
ಸೆಲೆಬ್ರಿಟಿ LIVE
ಬೆಳಿಗ್ಗೆ 11ರಿಂದ
ನೆಮ್ಮದಿ – ಯುವರ್ ಆನರ್...

ಕೈಗಾರಿಕಾ ಉತ್ಪಾದನೆ ಏರಿಕೆ

ನವದೆಹಲಿ (ಪಿಟಿಐ): ದೇಶದ ಕೈಗಾರಿಕಾ ಉತ್ಪಾದನೆಯ ಪ್ರಮಾಣವು ಸೆಪ್ಟೆಂಬರ್‌ನಲ್ಲಿ ಶೇಕಡ 3.1ರಷ್ಟು ಏರಿಕೆ ಕಂಡಿದೆ.

ತಯಾರಿಕೆ, ಗಣಿ, ಇಂಧನ ವಲಯಗಳಲ್ಲಿ ಉತ್ತಮ ಬೆಳವಣಿಗೆ ಕಂಡಿದ್ದು ಇದಕ್ಕೆ ಕಾರಣ.

ಆಗಸ್ಟ್‌ನಲ್ಲಿ ಕೈಗಾರಿಕಾ ಉತ್ಪಾದನೆಯು ಶೇ (−)0.7ರಷ್ಟು ಕುಸಿದಿತ್ತು. ಹಿಂದಿನ ವರ್ಷದ ಸೆಪ್ಟೆಂಬರ್‌ನಲ್ಲಿ ಶೇ 4.4ರಷ್ಟು ಬೆಳವಣಿಗೆ ದಾಖಲಾಗಿತ್ತು.

ಐ.ಟಿ., ಲೋಹ, ಹಣಕಾಸು ಕಂಪನಿಗಳ ಷೇರು ಮೌಲ್ಯ ಹೆಚ್ಚಳ

ಗರಿಷ್ಠ ಮಟ್ಟದಲ್ಲಿ ಕೊನೆಗೊಂಡ ಸೆನ್ಸೆಕ್ಸ್

ಮುಂಬೈ (ಪಿಟಿಐ): ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಶುಕ್ರವಾರದ ವಹಿವಾಟಿನಲ್ಲಿ 1,181 ಅಂಶ ಜಿಗಿತ ಕಂಡು ಸಾರ್ವಕಾಲಿಕ ಗರಿಷ್ಠ ಮಟ್ಟದಲ್ಲಿ ವಹಿವಾಟು ಅಂತ್ಯಗೊಳಿಸಿತು.

ಅಮೆರಿಕದ ಹಣದುಬ್ಬರ ಪ್ರಮಾಣವು ಇಳಿಕೆ ಕಂಡಿರುವುದರಿಂದ ಅಲ್ಲಿನ ಕೇಂದ್ರೀಯ ಬ್ಯಾಂಕ್ ಬಡ್ಡಿದರ ಹೆಚ್ಚಳ ಮಾಡುವ ವೇಗವನ್ನು ತುಸು ತಗ್ಗಿಸುವ ನಿರೀಕ್ಷೆ ವ್ಯಕ್ತವಾಗಿದೆ. ಹೀಗಾಗಿ ಜಾಗತಿಕ ಮಾರುಕಟ್ಟೆಗಳಲ್ಲಿ ಸಕಾರಾತ್ಮಕ ವಹಿವಾಟು ನಡೆದು, ಅದು ದೇಶಿ ಷೇರುಪೇಟೆಗಳ ಮೇಲೆಯೂ ಪ್ರಭಾವ ಬೀರಿತು.

ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಚೇತರಿಕೆ ಮತ್ತು ವಿದೇಶಿ ಬಂಡವಾಳ ಒಳಹರಿವು ವಹಿವಾಟಿನ ಮೇಲೆ ಪ್ರಭಾವ ಬೀರಿದವು ಎಂದು ವರ್ತಕರು ಹೇಳಿದ್ದಾರೆ.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 321 ಅಂಶ ಹೆಚ್ಚಾಗಿ 18,349 ಅಂಶಗಳಿಗೆ ತಲುಪಿತು. ಬಿಎಸ್‌ಇನಲ್ಲಿ ಎಚ್‌ಡಿಎಫ್‌ಸಿ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್ ಷೇರು ಮೌಲ್ಯ ಶೇ 5.84ರಷ್ಟು ಏರಿಕೆ ಕಂಡಿತು.

ಮಾರುಕಟ್ಟೆಗಳು ಸಕಾರಾತ್ಮಕ ಚಲನೆಯನ್ನು ಕಾಯ್ದುಕೊಂಡಿವೆ. ಅಮೆರಿಕದ ಮಾರುಕಟ್ಟೆಯಲ್ಲಿ ಕಂಡುಬಂದ ಚೇತರಿಕೆಯು ದೇಶಿ ಮಾರುಕಟ್ಟೆಗಳ ಮೇಲೆ ಪ್ರಭಾವ ಬೀರಿದವು ಎಂದು ರೆಲಿಗೇರ್ ಬ್ರೋಕಿಂಗ್ ಲಿಮಿಟೆಡ್‌ನ ಉಪಾಧ್ಯಕ್ಷ ಅಜಿತ್ ಮಿಶ್ರಾ ಹೇಳಿದ್ದಾರೆ.

ಐ.ಟಿ., ಲೋಹ, ಹಣಕಾಸು ಮತ್ತು ತಂತ್ರಜ್ಞಾನ ವಲಯಗಳು ಗಳಿಕೆ ಕಂಡರೆ, ಆಟೊ, ವಿದ್ಯುತ್ ಮತ್ತು ಎಫ್‌ಎಂಸಿಜಿ ವಲಯಗಳು ಹೆಚ್ಚು ನಷ್ಟ ಕಂಡವು.

ಅಮೆರಿಕದ ಗ್ರಾಹಕ ದರ ಸೂಚ್ಯಂಕ ಆಧರಿಸಿದ ಹಣದುಬ್ಬರವು ಸೆಪ್ಟೆಂಬರ್‌ನಲ್ಲಿ ಶೇ 8.2ರಷ್ಟು ಇದ್ದಿದ್ದು ಅಕ್ಟೋಬರ್‌ನಲ್ಲಿ ಶೇ 7.4ಕ್ಕೆ ಇಳಿಕೆ ಕಂಡಿದೆ. ಇದರಿಂದಾಗಿ ಜಾಗತಿಕ ಮಟ್ಟದಲ್ಲಿ ಹಣಕಾಸು ಮಾರುಕಟ್ಟೆಗಳಲ್ಲಿ ಉತ್ತಮ ಗಳಿಕೆ ಕಂಡುಬಂತು.

ಹಾಂಗ್‌ಕಾಂಗ್ ಷೇರುಪೇಟೆ ಶೇ 7.70ರಷ್ಟು ಗಳಿಕೆ ಕಂಡುಕೊಂಡಿತು. ಟೋಕಿಯೊ, ಸೋಲ್, ಶಾಂಘೈ ಷೇರುಪೇಟೆಗಳಲ್ಲಿ ಸಹ ವಹಿವಾಟು ಏರಿಕೆ ಕಂಡಿತು. ಯುರೋಪ್ ಮಾರುಕಟ್ಟೆಗಳಲ್ಲಿಯೂ ಸಕಾರಾತ್ಮಕ ವಹಿವಾಟು ನಡೆಯಿತು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರ ಶೇ 2.37ರಷ್ಟು ಹೆಚ್ಚಾಗಿ ಒಂದು ಬ್ಯಾರಲ್‌ಗೆ 95.89 ಡಾಲರ್‌ಗೆ ತಲುಪಿತು.

ರೂಪಾಯಿ ಗಳಿಕೆ: ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 62 ಪೈಸೆ ಹೆಚ್ಚಾಗಿ ಒಂದು ಡಾಲರ್‌ಗೆ ₹80.79ರಂತೆ ವಿನಿಮಯಗೊಂಡಿತು.

ಫ್ಯೂಚರ್ ರಿಟೇಲ್ ಖರೀದಿಗೆ ಅದಾನಿ, ರಿಲಯನ್ಸ್ ಆಸಕ್ತಿ

ಮುಂಬೈ (ರಾಯಿಟರ್ಸ್): ಸಾಲದ ಸುಳಿಯಲ್ಲಿ ಸಿಲುಕಿರುವ ಫ್ಯೂಚರ್ ರಿಟೇಲ್ ಕಂಪನಿಯ ಸ್ವಾಧೀನಕ್ಕೆ ಗೌತಮ್ ಅದಾನಿ ನೇತೃತ್ವದ ಅದಾನಿ ಸಮೂಹ ಹಾಗೂ ಮುಕೇಶ್ ಅಂಬಾನಿ ಒಡೆತನದ ರಿಲಯನ್ಸ್ ಇಂಡಸ್ಟ್ರೀಸ್ ಲಿ. ಆಸಕ್ತಿ ತೋರಿಸಿವೆ.

ರಿಲಯನ್ಸ್ ರಿಟೇಲ್ ವೆಂಚರ್ಸ್ ಹಾಗೂ ಅದಾನಿ ಏರ್‌ಪೋರ್ಟ್ ಹೋಲ್ಡಿಂಗ್ಸ್ ಮತ್ತು ಫ್ಲೆಮಿಂಗೊ ಸಮೂಹದ ಜಂಟಿ ಸಹಭಾಗಿತ್ವದ ಏಪ್ರಿಲ್ ಮೂನ್ ರಿಟೇಲ್ ಪ್ರೈ. ಲಿ., ಫ್ಯೂಚರ್ ರಿಟೇಲ್ ಕಂಪನಿಯ ಖರೀದಿಗೆ ಆಸಕ್ತಿ ವ್ಯಕ್ತಪಡಿಸಿರುವ ಕಂಪನಿಗಳು. ಇವೆರಡು ಅಲ್ಲದೆ 13 ಇತರ ಕಂಪನಿಗಳೂ ಈ ಖರೀದಿಗೆ ಆಸಕ್ತಿ ತೋರಿಸಿವೆ.

ಈ ಕುರಿತು ರಿಲಯನ್ಸ್ ಇಂಡಸ್ಟ್ರೀಸ್, ಅದಾನಿ ಸಮೂಹ ಹಾಗೂ ಫ್ಯೂಚರ್ ರಿಟೇಲ್ ಕಂಪನಿಯ ಸಾಲದ ಸಮಸ್ಯೆಯ ಪರಿಹಾರಕ್ಕೆ ನ್ಯಾಯಾಲಯ ನೇಮಕ ಮಾಡಿರುವ ವೃತ್ತಿಪರರಿಂದ ಪ್ರತಿಕ್ರಿಯೆ ಸಿಕ್ಕಿಲ್ಲ.

ಫ್ಯೂಚರ್ ರಿಟೇಲ್ ಕಂಪನಿಯ ಖರೀದಿಗೆ ಆಸಕ್ತಿ ತೋರಿ ಅರ್ಜಿ ಸಲ್ಲಿಸಲು ಗಡುವು ಈ ತಿಂಗಳ ಆರಂಭಕ್ಕೆ ಕೊನೆಗೊಂಡಿದೆ.

ಫ್ಯೂಚರ್ ರಿಟೇಲ್ ಕಂಪನಿಯು ಒಂದು ಸಂದರ್ಭದಲ್ಲಿ ದೇಶದ ಎರಡನೆಯ ಅತಿದೊಡ್ಡ ರಿಟೇಲ್ ಕಂಪನಿಯಾಗಿತ್ತು.

ಇದು ಸಾಲದ ಕಂತು ಪಾವತಿಸಲು ವಿಫಲವಾದ ನಂತರದಲ್ಲಿ ಬ್ಯಾಂಕ್‌ಗಳು ನ್ಯಾಯಾಲಯದ ಮೊರೆ ಹೋದವು.

ಶಾಲಿಮಾರ್ ಕಾರ್ಪೊರೇಷನ್ ಲಿಮಿಟೆಡ್, ನಾಲ್ವಾ ಸ್ಟೀಲ್ ಆ್ಯಂಡ್ ಪವರ್, ಯುನೈಟೆಡ್ ಬಯೋಟೆಕ್, ಡಬ್ಲ್ಯುಎಚ್ ಸ್ಮಿತ್ ಟ್ರಾವೆಲ್, ಕ್ಯಾಪ್ರಿ ಗ್ಲೋಬಲ್ ಹೋಲ್ಡಿಂಗ್ಸ್ ಕಂಪನಿಗಳು ಕೂಡ ಖರೀದಿಗೆ ಆಸಕ್ತಿ ತೋರಿವೆ.

ಮುಂಬೈ ಧಾರಣೆ

ಶೇಂಗಾ

11–11–2022

ಜಾವಾ 70/80(ಹೊಸ)	11100-11150
ಜಾವಾ 80/90(ಹೊಸ)	10600-10650
ದಪ್ಪ ಮಧ್ಯಪ್ರದೇಶ(ಹೊಸ)	9300-9400
ದಪ್ಪ ಗುಜರಾತ್(ಹೊಸ)	9900-10000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1530 (1510)
ಒಂದು ವಾರದ ಡೆಲಿವರಿ	1525 (1505)
ಸೋಯಾ ಕಚ್ಚಾ	1360 (1342)
ಪಾಮ್ ವಾರದ ಡೆಲಿವರಿ	993 (978)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
52,150 (51,500)
ಬೆಳ್ಳಿ ಕೆ.ಜಿ 61,400 (61,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಅರ್ಬನ್ ಕ್ರೂಸರ್ ಮಾರಾಟ ಸ್ಥಗಿತ

ನವದೆಹಲಿ (ಪಿಟಿಐ): ಟೊಯೋಟ ಕಿರ್ಲೋಸ್ಕರ್ ಮೋಟರ್ ಕಂಪನಿಯು ದೇಶದಲ್ಲಿ ಅರ್ಬನ್ ಕ್ರೂಸರ್ ಕಾಂಪ್ಯಾಕ್ಟ್ ಎಸ್‌ಯುವಿ ಮಾರಾಟ ಸ್ಥಗಿತಗೊಳಿಸಿರುವುದಾಗಿ ಶುಕ್ರವಾರ ತಿಳಿಸಿದೆ.

ಕಂಪನಿಯು ಗ್ರಾಹಕರ ಆದ್ಯತೆಗಳಲ್ಲಿ ಆಗುತ್ತಿರುವ ಬದಲಾವಣೆಯನ್ನು ಅರಿಯಲು ಮಾರುಕಟ್ಟೆ ಅಧ್ಯಯನ ನಡೆಸುತ್ತಿರುತ್ತದೆ. ಗ್ರಾಹಕರ ಅನುಭವವನ್ನು ಇನ್ನಷ್ಟು ಉತ್ತಮಪಡಿಸಲು ಮತ್ತು ಮಾದರಿಗಳ ಬಗ್ಗೆ ಗ್ರಾಹಕರು ನೀಡಿರುವ ಪ್ರತಿಕ್ರಿಯೆಯ ಆಧಾರದ ಮೇಲೆ ಈ ನಿರ್ಧಾರಕ್ಕೆ ಬರಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಮಾರುತಿ ಸುಜುಕಿ ಕಂಪನಿಯ ವಿಟಾರಾ ಬ್ರೆಜಾ ಮಾದರಿಯನ್ನು 2020ರ ಸೆಪ್ಟೆಂಬರ್‌ನಲ್ಲಿ ಅರ್ಬನ್ ಕ್ರೂಸರ್ ಹೆಸರಿನಲ್ಲಿ ಮಾರುಕಟ್ಟೆಗೆ ಪರಿಚಯಿಸಲಾಗಿತ್ತು. ಈವರೆಗೆ ದೇಶದಲ್ಲಿ ಒಟ್ಟು 65 ಸಾವಿರ ‘ಅರ್ಬನ್ ಕ್ರೂಸರ್’ ವಾಹನಗಳು ಮಾರಾಟ ಆಗಿವೆ.

ಎರಡು ಮತ್ತು ಮೂರನೇ ಶ್ರೇಣಿಯ ಮಾರುಕಟ್ಟೆಗಳಲ್ಲಿ ಮೊದಲ ಬಾರಿಗೆ ಟೊಯೋಟ ವಾಹನ ಖರೀದಿಸುವಂತೆ ಮಾಡುವಲ್ಲಿ ಈ ಮಾದರಿಯು ಪ್ರಮುಖ ಪಾತ್ರ ವಹಿಸಿತ್ತು. ಈ ಮೂಲಕ ಹೊಸ ಗ್ರಾಹಕರನ್ನು ತಲುಪುವ ಕಂಪನಿಯ ಪ್ರಯತ್ನಕ್ಕೆ ಉತ್ತೇಜನ ದೊರೆತಿತ್ತು ಎಂದು ಕಂಪನಿ ತಿಳಿಸಿದೆ.

‘ಫ್ರೆಂಡ್‌ಶೋರಿಂಗ್’ ಮಂತ್ರ ಪಠಿಸಿದ ಅಮೆರಿಕ

ಜಾನೆಟ್ ಯೆಲನ್

ನವದೆಹಲಿ (ಪಿಟಿಐ): ಸಮಾನ ಮೌಲ್ಯಗಳನ್ನು ಪ್ರತಿಪಾದಿಸುವ ದೇಶಗಳ ನಡುವೆ ವಾಣಿಜ್ಯ ವಹಿವಾಟು ಹಾಗೂ ಹೂಡಿಕೆಗಳು ಆಗಬೇಕು ಎಂಬ ಕಾರ್ಯತಂತ್ರವನ್ನು ಅಮೆರಿಕದ ಹಣಕಾಸು ಸಚಿವೆ ಜಾನೆಟ್ ಯೆಲನ್ ಅವರು ಪ್ರತಿಪಾದಿಸಿದ್ದಾರೆ.

ಯೆಲನ್ ಅವರು ಸಚಿವೆಯಾದ ನಂತರದಲ್ಲಿ ಮೊದಲ ಬಾರಿ ಭಾರತಕ್ಕೆ ಭೇಟಿ ನೀಡಿದ್ದಾರೆ. ಅವರು ಈ ಕಾರ್ಯತಂತ್ರವನ್ನು ಭಾರತದ ಮುಂದಿರಿಸಿರುವುದು ಚೀನಾದ ಮಹತ್ವವನ್ನು ತಗ್ಗಿಸುವ ಉದ್ದೇಶ ಹೊಂದಿದೆ ಎನ್ನಲಾಗಿದೆ.

ಕೋವಿಡ್ ಸಾಂಕ್ರಾಮಿಕದ ನಂತರದಲ್ಲಿ ವಿಶ್ವದ ವಾಣಿಜ್ಯ ವಹಿವಾಟು ಮತ್ತು ಆರ್ಥಿಕ ನಕ್ಷೆ ಬದಲಾಗಿದೆ. ಅಮೆರಿಕದ ಬೈಡನ್ ಆಡಳಿತವು, ಕಚ್ಚಾ ವಸ್ತುಗಳ ಕೊಡು–ಕೊಳ್ಳುವಿಕೆಯು ಸಮಾನ ಮನಸ್ಕ ದೇಶಗಳ ನಡುವೆ ಆಗಬೇಕು, ತಯಾರಿಕೆಯೂ ಈ ದೇಶಗಳ ನಡುವೆ ಇರಬೇಕು ಎಂಬ ನೀತಿಯನ್ನು ಮುಂದಕ್ಕೆ ತಂದಿದೆ. ಈ ನೀತಿಯನ್ನು ಅಮೆರಿಕವು ‘ಫ್ರೆಂಡ್‌ಶೋರಿಂಗ್’ ಎಂದು ಕರೆದಿದೆ.

ಮೈಕ್ರೊಸಾಫ್ಟ್ ಕಂಪನಿಯ ಘಟಕದಲ್ಲಿ ಮಾತನಾಡಿದ ಯೆಲನ್ ಅವರು, ‘ಅಮೆರಿಕ ಮತ್ತು ಭಾರತ ಸಹಜ ಸ್ನೇಹಿತರು. ಅಸ್ಥಿರತೆ ಹಾಗೂ ಯುದ್ಧದ ಸನ್ನಿವೇಶ ಇದ್ದರೂ ಪ್ರಜಾತಂತ್ರ ವ್ಯವಸ್ಥೆಗಳು ತಮ್ಮ ಪ್ರಜೆಗಳ ಅಗತ್ಯಕ್ಕೆ ಸ್ಪಂದಿಸಬಲ್ಲವು ಎಂಬುದನ್ನು ಅಮೆರಿಕ ಮತ್ತು ಭಾರತ ಜಗತ್ತಿಗೆ ತೋರಿಸಿಕೊಡಬಲ್ಲವು’ ಎಂದರು.

ಕೆಲವು ಸರ್ಕಾರಗಳು ವ್ಯಾಪಾರವನ್ನು ಜಾಗತಿಕ ರಾಜಕಾರಣದ ಅಸ್ತ್ರವನ್ನಾಗಿ ಬಳಸಿಕೊಳ್ಳುತ್ತಿವೆ. ಇಂತಹ ಸಂದರ್ಭದಲ್ಲಿ ಪೂರೈಕೆ ವ್ಯವಸ್ಥೆಯನ್ನು ಬಲಪಡಿಸಿಕೊಳ್ಳುವಲ್ಲಿ ಅಮೆರಿಕ ಮತ್ತು ಭಾರತದ ಹಿತಾಸಕ್ತಿಗಳು ಇವೆ ಎಂದೂ ಯೆಲನ್ ಹೇಳಿದರು.

‘ಆಫ್‌ಶೋರಿಂಗ್’ನಿಂದ ‘ಫ್ರೆಂಡ್‌ಶೋರಿಂಗ್’ ಕಡೆಗೆ

ಪಶ್ಚಿಮದ ಹಲವು ದೇಶಗಳು ವೆಚ್ಚ ತಗ್ಗಿಸಲು ತಯಾರಿಕೆ ಹಾಗೂ ಇತರ ಕೆಲವು ಕೆಲಸಗಳನ್ನು ಕಡಿಮೆ ವೆಚ್ಚಕ್ಕೆ ಕಾರ್ಮಿಕರು ಸಿಗುವ ಬೇರೆ ದೇಶಗಳಿಗೆ ವರ್ಗಾವಣೆ ಮಾಡಿದ್ದವು. ಇದನ್ನು ಅವು ‘ಆಫ್‌ಶೋರಿಂಗ್’ ಎಂದು ಕರೆದಿದ್ದವು.

ಆದರೆ, ಸಾಂಕ್ರಾಮಿಕದ ನಂತರದಲ್ಲಿ ಪೂರೈಕೆ ವ್ಯವಸ್ಥೆಯಲ್ಲಿ ಆದ ಅಡಚಣೆಗಳ ಕಾರಣದಿಂದಾಗಿ ಅವು ಉತ್ಪಾದನಾ ಚಟುವಟಿಕೆಗಳನ್ನು ಮತ್ತೆ ತಮ್ಮ ದೇಶಕ್ಕೆ ತರಲು ಉತ್ಸುಕವಾಗಿವೆ.

ಅಮೆರಿಕದಂತಹ ದೇಶಗಳು ಎಲ್ಲವನ್ನೂ ತಾವೇ ತಯಾರಿಸಿಕೊಳ್ಳುವ ಸ್ಥಿತಿಯಲ್ಲಿ ಇಲ್ಲ. ಹೀಗಾಗಿ ಅಮೆರಿಕವು ಈಗ ಪೂರೈಕೆ ವ್ಯವಸ್ಥೆಯನ್ನು ಕಟ್ಟಲು ಪಾಲುದಾರರನ್ನು ಹುಡುಕುತ್ತಿದೆ. ಇದನ್ನು ಅಮೆರಿಕವು ‘ಫ್ರೆಂಡ್‌ಶೋರಿಂಗ್’ ಎಂದು ಕರೆದಿದೆ.

‘ಫ್ರೆಂಡ್‌ಶೋರಿಂಗ್ ವ್ಯವಸ್ಥೆಯು ಕೆಲವು ದೇಶಗಳು ಮಾತ್ರ ಇರುವ ಗುಂಪಿಗೆ ಸೀಮಿತವಾಗುವುದಿಲ್ಲ. ನಾವು ಹಲವು ನಂಬಿಕಸ್ಥ ದೇಶಗಳನ್ನು ಜೊತೆಗೂಡಿಸಿಕೊಳ್ಳಬೇಕು. ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಹಾಗೂ ಮುಂದುವರಿದ ದೇಶಗಳು ಇದರಲ್ಲಿ ಇರುತ್ತವೆ’ ಎಂದು ಯೆಲನ್ ಹೇಳಿದರು.

‘ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಜೊತೆ ಪಾಲುದಾರಿಕೆ ಮಾಡಿಕೊಳ್ಳುವುದು, ಅಲ್ಲಿ ಸ್ಥಳೀಯ ಉದ್ಯಮಗಳನ್ನು ಬೆಳೆಸುವುದು ಮತ್ತು ಅವು ಜಾಗತಿಕ ಪೂರೈಕೆ ವ್ಯವಸ್ಥೆಯ ಭಾಗವಾಗುವಂತೆ ಮಾಡುವುದು ಫ್ರೆಂಡ್‌ಶೋರ್ ನೀತಿಯ ಭಾಗ’ ಎಂದು ಅವರು ತಿಳಿಸಿದರು.

ತಮಿಳುನಾಡಿನ ಸೌರಫಲಕ ತಯಾರಿಕಾ ಘಟಕವು, ಪೂರೈಕೆ ವ್ಯವಸ್ಥೆಯನ್ನು ಚೀನಾದ ಆಚೆಗೂ ವಿಸ್ತರಿಸಲು ನೆರವಾಗಲಿದೆ ಎಂದರು. ಈಗ ಜಾಗತಿಕ ಸೌರಫಲಕ ಉತ್ಪಾದನೆಯಲ್ಲಿ ಚೀನಾ ಶೇ 80ರಷ್ಟು ಪಾಲು ಹೊಂದಿದೆ.

ಇಂದಿನಿಂದ ನೆಟ್ಟಕಲ್ಲಪ್ಪ ಅಖಿಲ ಭಾರತ ಈಜು: 'ಸ್ಕಿನ್ಸ್' ಸ್ಪರ್ಧೆಗಳ ಆಕರ್ಷಣೆ

250ಕ್ಕೂ ಅಧಿಕ ಸ್ಪರ್ಧಿಗಳ ಪೈಪೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೆಟ್ಟಕಲ್ಲಪ್ಪ ಈಜು ಕೇಂದ್ರದ (ಎನ್‌ಎಸಿ) ದಶಮಾನೋತ್ಸವ ಅಂಗವಾಗಿ ಆಯೋಜಿಸಿರುವ 'ನೆಟ್ಟಕಲ್ಲಪ್ಪ ಅಖಿಲ ಭಾರತ ಈಜು ಚಾಂಪಿಯನ್‌ಷಿಪ್'ಗೆ ಶನಿವಾರ ಚಾಲನೆ ಲಭಿಸಲಿದ್ದು, ಪ್ರಮುಖ ಈಜುಪಟುಗಳಿಂದ ತುರುಸಿನ ಪೈಪೋಟಿ ನಿರೀಕ್ಷಿಸಲಾಗಿದೆ.

ಬೆಂಗಳೂರಿನ ಉತ್ತರಹಳ್ಳಿ ಮುಖ್ಯರಸ್ತೆ, ಪದ್ಮನಾಭನಗರದಲ್ಲಿರುವ ಈಜು ಕೇಂದ್ರದಲ್ಲಿ ನಡೆಯುವ ಕೂಟವನ್ನು ಒಲಿಂಪಿಯನ್ ಈಜುಪಟು ಸಜನ್ ಪ್ರಕಾಶ್ ಅವರು ಸಂಜೆ 6ಕ್ಕೆ ಉದ್ಘಾಟಿಸಲಿದ್ದಾರೆ. ಬೆಳಿಗ್ಗೆ 7.30 ರಿಂದಲೇ ಸ್ಪರ್ಧೆಗಳು ಆರಂಭವಾಗಲಿವೆ.

ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್' ಪತ್ರಿಕಾ ಬಳಗದ ಮಾಜಿ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಕ್ರೀಡಾ ಪೋಷಕರೂ ಆಗಿದ್ದ ಕೆ.ಎ. ನೆಟ್ಟಕಲ್ಲಪ್ಪ ಅವರ ಸ್ಮರಣಾರ್ಥ ಈ ಕೂಟ ನಡೆಯಲಿದೆ.

ಶಿವ ಶ್ರೀಧರ್

ಎರಡು ದಿನ ನಡೆಯುವ ಚಾಂಪಿಯನ್‌ಷಿಪ್‌ನಲ್ಲಿ ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಈಗಾಗಲೇ ಛಾಪು ಮೂಡಿಸಿರುವ ಶಿವ ಶ್ರೀಧರ್, ವೈಷ್ಣವ್ ಹೆಗ್ಡೆ, ಎಸ್.ಧನುಷ್ ಮತ್ತು ರಿಧಿಮಾ ವೀರೇಂದ್ರಕುಮಾರ್ ಒಳಗೊಂಡಂತೆ 250 ಕ್ಕೂ ಅಧಿಕ ಸ್ಪರ್ಧಿಗಳು ಪಾಲ್ಗೊಳ್ಳಲಿದ್ದಾರೆ.

ದಕ್ಷಿಣ ಭಾರತದ ಎಲ್ಲ ರಾಜ್ಯಗಳಿಂದ ಮಾತ್ರವಲ್ಲದೆ ಹರಿಯಾಣ, ಗುಜರಾತ್ ಮತ್ತು ಪಶ್ಚಿಮ ಬಂಗಾಳದಿಂದಲೂ ಈಜುಪಟುಗಳು ಭಾಗವಹಿಸಲಿದ್ದಾರೆ.

ಬಾಲಕ ಮತ್ತು ಬಾಲಕಿಯರಿಗೆ 12 ರಿಂದ 14 ವರ್ಷ (ಗುಂಪು 2), 15 ರಿಂದ 17 ವರ್ಷ (ಗುಂಪು 1) ಹಾಗೂ 18 ವರ್ಷಕ್ಕಿಂತ ಮೇಲಿನ (ಸೀನಿಯರ್) ವಯೋವರ್ಗಗಳಲ್ಲಿ ಸ್ಪರ್ಧೆಗಳು ನಡೆಯಲಿವೆ.

100 ಮೀ. ಮತ್ತು 400 ಮೀ. ಫ್ರೀಸ್ಟೈಲ್, 100 ಮೀ. ಬ್ಯಾಕ್‌ಸ್ಟ್ರೋಕ್, 100 ಮೀ. ಬ್ರೆಸ್ಟ್‌ಸ್ಟ್ರೋಕ್, 100 ಮೀ. ಬಟರ್‌ಫ್ಲೈ ಮತ್ತು 200 ಮೀ. ವೈಯಕ್ತಿಕ ಮೆಡ್ಲೆ ವಿಭಾಗದಲ್ಲಿ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ.

ಮುಖ್ಯಾಂಶಗಳು

- ಒಟ್ಟು ₹ 10 ಲಕ್ಷ ಬಹುಮಾನ ಮೊತ್ತ
- ಅಂತರರಾಷ್ಟ್ರೀಯ ಈಜುಪಟು ಸಜನ್ ಪ್ರಕಾಶ್‌ರಿಂದ ಉದ್ಘಾಟನೆ
- ಬೆಳಿಗ್ಗೆ 7.30 ರಿಂದ ಸ್ಪರ್ಧೆಗಳು

50 ಮೀ. ವಿಭಾಗದ ಎಲ್ಲ ಸ್ಪರ್ಧೆಗಳು ಯೂರೋಪ್ ಮತ್ತು ಅಮೆರಿಕದಲ್ಲಿ ಜನಪ್ರಿಯತೆ ಪಡೆದುಕೊಂಡಿರುವ 'ಸ್ಕಿನ್ಸ್' ಮಾದರಿಯಲ್ಲಿ ಏರ್ಪಡಿಸಲಾಗಿದೆ. ಚಾಂಪಿಯನ್‌ಷಿಪ್ ಒಟ್ಟು ₹ 10 ಲಕ್ಷ ಬಹುಮಾನ ಮೊತ್ತ ಒಳಗೊಂಡಿದೆ. ಪ್ರತಿ ವಿಭಾಗಗಳಲ್ಲಿ ಮೊದಲ ಮೂರು ಸ್ಥಾನಗಳನ್ನು ಪಡೆಯುವವರು ಕ್ರಮವಾಗಿ ತಲಾ ₹ 10 ಸಾವಿರ, ₹ 7 ಸಾವಿರ ಹಾಗೂ ₹ 5 ಸಾವಿರ ನಗದು ಬಹುಮಾನ ಗಳಿಸಲಿದ್ದಾರೆ.

ಬಾಕ್ಸರ್‌ಗಳಿಂದ 'ಚಿನ್ನದ ಮಳೆ'

ಏಷ್ಯಾ ಟೂರ್ನಿ: ಪರ್ವೀನ್, ಲವ್ಲಿನಾ, ಅಲ್ಫಿಯಾ, ಸ್ವೀಟಿಗೆ ಸ್ವರ್ಣ

ನವದೆಹಲಿ (ಪಿಟಿಐ): ಭಾರತದ ಮಹಿಳಾ ಬಾಕ್ಸರ್‌ಗಳು ಜೋರ್ಡಾನ್‌ನ ಅಮ್ಮಾನ್‌ನಲ್ಲಿ ನಡೆಯುತ್ತಿರುವ ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಶುಕ್ರವಾರ ಮಿಂಚು ಹರಿಸಿದರು. ನಾಲ್ಕು ಚಿನ್ನದ ಪದಕಗಳನ್ನು ಬಾಚಿಕೊಂಡರು.

ಪರ್ವೀನ್ ಹೂಡಾ, ಲವ್ಲಿನಾ ಬೊರ್ಗೊಹೈನ್, ಸ್ವೀಟಿ ಮತ್ತು ಅಲ್ಫಿಯಾ ಪಠಾಣ್ ಅವರು ಚಿನ್ನದ ಪದಕಗಳಿಗೆ ಕೊರಳೊಡ್ಡಿದರು. ಮೀನಾಕ್ಷಿ ಬೆಳ್ಳಿ ಪದಕ ಗೆದ್ದುಕೊಂಡರು.

63 ಕೆಜಿ ವಿಭಾಗದ ಫೈನಲ್ ಬೌಟ್‌ನಲ್ಲಿ ಪರ್ವೀನ್ 5–0ಯಿಂದ ಜಪಾನ್‌ನ ಕಿಟೊ ಮಯಿ ಅವರನ್ನು ಪರಾಭವಗೊಳಿಸಿದರು.

ಪರ್ವೀನ್ ಅವರು ಈ ಹಣಾಹಣಿಯಲ್ಲಿ ಎದುರಾಳಿಯ ವಿರುದ್ಧ ಸಂಪೂರ್ಣ ಪಾರಮ್ಯ ಮೆರೆದರು. ಟೋಕಿಯೊ ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಲವ್ಲಿನಾ 75 ಕೆಜಿ ವಿಭಾಗದ ಫೈನಲ್ ಹಣಾಹಣಿಯಲ್ಲಿ 5–0ಯಿಂದ ಉಜ್ಬೆಕಿಸ್ತಾನದ ರುಜ್ಮೆತೊವಾ ಸೋಕಿಬಾ ಅವರನ್ನು ಸೋಲಿಸಿದರು.

ಲವ್ಲಿನಾ ಬೊರ್ಗೊಹೈನ್ ಮತ್ತು ಪರ್ವೀನ್ ಹೂಡಾ– ಪಿಟಿಐ ಚಿತ್ರ

ಲವ್ಲಿನಾ ಅವರಿಗೆ ಇದು ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಮೂರನೇ ಪದಕವಾಗಿದೆ. 2017 ಮತ್ತು 2021ರಲ್ಲಿ ಅವರು ಕಂಚು ಜಯಿಸಿದ್ದರು. 81 ಕೆಜಿ ವಿಭಾಗದ ಚಿನ್ನದ ಪದಕದ ಸುತ್ತಿನಲ್ಲಿ ಸ್ವೀಟಿ ಅವರು ಕಜ ಕಸ್ತಾನದ ಗುಲ್ಸಾಯಾ ಯೆರ್ಜನ್ ಅವರನ್ನು ಪರಾಭವಗೊಳಿಸಿದರೆ, 81+ ವಿಭಾಗದಲ್ಲಿ ಅಲ್ಫಿಯಾ ಅವರ ಎದುರಾಳಿ ಜೋರ್ಡಾನ್‌ನ ಇಸ್ಲಾಮ್ ಹುಸೈಲಿ ಮೊದಲ ಸುತ್ತಿನಲ್ಲಿ ಅನರ್ಹಗೊಂಡು ಸರಿಯಬೇಕಾಯಿತು.

ಫುಟ್‌ಬಾಲ್: ನೈಸ್ ಡಿಎಚ್ ಕಪ್‌ಗೆ ಇಂದು ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೈಸ್ ಡಿಎಚ್ ಕಪ್ ಕಾರ್ಪೊರೇಟ್ ಫೈವ್ ಎ ಸೈಡ್ ಫುಟ್‌ಬಾಲ್ ಟೂರ್ನಿಗೆ ಶನಿವಾರ ಚಾಲನೆ ಸಿಗಲಿದೆ. ನವೆಂಬರ್ 19ರಿಂದ ಪಂದ್ಯಗಳು ನಡೆಯಲಿವೆ

ಇದೇ ಮೊದಲ ಬಾರಿ ಆಯೋಜಿಸಲಾಗುವ ಟೂರ್ನಿಗೆ ಇಲ್ಲಿಯ ಇಂದಿರಾನಗರ 100 ಫೀಟ್ ರಸ್ತೆಯ ಬಫೆಲೊ ವೈಲ್ಡ್ ವಿಂಗ್ಸ್‌ನಲ್ಲಿ ಬೆಳಿಗ್ಗೆ 11.30ಕ್ಕೆ ಚಾಲನೆ ಸಿಗಲಿದೆ. ತಂಡಗಳ ಡ್ರಾ, ಟ್ರೋಫಿ ಅನಾವರಣ ಈ ಸಂದರ್ಭದಲ್ಲಿ ನಡೆಯಲಿದೆ.

ಅಡೋಬಿ, ಬಾಷ್, ಎಪ್ಸಿಲನ್, ಎಚ್‌ಎಲ್ ಕ್ಲೆಮೊವ್, ವಿಸೆನ್, ಇಕ್ವಿಯಾ, ಪುರವಂಕರ, ಸ್ವಿಸ್ ರೆ, ತವಂತ್ ಮತ್ತು ಟೈಟನ್ ತಂಡಗಳು ಭಾಗವಹಿಸಲಿವೆ.

ಸಂಕ್ಷಿಪ್ತ ಸುದ್ದಿ

ಶೂಟಿಂಗ್: ದಿವ್ಯಾಂಶ್‌ಗೆ ಚಿನ್ನ

ನವದೆಹಲಿ (ಪಿಟಿಐ): ಭಾರತದ ಶೂಟರ್‌ಗಳು ಕೊರಿಯಾದ ದೇಗುನಲ್ಲಿ ನಡೆಯುತ್ತಿರುವ ಏಷ್ಯನ್ ಏರ್‌ಗನ್ ಚಾಂಪಿಯನ್‌ಷಿಪ್‌ನಲ್ಲಿ ಶುಕ್ರವಾರ ತಲಾ ಒಂದು ಚಿನ್ನ, ಬೆಳ್ಳಿ ಹಾಗೂ ಕಂಚು ಗೆದ್ದುಕೊಂಡರು.

ಜೂನಿಯರ್ ಪುರುಷರ 10 ಮೀ. ಏರ್ ರೈಫಲ್ ವಿಭಾಗದಲ್ಲಿ ದಿವ್ಯಾಂಶ್ ಸಿಂಗ್ ಪನ್ವರ್ ಚಿನ್ನ ಗೆದ್ದರೆ, ಇದೇ ಸ್ಪರ್ಧೆಯ ಸೀನಿಯರ್ ವಿಭಾಗದಲ್ಲಿ ಕಿರಣ್ ಅಂಕುಶ್ ಜಾಧವ್ ಬೆಳ್ಳಿ ಜಯಿಸಿದರು. ಕಾರ್ತಿಕ್ ರವಿಶಂಕರ್ ಅವರು ಜೂನಿಯರ್ ಪುರುಷರ ಏರ್ ರೈಫಲ್ ಸ್ಪರ್ಧೆಯಲ್ಲಿ ಕಂಚು ಪಡೆದರು.

ಚಿನ್ನದ ಪದಕಕ್ಕಾಗಿ ನಡೆದ ಪೈಪೋಟಿಯಲ್ಲಿ ದಿವ್ಯಾಂಶ್ 17–9 ರಲ್ಲಿ ಸ್ಥಳೀಯ ಫೇವರಿಟ್ ಬಾಂಗ್ ಸುಂಗ್‌ಹೊ ಅವರನ್ನು ಮಣಿಸಿದರು.

ಪೋರ್ಚುಗಲ್‌ಗೆ ರೊನಾಲ್ಡೊ ಸಾರಥ್ಯ

ಒಯಿರಾಸ್, ಪೋರ್ಚುಗಲ್ (ಎಎಫ್‌ಪಿ): ಈ ಬಾರಿಯ ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಪೋರ್ಚುಗಲ್ ತಂಡಕ್ಕೆ ಕ್ರಿಸ್ಟಿಯಾನೊ ರೊನಾಲ್ಡೊ ನಾಯಕರಾಗಿದ್ದಾರೆ. 26 ಆಟಗಾರರ ತಂಡವನ್ನು ಗುರುವಾರ ಪ್ರಕಟಿಸಲಾಗಿದೆ.

ಪೋರ್ಚುಗಲ್ ತಂಡವು ಮೊದಲ ಬಾರಿ ಟ್ರೋಫಿ ಎತ್ತಿಹಿಡಿಯುವ ಹಂಬಲದಲ್ಲಿದೆ. 37 ವರ್ಷದ ರೊನಾಲ್ಡೊ, ಅಂತರರಾಷ್ಟ್ರೀಯ ಫುಟ್‌ಬಾಲ್‌ನಲ್ಲಿ ಅತಿ ಹೆಚ್ಚು ಗೋಲು ಗಳಿಸಿರುವ ಆಟಗಾರ ಎನಿಸಿದ್ದಾರೆ. 117 ಗೋಲುಗಳ ಸರದಾರನಿಗೆ ಇದು ಐದನೇ ವಿಶ್ವಕಪ್ ಟೂರ್ನಿಯಾಗಿದೆ.

ಇದೇ 20ರಿಂದ ಕತಾರ್‌ನಲ್ಲಿ ವಿಶ್ವಕಪ್ ಆಯೋಜನೆಯಾಗಿದೆ.

ಅಥ್ಲೆಟಿಕ್ಸ್: ರಾಜ್ಯದ ನರಸಿಂಗ್‌ಗೆ ಕಂಚು

ಬೆಂಗಳೂರು: ಕರ್ನಾಟಕದ ನರಸಿಂಗ್ ಪಟೇಲ್ ಅವರು ಅಸ್ಸಾಂನ ಗುವಾಹಟಿಯಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಜೂನಿಯರ್ ಅಥ್ಲೆಟಿಕ್ಸ್‌ನ 10 ಸಾವಿರ ಮೀಟರ್ಸ್ ಓಟದಲ್ಲಿ ಶುಕ್ರವಾರ ಕಂಚು ಗೆದ್ದರು.

ನರಸಿಂಗ್ 31 ನಿ. 8.96 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಹರಿಯಾಣದ ಗಗನ್ ಸಿಂಗ್ (31 ನಿ. 7.14 ಸೆ.) ಚಿನ್ನ ಮತ್ತು ಉತ್ತರ ಪ್ರದೇಶದ ದುಷ್ಯಂತ್ ಕುಮಾರ್ (31 ನಿ. 7.92 ಸೆ.) ಬೆಳ್ಳಿ ಜಯಿಸಿದರು.

ಜಿಮ್ನಾಸ್ಟಿಕ್ಸ್: ಧಾರವಾಡ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಧಾರವಾಡ: ಧಾರವಾಡ ಜಿಲ್ಲಾ ತಂಡವು ಇಲ್ಲಿ ನಡೆದ ರಾಜ್ಯಮಟ್ಟದ ಶಾಲಾ ಜಿಮ್ನಾಸ್ಟಿಕ್ಸ್‌ನ 17 ವರ್ಷದೊಳಗಿನವರ ವಿಭಾಗದಲ್ಲಿ ಅಗ್ರಸ್ಥಾನ ಗಳಿಸಿತು.

ಬಾಲಕರ ವಿಭಾಗದಲ್ಲಿ 55.22 ಅಂಕಗಳೊಂದಿಗೆ ಧಾರವಾಡದ ಗಂಗಾಧರ ಮಟ್ಟಿ ಮತ್ತು ಬಾಲಕಿಯರ ವಿಭಾಗದಲ್ಲಿ 41.15 ಅಂಕಗಳೊಂದಿಗೆ ಧಾರವಾಡದ ದಾನೇಶ್ವರಿ ಕಮ್ಮಾರ ಚಾಂಪಿಯನ್ ಆಗಿ ಹೊರಹೊಮ್ಮಿದರು. ಧಾರವಾಡದ ಗಂಗಾಧರ ಮಟ್ಟಿ, ಯತೀಂದ್ರ ಗೊಲ್ಲಾರ, ಶ್ರೇಯಸ್ ಮಾನೆ, ಬೆಂಗಳೂರು ದಕ್ಷಿಣ ಜಿಲ್ಲೆಯ ಚಿರಂತನ, ತುಮಕೂರು ಜಿಲ್ಲೆಯ ಯಶವಂತ, ಬಿ.ಎಸ್.ಶ್ರೇಯಸ್ ಹಾಗೂ ಆರ್.ಎ.ಗಗನ್ ರಾಷ್ಟ್ರಮಟ್ಟಕ್ಕೆ ಆಯ್ಕೆಯಾದರು.

185.4 ಅಂಕಗಳೊಂದಿಗೆ ಧಾರವಾಡ ಪ್ರಥಮ, 175 ಅಂಕಗಳೊಂದಿಗೆ ತುಮಕೂರು ದ್ವಿತೀಯ ಹಾಗೂ 57.7 ಅಂಕಗಳೊಂದಿಗೆ ಬೆಂಗಳೂರು ತೃತೀಯ ಸ್ಥಾನ ಪಡೆಯಿತು.

ಬಾಲಕಿಯರ ವಿಭಾಗದಲ್ಲಿ ಧಾರವಾಡದ ದಾನೇಶ್ವರಿ ಕಮ್ಮಾರ, ಬೆಂಗಳೂರು ದಕ್ಷಿಣದ ಸೋನಿಕಾ, ತುಮಕೂರು ಜಿಲ್ಲೆಯ ಶ್ರಿಲ್ಪಶ್ರೀ ಹಾಗೂ ವೇದಶ್ರೀ, ಧಾರವಾಡದ ಅಭಿನಯ ಮಾನೆ, ತುಮಕೂರಿನ ಟಿ.ಎನ್. ಮೇಘನಾ, ಮೈಸೂರಿನ ಪ್ರೀತು ರಾಷ್ಟ್ರಮಟ್ಟಕ್ಕೆ ಆಯ್ಕೆಯಾದರು. 51.95 ಅಂಕಗಳೊಂದಿಗೆ ಧಾರವಾಡ ಮೊದಲ, 42.7 ಅಂಕಗಳೊಂದಿಗೆ ತುಮಕೂರು ದ್ವಿತೀಯ ಹಾಗೂ 32.45 ಅಂಕಗಳೊಂದಿಗೆ ಬೆಂಗಳೂರು ದಕ್ಷಿಣ ತೃತೀಯ ಸ್ಥಾನ ಪಡೆಯಿತು.

ಗಂಗಾಧರ ಮಟ್ಟಿ

ದಾನೇಶ್ವರಿ

ಬಾಲಕರ ವಿಭಾಗ: ಫ್ಲೋರ್ ಎಕ್ಸರ್ಸೈಜ್: ಚಿರಂತನ್ (ಬೆಂಗಳೂರು ದಕ್ಷಿಣ; 12)–1, ಶ್ರೇಯಸ್ ಮಾನೆ (ಧಾರವಾಡ; 11.6)–2, ಯತೀಂದ್ರ ಗೊಲ್ಲರ (11.45)–3. ಪೊಮೆಲ್ ಹಾರ್ಸ್: ಗಂಗಾಧರ ಮಟ್ಟಿ (ಧಾರವಾಡ; 11.25)–1, ತರುಣ ರೆಡ್ಡಿ (ತುಮಕೂರು; 9.15) –2, ಭರತ್ (8.1)–3 ರೋಮನ್ ರಿಂಗ್ಸ್: ಯತೀಂದ್ರ ಗೊಲ್ಲರ (ಧಾರವಾಡ:10.3)–1, ಚಿರಂತ್ (ಬೆಂಗಳೂರು ದಕ್ಷಿಣ;9.35)–2, ಭರತ್ (ತುಮಕೂರು;9.30)–3. ಟೇಬಲ್ ವಾಲ್ಟ್: ಚಿರಂತ್ (ಬೆಂಗಳೂರು ದಕ್ಷಿಣ; 10.475)–1, ಶ್ರೇಯಸ್ ಮಾನೆ (ಧಾರವಾಡ; 10.25) -2, ಭರತ್ (ತುಮಕೂರು; 9.925)–3. ಪ್ಯಾರಲಲ್ ಬಾರ್: ಶ್ರೇಯಸ್ ಮಾನೆ (11.3)–1, ಯತೀಂದ್ರ ಗೊಲ್ಲರ (11.25)–2, ತರುಣ ರೆಡ್ಡಿ (ತುಮಕೂರು; 9.75)–3. ಹಾರಿಜಾಂಟಲ್ ಬಾರ್: ಚಿರಂತ್ (3.55)–1, ಗಂಗಾಧರ ಮಟ್ಟಿ (ಧಾರವಾಡ; 3.3)–2, ಯತೀಂದ್ರ ಗೊಲ್ಲರ (3.2)–3.

ಬಾಲಕಿಯರು: ಫ್ಲೋರ್ ಎಕ್ಸರ್ಸೈಜ್: ಸೋನಿಕಾ (ಬೆಂಗಳೂರು ದಕ್ಷಿಣ; 10.8)–1, ದಾನೇಶ್ವರಿ ಕಮ್ಮಾರ (ಧಾರವಾಡ; 10.7)–2, ಶಿಲ್ಪಶ್ರೀ (ತುಮಕೂರು 7.8)–3 ಬ್ಯಾಲೆನ್ಸಿಂಗ್ ಬೀಮ್: ದಾನೇಶ್ವರಿ ಕಮ್ಮಾರ (ಧಾರವಾಡ; 10.55) –1, ಸೋನಿಕಾ (ಬೆಂಗಳೂರು ದಕ್ಷಿಣ ; 8.55)–2, ವೇದಶ್ರೀ (ತುಮಕೂರು; 5.35)–3. ಅನ್ಈವನ್ ಬಾರ್: ದಾನೇಶ್ವರಿ ಕಮ್ಮಾರ (ಧಾರವಾಡ; 9.05)–1, ಶಿಲ್ಪಶ್ರೀ (ತುಮಕೂರು; 4.1)–2, ಅಭಿನಯ ಮಾನೆ (ಧಾರವಾಡ; 2.9) –3. ಟೇಬಲ್ ವಾಲ್ಟ್; ದಾನೇಶ್ವರಿ ಕಮ್ಮಾರ (ಧಾರವಾಡ; 10.85) –1, ಬಿ.ಐ.ಸೋನಿಕಾ (ಬೆಂಗಳೂರು ದಕ್ಷಿಣ ; 10.35)-2, ಟಿ.ಎನ್. ಮೇಘನಾ (ತುಮಕೂರು; 4.75) -3

ಹಾಕಿ: ಐಡಿಯಲ್ ಅಕಾಡೆಮಿ ತಂಡಕ್ಕೆ ಗೆಲುವು

ಬೆಂಗಳೂರು: ಐಡಿಯಲ್ ಸ್ಪೋರ್ಟ್ಸ್ ಅಕಾಡೆಮಿ ತಂಡದವರು ಕರ್ನಾಟಕ ರಾಜ್ಯ ಹಾಕಿ ಸಂಸ್ಥೆ ಆಶ್ರಯದ 'ಸಿ' ಡಿವಿಷನ್ ಲೀಗ್ ಹಾಕಿ ಟೂರ್ನಿಯಲ್ಲಿ ಗೆದ್ದರು.

ಶುಕ್ರವಾರ ನಡೆದ ಪಂದ್ಯದಲ್ಲಿ ಐಡಿಯಲ್ ಅಕಾಡೆಮಿ 3–0 ಗೋಲುಗಳಿಂದ ಕಾವೇರಿ ಸ್ಪೋರ್ಟ್ಸ್ ಕ್ಲಬ್ ತಂಡವನ್ನು ಮಣಿಸಿತು. ವಿಜಯಿ ತಂಡದ ಶಿವ ಶಂಕರನ್ (27 ಮತ್ತು 28ನೇ ನಿ.) ಎರಡು ಗೋಲುಗಳನ್ನು ಗಳಿಸಿದರೆ, ಇನ್ನೊಂದು ಗೋಲನ್ನು ಮಣಿ ಭರತ್ 48ನೇ ನಿ. ದಲ್ಲಿ ತಂದಿತ್ತರು.

ಹುಬ್ಬಳ್ಳಿ ಸ್ಪೋರ್ಟ್ಸ್ ಕ್ಲಬ್ ರನ್‌ಗಳ ಹೊಳೆ

ಹುಬ್ಬಳ್ಳಿ: ದ್ವಿಶತಕ ಗಳಿಸಿದ ರಾಹುಲ್ ರಾವತ್ ಹಾಗೂ ಶತಕ ಬಾರಿಸಿದ ಚಿರಾಗ್ ನಾಯಕ್ ಅಬ್ಬರದ ಬಲದಿಂದ ಹುಬ್ಬಳ್ಳಿ ಸ್ಪೋರ್ಟ್ಸ್ ಕ್ಲಬ್ 'ಎ' ತಂಡವು ಧಾರವಾಡ ವಲಯದ ಕೆಎಸ್‌ಸಿಎ ಪ್ರಥಮ ಡಿವಿಷನ್ ಲೀಗ್ ಪಂದ್ಯದಲ್ಲಿ 377 ರನ್‌ಗಳ ಬೃಹತ್ ಜಯ ಸಾಧಿಸಿತು.

ರಾಹುಲ್ (ಅಜೇಯ 202; 97 ಎಸೆತ, 6X17, 4X 13) ಹಾಗೂ ಚಿರಾಗ್ (181; 4X19, 6X8) ಅವರ ಆಟದಿಂದ ಹುಬ್ಬಳ್ಳಿ ಸ್ಪೋರ್ಟ್ಸ್ ಕ್ಲಬ್ 50 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 510 ರನ್‌ಗಳ ಬೃಹತ್ ಮೊತ್ತ ಪೇರಿಸಿತು. ಗುರಿ ಬೆನ್ನಟ್ಟಿದ ಬೆಳಗಾವಿ ಸ್ಪೋರ್ಟ್ಸ್ ಕ್ಲಬ್ ಬಿ ತಂಡವು 31.3 ಓವರ್‌ಗಳಲ್ಲಿ 133 ರನ್ ಗಳಿಸಲಷ್ಟೇ ಶಕ್ತವಾಯಿತು.

315 ರನ್‌ಗಳ ಅಂತರದ ಗೆಲುವು: ನಗರದ ರೈಲ್ವೆ ಮೈದಾನದಲ್ಲಿ ನಡೆದ ಮತ್ತೊಂದು ಪಂದ್ಯದಲ್ಲಿ ಬಿಡಿಕೆ ಎಸ್‌ಎಫ್ 'ಎ' ತಂಡ 315 ರನ್‌ಗಳ ಅಂತರದಿಂದ ಗೆದ್ದಿತು. ಅನಿರುದ್ಧ ಜೋಶಿ (172; 6X15, 4X12) ಹಾಗೂ ಪ್ರಥಮೇಶ ಸಾಳುಂಕೆ (79, 4X7, 6X7) ಅಮೋಘ ಆಟದಿಂದ ಬಿಡಿಕೆ, 50 ಓವರ್‌ಗಳಲ್ಲಿ 490 ರನ್ ಗಳಿಸಿತು. ಇದಕ್ಕುತ್ತರವಾಗಿ ದಿ ಯೂನಿಯನ್ ಜಿಮ್ಖಾನಾ ಲಿಮಿಟೆಡ್ 175 ರನ್‌ಗೆ ಆಲೌಟ್ ಆಯಿತು.

ರಾಹುಲ್ ರಾವತ್ ಹಾಗೂ ಚಿರಾಗ್

ಸಂಕ್ಷಿಪ್ತ ಸ್ಕೋರು: ಹುಬ್ಬಳ್ಳಿ ಸ್ಪೋರ್ಟ್ಸ್ ಕ್ಲಬ್ 'ಎ': 50 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 510 (ಚಿರಾಗ್ ನಾಯಕ 181, ಸುಧನ್ವ ಯು.ಕೆ. 57, ರಾಹುಲ್ ರಾವತ್ ಔಟಾಗದೆ 202, ಮೊಹಮ್ಮದ್ ಅಜೀಂ 41, ಹರ್ಷ ವಿ ಪಟೇಲ್ 39ಕ್ಕೆ1, ಆದರ್ಶ ಮಲ್ಲಿ 52ಕ್ಕೆ2)

ಬೆಳಗಾಂ ಸ್ಪೋರ್ಟ್ಸ್ ಕ್ಲಬ್ ಬಿ: 31.3 ಓವರ್‌ಗಳಲ್ಲಿ 133 (ಯು.ಎಂ. ಕವೀಶ್ 21, ಆದರ್ಶ ಮಳಿ 35, ಧ್ರುವ ದೇಸಾಯಿ 18, ಡಾಮ್ನಿಕ್ ಫರ್ನಾಂ ಡಿಸ್ 30ಕ್ಕೆ2, ವಿಠಲ್ ಹಬೀಬ್ 32ಕ್ಕೆ3, ಪ್ರಣವ್ ಭಾಟಿಯಾ 30ಕ್ಕೆ4) ಫಲಿತಾಂಶ: ಹುಬ್ಬಳ್ಳಿ ಸ್ಪೋರ್ಟ್ಸ್ ಕ್ಲಬ್ ಎ ತಂಡಕ್ಕೆ 377 ರನ್ ಜಯ.

ಬಿಡಿಕೆ ಸ್ಪೋರ್ಟ್ಸ್ ಎ: 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 490 (ಪ್ರಥಮೇಶ್ ಸಾಳುಂಕೆ 79, ಅನಿರುದ್ಧ ಜೋಶಿ 172, ಸೌರವ್ ಸಾಮಂತ್ 69, ಸೈಯದ್ ಮಲಿಕ್ 97ಕ್ಕೆ3, ಅಧೋಕ್ಷ 108ಕ್ಕೆ2), ದ ಯೂನಿಯನ್ ಜಿಮ್ಖಾನಾ: 33.5 ಓವರ್‌ಗಳಲ್ಲಿ 175 (ವೈಷ್ಣವ್ ಸಂಕಮಿತ್ರ 69, ಶೋಯಬ್ ಮ್ಯಾನೇಜರ್ 20ಕ್ಕೆ2, ಸೌರವ್ ಸಾಮಂತ್ 16ಕ್ಕೆ3, ಹಾರ್ದಿಕ್ ಓಜಾ 17ಕ್ಕೆ2) ಫಲಿತಾಂಶ: ಬಿಡಿಕೆಎಸ್‌ಎಫ್ 'ಎ'ಗೆ 315 ರನ್‌ಗಳ ಜಯ.

ಐಒಎ: ಡಿ.7 ರಂದು 'ಸುಪ್ರೀಂ' ವಿಚಾರಣೆ

ನವದೆಹಲಿ (ಪಿಟಿಐ): ಭಾರತ ಒಲಿಂಪಿಕ್ಸ್ ಸಂಸ್ಥೆಯ (ಐಒಎ) ಕರಡು ಸಂವಿಧಾನದ ಅವಳಡಿಕೆ ಕುರಿತ ಆಕ್ಷೇಪಣೆ ಮತ್ತು ಅದಕ್ಕೆ ಸಂಬಂಧಿಸಿದ ಇತರ ವಿಷಯಗಳ ವಿಚಾರಣೆಯನ್ನು ಡಿಸೆಂಬರ್ 7ರಂದು ನಡೆಸಲಾಗುವುದು ಎಂದು ಸುಪ್ರೀಂಕೋರ್ಟ್ ಶುಕ್ರವಾರ ಹೇಳಿದೆ.

ಮಲಬದ್ಧತೆ ರೋಗಗಳ ಉತ್ಪಾದನಾ ಕೇಂದ್ರವಾಗಿದೆ
ಇದು ಅನೇಕ ಖಾಯಿಲೆಗಳಿಗೂ ಮೂಲವಾಗಿದೆ
ಆಯುರ್ವೇದಿಕ್
ಖಾಯಂ ಟ್ಯಾಬ್ಲೆಟ್
ಪ್ರಾಚೀನ ಆಯುರ್ವೇದಿಕ್ ಜ್ಞಾನದ ಆಧಾರದ ಮೇಲೆ ರೂಪಿಸಲಾದ ವಿಶಿಷ್ಟ ಫಾರ್ಮುಲಾ ಆಗಿದೆ. ಖಾಯಂ ಟ್ಯಾಬ್ಲೆಟ್‌ನ್ನು ಅಪಾಯರಹಿತ ಆಯುರ್ವೇದಿಕ್ ಗಿಡಮೂಲಿಕೆಗಳಿಂದ ತಯಾರಿಸಲಾಗಿದೆ. ಇದು ಮಲಬದ್ಧತೆ ಮತ್ತು ಅದರಿಂದ ಉಂಟಾಗುವ ಇತರ ಖಾಯಿಲೆಗಳನ್ನು ನಿವಾರಿಸಲು ಸಹಾಯಕಾರಿಯಾಗಿದೆ ಹಾಗೂ ನಿಮ್ಮನ್ನು ದಿನಪೂರ್ತಿ ಉತ್ಸಾಹದಿಂದ ಇರುವಂತೆ ಮಾಡುತ್ತದೆ.
✔ ಹೆಚ್ಚು ಪರಿಣಾಮಕಾರಿ
✔ ಸುರಕ್ಷಿತ
✔ ಚಟವಾಗಿ ಪರಿಣಮಿಸುವುದಿಲ್ಲ
ಮಲಬದ್ಧತೆ
ಆಸಿಡಿಟಿ, ಗ್ಯಾಸ್, ಅಜೀರ್ಣತೆ, ತಲೆನೋವು, ಬಾಯಿ ಹುಣ್ಣು, ಹೊಟ್ಟೆ ಮತ್ತು ಎದೆ ಅಸ್ವಸ್ಥತೆ, ಹುಳಿ ತೇಗು, ಹಸಿವು ಆಗದಿರುವಿಕೆ, ಆಯಾಸ, ಚರ್ಮದ ಅಸ್ವಸ್ಥತೆಗಳು
ಖಾಯಂ ಟ್ಯಾಬ್ಲೆಟ್
10 ಟ್ಯಾಬ್ಲೆಟ್‌ಗಳ ಬ್ಲಿಸ್ಟರ್ ಪ್ಯಾಕ್‌ನಲ್ಲೂ ಕೂಡ ಲಭ್ಯ
ರಾತ್ರಿ ಮಲಗುವ ಸಮಯದಲ್ಲಿ ಸೇವಿಸಿ ಮತ್ತು ಆರೋಗ್ಯಯುತ ದಿನಕ್ಕಾಗಿ ತಯಾರಾಗಿ
AYURVEDIC KAYAM TABLET Useful in Chronic Constipation, Acidity, Gas, Headache etc. SHETH BROS.
ಶೇಠ್ ಬ್ರದರ್ಸ್, ಭಾವನಗರ ಇವರ ಉತ್ಪನ್ನ

ಬೈದ್ಯನಾಥ್
ಅಸಲಿ ಆಯುರ್ವೇದ
ಸಹಿಸಲಾಗದ ಕೀಲುನೋವು
ಸ್ವರ್ಣ ಭಸ್ಮ ಸಮೃದ್ಧ ಆಗಿರುವುದರಿಂದ ಸಾಕಷ್ಟು ಶಕ್ತಿಯುತವಾಗಿದೆ
ಕೀಲು ನೋವು, ಬೆನ್ನು ನೋವು, ಮಂಡಿ–ಕೀಲು ನೋವು, ಉಳುಕು ಮತ್ತು ಸ್ನಾಯು ಸೆಳೆತ ನಿವಾರಣೆಗೆ ಸಹಕಾರಿ
Baidyanath ASLI AYURVED RHEUMARTHO gold+ ENRICHED WITH SWARNA BHASMA NOW IMPROVED STRONG FORMULA USEFUL IN CHRONIC JOINT PAIN
I. NO. MP/25D/08/040/A/19/12
ರುಮಾರ್ಥೋ ಗೋಲ್ಡ್+ ಕ್ಯಾಪ್ಸೂಲ್
ಸುವರ್ಣ ಭಸ್ಮದೊಂದಿಗೆ ಸಮೃದ್ಧ
ಬೈದ್ಯನಾಥ್ ರ್‍ಹೂಮಾ ತೈಲದ ಜೊತೆಗೆ ಸೇವಿಸಿರಿ
Doctor's Consultation: 844 844 4935
www.baidyanath.co

ಗಜಕರ್ಣ, ತುರಿಕೆ, ಇಸಬು
ಆಯುರ್ವೇದಿಕ ಮಲ್ಹಮ್‌ನಿಂದ ಮುಕ್ತರಾಗಿ
24x7 Helpline: 83058 53333
आयुर्वेदिक मलहम
दाद, खाज, खुजली
ಆಯುರ್ವೇದಿಕ ಮಲ್ಹಮ್
ಮೊದಲ ದಿನವೇ ಫಲಿತಾಂಶ ಕಾಣುವಿರಿ
ಯಾವುದೇ ಜಿಗುಟುತನ, ಕಲೆಗಳಿಲ್ಲ

ರೋಗನಿರೋಧಕತೆ ಹೆಚ್ಚಿಸಿಕೊಳ್ಳಿ, ಆರೋಗ್ಯವಾಗಿರಿ
ಕೇವಲ ₹5* ಮಾತ್ರ
no ಮಲಬದ್ಧತೆ
no ಗ್ಯಾಸ್ಟ್ರಿಕ್
no ಅಸಿಡಿಟಿ
*4g
₹5/- Dr. Juneja's पेट सफा Natural Laxative GRANULES कब्ज एसिडिटी गैस
ಒಂದೇ ಬಾರಿಗೆ ತಾಜಾತನ ಪಡೆಯಿರಿ
Dr. Juneja's ಪೇಟ್ ಸಫಾ®
Natural Laxative Granules & Tablets
'ಪೇಟ್ ಸಫಾ' ಉತ್ಪನ್ನವು ಇಡೀ ಭಾರತದಲ್ಲಿ ಛಾಪು ಮೂಡಿಸಿದೆ ಮತ್ತು ಇದು ತನ್ನ ವರ್ಗದಲ್ಲಿ ಅತ್ಯಂತ ಜನಪ್ರಿಯ ಬ್ರಾಂಡ್ ಆಗಿ ಸಾಬೀತುಗೊಂಡಿದೆ. ಆದರೆ, ಮೇಲೆ ತಿಳಿಸಿದ ನಿಮ್ಮ ಸಮಸ್ಯೆಗಳಿಗೆ ನೀವು ಬೇರೆ ಯಾವುದೇ ಉತ್ಪನ್ನವನ್ನು ಬಳಸುತ್ತಿದ್ದರೆ, ಈಗ ಪೇಟ್ ಸಫಾ ನಿಮಗಾಗಿ ಪರಿಚಯಿಸುತ್ತಿದೆ ಸ್ಪೆಷಲ್ ಟ್ರಯಲ್ ಪೌಚ್, ಇದನ್ನು ಒಮ್ಮೆ ಉಪಯೋಗಿಸಿ ನೋಡಿ, ನೀವು ಕೂಡ ಇದರ ಬಗ್ಗೆ ಉತ್ಸುಕರಾಗುತ್ತೀರಿ ಎಂದು ನಾವು ಭರವಸೆ ನೀಡುತ್ತೇವೆ.
ಪೇಟ್ ಸಫಾ ಇದ್ದಲ್ಲಿ ಎಲ್ಲಾ ರೋಗ ದಫಾ...
24x7 Helpline: 91197 88888 | petsaffa.com | Available at all medical & general stores

Divisa www.divisastore.com
ಪ್ರಯೋಗ ಮಾಡುವುದನ್ನು ನಿಲ್ಲಿಸಿ!
ನಿಜವಾದ ಮತ್ತು ನೈಸರ್ಗಿಕವಾದುದನ್ನು ಪ್ರಯತ್ನಿಸಿ
ನಿಮ್ಮ ತ್ವಚೆಯ ಮೇಲೆ ಪ್ರಯೋಗ ಮಾಡುವುದನ್ನು ನಿಲ್ಲಿಸಿ, ಏಕೆಂದರೆ ನಿಮ್ಮ ತ್ವಚೆಯನ್ನು ಶುದ್ಧಗೊಳಿಸಿ, ಆಳದಿಂದ ಕಂಗೊಳಿಸುವಂತೆ ಮಾಡಲು ಆಯುರ್ವೇದಿಕ ರೂಪ ಮಂತ್ರ ಉತ್ಪನ್ನವು ನಿಮ್ಮ ಅತ್ಯುತ್ತಮ ಆಯ್ಕೆಯಾಗಿದೆ. ಅಷ್ಟೇ ಅಲ್ಲದೆ, ಇದು ಕಪ್ಪು ವೃತ್ತಗಳನ್ನು ಮತ್ತು ತ್ವಚೆಯ ಮೇಲಿನ ಪಿಗ್ಮೆಂಟೇಶನ್‌ನ್ನು ನಿವಾರಿಸುತ್ತದೆ ಹಾಗೂ ನಿಮ್ಮ ಗೌರವರ್ಣವನ್ನು ಕೂಡ ಹೆಚ್ಚಿಸುತ್ತದೆ.
1 Paraben Free
2 Alcohol Free
3 Steroids Free
4 Silicon Free
5 Mineral Oil Free
Dr. Juneja's Roop Mantra An Ayurvedic Medicinal Cream
A Complete Ayurvedic Skin Health Solution for Entire Family
ಪರಿಶುದ್ಧ ಆಯುರ್ವೇದಿಕ ಮೂಲಿಕೆಗಳಿಂದ ತಯಾರಿಸಲ್ಪಟ್ಟಿದೆ
Urvashi Rautela
24x7 Helpline: 87259 66666
www.roopmantra.com